ದಕ್ಷಿಣ ಕನ್ನಡ ಪರಿಸರದ ಕನ್ನಡ ಕಲಿಕೆಯ ಸಮಸ್ಯೆಗಳು

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ನಿಬಂಧ)

ಸಂಶೋಧಕರು

ರಕ್ಷಿತ್ ಅ. ಪ.

ಮಾರ್ಗದರ್ಶಕರು

ಡಾ. ಪಿ. ಮಹಾದೇವಯ್ಯ

ಪ್ರಾಧ್ಯಾಪಕರು

ಕನ್ನಡ ಭಾಷಾಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೨೦

ದಕ್ಷಿಣ ಕನ್ನಡ ಪರಿಸರದ ಕನ್ನಡ ಕಲಿಕೆಯ ಸಮಸ್ಯೆಗಳು

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ನಿಬಂಧ)

ಸಂಶೋಧಕರು

ರಕ್ಷಿತ್ ಅ. ಪ.

ಮಾರ್ಗದರ್ಶಕರು

ಡಾ. ಪಿ. ಮಹಾದೇವಯ್ಯ

ಪ್ರಾಧ್ಯಾಪಕರು

ಕನ್ನಡ ಭಾಷಾಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೨೦

ಸಂಶೋಧಕರ ಪ್ರಮಾಣ ಪತ್ರ

ದಕ್ಷಿಣ ಕನ್ನಡ ಪರಿಸರದ ಕನ್ನಡ ಕಲಿಕೆಯ ಸಮಸ್ಯೆಗಳು ಎಂಬ ನಿಬಂಧವನ್ನು ಕನ್ನಡ ಭಾಷಾಧ್ಯಯನ ವಿಭಾಗದ ಪ್ರಾಧ್ಯಾಪಕರಾದ **ಡಾ. ಪಿ. ಮಹಾದೇವಯ್ಯ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತೇನೆ. ಪ್ರಸ್ತುತ ನಿಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಈ ನಿಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಲಿ ಸಲ್ಲಿಸಿರುವುದಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

ಅ.ಪ. ರಕ್ಷಿತ್

ರಕ್ಷಿತ್ ಅ. ಪ.
ಸಂಶೋಧಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದಿನಾಂಕ : 04-03-2020
ಸ್ಥಳ : ವಿದ್ಯಾರಣ್ಯ

ಮಾರ್ಗದರ್ಶಕರ ದೃಢೀಕರಣಣ ಪತ್ರ

ರಕ್ಷಿತ್ ಅ. ಪ. ಅವರು ದಕ್ಷಿಣ ಕನ್ನಡ ಪರಿಸರದ ಕನ್ನಡ ಕಲಿಕೆಯ ಸಮಸ್ಯೆಗಳು ಎಂಬ ಶೀರ್ಷಿಕೆಯ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ್ದಾರೆ. ಈ ನಿಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಲಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

ಡಾ. ಪಿ. ಮಹಾದೇವಯ್ಯ
ಪ್ರಾಧ್ಯಾಪಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದಿನಾಂಕ : ೪.೨.೨೦೨೦
ಸ್ಥಳ : ವಿದ್ಯಾರಣ್ಯ

ದಕ್ಷಿಣ ಕನ್ನಡ ಪರಿಸರದ ಕನ್ನಡ ಕಲಿಕೆಯ ಸಮಸ್ಯೆಗಳು

ಪರಿವಿಡಿ

* * *

ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ, ವಿಧಾನ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ, ವಿಧಾನ, ವ್ಯಾಪ್ತಿ ಮತ್ತು ಸ್ವರೂಪ

ಪ್ರಸ್ತಾವನೆ:

ತಮ್ಮ ಭಾವನೆಗಳನ್ನು ಒಂದಲ್ಲ ಒಂದು ರೀತಿಯಿಂದ ಇತರರೊಡನೆ ಹಂಚಿಕೊಳ್ಳುವುದು ಮಾನವರ ಸಹಜ ಗುಣ. ನಿಜಾರ್ಥದಲ್ಲಿ ಇದುವೇ ಸಂವಹನ. ಸಸ್ಯ– ಪ್ರಾಣಿವರ್ಗಗಳಲ್ಲಿಯೂ ಒಂದಲ್ಲ ಒಂದು ರೀತಿಯಿಂದ ಈ ಕ್ರಿಯೆ ನಡೆಯುತ್ತಿರುತ್ತದೆ. ಆದರೆ ಸಂವಹನ ಮಾಧ್ಯಮಗಳು ಮಾತ್ರ ಬೇರೆಯಾಗಿವೆ. ಮನುಷ್ಯರು ಎಷ್ಟೋ ಬಗೆಯ ಆಂಗಿಕ ಕ್ರಿಯೆಗಳನ್ನೂ, ವಿವಿಧ, ವಿಶಿಷ್ಟ ಧ್ವನಿಗಳನ್ನೂ ಸಂಪರ್ಕಮಾಧ್ಯಮವಾಗಿ ಬಳಸುತ್ತಾರೆ. ಅಭಿನಯ, ಅಂಗಭಂಗಿ, ಮುಖಸನ್ನೆ, ಕೈಸನ್ನೆ, ಕಣ್‌ಸನ್ನೆ ಮುಂತಾದ ಭಾಷಾಧ್ವನಿಗಳಲ್ಲದ ಇತರ ಎಷ್ಟೋ ಧ್ವನಿಗಳನ್ನು ಸಂಕೇತಗಳನ್ನಾಗಿ ಬಳಸುತ್ತಾರೆ. ಆದರೆ ಈ ರೀತಿಯ ಸಂವಹನ ಅತ್ಯಂತ ಸೀಮಿತ ಸಂದರ್ಭಗಳಲ್ಲಿ ಕೆಲವೊಂದು ಅರ್ಥಗಳ ಅಭಿವ್ಯಕ್ತಿಗೆ ಮಾತ್ರ ಉಪಯುಕ್ತ. ಹೀಗಾಗಿಯೆ ಮಾನವರ ಎಲ್ಲ ಬಗೆಯ ಚಿಂತನೆಗಳಿಗೆ, ಭಾವನೆಗಳಿಗೆ ರೂಪಕೊಡಬಲ್ಲ ಸಂಪರ್ಕ ಸಾಧನವೆಂದರೆ ಅದು ಮಾನವ ಭಾಷೆ. ಇದು ಇತರ ಎಲ್ಲ ಸಂಪರ್ಕ ವ್ಯವಸ್ಥೆಗಳಿಗಿಂತ ಹೆಚ್ಚು ವ್ಯಾಪಕ ಮತ್ತು ಸಮರ್ಥವಾದುದು. ಭಾಷೆ ಮತ್ತು ಮಾನವರ ಸಂಬಂಧ ಅನ್ಯೋನ್ಯವಾದುದು. ಮನುಷ್ಯರ ನಡುವೆ ಸಂಪರ್ಕವನ್ನು ಉಂಟುಮಾಡಿ ಮಾನವ ಸಂಬಂಧಗಳನ್ನು ಬೆಳೆಸಿರುವ ಭಾಷೆಯು ಮನುಷ್ಯನಿಗೆ ತನ್ನ ಉಸಿರಿನಷ್ಟೇ ಸಹಜ ಹಾಗೂ ಅನಿವಾರ್ಯ. ಮಾನವ ಮತ್ತು ಭಾಷೆ ಇವೆರಡನ್ನು ದೂರ ಮಾಡುವುದು ಸಾಧ್ಯವಿಲ್ಲ. ಮನುಷ್ಯರು ತಮ್ಮ ಬುದ್ಧಿವಂತಿಕೆಯಿಂದ ಭಾಷೆಯನ್ನು ಸೃಷ್ಟಿಸಿ ಬೆಳೆಸಿದ ನಂತರ ಭಾಷೆಯು ಮನುಷ್ಯರನ್ನು ವಿಚಾರವಂತರನ್ನಾಗಿ ಮಾಡಿತು. ಆದ್ದರಿಂದಲೇ ಭಾಷೆಯ ಕಲಿಕೆ ಮನುಷ್ಯರಿಗೆ ಅತ್ಯವಶ್ಯಕವಾಗಿದೆ.

ಮಕ್ಕಳು ಭಾಷೆಯನ್ನು ಹೇಗೆ ಕಲಿಯುತ್ತಾರೆ? ಎನ್ನುವುದು ಮನುಷ್ಯ ಭಾಷೆಯನ್ನು ಬಳಸಲು ಆರಂಭಿಸಿದಾಗಿನಿಂದಲೂ ಕಾಡುತ್ತಿರುವ ಪ್ರಶ್ನೆ. ಭಾಷಾಶಾಸ್ತ್ರಜ್ಞರು ಮಕ್ಕಳಲ್ಲಿ ಮಾತನಾಡುವ ಶಕ್ತಿಗಿಂತ ಅದನ್ನು ಅರ್ಥಮಾಡಿಕೊಳ್ಳುವ ಶಕ್ತಿ ವೇಗವಾಗಿ ಬೆಳೆಯುತ್ತದೆ ಎಂದು ಅಭಿಪ್ರಾಯಪಡುತ್ತಾರೆ.[೧] ಅಂದರೆ ಮಕ್ಕಳಿಗೆ ಭಾಷೆಯನ್ನು ಬಳಸುವ ಕೌಶಲ್ಯ ಬೆಳವಣಿಗೆಯಾಗದಿದ್ದರೂ ಅದನ್ನು ಅರ್ಥಮಾಡಿಕೊಳ್ಳುವ ಶಕ್ತಿ ಬೇಗನೆ ಬೆಳವಣಿಗೆ ಹೊಂದುತ್ತಿರುತ್ತದೆ. ಕಲಿಕೆಯು ಮಾನವರ ಸಹಜ ಪ್ರವೃತ್ತಿಯಾಗಿರುವುದಲ್ಲದೇ ಐಚ್ಛಿಕವಾಗಿಯೋ, ಅನೈಚ್ಛಿಕವಾಗಿಯೋ, ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ, ವ್ಯಕ್ತಿಯ ಜನನದಿಂದ ಮರಣದವರೆಗೂ ಪ್ರತಿಕ್ಷಣದಲ್ಲಿಯೂ ನಡೆಯುತ್ತಲೆ ಇರುತ್ತದೆ ಇದನ್ನು ತಡೆಯಲಾಗದು. ಅದ್ದರಿಂದ ಕಲಿಕೆ ಎನ್ನುವುದು ಜೀವಿಯ ಜೀವನದ ಅವಿಭಾಜ್ಯ ಅಂಗ ಎನ್ನಲಾಗಿದೆ. ಸಾಮಾನ್ಯವಾಗಿ ಜೀವಿಯ ವರ್ತನೆಯಲ್ಲಿ ಆದ ವೈಜ್ಞಾನಿಕ ಬದಲಾವಣೆಯನ್ನು ಕಲಿಕೆ ಎನ್ನಲಾಗಿದೆ.[೨] ಕಲಿಕೆಯಲ್ಲಿ ಎರಡು ವಿಧಗಳನ್ನು ನೋಡಬಹುದು. ಮೊದಲನೆಯದು ವಿದ್ಯಾರ್ಥಿ–ಶಿಕ್ಷಕ–ಪಠ್ಯಕ್ರಮವನ್ನು ಒಳಗೊಂಡ ಸೀಮಿತ ಅರ್ಥವಿರುವ ಶಿಕ್ಷಣ.

ಎರಡನೆಯದು ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸಿ ಅವರ ಸರ್ವಾಂಗೀಣ ಅಭಿವೃದ್ಧಿಯನ್ನುಂಟು ಮಾಡುವ ವಿಶಾಲಾರ್ಥದ ಶಿಕ್ಷಣ. ಹೀಗೆ ಕಲಿಕೆ ಎಂಬ ಪದ ದಿನದಿಂದ ದಿನಕ್ಕೆ ಹೊಸ ಸ್ವರೂಪವನ್ನು ಪಡೆದು ವಿಶಾಲವಾದ ಅರ್ಥವನ್ನು ಪಡೆಯುತ್ತಿದೆ.

ವ್ಯಕ್ತಿಯು ಜನನದಿಂದ ಮರಣದವರೆಗೆ ಸದಾ ಏನನ್ನಾದರೂ ಕಲಿಯುತ್ತಲೇ ಇರುತ್ತಾನೆ. ಅಂತಹ ಕಲಿಕೆಯಲ್ಲಿ ಭಾಷಾ ಕಲಿಕೆಯು ಒಂದಾಗಿದೆ. ಭಾಷಾ ಕಲಿಕೆಯು ಇತರೆ ವಿಷಯಗಳ ಕಲಿಕೆಗಿಂತ ಭಿನ್ನ ಹಾಗೂ ಸಂಕೀರ್ಣವಾಗಿರುವುದಲ್ಲದೇ ವಿಶಿಷ್ಟತೆಯಿಂದ ಕೂಡಿರುತ್ತದೆ. ಏಕೆಂದರೆ ಭಾಷೆಯನ್ನು ಸಮರ್ಪಕವಾಗಿ ಕಲಿತ ನಂತರ ಮಗು ವಿಷಯಗಳನ್ನು ಕಲಿಯುತ್ತದೆ. ಆದ್ದರಿಂದ ಭಾಷಾ ಕಲಿಕೆಗೆ ವಿಶೇಷವಾದ ಮಹತ್ವವಿದೆ. ಇಂತಹ ಕಲಿಕೆಯು ಮುಂದಿನ ಶೈಕ್ಷಣಿಕ ಚಟುವಟಿಕೆಗಳಿಗೆ ಬುನಾದಿಯಾಗುತ್ತದೆ. ಭಾಷಾ ಕಲಿಕೆ ಹಾಗೂ ಕಲಿಸುವಿಕೆಯು ಪ್ರಾಚೀನ ಕಾಲದಿಂದ ಇಂದಿನವರೆಗೂ ನಡೆಯುತ್ತಲೇ ಬಂದಿದೆ. ಅಲ್ಲದೆ ಈ ಭಾಷಾ ಕಲಿಕೆ ಹಾಗೂ ಕಲಿಸುವಿಕೆಯಲ್ಲಿ ಹಲವಾರು ಬದಲಾವಣೆಗಳಾಗುತ್ತಾ ಬಂದಿವೆ.

ಮಕ್ಕಳು ತಮ್ಮ ಮೊದಲನೆಯ ಭಾಷಾ ಕಲಿಕೆಯ ಸಂದರ್ಭದಲ್ಲಿ ಯಾವ ಕಷ್ಟವೂ ಇಲ್ಲದೆ ಅಥವಾ ಹೆಚ್ಚಿನ ಗೊಂದಲಗಳಿಲ್ಲದೆ ತಕ್ಷಣದಲ್ಲಿಯೇ ಅರ್ಥಮಾಡಿಕೊಳ್ಳುವ ವಾಕ್ಯಗಳ ಸಂಖ್ಯೆ ಗಣನೀಯವಾದುದು.[೨] ಇದು ಶಿಕ್ಷಣ ಮಾಧ್ಯಮದ ಬಗೆಗೆ ನೀತಿ ರೂಪಿಸುವವರು ಗಮನಿಸಬೇಕಾದ ಅತ್ಯಂತ ಪ್ರಮುಖ ಅಂಶವೂ ಹೌದು. ಸರ್ಕಾರವು ಭಾಷಾ ಕಲಿಕೆ ಹಾಗೂ ಕಲಿಸುವಿಕೆಗಾಗಿ ಹಲವಾರು ಹೊಸ ಯೋಜನೆಗಳನ್ನು ಜಾರಿಗೆ ತಂದಿದೆ. ಅಂತಹ ಯೋಜನೆಗಳನ್ನು ಎರಡು ರೀತಿಯಲ್ಲಿ ನೋಡಬಹುದು. ಮೊದಲನೆಯದು; ಮಕ್ಕಳನ್ನು ಕಲಿಕೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳಲು, ಅವರ ಆಸಕ್ತಿ, ಅಭಿರುಚಿಯನ್ನು, ಶಾಲೆ ಅಥವಾ ಪಾಠದ ಕಡೆ ಸೆಳೆಯಲು ಮಕ್ಕಳಿಗಾಗಿಯೇ ತಂದಿರುವ ಹಲವು ಯೋಜನೆಗಳಿವೆ. ಅವುಗಳಲ್ಲಿ ಮುಖ್ಯವಾಗಿ ಉಚಿತ ಹಾಗೂ ಕಡ್ಡಾಯ ಶಿಕ್ಷಣ, ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಶೂ, ಬ್ಯಾಗ್‌ಗಳನ್ನು ನೀಡುವುದು, ಶಿಷ್ಯವೇತನ, ಅಕ್ಷರದಾಸೋಹ, ಪ್ರತಿಭಾ ಪುರಸ್ಕಾರ, ಬೈಸಿಕಲ್ ವಿತರಣೆ, ಭಾಗ್ಯಲಕ್ಷ್ಮೀ ಯೋಜನೆ ಇತ್ಯಾದಿ. ಎರಡನೆಯದು; ಶಿಕ್ಷಕರಿಗೂ ಸಹ ಹಲವಾರು ಸೌಲಭ್ಯಗಳನ್ನು ನೀಡಿ ಅವರು ಶೈಕ್ಷಣಿಕ ಚಟುವಟಿಕೆಯಲ್ಲಿ ಸಮರ್ಪಕವಾಗಿ ತೊಡಗಿಸಿಕೊಳ್ಳುವಂತೆ ಮಾಡಿದೆ.

ಇಷ್ಟೇ ಅಲ್ಲದೆ ಭಾಷಾ ಕಲಿಕೆ ಹಾಗೂ ಕಲಿಸುವಿಕೆಯನ್ನು ಗುಣಾತ್ಮಕ ಹಾಗೂ ಪರಿಣಾಮಕಾರಿಯಾಗಿಸಲು ಶಿಕ್ಷಕರಿಗೆ ಸೇವಾ ನಿರತ ಹಾಗೂ ಸೇವಾವಧಿ ತರಬೇತಿ ನೀಡಲಾಗುತ್ತದೆ. ಅಲ್ಲದೆ ಪಠ್ಯಕ್ರಮ ಬೋಧನಾ ವಿಧಾನ, ಕಲಿಸುವ ರೀತಿ ನೀತಿಗಳಲ್ಲಿ ಹಲವಾರು ಬದಲಾವಣೆಗಳನ್ನು ತರಲಾಗಿದೆ. ಪರಿಣಾಮಕಾರಿ ಕಲಿಕೆಗಾಗಿ ನಲಿ – ಕಲಿ, ಕಲಿ – ನಲಿ, ಕೇಳಿ – ಕಲಿ, ಚಿನ್ನರ ಚುಕ್ಕಿ, ಚಿನ್ನರ ಅಂಗಳ, ಚೈತನ್ಯ ಭಾಗ–೧, ಚೈತನ್ಯ ಭಾಗ–೨, ಸಮುದಾಯದತ್ತ ಶಾಲೆ ಮುಂತಾದವುಗಳು. ಇವುಗಳ ಜೊತೆಗೆ ಸರ್ವಶಿಕ್ಷಣ ಅಭಿಯಾನದಡಿಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ. ಅಂತಹ ಕಾರ್ಯಗಳಲ್ಲಿ 'ಓದುವೆ ನಾನು' ಯೋಜನೆ ಮತ್ತು ಇತ್ತೀಚೆಗಷ್ಟೆ ಸ್ಪಷ್ಟ ಓದು – ಶುದ್ಧ ಬರಹ ಎಂಬ ಯೋಜನೆಗಳನ್ನು ಜಾರಿಗೆ ತಂದಿದೆ. ಮಕ್ಕಳ ಕಲಿಕಾ ಮಟ್ಟವನ್ನು ತಿಳಿಯಲು ಹಾಗೂ ಮಕ್ಕಳ ಕಲಿಕೆಯನ್ನು ಮೌಲ್ಯಮಾಪನ ಮಾಡಲು ಹಿಂದಿಗಿಂತ ಇಂದು ಸರ್ಕಾರ ಹಲವಾರು ಪರಿಣಾಮಕಾರಿ ಯೋಜನೆಗಳನ್ನು ರೂಪಿಸಿದೆ. ಅವುಗಳಲ್ಲಿ ಮುಖ್ಯವಾಗಿ ಇತ್ತೀಚೆಗೆ 'ಕರ್ನಾಟಕ ಶಿಕ್ಷಣ ಗುಣಾತ್ಮಕ ಮೌಲ್ಯಾಂಕನ ಸಂಸ್ಥೆಯು' ಪ್ರತಿ ವರ್ಷ ವಿದ್ಯಾರ್ಥಿಗಳು ವಿಷಯವಾರು ಹಾಗೂ ಭಾಷಾಕಲಿಕೆಯಲ್ಲಿ ಗಳಿಸಿದ ಕಲಿಕೆಯ ಗುಣಮಟ್ಟವನ್ನು ಗುಣಾತ್ಮಕ ಮೌಲ್ಯಮಾಪನ ಮಾಡುತ್ತದೆ. ಮಾತ್ರವಲ್ಲದೆ ಸರ್ಕಾರ ಮತ್ತು ವಿವಿಧ ಸಂಘ–ಸಂಸ್ಥೆಗಳು ಹಲವಾರು ಕಾರ್ಯಕ್ರಮಗಳನ್ನು ರೂಪಿಸುತ್ತಿವೆ.

ಇಷ್ಟೆಲ್ಲಾ ಸೌಲಭ್ಯಗಳು, ಕಾರ್ಯಕ್ರಮಗಳು, ಯೋಜನೆಗಳು ಇದ್ದರೂ ಸಹ ಮಕ್ಕಳ ಕಲಿಕೆಯಲ್ಲಿ ತೃಪ್ತಿಕರ ಗುರಿಯನ್ನು ತಲುಪಲು ಆಗುತ್ತಿಲ್ಲ. ಅಲ್ಲದೆ ಭಾಷಾ ಕಲಿಕೆ ಹಾಗೂ ಕಲಿಸುವಿಕೆಯಲ್ಲಿನ ಸಮಸ್ಯೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇವೆ. ಕಲಿಯುವ ಸಮಸ್ಯೆಗಳಿಗಿಂತ ಕಲಿಸುವ ಸಮಸ್ಯೆಗಳನ್ನು ಮೊದಲು ನಿವಾರಣೆ ಮಾಡಬೇಕು. ಇಲ್ಲದಿದ್ದರೆ ಕಲಿಯುವ ಸಮಸ್ಯೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಹೋಗುತ್ತವೆ. ಪ್ರಸ್ತುತ ಅಧ್ಯಯನದಲ್ಲಿ ಕಲಿಯುವಾಗ ಉಂಟಾಗುವ ಸಮಸ್ಯೆಗಳಾವುವು ಅದರಲ್ಲಿಯೂ ಮುಖ್ಯವಾಗಿ ಬಹುಭಾಷಾ ಪರಿಸರದಲ್ಲಿನ ಮಕ್ಕಳು ಮನೆಮಾತಲ್ಲದ, ಪರಿಸರದ ಭಾಷೆಯೂ ಅಲ್ಲದ ಬೇರೊಂದು ನುಡಿಯನ್ನು ಕಲಿಯುವಾಗ ಯಾವೆಲ್ಲಾ ರೀತಿಯ ತಪ್ಪುಗಳನ್ನು ಮಾಡುತ್ತಾರೆ? ಎಂಬುದರ ಕುರಿತು ಅಧ್ಯಯನ ಕೈಗೊಳ್ಳಲಾಗಿದೆ.

ಭಾಷಾ ಆಧಾರದ ನೆಲೆಯಲ್ಲಿ ನಡೆದ ವಿಂಗಡಣೆ ಮತ್ತು ಏಕೀಕರಣದ ನಂತರ ಸಾಮಾನ್ಯವಾಗಿ ನಾವು ಏಕಭಾಷಿಕ ಪರಿಸರವನ್ನು ಹೆಚ್ಚಾಗಿ ಕಾಣುತ್ತೇವೆ. ಇದರ ಹೊರತಾಗಿಯೂ ಭಾರತದಾದ್ಯಂತ ಹಲವು ಕಡೆಗಳಲ್ಲಿ ದ್ವಿಭಾಷಿಕತೆಯನ್ನು ಕಾಣುತ್ತೇವೆ. ಆದರೆ ಕೆಲವು ಪ್ರದೇಶಗಳಲ್ಲಿ ಮಾತ್ರ ನಾವು ಬಹುಭಾಷಿಕ ಪರಿಸರ ಮತ್ತು ಬಹುಭಾಷಿಕರನ್ನು ಕಾಣಲು ಸಾಧ್ಯವಿದೆ. ಇಂತಹ ಪರಿಸರಗಳಲ್ಲಿರುವ ಮಕ್ಕಳು ಮನೆಯಲ್ಲಿ ತಮ್ಮ ಮನೆಮಾತನ್ನು, ಮನೆಯ ಹೊರಗೆ ತಮ್ಮ ಪರಿಸರದ ನುಡಿಯನ್ನು, ಆಡಳಿತಾತ್ಮಕ ನೆಲೆಯಲ್ಲಿ ಮತ್ತೊಂದು ಭಾಷೆಯನ್ನು ಹಾಗೂ ಶಾಲಾ ಪರಿಸರದಲ್ಲಿ ಇನ್ನೊಂದು ಭಾಷೆಯನ್ನು ಅನಿವಾರ್ಯವಾಗಿ ಕಲಿಯಬೇಕಾಗಿದೆ. ಈ ಸಂದರ್ಭಗಳಲ್ಲಿ ಎಲ್ಲ ಭಾಷೆಗಳಲ್ಲಿಯೂ ಪರಿಪಕ್ವತೆಯನ್ನು ಸಾಧಿಸಲಾಗದಿದ್ದರೂ ಆಯಾ ಸಂದರ್ಭವನ್ನು ಎದುರಿಸುವಷ್ಟರ ಮಟ್ಟಿಗೆ ಸಮರ್ಥರಾಗಿರುತ್ತಾರೆ. ಆದರೆ ಕಲಿಕೆಯ ಸಂದರ್ಭದಲ್ಲಿ ಮಾತ್ರ ಸಾಕಷ್ಟು ವ್ಯತ್ಯಯಗಳನ್ನು ಉಂಟುಮಾಡುತ್ತಿರುವುದು ಕಂಡುಬರುತ್ತದೆ.

ಅಧ್ಯಯನದ ಮಹತ್ವ

ಭಾಷಾ ಕಲಿಕೆಗೆ ಸಂಬಂಧಿಸಿದ ಸಮಸ್ಯೆಗಳು ಒಂದೇ ತೆರನಾಗಿರದೆ; ಅವು ವ್ಯಕ್ತಿಯಿಂದ ವ್ಯಕ್ತಿಗೆ, ಕಾಲದಿಂದ ಕಾಲಕ್ಕೆ, ಪರಿಸರದಿಂದ ಪರಿಸರಕ್ಕೆ ಭಿನ್ನವಾಗಿರುತ್ತವೆ. ಹೀಗೆ ಸಮಸ್ಯೆಗಳನ್ನು ವಿಸ್ತೃತವಾಗಿ ಅಧ್ಯಯನ ಮಾಡುವುದರಿಂದ ನಿಖರವಾದ ಕಾರಣಗಳು ತಿಳಿದುಬರುತ್ತವೆ. ಇವು ನೀತಿ ರೂಪಿಸುವವರಿಗೆ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲು ಸಹಕಾರಿಯಾಗುತ್ತದೆ.

ಶೈಕ್ಷಣಿಕವಾಗಿ ಕನ್ನಡೇತರ ಮನೆಮಾತುಳ್ಳ ಮಕ್ಕಳು ಕನ್ನಡ ಭಾಷೆಯನ್ನು ಕಲಿಯುವಾಗ ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎನ್ನುವುದು ಅವರ ಓದು ಮತ್ತು ಬರಹದಿಂದ ಕಂಡಬರುತ್ತದೆ. ಸದರಿ ಅಧ್ಯಯನದಿಂದ ದಕ್ಷಿಣ ಕನ್ನಡ ಪರಿಸರದ ಬ್ಯಾರಿ ಮನೆಮಾತುಳ್ಳ ಮಕ್ಕಳ ಕಲಿಕೆಯ ಸಮಸ್ಯೆಗಳಿಗೆ ಕಾರಣವಾಗಿರುವ ಅಂಶಗಳನ್ನು ಅರ್ಥಮಾಡಿಕೊಳ್ಳಬಹುದಾಗಿದೆ. ಜೊತೆಗೆ ಶೈಕ್ಷಣಿಕ ಅಭಿವೃದ್ಧಿಗೆ ಕೈಗೊಳ್ಳಬಹುದಾದ ಪರಿಹಾರಗಳನ್ನು ಕಂಡುಕೊಳ್ಳಬಹುದಾಗಿದೆ. ಹೀಗೆ ಪ್ರಸ್ತುತ ಅಧ್ಯಯನವು ಈ ಮಕ್ಕಳ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಲು ಪರೋಕ್ಷವಾಗಿ ನೆರವಾಗುತ್ತದೆ.

ಬ್ರಿಟಿಷ್ ಆಡಳಿತಾವಧಿಯ ಭಾರತದಲ್ಲಿ ರೂಪುಗೊಂಡ ಶಿಕ್ಷಣ ನೀತಿಯು ಏಕಮಾದರಿಯಾಗಿ ಬದಲಾದ ಸಂದರ್ಭಕ್ಕೆ ಅದು ಅಪ್ರಸ್ತುತ. ಅಂದರೆ ಪ್ರಾರಂಭ ಕಾಲದ ಆಡಳಿತದಲ್ಲಿ ಅನುಕೂಲವಾಗುವ ರೀತಿಯಲ್ಲಿ ಭಾರತೀಯರಿಗೆ ಇಂಗ್ಲೀಷ್ ಜತೆಗೆ ಸ್ಥಳೀಯ ಭಾಷೆಯನ್ನು ಕಲಿಸುವ ಪರಿಪಾಠ ಜಾರಿಗೆ ಬಂದಿತು. ಅಂದರೆ ಇಂಗ್ಲೀಷನ್ನು ಸಾರ್ವತ್ರೀಕರಣಗೊಳಿಸಿ ಆಯಾ ಪ್ರಾದೇಶಿಕ ಭಾಷೆಯನ್ನು ಕಲಿಸುವ, ಶಿಕ್ಷಣವನ್ನು ನೀಡುವ ಪದ್ಧತಿ ಜಾರಿಯಾಯಿತು. ಇದರಿಂದ ತಮಿಳು, ಕನ್ನಡ, ತುಳು, ತೆಲುಗು ಭಾಷಿಕರಿಗೆ ಸ್ವಲ್ಪಮಟ್ಟಿಗೆ

ಅನುಕೂಲವಾಯಿತಾದರೂ ಆಯಾ ಪ್ರದೇಶಗಳಲ್ಲಿನ ಭಾಷಿಕ ಅಲ್ಪಸಂಖ್ಯಾತರಿಗೆ ವ್ಯತಿರಿಕ್ತ ಪರಿಣಾಮವನ್ನು ಉಂಟುಮಾಡಿತು. ತುಳು, ಕೊಡವ, ಬ್ಯಾರಿ, ಲಂಬಾಣಿ ಮೊದಲಾದ ಭಾಷಿಕರು ಇಂಗ್ಲೀಷ್ ಕಲಿಯುವಷ್ಟೆ ಕಷ್ಟವನ್ನು ಕನ್ನಡ ಭಾಷೆ ಕಲಿಯುವಾಗ ಅನುಭವಿಸಬೇಕಾದ ಅನಿವಾರ್ಯತೆ ಎದುರಾಯಿತು. ಈ ಹಿನ್ನೆಲೆಯಲ್ಲಿ ಇದುವರೆಗೂ ಈ ಸಮುದಾಯಗಳು ತಮ್ಮ ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯುವ ಅವಕಾಶವನ್ನೇ ಕಳೆದುಕೊಂಡವು. ಮಾತೃಭಾಷೆಯ ಸ್ಥಾನದಲ್ಲಿ ಕನ್ನಡವನ್ನೇ ಆರೋಪಿಸಿ ಕಲಿಕೆ, ಬೋಧನೆಯನ್ನು ಜಾರಿಗೆ ತರಲಾಯಿತು. ಇವುಗಳೆಲ್ಲದರ ಪರಿಣಾಮವಾಗಿಯೇ ಇಂದು ಬ್ಯಾರಿ ಭಾಷೆಯನ್ನು ಮನೆಮಾತಾಗಿರಿಸಿಕೊಂಡಿರುವ ಮಕ್ಕಳು ಕಲಿಕೆಯ ಸಂದರ್ಭದಲ್ಲಿ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಕುರಿತಾಗಿ ನಿರ್ದಿಷ್ಟ ಭಾಷಿಕ ಮನೆಮಾತುಳ್ಳ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳ ಬಗೆಗೆ ಅಧ್ಯಯನಗಳು ಆಯಾ ಭಾಷೆಯ ರಚನೆ ಮತ್ತು ಸ್ವರೂಪದ ಹಿನ್ನೆಲೆಯಲ್ಲಿ ನಡೆದಿವೆ. ಬ್ಯಾರಿ ಭಾಷೆಯನ್ನು ಮನೆಮಾತಾಗಿರಿಸಿಕೊಂಡಿರುವ ಮಕ್ಕಳ ಕನ್ನಡ ಕಲಿಕೆಯ ಬಗೆಗೆ ಇದುವರೆಗೂ ಅಧ್ಯಯನಗಳು ನಡೆದಿಲ್ಲವಾದುದರಿಂದ ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ಮಹತ್ವ ಎನಿಸುತ್ತದೆ.

ಅಧ್ಯಯನದ ಉದ್ದೇಶ

ಇದುವರೆಗೆ ಕನ್ನಡ ಭಾಷೆಯ ಕಲಿಕೆ ಮತ್ತು ಬೋಧನೆಗೆ ಸಂಬಂಧಿಸಿದಂತೆ ಅಧ್ಯಯನಗಳು ನಡೆದಿವೆ. ಆದರೆ ಔಪಚಾರಿಕ ಶಿಕ್ಷಣದ ಕನ್ನಡ ಕಲಿಕೆಯಲ್ಲಿ ಓದು ಮತ್ತು ಬರವಣಿಗೆಯನ್ನು ಕುರಿತು ನಡೆದಿರುವ ಅಧ್ಯಯನಗಳ ಸಂಖ್ಯೆ ಕಡಿಮೆ. ಈ ಅಧ್ಯಯನಗಳಲ್ಲಿ ಕನ್ನಡ ಕಲಿಕೆ ಮತ್ತು ಬಳಕೆಯ ಸಂದರ್ಭದಲ್ಲಿ ಆಲಿಸುವ ಮತ್ತು ಮಾತನಾಡುವ ಕೌಶಲ್ಯಗಳ ಬಗ್ಗೆ ಅಧ್ಯಯನಗಳು ನಡೆದಿಲ್ಲ. ಈ ಎರಡು ಕೌಶಲ್ಯಗಳಲ್ಲಿ ಕಾಣಿಸಿಕೊಳ್ಳುವ ತಪ್ಪುಗಳು ಓದು ಮತ್ತು ಬರವಣಿಗೆಯಲ್ಲಿಯೂ ಕಾಣಿಸಿಕೊಳ್ಳುತ್ತಿರುತ್ತವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನದಲ್ಲಿ ಆಲಿಸುವಿಕೆ ಮತ್ತು ಮಾತನಾಡುವಿಕೆಯ ಸಮಸ್ಯೆಗಳ ಬಗೆಗೆ ಚರ್ಚಿಸಿಲ್ಲ. ಪ್ರತಿಯೊಂದು ಕೆಲಸಕ್ಕೂ ಸೂಕ್ತವಾದ ಉದ್ದೇಶಗಳಿರುತ್ತವೆ. ಹಾಗೆಯೇ ಪ್ರಸ್ತುತ ಅಧ್ಯಯನವು ಕೂಡ ಕೆಲವು ನಿರ್ದಿಷ್ಟವಾದ ಉದ್ದೇಶಗಳನ್ನು ಒಳಗೊಂಡಿದೆ. ಅವು ಈ ಕೆಳಗಿನಂತಿವೆ.

೧. ಬ್ಯಾರಿ ಮನೆಮಾತುಳ್ಳ ಮಕ್ಕಳು ಔಪಚಾರಿಕವಾಗಿ ಶಾಲಾ ತರಗತಿಗಳಲ್ಲಿ ಕನ್ನಡವನ್ನು ಓದುವಾಗ ಮತ್ತು ಬರೆಯುವಾಗ ಎದುರಿಸುವ ಸಮಸ್ಯೆಗಳನ್ನು ಮತ್ತು ಕಲಿಕೆಯ ಸಂದರ್ಭದಲ್ಲಿ ಎದುರಾಗುವ ಭಾಷಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರಣಗಳನ್ನು ಚರ್ಚೆ ಮಾಡುವುದು ಹಾಗೂ ಅವುಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಕೈಗೊಳ್ಳಬಹುದಾದ ಪರಿಹಾರೋಪಾಯಗಳ ಬಗೆಗೆ ಚರ್ಚಿಸುವುದು ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

೨. ದಕ್ಷಿಣ ಕನ್ನಡದ ಸಾಮಾಜಿಕ, ಸಾಂಸ್ಕೃತಿಕ ಪರಿಸರವನ್ನು ಅಧ್ಯಯನ ಮಾಡುವ ಜೊತೆಜೊತೆಗೆ ದಕ್ಷಿಣ ಕನ್ನಡ ಜಿಲ್ಲೆಯ ಭಾಷಿಕ ಪರಿಸರವನ್ನು ಕುರಿತಂತೆ ಅಧ್ಯಯನ ಮಾಡಿ, ಈ ಪರಿಸರ ಏಕಭಾಷಿಕ, ದ್ವಿಭಾಷಿಕ, ಬಹುಭಾಷಿಕ ಹೀಗೆ ಯಾವ ಪ್ರಕಾರಕ್ಕೆ ಬರುತ್ತದೆ. ಒಂದು ವೇಳೆ ದ್ವಿಭಾಷಿಕ, ಬಹುಭಾಷಿಕ ಪರಿಸರವಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ಎಂಬುದನ್ನು ಕಂಡುಕೊಳ್ಳುವುದು ಪ್ರಸ್ತುತ ಅಧ್ಯಯನದ ಉದ್ದೇಶಗಳಲ್ಲಿ ಒಂದಾಗಿದೆ.

೩. ಕರ್ನಾಟಕದಲ್ಲಿ ಪ್ರಾಥಮಿಕ ಶಾಲೆಯನ್ನು ಎರಡು ರೀತಿಯಲ್ಲಿ ವಿಭಾಗ ಮಾಡಲಾಗಿದೆ. ಒಂದು; ಕಿರಿಯ ಪ್ರಾಥಮಿಕ ಶಾಲೆ (ಒಂದನೆಯ ತರಗತಿಯಿಂದ ನಾಲ್ಕನೆಯ ತರಗತಿಯವರೆಗೆ) ಎರಡು; ಹಿರಿಯ ಪ್ರಾಥಮಿಕ ಶಾಲೆ (ಐದನೆಯ ತರಗತಿಯಿಂದ ಎಂಟನೆಯ ತರಗತಿಯವರೆಗೆ). ಕಿರಿಯ ಪ್ರಾಥಮಿಕ ಶಾಲಾ ಮಕ್ಕಳು ಆಗಷ್ಟೇ ಭಾಷೆಯನ್ನು ಕಲಿಯುವ ಹಂತದಲ್ಲಿರುತ್ತಾರೆ ಅಂದರೆ ಅದು ಅವರ ಶಾಲೆಯಲ್ಲಿನ ಭಾಷಾ ಕಲಿಕೆಯ

ಮೊದಲ ಹಂತವಾಗಿರುವುದರಿಂದ ಪ್ರಸ್ತುತ ಅಧ್ಯಯನಕ್ಕೆ ಕಿರಿಯ ಪ್ರಾಥಮಿಕ ಶಾಲಾ ಮಕ್ಕಳನ್ನು ಒಳಪಡಿಸದೆ, ಸರ್ಕಾರಿ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯ ಬ್ಯಾರಿ ಮನೆಮಾತುಳ್ಳ ಮಕ್ಕಳಲ್ಲಿ ಕಂಡುಬರುವ ಕನ್ನಡ ಕಲಿಕೆಯ ಸಮಸ್ಯೆಗಳನ್ನು ಗುರುತಿಸಿ, ಆ ಸಮಸ್ಯೆಗಳಿಗೆ ಕಾರಣಗಳನ್ನು ಕಂಡುಕೊಳ್ಳುವ ಮಹತ್ವದ ಉದ್ದೇಶವನ್ನು ಹೊಂದಿದೆ.

೪. ಭಾಷೆಯಲ್ಲಿ ಮುಖ್ಯವಾಗಿ ನಾಲ್ಕು ಕೌಶಲ್ಯಗಳನ್ನು ಈಗಾಗಲೇ ನಾವು ಗುರುತಿಸಿಕೊಂಡಿದ್ದೇವೆ. ಅವುಗಳೆಂದರೆ; ಆಲಿಸುವುದು, ಮಾತನಾಡುವುದು, ಓದುವುದು ಮತ್ತು ಬರೆಯುವುದು. ಈ ಕೌಶಲ್ಯಗಳ ಪೈಕಿ ಮೊದಲೆರಡು ಕೌಶಲ್ಯಗಳಾದ ಆಲಿಸುವುದು ಮತ್ತು ಮಾತನಾಡುವುದನ್ನು ಮಗು ಮನೆಯ ಕೌಟಂಬಿಕ ಪರಿಸರದಲ್ಲಿ ಅನೌಪಚಾರಿಕವಾಗಿ ಕಲಿಯುತ್ತದೆ. ಇಲ್ಲಿ ಶಾಲಾ ಪರಿಸರದಲ್ಲಿ ಔಪಚಾರಿಕವಾಗಿ ಕಲಿಯುವ ನಂತರದ ಎರಡು ಕೌಶಲ್ಯಗಳಾದ ಓದುವುದು ಮತ್ತು ಬರೆಯುವುದು ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸುವುದರಿಂದ ಈ ಅಧ್ಯಯನವು ಬ್ಯಾರಿ ನುಡಿಯನ್ನು ಮನೆಮಾತಾಗಿರಿಸಿಕೊಂಡಿರುವ ಕನ್ನಡ ಮಾಧ್ಯಮದ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳು ಓದುವಾಗ ಹಾಗೂ ಬರೆಯುವಾಗ ಎದುರಿಸುವ ಸಮಸ್ಯೆಗಳನ್ನು ಗುರುತಿಸುವ ಉದ್ದೇಶವನ್ನು ಹೊಂದಿದೆ.

೫. ಅಧ್ಯಯನ ಕ್ಷೇತ್ರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿನ ಮಕ್ಕಳು ಮೂಲಾಕ್ಷರ, ಗುಣಿತಾಕ್ಷರ, ಒತ್ತಕ್ಷರ, ಪದಗಳು ಹಾಗೂ ವಾಕ್ಯಗಳನ್ನು ಓದುವಾಗ, ಬರೆಯುವಾಗ ಮಾಡುವ ತಪ್ಪುಗಳನ್ನು ಗುರುತಿಸಿ ವಿಶ್ಲೇಷಣೆಗೊಳಪಡಿಸುವುದು ಅಧ್ಯಯನದ ಮಹತ್ವದ ಉದ್ದೇಶಗಳಲ್ಲಿ ಒಂದಾಗಿದೆ.

೬. ಕರ್ನಾಟಕದಲ್ಲಿ ಸದ್ಯ ತ್ರಿಭಾಷಾ ಸೂತ್ರವು ಜಾರಿಯಲ್ಲಿದೆ. ಇದರ ಜೊತೆಜೊತೆಗೆ ಮಕ್ಕಳ ಶಿಕ್ಷಣ ಮಾಧ್ಯಮದ ಕುರಿತಂತೆ ಗಣನೀಯವಾದ ಚರ್ಚೆಗಳು ಪ್ರಸ್ತುತ ಸಂದರ್ಭದಲ್ಲಿ ನಡೆಯುತ್ತಲಿವೆ. ಹೀಗೆ ತ್ರಿಭಾಷಾ ಸೂತ್ರದಡಿಯಲ್ಲಿ ಶಿಕ್ಷಣ ಪಡೆಯುತ್ತಿರುವ ಮಕ್ಕಳಿಗೆ ಮನೆಮಾತು ಹೇಗೆ ಪೂರಕವಾಗುತ್ತಿದೆ? ಎಂಬುದನ್ನು ತಿಳಿಯುವುದು ಪ್ರಸ್ತುತ ಅಧ್ಯಯನದ ಉದ್ದೇಶಗಳಲ್ಲಿ ಒಂದು.

ಹೀಗೆ ಕಲಿಕೆಯ ಕುರಿತಂತೆ ಅದರಲ್ಲಿಯೂ ಭಾಷಾ ಕಲಿಕೆಗೆ ಸಂಬಂಧಿಸಿದಂತೆ ಕೆಲವು ಅಧ್ಯಯನಗಳು ನಡೆದಿದ್ದರೂ ಕನ್ನಡೇತರ ಮನೆಮಾತುಳ್ಳ ಹಿನ್ನೆಲೆಯಿಂದ ಬಂದ ಬ್ಯಾರಿ ಮನೆಮಾತುಳ್ಳ ಮಕ್ಕಳು ಶಾಲಾ ತರಗತಿಗಳಲ್ಲಿ ಕನ್ನಡ ಭಾಷೆಯನ್ನು ಪ್ರಥಮ/ ದ್ವಿತೀಯ ಭಾಷೆಯಾಗಿ ಕಲಿಯುವಲ್ಲಿ ಎದುರಿಸುವ ಸಮಸ್ಯೆಗಳನ್ನು ಬಿಡಿಬಿಡಿಯಾಗಿ ವರ್ಗೀಕರಿಸಿಕೊಂಡು ಅಧ್ಯಯನ ಮಾಡುವ ಅಗತ್ಯತೆ ಇದೆ. ಆದ್ದರಿಂದ ಬ್ಯಾರಿ ಮನೆಮಾತುಳ್ಳ ಮಕ್ಕಳು ಕನ್ನಡವನ್ನು ಔಪಚಾರಿಕವಾಗಿ ಕಲಿಯುವಲ್ಲಿ ಉಂಟಾಗುವ ತಪ್ಪುಗಳು, ಎದುರಾಗುವ ಸವಾಲುಗಳ ಕುರಿತು ಅಧ್ಯಯನ ಮಾಡುವ ಅಗತ್ಯತೆಯನ್ನು ಮನಗಂಡು ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ 'ದಕ್ಷಿಣ ಕನ್ನಡ ಪರಿಸರದ ಕನ್ನಡ ಕಲಿಕೆಯ ಸಮಸ್ಯೆಗಳು' ಎಂಬ ವಿಷಯದ ಅಧ್ಯಯನಕ್ಕೆ ದಕ್ಷಿಣ ಕನ್ನಡ ಜಿಲ್ಲೆಯನ್ನು ಅಧ್ಯಯನ ಕ್ಷೇತ್ರವನ್ನಾಗಿ ಆಯ್ಕೆಮಾಡಿಕೊಳ್ಳಲಾಗಿದೆ. ದಕ್ಷಿಣ ಕನ್ನಡ ಪರಿಸರವನ್ನು ಆಯ್ಕೆಮಾಡಿಕೊಳ್ಳಲು ಮುಖ್ಯವಾದ ಕಾರಣಗಳೆಂದರೆ ದಕ್ಷಿಣ ಕನ್ನಡವು ಕರಾವಳಿ ಕರ್ನಾಟಕದ ವ್ಯಾಪ್ತಿಯಲ್ಲಿ ಬರುತ್ತದೆ. ಈ ಜಿಲ್ಲೆಯು ರಾಜ್ಯದ ಗಡಿಭಾಗದಲ್ಲಿ ಕೇರಳದೊಂದಿಗೆ ನೇರ ಸಂಪರ್ಕವನ್ನು ಹೊಂದಿರುವುದರಿಂದಾಗಿ ಇಲ್ಲಿ ಮಲೆಯಾಳಂ ಭಾಷಿಕರಿದ್ದಾರೆ. ಕರ್ನಾಟಕದ ಅರಸು ಮನೆತನಗಳು ಜಿಲ್ಲೆಗೆ ಪ್ರವೇಶ ಪಡೆದಂದಿನಿಂದ ಇಲ್ಲಿ ಕನ್ನಡ ಗಟ್ಟಿಯಾಗಿ ನೆಲೆಯೂರಿತು. ಅದೇ ರೀತಿ ಕನ್ನಡ ಸಮುದಾಯಗಳೂ ಇಲ್ಲಿಗೆ ವಲಸೆ ಬಂದವು. ಪೋರ್ಚುಗೀಸರು ಗೋವಾವನ್ನು ಕೇಂದ್ರವಾಗಿಟ್ಟುಕೊಂಡು ವ್ಯಾಪಾರ ನಡೆಸುತ್ತಿದ್ದ

ಸಂದರ್ಭದಲ್ಲಿ ಕರಾವಳಿ ತೀರದ ಪ್ರಮುಖ ವರ್ತಕರಾದ ಕೊಂಕಣಿ ವರ್ತಕರು ಇಲ್ಲಿಗೆ ಬಂದು ನೆಲೆಸಿದುದರ ಕಾರಣ ಕೊಂಕಣಿಯು ಪ್ರವೇಶ ಪಡೆಯಿತು. ಮುಸಲ್ಮಾನ ವರ್ತಕರು ಇಲ್ಲಿ ಬಂದು ನೆಲೆಸಿದುದರ ಪರಿಣಾಮವಾಗಿ ಬ್ಯಾರಿ ಬಾಷೆ ಇಲ್ಲಿ ಚಾಲ್ತಿಗೆ ಬಂದಿತು. ಇದರ ಜೊತೆಗೆ ಮಾಪಿಳ್ಳೆಗಳ 'ಮಾಪ್ಪಾ' ಭಾಷೆಯು ಇಲ್ಲಿ ಬಳಕೆಯಲ್ಲಿದೆ. ಟಿಪ್ಪು ಸುಲ್ತಾನನ ಆಳ್ವಿಕೆಯ ಸಂದರ್ಭದಲ್ಲಿ ಮಂಗಳೂರಿನಲ್ಲಿ ಭದ್ರ ನೆಲೆಯನ್ನು ಕಂಡುಕೊಂಡ ರಾಜಸ್ಥಾನಿ ಹಾಗೂ ಗುಜರಾತಿ ವರ್ತಕರು ತಮ್ಮ ಭಾಷೆಗಳನ್ನು ಚಾಲ್ತಿಯಲ್ಲಿರಿಸಿಕೊಂಡಿದ್ದಾರೆ. ಶಿವಾಜಿ ಹಾಗೂ ನಂತರ ಪೇಶ್ವೆಗಳ ಆಡಳಿತಾವಧಿಯಲ್ಲಿ ಇಲ್ಲಿಗೆ ಆಗಮಿಸಿದ ಮರಾಠಿಗಳು ಮರಾಠಿ ಭಾಷೆಯನ್ನು ಮಾತನಾಡುತ್ತಾರೆ. ಟಿಪ್ಪುವಿನ ಕಾಲದಲ್ಲಿ ಪರ್ಷಿಯಾ ಬಳಕೆಯಲ್ಲಿತ್ತು. ಅದೇರೀತಿ ಉರ್ದು ಭಾಷಿಕರೂ ಇದೇ ಸಂದರ್ಭದಲ್ಲಿ ಬಂದವರಾಗಿದ್ದಾರೆ. ಹೀಗೆ ನಾನಾ ಕಾರಣಗಳಿಗಾಗಿ ದಕ್ಷಿಣ ಕನ್ನಡ ಪರಿಸರಕ್ಕೆ ಬಂದವರು ತಮ್ಮ ಮನೆಮಾತುಗಳನ್ನೇ ಉಳಿಸಿಕೊಂಡಿದ್ದಾರೆ. ಇದರ ಜೊತೆಗೆ ವ್ಯವಹಾರಕ್ಕಾಗಿ ಕನ್ನಡ ಮತ್ತು ತುಳುವನ್ನು ಉಳಿಸಿಕೊಂಡಿದ್ದಾರೆ. ಹೀಗೆ ನಾವು ದಕ್ಷಿಣ ಕನ್ನಡ ಪರಿಸರವನ್ನು ಬಹುಭಾಷಿಕ ಪರಿಸರ ಎಂದು ಗುರುತಿಸಬಹುದು. ಆದ್ದರಿಂದ ಇಲ್ಲಿಯ ಮಕ್ಕಳು ಏಕಕಾಲಕ್ಕೆ ನಾನಾ ಸಂದರ್ಭಗಳಲ್ಲಿ ವಿವಿಧ ಭಾಷೆಗಳನ್ನು ಬಳಸಬೇಕಾಗಿದೆ. ಈ ಪರಿಸರದ ಬ್ಯಾರಿ ಮನೆಮಾತುಳ್ಳ ಮಕ್ಕಳು ಓದುವಾಗ, ಬರೆಯುವಾಗ ಹಲವು ರೀತಿಯ ತೊಂದರೆಗಳನ್ನು ಅನುಭವಿಸುವುದರಿಂದ ಈ ಪ್ರದೇಶವನ್ನು ಅಧ್ಯಯನಕ್ಕೆ ಆಯ್ಕೆಮಾಡಿಕೊಳ್ಳಲಾಗಿದೆ.

ದಕ್ಷಿಣ ಕನ್ನಡ ಪರಿಸರದಲ್ಲಿ ಜಿಲ್ಲೆಯ ತಾಲೂಕುಗಳಾದ ಮಂಗಳೂರು, ಪುತ್ತೂರು, ಸುಳ್ಯ, ಬೆಳ್ತಂಗಡಿ, ಮತ್ತು ಬಂಟ್ವಾಳ ತಾಲ್ಲೂಕುಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಪ್ರತಿ ತಾಲ್ಲೂಕಿನಿಂದ ಆಯಾ ತಾಲ್ಲೂಕುಗಳಲ್ಲಿ ಬ್ಯಾರಿ ಭಾಷಿಗರು ಹೆಚ್ಚಾಗಿ ಕಂಡುಬರುವ ಪ್ರದೇಶಗಳನ್ನು ಗುರುತಿಸಿಕೊಂಡು ಆಯಾ ಪ್ರದೇಶಗಳಲ್ಲಿರುವ ಶಾಲೆಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಪ್ರತಿಯೊಂದು ಶಾಲೆಯಲ್ಲಿ ಐದು, ಆರು, ಏಳು ಮತ್ತು ಎಂಟನೆಯ ತರಗತಿಯ ಬ್ಯಾರಿ ಮನೆಮಾತುಳ್ಳ ಮಕ್ಕಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಮಕ್ಕಳು ಮೂಲಾಕ್ಷರ, ಗುಣಿತಾಕ್ಷರ, ಒತ್ತಕ್ಷರ, ಪದಗಳು ಹಾಗೂ ವಾಕ್ಯಗಳನ್ನು ಓದುವ ಮತ್ತು ಬರೆಯುವ ಸಂದರ್ಭದಲ್ಲಿ ಎದುರಿಸುವ ಸಮಸ್ಯೆಗಳನ್ನು ಗುರುತಿಸಿ ಆ ಸಮಸ್ಯೆಯ ಸ್ವರೂಪವನ್ನು ಕಂಡುಹಿಡಿದು ವಿಶ್ಲೇಷಣೆ ಮಾಡುವುದಕ್ಕೆ ಪ್ರಸ್ತುತ ಅಧ್ಯಯನ ಸೀಮಿತವಾಗಿದೆ. ದಕ್ಷಿಣ ಕನ್ನಡವು ಬಹುಭಾಷಾ ಪರಿಸರವಾಗಿದ್ದು, ಈ ಪರಿಸರದ ಕನ್ನಡ ಕಲಿಕೆಯ ಸಮಸ್ಯೆಗಳ ಅಧ್ಯಯನ ಮಾಡುವ ಸಂದರ್ಭದಲ್ಲಿ ಕೇವಲ ಬ್ಯಾರಿ ಮನೆಮಾತುಳ್ಳ ಮಕ್ಕಳನ್ನು ಮಾತ್ರ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿರುವುದು ಪ್ರಸ್ತುತ ಅಧ್ಯಯನದ ಮಿತಿಯೂ ಹೌದು.

ಸಂಶೋಧನಾ ಅಧ್ಯಯನ ಸ್ಥಳದ ಆಯ್ಕೆ

ಪ್ರಸ್ತುತ 'ದಕ್ಷಿಣ ಕನ್ನಡ ಪರಿಸರದ ಕನ್ನಡ ಕಲಿಕೆಯ ಸಮಸ್ಯೆಗಳು' ಎಂಬ ಅಧ್ಯಯನವು ಕ್ಷೇತ್ರಕಾರ್ಯದ ಮಾಹಿತಿಯಿಂದಲೆ ರೂಪುಗೊಂಡಿರುವುದರಿಂದ ಈ ಅಧ್ಯಯನಕ್ಕೆ ದಕ್ಷಿಣ ಕನ್ನಡ ಜಿಲ್ಲೆಯನ್ನು ಆಯ್ಕೆಮಾಡಿಕೊಳ್ಳಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಐದು ತಾಲೂಕುಗಳಲ್ಲಿ ಪ್ರತಿ ತಾಲ್ಲೂಕಿನಲ್ಲಿಯೂ ಬ್ಯಾರಿ ಭಾಷಿಗರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಿರುವ ಪರಿಸರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ ಈ ಶಾಲೆಗಳಲ್ಲಿ ಕನ್ನಡವನ್ನು ಪ್ರಥಮ ಭಾಷೆಯಾಗಿ ಕಲಿಯುತ್ತಿರುವ ಐದು, ಆರು, ಏಳು ಮತ್ತು ಎಂಟನೆಯ ತರಗತಿಯ ಬ್ಯಾರಿ ಮನೆಮಾತುಳ್ಳ ಮಕ್ಕಳನ್ನು ಮಾತ್ರ ಸಂಶೋಧನೆಯ ಮಾಹಿತಿಗೆ ಆಯ್ಕೆ ಮಾಡಿಕೊಳ್ಳಲಾಗಿದೆ. ಇವರು ಕನ್ನಡವನ್ನು ಪ್ರಥಮ ಭಾಷೆಯಾಗಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಾಗಿದ್ದಾರೆ.

೧	ಮಂಗಳೂರು	೧.ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅತ್ತೂರು
		೨.ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಉಳ್ಳಾಲ
		೩.ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ತಲಿಪಾಡಿ
		೪.ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಳ್ಕುಂಜೆ
		೫.ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸೂರಿಂಜೆ
೨	ಪುತ್ತೂರು	೧.ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಒಳಮೊಗ್ರು
		೨.ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕುರಿಯ
		೩.ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೆಯ್ಯೂರು
		೪.ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ನರಿಮೊಗ್ರು
		೫.ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬೆಟ್ಟಂಪಾಡಿ
೩	ಸುಳ್ಯ	೧.ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅಜ್ಜಾವರ
		೨.ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಐವರ್ನಾಡು
		೩.ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕನಕಮಜಲು
		೪.ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಜಾಲ್ಸೂರು
		೫.ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಂಡೆಕೋಲು
೪	ಬೆಳ್ತಂಗಡಿ	೧.ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಉಪ್ಪಿನಂಗಡಿ
		೨.ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಡಿರುದ್ಯಾವರ
		೩.ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕುವೆಟ್ಟು
		೪.ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ನಾವೂರು
		೫.ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಲ್ಯಾಲ
೫	ಬಂಟ್ವಾಳ	೧.ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅಮ್ಮುಂಜೆ
		೨.ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ತುಂಬೆ
		೩.ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಫಜೀರ್
		೪.ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಂಟ್ವಾಳ
		೫. .ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸಜಿಪಮಡು

ಬ್ಯಾರಿ ಭಾಷಿಕ ಮಕ್ಕಳು ವಾಸಿಸುವ ಪರಿಸರವು ಸಾಮಾನ್ಯವಾಗಿ ಬ್ಯಾರಿ/ ತುಳು ನುಡಿಯನ್ನು ಒಳಗೊಂಡಿರುವುದರಿಂದ ಕನ್ನಡ ಭಾಷೆಯ ಅರಿವು ಅವರಿಗೆ ಇರುವುದಿಲ್ಲ. ಅಂತಹ ಬ್ಯಾರಿ ಭಾಷಿಕ ಮಕ್ಕಳು ಔಪಚಾರಿಕ ಶಿಕ್ಷಣದಲ್ಲಿ ಪ್ರಥಮ ಭಾಷೆಯಾಗಿ ಕನ್ನಡವನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಮಾತ್ರ ಕನ್ನಡ ಭಾಷಾ ಕಲಿಕೆ ನಡೆಯುತ್ತಿರುತ್ತದೆ. ಹೀಗೆ ಕನ್ನಡ ಭಾಷೆಯ ಬಗೆಗೆ ಅರಿವಿಲ್ಲದ ಬ್ಯಾರಿ ಭಾಷಿಕ ಮಕ್ಕಳನ್ನು ಅಧ್ಯಯನಕ್ಕೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಿಸಲು ಆಯ್ಕೆಮಾಡಿಕೊಳ್ಳಲಾಗಿದೆ. ಇಲ್ಲಿ ೨೦೧೬–೨೦೧೭ನೆ ಶೈಕ್ಷಣಿಕ ವರ್ಷದಿಂದ ೨೦೧೮–೨೦೧೯ನೆ ಶೈಕ್ಷಣಿಕ ವರ್ಷದವರೆಗೆ ಆಯ್ದ ಸರ್ಕಾರಿ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಬ್ಯಾರಿ ಮನೆಮಾತುಳ್ಳ ಮಕ್ಕಳನ್ನು

ಮಾಹಿತಿದಾರರನ್ನಾಗಿ ಆಯ್ಕೆಮಾಡಿಕೊಳ್ಳಲಾಗಿದೆ. ಪ್ರತಿಯೊಂದು ಶಾಲೆಯಿಂದಲೂ ಸರಾಸರಿ ಮೂವತ್ತು ಮಕ್ಕಳನ್ನು ಆಯ್ಕೆಮಾಡಿಕೊಳ್ಳಲಾಗಿದೆ.

ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನವು ಸಂಪೂರ್ಣ ಕ್ಷೇತ್ರಕಾರ್ಯಾಧಾರಿತ ಅಧ್ಯಯನವಾಗಿದೆ. ಇಲ್ಲಿ ಬ್ಯಾರಿ ನುಡಿಯನ್ನು ಮನೆಮಾತಾಗಿರಿಸಿಕೊಂಡಿರುವ ಮಕ್ಕಳು ಕನ್ನಡ ಭಾಷೆ ಓದುವಾಗ, ಬರೆಯುವಾಗ ಹಾಗೂ ವಾಕ್ಯರಚನೆಯಲ್ಲಿ ಎದುರಿಸುವ ಸಮಸ್ಯೆಗಳನ್ನು ಗುರುತಿಸಲು ಎರಡು ವಿಧಾನಗಳನ್ನು ಅನುಸರಿಸಲಾಗಿದೆ. ಐದು, ಆರು, ಏಳು ಮತ್ತು ಎಂಟನೆಯ ತರಗತಿಯ ಕನ್ನಡ ಭಾಷಾ ಪಠ್ಯಪುಸ್ತಕಗಳನ್ನು ಆಯಾ ತರಗತಿಯ ಮಕ್ಕಳಿಗೆ ಓದಿಸುವುದು, ಬರೆಸುವುದು ಹಾಗೂ ಅಕಾರಾದಿಯಾಗಿ ಕೊಟ್ಟಿರುವ ಪದಗಳನ್ನು 'ಓದುವೆ ನಾನು' ಕಾರ್ಡುಗಳನ್ನು ಕೊಟ್ಟು ಓದಿಸಿ, ನಂತರ ಬರೆಯಿಸಿ ದಾಖಲಿಸಿಕೊಳ್ಳಲಾಗಿದೆ. ಹೀಗೆ, ಸ್ವರ, ವ್ಯಂಜನ, ಗುಣಿತಾಕ್ಷರ, ಒತ್ತಕ್ಷರ ಮತ್ತು ವಾಕ್ಯಗಳನ್ನು ಮಕ್ಕಳು ಓದುವಾಗ ಧ್ವನಿ ಮುದ್ರಣ ಮಾಡಿಕೊಳ್ಳಲಾಗಿದೆ. ನಂತರ ಈ ಮೇಲೆ ತಿಳಿಸಿದ ಅಂಶಗಳನ್ನು ಮೌಖಿಕವಾಗಿ ಹೇಳಿ ಬರೆಸಿಕೊಳ್ಳಲಾಗಿದೆ.

ಎರಡನೆಯದಾಗಿ ಮಕ್ಕಳಿಗೆ ಪ್ರಬಂಧ ರಚನೆಯ ಮೂಲಕ ಅಂದರೆ ಮಕ್ಕಳು ಸಹಜವಾಗಿ ಉತ್ತರ ಬರೆಯಬಲ್ಲ ಸುಲಭವೆನಿಸುವ ವಿಷಯಗಳಾದ ಪರಿಸರ, ನಮ್ಮ ಶಾಲೆ, ಹಸು, ಮನೆ ಇತ್ಯಾದಿ ವಿಷಯಗಳನ್ನು ಕುರಿತು ತಮ್ಮದೇ ಆದ ವಾಕ್ಯಗಳಲ್ಲಿ ಪ್ರತ್ಯೇಕ ಉತ್ತರ ಪತ್ರಿಕೆಗಳಲ್ಲಿ ಬರೆಸಿಕೊಂಡು ಮಕ್ಕಳು ಮಾಡುವ ತಪ್ಪುಗಳನ್ನು ಗುರುತಿಸಿ ವಿಶ್ಲೇಷಣೆ ಮಾಡಲಾಗಿದೆ. ಈ ಸಂದರ್ಭದಲ್ಲಿನ ಈ ಪರಿಸರದಲ್ಲಿ ಕನ್ನಡ ಕಲಿಸುವ ಕೆಲವು ಶಿಕ್ಷಕರನ್ನು ಭೇಟಿಮಾಡಿ ಪ್ರಶ್ನಾವಳಿಗಳ ಮೂಲಕ ಮಾಹಿತಿ ಪಡೆಯಲಾಗಿದೆ.

ಅಧ್ಯಯನದ ಸ್ವರೂಪ

'ದಕ್ಷಿಣ ಕನ್ನಡ ಪರಿಸರದ ಕನ್ನಡ ಕಲಿಕೆಯ ಸಮಸ್ಯೆಗಳು' ಎಂಬ ಸಂಶೋಧನಾ ನಿಬಂಧವು ಒಟ್ಟು ಎಂಟು ಅಧ್ಯಾಯಗಳನ್ನು ಒಳಗೊಂಡಿದೆ. ಈ ಅಧ್ಯಯನದ ಸ್ವರೂಪವು ಈ ಕೆಳಕಂಡಂತಿದೆ.

ಒಂದನೆಯ ಅಧ್ಯಾಯ: ಅಧ್ಯಯನದ ಉದ್ದೇಶ, ವಿಧಾನ, ವ್ಯಾಪ್ತಿ ಮತ್ತು ಸ್ವರೂಪ

ಈ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನ ವಿಷಯವನ್ನು ಕುರಿತ ತಾತ್ವಿಕ ಚರ್ಚೆಯ ಜೊತೆಗೆ ಪ್ರಾರಂಭದಲ್ಲಿ ಮಹತ್ವ ಮತ್ತು ಉದ್ದೇಶವನ್ನು ತಿಳಿಸಲಾಗಿದೆ ಹಾಗೂ ಸಂಶೋಧನೆಯ ವಿಧಾನ, ಅಧ್ಯಯನ ಕ್ಷೇತ್ರದ ವ್ಯಾಪ್ತಿ, ಮಿತಿ ಮತ್ತು ಸ್ವರೂಪವನ್ನು ವಿಶದಪಡಿಸಲಾಗಿದೆ. ಒಟ್ಟಾರೆಯಾಗಿ ಈ ಅಧ್ಯಾಯವು ಪ್ರಸ್ತುತ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಚೌಕಟ್ಟನ್ನು ನೀಡುತ್ತದೆ.

ಎರಡನೆಯ ಅಧ್ಯಾಯ: ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಈ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನ ವಿಷಯ ಮತ್ತು ಅಧ್ಯಯನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇದುವರೆಗೂ ವಿವಿಧ ಕಡೆಗಳಲ್ಲಿ ನಡೆದಿರುವ ಅಧ್ಯಯನಗಳ ಕುರಿತು ವಿಶ್ಲೇಷಿಸಲಾಗಿದೆ. ಇದರಲ್ಲಿ ಪಿಎಚ್.ಡಿ ಮತ್ತು ಎಂ.ಫಿಲ್. ನಿಬಂಧಗಳು, ಸಂಶೋಧನಾ ಕೃತಿಗಳು, ಪ್ರಮುಖ ಪತ್ರಿಕಾ ಲೇಖನಗಳು, ಜೊತೆಗೆ ವಿವಿಧ ಶೈಕ್ಷಣಿಕ ಚಟುವಟಿಕೆಗಳ ಆಂಶಿಕ ಭಾಗವಾಗಿ ಸಲ್ಲಿಕೆಯಾಗಿರುವ ಸಂಪ್ರಬಂಧಗಳನ್ನು ವಿಶ್ಲೇಷಿಸಲಾಗಿದೆ. ಇದರಿಂದಾಗಿ ಪ್ರಸ್ತುತ ಅಧ್ಯಯನಕ್ಕೆ ಒಂದು ನಿಖರವಾದ ಅಡಿಪಾಯ ದೊರೆತಿರುವುದು ಮಾತ್ರವಲ್ಲದೆ ಅವುಗಳಿಗಿಂತ ಭಿನ್ನವಾಗಿಸುವ ನೆಲೆಯಲ್ಲಿ ಸಹಕಾರಿಯಾಗಿದೆ.

ಮೂರನೆಯ ಅಧ್ಯಾಯ: ದಕ್ಷಿಣ ಕನ್ನಡದ ಭಾಷಿಕ ಪರಿಸರ

ಈ ಅಧ್ಯಾಯದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಪರಿಸರದ ಭೌಗೋಳಿಕ, ಪೌರಾಣಿಕ, ಐತಿಹಾಸಿಕ ಮತ್ತು ರಾಜಕೀಯ ವಿವರಗಳ ಬಗೆಗೆ ಸ್ಥೂಲವಾಗಿ ಪರಿಚಯಾತ್ಮಕ ನೆಲೆಯಲ್ಲಿ ವಿಶದಪಡಿಸಲಾಗಿದೆ. ಇಲ್ಲಿ ಮುಖ್ಯವಾಗಿ ಭಾಷಿಕ ಪರಿಸರ ಅಂದರೆ ಆರಂಭದಿಂದಲೂ ಒಂದಕ್ಕಿಂತ ಹೆಚ್ಚು ಭಾಷಿಕರೊಂದಿಗೆ ಈ ಪರಿಸರ ಸಂಪರ್ಕವನ್ನು ಹೊಂದಿರುವುದರಿಂದ ಇಲ್ಲಿಯ ಭಾಷಿಕ ಪರಿಸ್ಥಿತಿಯ ಬಗೆಗೆ ವಿವರವಾಗಿ ಚರ್ಚಿಸಲಾಗಿದೆ. ನಂತರ ಇಲ್ಲಿನ ಸಾಮಾಜಿಕ, ಸಾಂಸ್ಕೃತಿಕ ಪರಿಸರ ಹಾಗೂ ಅದು ಮಕ್ಕಳ ಕಲಿಕೆ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂಬುದನ್ನು ವಿವರಿಸಲಾಗಿದೆ. ದಕ್ಷಿಣ ಕನ್ನಡ ಪರಿಸರದ ಶೈಕ್ಷಣಿಕ ಹಿನ್ನೆಲೆ, ಶಿಕ್ಷಣ ಸಂಸ್ಥೆಗಳು ಪ್ರಾರಂಭವಾದ ಬಗ್ಗೆ, ಇಲ್ಲಿಯ ಶೈಕ್ಷಣಿಕ ಸಿತ್ಥಿಗತಿಗಳ ಕುರಿತು ವಿವರಿಸಲಾಗಿದೆ. ಇವುಗಳೆಲ್ಲವೂ ಮಕ್ಕಳ ಭಾಷಾ ಕಲಿಕೆಯ ಮೇಲೆ ಯಾವ ರೀತಿ ಪ್ರಭಾವ ಬೀರುತ್ತವೆ ಎಂಬುದನ್ನು ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯ: ಭಾಷಾ ಕಲಿಕೆ ಮತ್ತು ಭಾಷಾ ಬೋಧನೆ

ಪ್ರಸ್ತುತ ಅಧ್ಯಾಯದಲ್ಲಿ ಕಲಿಕೆಯ ಅರ್ಥ, ಮಹತ್ವವನ್ನು ಪರಿಚಯಾತ್ಮಕವಾಗಿ ವಿವರಿಸಲಾಗಿದೆ. ಇದರೊಂದಿಗೆ ಮಕ್ಕಳ ಕಲಿಕೆಯ ಕುರಿತಾಗಿ ಇದುವರೆಗೆ ನಡೆದಿರುವ ಸಂಶೋಧನೆಗಳು, ಕಲಿಕೆಯ ಮಟ್ಟವನ್ನು ಸುಧಾರಿಸುವ ಸಲುವಾಗಿ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳು ಅವುಗಳ ಸಾಧ್ಯಾಸಾಧ್ಯತೆ, ಮಕ್ಕಳಲ್ಲಿ ಭಾಷಾ ಕೌಶಲಗಳ ಬೆಳವಣಿಗೆ, ಭಾಷಾ ಕಲಿಕೆಯ ಕೌಶಲ್ಯಗಳು ಮತ್ತು ಮಕ್ಕಳಲ್ಲಿ ಅವುಗಳ ಬೆಳವಣಿಗೆ ಮುಂತಾದವುಗಳ ಬಗೆಗೆ ಸ್ಥೂಲವಾಗಿ ವಿವರಿಸಲಾಗಿದೆ. ಒಟ್ಟಾರೆಯಾಗಿ ಈ ಅಧ್ಯಾಯವು ಪ್ರಸ್ತುತ ಅಧ್ಯಯನದ ಕೇಂದ್ರ ವಿಷಯಕ್ಕೆ ಪೂರಕವಾಗಿ ಬರುವಂತೆ ಚರ್ಚಿಸಲಾಗಿದೆ.

ಐದನೆಯ ಅಧ್ಯಾಯ: ದಕ್ಷಿಣ ಕನ್ನಡ ಪರಿಸರದ ಕನ್ನಡ ಓದು ಕಲಿಕೆಯ ಸಮಸ್ಯೆಗಳ ಸ್ವರೂಪ

ಈ ಅಧ್ಯಾಯವು ಪ್ರಸ್ತುತ ಅಧ್ಯಯನ ವಿಷಯದ ಕೇಂದ್ರ ಭಾಗದಲ್ಲಿ ಒಂದಾಗಿದೆ. ಇಲ್ಲಿ ಅಧ್ಯಯನದ ವ್ಯಾಪ್ತಿಯಲ್ಲಿ ಬರುವ ಪರಿಸರದ ಬ್ಯಾರಿ ಮನೆಮಾತುಳ್ಳ ಮಕ್ಕಳು ಕನ್ನಡ ಭಾಷಿಕ ಪರಿಸರದಲ್ಲಿ ಅಂದರೆ ಮುಖ್ಯವಾಗಿ ಶಾಲಾ ಪರಿಸರದಲ್ಲಿ ಹಾಗೂ ತರಗತಿಗಳಲ್ಲಿ ಕನ್ನಡ ಓದುವಾಗ ಎದುರಿಸುವ ವಿಭಿನ್ನ ಸಮಸ್ಯೆಗಳನ್ನು ಇಲ್ಲಿ ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ಮಾಡುವ ತಪ್ಪುಗಳನ್ನು ದಾಖಲಿಸಲಾಗಿದೆ. ಓದುವಿಕೆಯಲ್ಲಿ ಮಾಡುವ ತಪ್ಪುಗಳಿಗೆ ಕಾರಣಗಳನ್ನು ಗುರುತಿಸಲು ಮಕ್ಕಳು ಮಾಡುವ ತಪ್ಪುಗಳನ್ನು ಉದಾಹರಣೆಯಾಗಿಟ್ಟುಕೊಂಡು ಚರ್ಚಿಸಲಾಗಿದೆ ಹಾಗೆ ದಕ್ಷಿಣ ಕನ್ನಡ ಪರಿಸರದ ಭಾಷೆಯ ಧ್ವನಿಮಾಗಳ ಬಳಕೆಯ ಆಧಾರದ ಮೇಲೆ ಕಾರಣಗಳನ್ನು ಖಚಿತವಾಗಿ ನೀಡಲು ಯತ್ನಿಸಲಾಗಿದೆ. ಉದಾಹರಣೆಗೆ ಪದಾದಿಯಲ್ಲಿ 'ಆಯುಧ' ಎಂಬ ಪದವನ್ನು 'ಅಯುದ' ಎಂದು, ಪದಮಧ್ಯ ಪರಿಸರದಲ್ಲಿ 'ಕಿರೀಟ' ಎಂಬ ಪದವನ್ನು 'ಕಿರಿಟ'ಎಂದು ಪದಾಂತ್ಯ ಪರಿಸರದಲ್ಲಿ 'ವಾರಿಜಾ'ಎಂಬ ಪದವನ್ನು 'ವರಿಜ' ಎಂದು ಓದುತ್ತಾರೆ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ದಕ್ಷಿಣ ಕನ್ನಡ ಪರಿಸರದ ವ್ಯವಹಾರಿಕ ಭಾಷೆಯಲ್ಲಿ ದೀರ್ಘಸ್ವರ 'ಆ'ಹಾಗೂ ಹ್ರಸ್ವಸ್ವರ 'ಅ' ಧ್ವನಿಗಳಲ್ಲಿ ಇರುವ ಅಲ್ಪ ಧ್ವನಿ ಸಾಮ್ಯಾತೆಯನ್ನು ಗಮನಿಸದೆ, ಹ್ರಸ್ವದ ಬಳಕೆಯು ಹೆಚ್ಚಾಗಿರುವುದರಿಂದ ಈ ತೆರನಾದ ತಪ್ಪನ್ನು ಮಕ್ಕಳು ಓದುವಾಗ ಮಾಡುತ್ತಾರೆ. ಇದೇ ರೀತಿ ದೀರ್ಘಸ್ವರಗಳಿಗೆ ಹ್ರಸ್ವಸ್ವರಗಳ ಬಳಕೆ, ಕೆಲ ಸ್ವರಗಳಿಗೆ ವ್ಯಂಜನಗಳ ಬಳಕೆ, ಸಂಧ್ಯಕ್ಷರಗಳ ವ್ಯತ್ಯಾಸ, ಅನುಸ್ವರ ಹಾಗೂ ವಿಸರ್ಗಗಳನ್ನು ಲೋಪ ಮಾಡಿರುವುದು, ಮಹಾಪ್ರಾಣಗಳಿಗೆ ಅಲ್ಪಪ್ರಾಣಗಳನ್ನು ಬಳಸಿರುವುದು, ಅನುನಾಸಿಕ, ಪಾರ್ಶ್ವಿಕ, ಊಷ್ಮಧ್ವನಿ, ಅರ್ಧಸ್ವರಗಳಲ್ಲಿ ಮಾಡುವ ವ್ಯತ್ಯಾಸಗಳ ಜೊತೆಗೆ ಗುಣಿತಾಕ್ಷರ ಹಾಗೂ ಒತ್ತಕ್ಷರಗಳಲ್ಲಿ ಮಾಡುವ ತಪ್ಪುಗಳ ಸ್ವರೂಪವನ್ನು ಗುರುತಿಸಿ ಅದನ್ನು ವಿಶ್ಲೇಷಣೆ ಮಾಡಲಾಗಿದೆ. ಅಲ್ಲದೆ

ಓದುವಿಕೆಯಲ್ಲಿ ಮಾಡುವ ತಪ್ಪುಗಳಿಗೆ ಕೈಗೊಳ್ಳಬೇಕಾದ ಮತ್ತು ಅನುಸರಿಸಬಹುದಾದ ಪರಿಹಾರ ಕ್ರಮಗಳನ್ನು ಚರ್ಚಿಸಲಾಗಿದೆ.

ಆರನೆಯ ಅಧ್ಯಾಯ: ದಕ್ಷಿಣ ಕನ್ನಡ ಪರಿಸರದ ಕನ್ನಡ ಬರವಣಿಗೆ ಕಲಿಕೆಯ ಸಮಸ್ಯೆಗಳ ಸ್ವರೂಪ

ಈ ಅಧ್ಯಾಯದಲ್ಲಿ ದಕ್ಷಿಣ ಕನ್ನಡ ಪರಿಸರದ ಹಿರಿಯ ಪ್ರಾಥಮಿಕ ಶಾಲೆಯಲ್ಲಿನ ಬ್ಯಾರಿ ಮನೆಮಾತುಳ್ಳ ಮಕ್ಕಳು ಕನ್ನಡ ಬರವಣಿಗೆಯ ಸಂದರ್ಭದಲ್ಲಿ ಅಂದರೆ ಸ್ವರ, ವ್ಯಂಜನ, ಗುಣಿತಾಕ್ಷರಸಹಿತ ಹಾಗೂ ಒತ್ತಕ್ಷರಸಹಿತ ಪದಗಳನ್ನು ಬರೆಯುವಾಗ ಮಾಡುವ ತಪ್ಪುಗಳನ್ನು ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಉದಾಹರಣೆಗಳೊಂದಿಗೆ ವಿಶ್ಲೇಷಿಸುವುದರ ಜೊತೆಗೆ ಆ ತಪ್ಪುಗಳಿಗೆ ಕಾರಣಗಳನ್ನು ಮಕ್ಕಳು ಮಾಡಿರುವ ಬರವಣಿಗೆಯ ತಪ್ಪುಗಳೊಂದಿಗೆ ಚರ್ಚಿಸಲಾಗಿದೆ. ಉದಾಹರಣೆ: ಪದಾದಿಯಲ್ಲಿ 'ಊಟ' ಎಂಬ ಪದವನ್ನು 'ಉಟ'ಎಂದು ಪದಮಧ್ಯ ಪರಿಸರದಲ್ಲಿ 'ನಿರೂಪಣೆ' ಎಂಬ ಪದವನ್ನು 'ನಿರುಪನೆ' ಎಂದು ಪದಾಂತ್ಯ ಪರಿಸರದಲ್ಲಿ 'ಜಂಬೂ' ಎಂಬ ಪದವನ್ನು 'ಜಂಬು' ಎಂದು ಬರೆಯುತ್ತಾರೆ. ಈ ರೀತಿಯ ವ್ಯತ್ಯಾಸಕ್ಕೆ ಈ ಎರಡು ಧ್ವನಿಗಳಲ್ಲಿ ಇರುವ ಅಲ್ಪ ಉಚ್ಚಾರಣ ಧ್ವನಿ ಸಾಮ್ಯತೆಯನ್ನು ಗ್ರಹಿಸದೆ ಇರುವುದು, ರೂಪ ಸಾಮ್ಯತೆಯ ಗೊಂದಲದ ಕಾರಣದಿಂದ ಈ ರೀತಿ ಬರೆಯುವುದು ಕಂಡು ಬಂದಿದೆ. ಇದೇ ರೀತಿ ದೀರ್ಘಸ್ವರಗಳಿಗೆ ಹ್ರಸ್ವಸ್ವರಗಳ ಬಳಕೆ, ಕೆಲವು ಸ್ವರಗಳಿಗೆ ವ್ಯಂಜನಗಳ ಬಳಕೆ, ಸಂಧ್ಯಕ್ಷರಗಳ ವ್ಯತ್ಯಾಸ, ಅನುಸ್ವರ ಹಾಗೂ ವಿಸರ್ಗಗಳನ್ನು ಲೋಪ ಮಾಡಿರುವುದು, ಮಹಾಪ್ರಾಣಗಳಿಗೆ ಅಲ್ಪಪ್ರಾಣಗಳನ್ನು ಬಳಸಿರುವುದು, ಅನುನಾಸಿಕ, ಪಾರ್ಶ್ವಿಕ, ಊಷ್ಮಧ್ವನಿಗಳು, ಅರ್ಧಸ್ವರಗಳಲ್ಲಿ ಮಾಡುವ ತಪ್ಪುಗಳ ಜೊತೆಗೆ ಗುಣಿತಾಕ್ಷರ ಹಾಗೂ ಒತ್ತಕ್ಷರಗಳಲ್ಲಿ ಮಾಡುವ ತಪ್ಪುಗಳ ಸ್ವರೂಪವನ್ನು ಗುರುತಿಸಿ ಅದನ್ನು ವಿಶ್ಲೇಷಣೆ ಮಾಡಲಾಗಿದೆ ಅಲ್ಲದೆ ಬರವಣಿಗೆ ಸಮಸ್ಯೆಗಳನ್ನು ನಿವಾರಿಸಲು ಕೈಗೊಳ್ಳಬೇಕಾದ ಕ್ರಮಗಳನ್ನು ಚರ್ಚಿಸಲಾಗಿದೆ.

ಏಳನೆಯ ಅಧ್ಯಾಯ: ದಕ್ಷಿಣ ಕನ್ನಡ ಪರಿಸರದ ಕನ್ನಡ ವಾಕ್ಯರಚನೆ ಕಲಿಕೆಯ ಸಮಸ್ಯೆಗಳ ಸ್ವರೂಪ

ಭಾಷೆಯಲ್ಲಿ ಅತ್ಯಂತ ಚಿಕ್ಕ ಘಟಕ 'ಧ್ವನಿ'ಯಾದರೆ ಅತ್ಯಂತ ದೊಡ್ಡ ಘಟಕ 'ವಾಕ್ಯ'ವಾಗಿದೆ. ಪ್ರಸ್ತುತ ಈ ಅಧ್ಯಾಯದಲ್ಲಿ ಬ್ಯಾರಿ ಮಾತೃಭಾಷೆಯ ಮಕ್ಕಳು ವಾಕ್ಯರಚನೆಯಲ್ಲಿ ಮಾಡುವ ವ್ಯತ್ಯಾಸಗಳನ್ನು ಕುರಿತು ವಿಶ್ಲೇಷಣೆ ಮಾಡಲಾಗಿದೆ. ಈ ಹಂತದಲ್ಲಿ ಮಕ್ಕಳು ವಾಕ್ಯಗಳನ್ನು ಓದುವಾಗ ಅಲ್ಪವಿರಾಮ, ಪೂರ್ಣವಿರಾಮ ಇತ್ಯಾದಿ ಲೇಖನ ಚಿಹ್ನೆಗಳನ್ನು ಗಮನಿಸದೆ ಇರುವುದು ಕಂಡುಬರುತ್ತದೆ. ಅದೇ ರೀತಿ ವಾಕ್ಯಗಳನ್ನು ರಚಿಸುವಾಗ ವ್ಯಾಕರಣಾಂಶಗಳ ಬಳಕೆಯಲ್ಲಿಯೂ ಹಲವಾರು ತಪ್ಪುಗಳನ್ನು ಮಾಡುತ್ತಾರೆ ಉದಾಹರಣೆಗೆ ವಾಕ್ಯರಚನೆ ಮಾಡುವಾಗ 'ಹಸು ಹಾಲನ್ನು ಕೊಡುತ್ತದೆ.' ಎಂಬ ವಾಕ್ಯವನ್ನು 'ಹಸು ಹಾಲನ್ನು ಕೊಡುತ್ತೆ' ಎಂದು 'ರಾಮನು ಹಣ್ಣನ್ನು ತಿಂದನು' ಎಂಬ ವಾಕ್ಯವನ್ನು 'ರಾಮ ಹಣ್ಣು ತಿಂದ' ಎಂದು ಬಳಸುತ್ತಾರೆ ಹೀಗೆ ವಾಕ್ಯರಚನೆ ಮಾಡುವಾಗ ಪ್ರತ್ಯಯಗಳ ಬಳಕೆಯಲ್ಲಿ ಹಲವಾರು ವ್ಯತ್ಯಾಸಗಳನ್ನು ಗುರುತಿಸಲಾಗಿದೆ. ಜೊತೆಗೆ ಅಪೂರ್ಣ ವಾಕ್ಯ ರಚನೆ, ವಾಕ್ಯದಲ್ಲಿ ಕರ್ತೃ, ಕರ್ಮ, ಕ್ರಿಯಾಪದ ಬದಲಾವಣೆ ಇತ್ಯಾದಿ ತಪ್ಪುಗಳಿಗೆ ಕಾರಣಗಳನ್ನು ಚರ್ಚೆ ಮಾಡಲಾಗಿದೆ. ಹಾಗೆಯೇ ಈ ಸಮಸ್ಯೆಗಳ ನಿವಾರಣೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲಾಗಿದೆ.

ಎಂಟನೆಯ ಅಧ್ಯಾಯ: ಸಮಾರೋಪ

ಈ ಅಧ್ಯಾಯವು ನಿಬಂಧದ ಕೊನೆಯ ಅಧ್ಯಾಯವಾಗಿದ್ದು, ಇದರಲ್ಲಿ ಪ್ರಸ್ತುತ ಅಧ್ಯಯನಕ್ಕೆ ಸಮಗ್ರ ಎನಿಸುವ ಸಂಕ್ಷಿಪ್ತ ಉಪಸಂಹಾರವನ್ನು ನೀಡಲಾಗಿದೆ. ಜೊತೆಗೆ ಅಧ್ಯಯನದಲ್ಲಿ ಕಂಡುಕೊಂಡಿರುವ

ಒಳನೋಟಗಳನ್ನು ಚರ್ಚಿಸಲಾಗಿದೆ. ಅಧ್ಯಯನದ ಫಲಿತಗಳನ್ನು ದಾಖಲಿಸಿದೆ. ಅನುಬಂಧದಲ್ಲಿ ಪ್ರಶ್ನಾವಳಿ, ನಕ್ಷೆಗಳು ಹಾಗೂ ಪರಾಮರ್ಶಿತ ಗ್ರಂಥಗಳ ಸೂಚಿಯನ್ನು ಅಡಕಗೊಳಿಸಲಾಗಿದೆ.

ಒಟ್ಟಿನಲ್ಲಿ ಪ್ರಸ್ತುತ ಅಧ್ಯಯನವು ದಕ್ಷಿಣ ಕನ್ನಡ ಪರಿಸರದ ಭೌಗೋಳಿಕ, ಚಾರಿತ್ರಿಕ, ಶೈಕ್ಷಣಿಕ, ಸಾಮಾಜಿಕ ಮತ್ತು ಭಾಷಿಕ ಪರಿಸರವನ್ನು ತಿಳಿಸುವುದರ ಜೊತೆಗೆ ಇಲ್ಲಿನ ಬ್ಯಾರಿ ಮನೆಮಾತುಳ್ಳ ಮಕ್ಕಳು ಕನ್ನಡ ಕಲಿಯುವ ಸಂದರ್ಭದಲ್ಲಿ ಎದುರಿಸುತ್ತಿರುವ ಸವಾಲುಗಳನ್ನು ಅರಿಯಲು ಮತ್ತು ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ನೆರವಾಗುತ್ತದೆ.

ಟಿಪ್ಪಣಿಗಳು

---

[೧] ನೋಮ್ ಚಾಮ್‌ಸ್ಕಿ, ಲ್ಯಾಂಗ್ವೇಜ್ ಆ್ಯಂಡ್ ಮೈಂಡ್, ಪು.೧

[೨] ಮಹಾಭಲೇಶ್ವರ ರಾವ್, ಪ್ರೌಢಶಾಲೆಗಳಲ್ಲಿ ಕನ್ನಡ ಭೋದನೆ, ಪು.೨೩

[೩] ಅದೇ, ಪು.೧೨

* * * * *

ಅಧ್ಯಾಯ - ಎರಡು

ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ – ಎರಡು

ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಪ್ರಸ್ತುತ ಅಧ್ಯಯನ ವಿಷಯ **'ದಕ್ಷಿಣ ಕನ್ನಡ ಪರಿಸರದ ಕನ್ನಡ ಕಲಿಕೆಯ ಸಮಸ್ಯೆಗಳು'** ಮತ್ತು ಅಧ್ಯಯನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇದುವರೆಗೂ ವಿವಿಧ ಕಡೆಗಳಲ್ಲಿ ನಡೆದಿರುವ ಪಿಎಚ್.ಡಿ. ಮತ್ತು ಎಂ.ಫಿಲ್. ಅಧ್ಯಯನಗಳು, ಸದರಿ ಅಧ್ಯಯನ ವಿಷಯಕ್ಕೆ ಪೂರಕವಾಗಿ ಪ್ರಕಟಗೊಂಡಿರುವ ಸಂಶೋಧನಾ ಕೃತಿಗಳು, ಪತ್ರಿಕಾ ಲೇಖನಗಳು ಜೊತೆಗೆ ವಿವಿಧ ಶೈಕ್ಷಣಿಕ ಚಟುವಟಿಕೆಗಳ ಆಂಶಿಕ ಭಾಗವಾಗಿ ಸಲ್ಲಿಕೆಯಾಗಿರುವ ಸಂಪ್ರಬಂಧಗಳನ್ನು ಇಲ್ಲಿ ಅಧ್ಯಯನ ಮಾಡಿ ವಿಶ್ಲೇಷಿಸಲಾಗಿದೆ. ಇದರಿಂದಾಗಿ ಪ್ರಸ್ತುತ ಅಧ್ಯಯನಕ್ಕೆ ಒಂದು ನಿಖರವಾದ ಅಡಿಪಾಯ ದೊರೆತಿರುವುದು ಮಾತ್ರವಲ್ಲದೆ ವಿಭಿನ್ನ ನೆಲೆಯಲ್ಲಿ ಅಧ್ಯಯನ ಕೈಗೊಳ್ಳಲು ಪೂರಕವಾಗಬಹುದು ಎಂಬ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ವರ್ಗೀಕರಿಸಿಕೊಂಡು ಅಧ್ಯಯನ ಮಾಡಲಾಗಿದೆ.

೨.೧. ಪಿಎಚ್.ಡಿ. ನಿಬಂಧಗಳು

ಕನ್ನಡ ಕಲಿಕೆಯ ಸಮಸ್ಯೆಗಳು: ಒಂದು ಅಧ್ಯಯನ (ಬಳ್ಳಾರಿ ಜಿಲ್ಲೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳನ್ನು ಅನುಲಕ್ಷಿಸಿ)

ಪ್ರಸ್ತುತ ಪಿಎಚ್.ಡಿ. ನಿಬಂಧವನ್ನು ನಾಗರಾಜ ಚಿಂತ್ರಪಳ್ಳಿ ಅವರು ಡಿ. ಪಾಂಡುರಂಗ ಬಾಬು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ನಿಬಂಧದಲ್ಲಿ ಸಂಶೋಧಕರು ಅಧ್ಯಯನವನ್ನು ಎಂಟು ಅಧ್ಯಾಯಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಇದರಲ್ಲಿ ಕನ್ನಡವನ್ನು ಮನೆಮಾತಾಗಿರಿಸಿಕೊಂಡಿರುವ ಮಕ್ಕಳು, ಕನ್ನಡದ ಓದು, ಬರವಣಿಗೆ ಮತ್ತು ವಾಕ್ಯ ರಚನೆಯ ಸಂದರ್ಭದಲ್ಲಿ ಮಾಡುವ ತಪ್ಪುಗಳನ್ನು ಗುರುತಿಸಿದ್ದಾರೆ. ಈ ತಪ್ಪುಗಳಿಗೆ ಕಾರಣಗಳು ಮತ್ತು ಪರಿಹಾರೋಪಾಯದ ಅಂಶಗಳನ್ನು ಸೂಚಿಸಿದ್ದಾರೆ.

ಪ್ರೌಢಶಾಲಾ ಶಿಕ್ಷಣದಲ್ಲಿ ಕನ್ನಡ ಭಾಷಾ ಬೋಧನೆ ಹಾಗೂ ಭಾಷಾ ಕಲಿಕೆಯ ಸಮಸ್ಯೆ ಮತ್ತು ಸವಾಲುಗಳು

ಪ್ರಸ್ತುತ ಪಿಎಚ್.ಡಿ. ನಿಬಂಧವನ್ನು ಇಂದುಮತಿ ಮಹಾದೇವಪ್ಪ ಅವರು ಅಶೋಕ ಕುಮಾರ ರಂಜೇರೆ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ನಿಬಂಧದಲ್ಲಿ ಸಂಶೋಧಕರು ಬೋಧನೆಯನ್ನು ಕೇಂದ್ರವಾಗಿಟ್ಟುಕೊಂಡು ಬೋಧನೆಯ ವೈಶಿಷ್ಟ್ಯಗಳು, ಭಾಷಾ ಬೋಧನೆಯ ಸಂದರ್ಭದಲ್ಲಿ ಬೋಧಕರು ಎದುರಿಸುವ

ಸವಾಲುಗಳನ್ನು ವಿವರಣಾತ್ಮಕ ನೆಲೆಯಲ್ಲಿ ಮಂಡಿಸಿದ್ದಾರೆ. ಮತ್ತು ಭಾಷಾ ಕಲಿಕೆಯ ಕೌಶಲ್ಯಗಳ ಕುರಿತು ಚರ್ಚೆ ಮಾಡುತ್ತಾ ಓದು ಮತ್ತು ಬರವಣಿಗೆಯ ಸಂದರ್ಭದಲ್ಲಿ ವಿವಿಧ ನೆಲೆಗಳಲ್ಲಿ ವಿದ್ಯಾರ್ಥಿಗಳು ಮಾಡುವ ತಪ್ಪುಗಳನ್ನು ಪಟ್ಟಿಮಾಡಿ ವಿಶ್ಲೇಷಿಸಿದ್ದಾರೆ. ಮುಖ್ಯವಾಗಿ ಭಾಷಾ ಬೋಧನೆ ಮತ್ತು ಕಲಿಕೆಯ ಸಂದರ್ಭದಲ್ಲಿ ಪಠ್ಯಗಳ ಪಾತ್ರವನ್ನು ಕುರಿತಂತೆ ವಿವರವಾಗಿ ಅಧ್ಯಯನ ಮಾಡಿದ್ದಾರೆ.

ಮ್ಯಾಸಬೇಡರ ಕನ್ನಡ ಸಮಾಜೋಭಾಷಿಕ ಅಧ್ಯಯನ (ಚಿತ್ರದುರ್ಗ ಜಿಲ್ಲೆಯನ್ನು ಅನುಲಕ್ಷಿಸಿ)

ಪ್ರಸ್ತುತ ಪಿಎಚ್.ಡಿ ನಿಬಂಧವನ್ನು ಆಂಜನೇಯ ಅವರು ಅಶೋಕ ಕುಮಾರ ರಂಜೇರೆ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಮ್ಯಾಸಬೇಡರ ಸಾಂಸ್ಕೃತಿಕ ಅಧ್ಯಯನದೊಂದಿಗೆ ಅವರು ಬಳಸುವ ಕನ್ನಡ ಭಾಷೆಯನ್ನು ಸಮಜೋಭಾಷಿಕ ಅಧ್ಯಯನದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ. ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಕನ್ನಡ ಭಾಷಾ ಕಲಿಕೆಯಲ್ಲಿ ಹಿಂದುಳಿದವರ ಶೇಕಡಾ ಪ್ರಮಾಣವನ್ನು ರೇಖಾ ಚಿತ್ರದ ಮೂಲಕ ಗುರುತಿಸಿದ್ದಾರೆ. ಏಕ ಭಾಷಿಕ ಮತ್ತು ದ್ವಿಭಾಷಿಕ ಮಕ್ಕಳನ್ನು ಪರೀಕ್ಷೆಗೆ ಒಳಪಡಿಸಿ ಕನ್ನಡ ಭಾಷಾ ಕಲಿಕೆಯನ್ನು ಶೇಕಡಾ ಪ್ರಮಾಣದಲ್ಲಿ ಗುರುತಿಸಿದ್ದಾರೆ. ಪ್ರತಿಯೊಂದು ಮಾಹಿತಿಯನ್ನು ಅಂಕಿ ಅಂಶಗಳ ಮೂಲಕ ವಿಶ್ಲೇಷಣೆಗೆ ಒಳಪಡಿಸಿದ್ದಾರೆ.

ಮಕ್ಕಳಲ್ಲಿ ವಾಕ್ಯರಚನಾ ನಿಯಮಗಳ ಬೆಳವಣಿಗೆ (ಕನ್ನಡ ಮಾತೃ ಭಾಷೆಯ ಮಕ್ಕಳನ್ನು ಅನುಲಕ್ಷಿಸಿ)

ಎನ್. ಕೆ. ಮಂಜುಳಾ ಅವರು ಪ್ರಸ್ತುತ ಪಿಎಚ್.ಡಿ ನಿಬಂಧವನ್ನು ಕೆ. ವಿ. ನಾರಾಯಣ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೬ರಲ್ಲಿ ಸಲ್ಲಿಸಿದ್ದಾರೆ. ಈ ನಿಬಂಧದಲ್ಲಿ ಮೊದಲಿಗೆ ಮಾನವರ ಮೆದುಳಿನ ರಚನೆ ಮತ್ತು ಭಾಷೆಯ ಜೊತೆ ಮೆದುಳಿನ ಸಂಬಂಧವನ್ನು ಕುರಿತು ವಿಶ್ಲೇಷಿಸಿದ್ದಾರೆ. ಮಕ್ಕಳು ಯಾವ ರೀತಿ ಭಾಷಾ ಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತಾರೆ ಎಂಬುದನ್ನು ವಿವರಿಸಿದ್ದಾರೆ. ವಾಕ್ಯರಚನೆಯ ಸಂದರ್ಭದಲ್ಲಿ ಸಮಯಕ್ಕೆ ಅನುಗುಣವಾಗಿ ವ್ಯತ್ಯಾಸಗೊಳ್ಳುವ ಮನಸ್ಥಿತಿ, ಭಾಷಿಕ ಸಾಮರ್ಥ್ಯಗಳು ಎಲ್ಲರಲ್ಲಿಯೂ ಒಂದೇ ರೀತಿಯಾಗಿರುತ್ತವೆ ಎಂದು ಹೇಳುವ ಮೂಲಕ ವಾಕ್ಯರಚನಾ ನಿಯಮವನ್ನು ಚರ್ಚಿಸಿದ್ದಾರೆ. ಮಗುವಿನ ಪರಿಸರದ ಭಾಷೆಯ ಗ್ರಾಂಥಿಕ ರೂಪದಲ್ಲಿ ನಾಮಪದ, ಕ್ರಿಯಾಪದ, ಸರ್ವನಾಮ, ವಿಶೇಷಣಗಳಂತಹ ಪದಗಳನ್ನು ಮಕ್ಕಳು ವಯೋಮಾನಕ್ಕೆ ತಕ್ಕಂತೆ ಹೇಗೆ ಉಚ್ಚರಿಸುತ್ತಾರೆ ಎನ್ನುವುದನ್ನು ಸ್ಪಷ್ಟಪಡಿಸಿದ್ದಾರೆ.

ಕನ್ನಡ ಭಾಷೆಯ ಕಲಿಕೆಯ ಸಮಸ್ಯೆಗಳು (ಗುಲ್ಬರ್ಗಾ ಜಿಲ್ಲೆಯ ಉರ್ದು ಭಾಷಿಕ ಪ್ರೌಢ ಶಾಲಾ ಮಕ್ಕಳನ್ನು ಅನುಲಕ್ಷಿಸಿ)

ಭೀಮಣ್ಣ ಮೇಟಿ ಅವರು ಪ್ರಸ್ತುತ ಪಿಎಚ್.ಡಿ ನಿಬಂಧವನ್ನು ಪಿ. ಮಹಾದೇವಯ್ಯ ಅವರ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೧೦ರಲ್ಲಿ ಸಲ್ಲಿಸಿದ್ದಾರೆ. ಉರ್ದು ಮಾಧ್ಯಮ ಪ್ರೌಢ ಶಾಲೆಗಳಲ್ಲಿ ಕನ್ನಡ ಪಠ್ಯವನ್ನು ಅಭ್ಯಸಿಸುವ ವಿದ್ಯಾರ್ಥಿಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಿಕೊಂಡಿದ್ದಾರೆ. ಅಲ್ಪಸಂಖ್ಯಾತ ಮಕ್ಕಳ ವಯೋಮಾನಕ್ಕೆ ತಕ್ಕಂತೆ

ಪಠ್ಯಗಳು ರಚನೆಯಾಗಬೇಕೆಂಬ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಮತ್ತು ಮಕ್ಕಳಲ್ಲಿನ ಓದಿನ ಸಮಸ್ಯೆ, ಬರವಣಿಗೆಯ ಸಮಸ್ಯೆಗಳು, ಗುಣಿತಾಕ್ಷರ ಮತ್ತು ಒತ್ತಕ್ಷರಗಳಲ್ಲಿನ ತಪ್ಪುಗಳನ್ನು ಗುರುತಿಸಿದ್ದಾರೆ. ಪ್ರತಿ ತರಗತಿಯಲ್ಲಿ ಐದು ಗಂಡು ಮತ್ತು ಐದು ಹೆಣ್ಣು ಮಕ್ಕಳನ್ನು ಆಯ್ಕೆಮಾಡಿಕೊಂಡು ಪದಾದಿ, ಪದಮಧ್ಯ, ಪದಾಂತ್ಯಗಳಲ್ಲಿ ಇವರು ಮಾಡುವ ತಪ್ಪುಗಳನ್ನು ಅಂಕಿ ಅಂಶಗಳ ಮೂಲಕ ಮಾಹಿತಿ ನೀಡಿದ್ದಾರೆ. ಒಟ್ಟಾರೆಯಾಗಿ ಈ ಅಧ್ಯಯನವು ಕಲಿಕಾ ಮಕ್ಕಳ ಮಯೋಮಾನ ಮತ್ತು ಬೌದ್ಧಿಕ ಮಟ್ಟಕ್ಕೆ ತಕ್ಕಂತೆ ಪಠ್ಯಗಳು ರಚನೆಯಾಗಬೇಕು ಎಂಬ ವಿಷಯವನ್ನು ಸ್ಪಷ್ಟಪಡಿಸುತ್ತದೆ. ಒಟ್ಟಾರೆಯಾಗಿ ಇಲ್ಲಿ ಉರ್ದು ಭಾಷಿಕ ಮಕ್ಕಳು ಕನ್ನಡ ಕಲಿಯುವ ಸಂದರ್ಭ ಎದುರಿಸುವ ಸಮಸ್ಯೆಗಳ ಕುರಿತಾಗಿ ಚರ್ಚಿಸಿದ್ದಾರೆ.

ಪಠ್ಯಪುಸ್ತಕಗಳು ಮತ್ತು ಸಾಮಾಜಿಕ ಹೊಣೆಗಾರಿಕೆಯ ತೊಡಕುಗಳು

ಆರ್. ಚಲಪತಿಯವರು ಈ ಪಿಎಚ್.ಡಿ. ನಿಬಂಧವನ್ನು ಅಶೋಕ ಕುಮಾರ ರಂಜೇರೆಯವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೧೦ರಲ್ಲಿ ಸಲ್ಲಿಸಿದ್ದಾರೆ. ಈ ಅಧ್ಯಯನದಲ್ಲಿ ಪಠ್ಯಪುಸ್ತಕಗಳು ಎಂಥಾ ಜ್ಞಾನ ಕೌಶಲ್ಯಗಳನ್ನು ನೀಡುತ್ತೀವೆ, ಕನ್ನಡ ಭಾಷೆಯು ಎದುರಿಸುತ್ತಿರುವ ಆತಂಕಗಳು, ಸಂದೇಹಗಳು, ಸವಾಲುಗಳು ಯಾಕೆ ಹುಟ್ಟಿಕೊಂಡಿವೆ? ಕನ್ನಡ ಬೋಧಕರನ್ನು ಸಮಾಜ ಯಾವ ರೀತಿಯಾಗಿ ಹೊಣೆಯಾಗಿಸುತ್ತಿದೆ ಎನ್ನುವುದನ್ನು ಚರ್ಚಿಸಿದ್ದಾರೆ. ವಿದ್ಯಾರ್ಥಿ ಸಂಬಂಧಿತ, ಬೋಧಕ ಸಂಬಂಧಿತ ಮತ್ತು ಪಠ್ಯಸಂಬಂಧಿತ ಮಾಹಿತಿಗಳನ್ನು ಕ್ರೂಢೀಕರಿಸಿ ಪಠ್ಯಕ್ರಮದೊಂದಿಗಿಟ್ಟು ಪರಿಶೀಲಿಸುತ್ತಾ ಪಠ್ಯಬೋಧನೆ ಮತ್ತು ಕಲಿಕೆಯ ಸಂಬಂಧಗಳನ್ನು ವಿವರಿಸಿದ್ದಾರೆ. ಅಧ್ಯಯನದ ಬರವಣಿಗೆಯು ಬಹಳಷ್ಟು ವಿಮರ್ಶಾತ್ಮಕವಾಗಿದೆ. ಸಮೀಕ್ಷೆ, ವಿಶ್ಲೇಷಣೆ ಮತ್ತು ವಿಮರ್ಶೆಯ ಮೂಲಕ ಪಠ್ಯಗಳು ಮತ್ತು ಪಠ್ಯಕ್ಕೆ ಅಳವಡಿಸಿದ ಭಾಷೆ, ಸಾಹಿತ್ಯ, ಸಂಸ್ಕೃತಿ, ಪ್ರಸ್ತುತ ಪದವಿ ಪಠ್ಯಗಳಲ್ಲಿನ ಮಿತಿಗಳನ್ನು, ಪಠ್ಯಕ್ರಮಗಳ ಸ್ವರೂಪವನ್ನು ಸಾಮಾಜಿಕ ಹೊಣೆಗಾರಿಕೆಯ ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಪ್ರಸ್ತುತ ಶೈಕ್ಷಣಿಕ ಸಂದರ್ಭವನ್ನು ನಾಲ್ಕು ಹಂತಗಳಲ್ಲಿ ಗುರುತಿಸಿಕೊಂಡು ಮೂರು ಹಂತಗಳನ್ನು ವಿಶ್ಲೇಷಣೆಗೆ ಒಳಪಡಿಸಿ ನಾಲ್ಕನೆ ಹಂತದ ಸ್ನಾತಕ ಪದವಿಯಲ್ಲಿನ ಕನ್ನಡ ಸಾಹಿತ್ಯವನ್ನು ಅದರ ಪರಂಪರೆ ಮತ್ತು ಚಾರಿತ್ರಿಕ ಪ್ರಜ್ಞೆಯೊಂದಿಗೆ ಪರಿಚಯಿಸಿದ್ದಾರೆ. ಉನ್ನತ ಶಿಕ್ಷಣದ ಪಠ್ಯಗಳ ವಿಚಾರದಲ್ಲಿ ಅಧಿಕಾರದ ಸಂಬಂಧಗಳಾಗಿ ಜಾತಿಯ ಶ್ರೇಣಿಕೃತ ಮೌಲ್ಯಗಳನ್ನು ಹೇಗೆ ನಿರ್ವಹಿಸಿಕೊಳ್ಳುತ್ತದೆ ಎನ್ನುವ ಅಂಶವನ್ನು ಅಧ್ಯಯನವು ಸಾದರಪಡಿಸುತ್ತದೆ.

ಕರ್ನಾಟಕದಲ್ಲಿ ಭಾಷಾ ಶಿಕ್ಷಣ ಮತ್ತು ಮಾಧ್ಯಮದ ವಾಗ್ವಾದಗಳು (**ಪ್ರಾಥಮಿಕ ಶಿಕ್ಷಣದ ಕನ್ನಡ ಮಾಧ್ಯಮವನ್ನು ಅನುಲಕ್ಷಿಸಿ**)

ವೀರಾಕ್ಷಿ ಎಲ್. ಅವರು ಪ್ರಸ್ತುತ ನಿಬಂಧವನ್ನು ಅಶೋಕ ಕುಮಾರ ರಂಜೇರೆ ಅವರ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೧೦ರಲ್ಲಿ ಸಲ್ಲಿಸಿದ್ದಾರೆ. ಈ ಅಧ್ಯಯನದಲ್ಲಿ ಕನ್ನಡ ಭಾಷೆಯನ್ನು ಒಂದು ವಿಷಯವಾಗಿ ಕಲಿಸುವುದು ಮತ್ತು ಭಾಷೆಯನ್ನು ಒಂದು ಮಾಧ್ಯಮವನ್ನಾಗಿ ಕಲಿಸುವ ಚರ್ಚೆಗಳು ಪ್ರಾಥಮಿಕ ಶಾಲೆಗಳಲ್ಲಿ ನಡೆದಿವೆ. ಭಾಷಾ ಮಾಧ್ಯಮವನ್ನು ಕುರಿತು ಚರ್ಚೆ ನಡೆಸುವ ಚಿಂತಕರು, ಶಿಕ್ಷಣ, ಶಿಕ್ಷಕರು, ಮತ್ತು ಕಲಿಯುವ

ಮಕ್ಕಳನ್ನು ದೃಷ್ಟಿಯಲ್ಲಿಟ್ಟುಕೊಂಡು ಚರ್ಚೆ ನಡೆಸುತ್ತಿಲ್ಲ. ಅವರವರ ಅನುಕೂಲಕ್ಕೆ ತಕ್ಕಂತೆ ಶಿಕ್ಷಣದ ಕುರಿತು ಚಿಂತನೆಯನ್ನು ತಜ್ಞರು ಮಾಡುತ್ತಿದ್ದಾರೆ. ಈ ರೀತಿಯಾಗಿ ಪ್ರಾಚೀನ ಕಾಲದಿಂದಲೂ ಒಂದಲ್ಲ ಒಂದು ರೀತಿಯ ವಾಗ್ವಾದಗಳು ನಡೆಯುತ್ತಲೇ ಬಂದಿವೆ. ಇವರ ಅಧ್ಯಯನದ ಪ್ರಮುಖ ಉದ್ದೇಶ ಬ್ರಿಟಿಷ್ ಕಾಲದಿಂದ ಇಂದಿನವರೆಗೆ ಭಾಷಾ ಮಾಧ್ಯಮದ ವಾಗ್ವಾದಗಳನ್ನು ಸಮಗ್ರವಾಗಿ ಕ್ರೂಢೀಕರಿಸಿ ಅಧ್ಯಯನ ಮಾಡುವುದಾಗಿದೆ.

ಇವರ ಅಧ್ಯಯನದ ಸ್ವರೂಪ ಭಾರತದಲ್ಲಿ ವೇದ, ಬೌದ್ಧ, ಹಾಗೂ ಮುಸ್ಲಿಮರ ಮತ್ತು ಬ್ರಿಟೀಷರ ಕಾಲಘಟ್ಟಗಳಲ್ಲಿದ್ದ ಶಿಕ್ಷಣ ಪದ್ಧತಿಯ ಸ್ವರೂಪವನ್ನು ಕುರಿತು ವಿಶ್ಲೇಷಿಸಿದ್ದಾರೆ. ಶಿಕ್ಷಣ ಪದ್ಧತಿಯಲ್ಲಿನ ಶಿಕ್ಷಣದ ಭಾಷೆ; ಬೋಧನಾ ಮಾಧ್ಯಮ, ಪಠ್ಯಕ್ರಮ ಇತ್ಯಾದಿ ಅಂಶಗಳ ಸ್ವರೂಪವನ್ನು ಕುರಿತು ಚರ್ಚಿಸಿದ್ದಾರೆ. ಭಾಷಾ ಮಾಧ್ಯಮದ ವಾಗ್ವದಗಳನ್ನು ಯಾವ ಯಾವ ಕ್ಷೇತ್ರಗಳಲ್ಲಿ ಚರ್ಚೆಯಾಗುತ್ತಿವೆ ಎಂಬ ಅಂಶಗಳನ್ನು ಗಮನದಲ್ಲಿಟ್ಟುಕೊಂಡು (ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ರಾಜಕೀಯ, ಆಡಳಿತಾತ್ಮಕ) ಅಧ್ಯಯನದ ವಿಧಾನವನ್ನು ರೂಪಿಸಿಕೊಂಡಿದ್ದಾರೆ.

ಪ್ರಾಥಮಿಕ ಹಂತದ ಕನ್ನಡ ಭಾಷಾ ಪಠ್ಯಪುಸ್ತಕಗಳ ಭಾಷಿಕ ಮತ್ತು ಶೈಕ್ಷಣಿಕ ಅಧ್ಯಯನ

ವಾಗೀಶ ಎನ್. ಎಂ. ಅವರು ಪ್ರಸ್ತುತ ಪಿಎಚ್.ಡಿ. ನಿಬಂಧವನ್ನು ಅಶೋಕ ಕುಮಾರ ರಂಜೇರೆ ಅವರ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೯ರಲ್ಲಿ ಸಲ್ಲಿಸಿದ್ದಾರೆ. ಪ್ರಮುಖವಾಗಿ ಪಠ್ಯಗಳು ಮತ್ತು ಗದ್ಯ ಮತ್ತು ಪದ್ಯಗಳಲ್ಲಿರುವ ಅಭ್ಯಾಸ ಚಟುವಟಿಕೆಗಳಿಗೂ ಹೊಂದಾಣಿಕೆ ಇಲ್ಲದಿರುವುದನ್ನು ಗುರುತಿಸಿದ್ದಾರೆ. ಪಠ್ಯಗಳಲ್ಲಿ ಧ್ವನಿ, ಪದ, ವಾಕ್ಯಗಳ ಬಳಕೆ, ಬೋಧನೆ, ಶಿಕ್ಷಕ, ವಿದ್ಯಾರ್ಥಿ, ಇತ್ಯಾದಿ ಅಂಶಗಳು ಮಕ್ಕಳ ಸಾಮರ್ಥ್ಯದ ಅನುಸಾರ ಬಳಕೆಯಾಗಿದೆಯೋ ಇಲ್ಲವೋ? ಎಂಬುದನ್ನು ಗಮನಿಸಿದ್ದಾರೆ. ಪ್ರಸ್ತುತ ಪಠ್ಯಪುಸ್ತಕಗಳನ್ನು ಕೇಂದ್ರಿಕರಿಸಿ ಪ್ರಾಚೀನ ಪಠ್ಯಪುಸ್ತಕಗಳನ್ನು ಚಾರಿತ್ರಿಕ ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಈ ನಿಬಂಧವು ಒಟ್ಟು ಎಂಟು ಅಧ್ಯಾಯಗಳನ್ನು ಒಳಗೊಂಡಿದೆ. ಅಧ್ಯಾಯ ಏಳರಲ್ಲಿ ಪ್ರಚಲಿತ ಪ್ರಾಥಮಿಕ ಶಿಕ್ಷಣ ವ್ಯವಸ್ಥೆ ಹೇಗಿದೆ ಎಂಬುದನ್ನು ವಿವರಿಸಿದ್ದಾರೆ. ಪ್ರಾಥಮಿಕ ಶಿಕ್ಷಣದಲ್ಲಿ ಬೋಧನೆ, ಶಿಕ್ಷಕ, ವಿದ್ಯಾರ್ಥಿ, ಪರೀಕ್ಷೆ, ಪ್ರಶ್ನಾವಳಿ, ಮೌಲ್ಯಮಾಪನ, ಪಾಠೋಪಕರಣಗಳು. ಲೇಖನ ಚಿಹ್ನೆಗಳ ಬಳಕೆ ಇತ್ಯಾದಿ ಅಂಶಗಳಲ್ಲಿ ಮೌಲ್ಯಮಾಪನ ಕ್ರಿಯೆ ಹೇಗೆ ನಡೆಯುತ್ತದೆ ಎಂಬುದನ್ನು ವಿವರಿಸಿದ್ದಾರೆ. ಅಂದರೆ ಮೌಲ್ಯಮಾಪನದ ಅರ್ಥ, ವ್ಯಾಖ್ಯಾನಗಳು, ಮೌಲ್ಯಮಾಪನದ ಹಂತಗಳನ್ನು ಚರ್ಚಿಸಿದ್ದಾರೆ.

ಲಂಬಾಣಿ ಮಕ್ಕಳ ಕನ್ನಡ ಕಲಿಕಾ ಸಮಸ್ಯೆಗಳು (ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿನ ಪ್ರಾಥಮಿಕ ಶಾಲಾ ಮಕ್ಕಳನ್ನು ಅನುಲಕ್ಷಿಸಿ)

ಸೋಮಕ್ಕ. ಎಮ್. ರವರು ಈ ಪಿಎಚ್.ಡಿ ನಿಬಂಧವನ್ನು ಪಿ. ಮಹಾದೇವಯ್ಯ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೬ರಲ್ಲಿ ಸಲ್ಲಿಸಿದ್ದಾರೆ. ಒಟ್ಟು ಏಳು ಅಧ್ಯಾಯಗಳನ್ನು ಮಾಡಿಕೊಂಡಿದ್ದಾರೆ. ಅಧ್ಯಾಯ ಎರಡರಲ್ಲಿ ಲಂಬಾಣಿಗರ ಚಾರಿತ್ರಿಕ ಹಿನ್ನೆಲೆಯನ್ನು ವಿವರಿಸಿದ್ದಾರೆ. ಅಧ್ಯಾಯ ಮೂರು. ನಾಲ್ಕು ಮತ್ತು ಐದರಲ್ಲಿ ಓದು

ಬರಹ ಗುಣಿತಾಕ್ಷರಕ್ಕೆ ಸಂಬಂಧಿಸಿದಂತೆ ಲಂಬಾಣಿ ಮಕ್ಕಳು ಕನ್ನಡ ಭಾಷೆಯನ್ನು ಕಲಿಯುವಾಗ ಎದುರಿಸುವ ಸಮಸ್ಯೆಗಳನ್ನು ಕುರಿತು ವಿಶ್ಲೇಷಿಸಿದ್ದಾರೆ. ಇವರು ಓದುವಾಗ ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ಸಮಸ್ಯೆ ಇರುವುದನ್ನು ಮತ್ತು ಅದೇ ರೀತಿಯಾಗಿ ಬರವಣಿಗೆಯಲ್ಲಿಯೂ ಸಮಸ್ಯೆ ಇರುವುದನ್ನು ಗುರುತಿಸಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ವ್ಯಾಖ್ಯಾನಗಳ ಮೂಲಕ ಕಲಿಕಾ ನಿಯಮಗಳನ್ನು ವಿವರಿಸಿದ್ದಾರೆ. ಪ್ರಶ್ನಾವಳಿಗಳನ್ನು ರಚಿಸಿಕೊಂಡು ಪಠ್ಯಪುಸ್ತಕಗಳಲ್ಲಿನ ಹಾಗೂ ಪದಕೋಶದಿಂದ ಪದಗಳನ್ನು, ಮೂಲಾಕ್ಷರಗಳನ್ನು, ಗುಣಿತಾಕ್ಷರ ಮತ್ತು ಒತ್ತಕ್ಷರಗಳನ್ನು ಪಟ್ಟಿ ಮಾಡಿ ಪ್ರತಿಯೊಂದು ಮಗುವಿನಿಂದಲೂ ಪ್ರತ್ಯೇಕವಾಗಿ ಓದಿಸಿ ಮಾಹಿತಿಯನ್ನು ಸಂಗ್ರಹಿಸಿ ಅಂಕಿ ಅಂಶಗಳ ಮೂಲಕ ಸಮಸ್ಯೆಗಳನ್ನು ಗುರುತಿಸಿದ್ದಾರೆ.

Determinates of achievement in minimum levels of learning at primary Stage

ಮಧುಸೂದನ ಜೋಶಿಯವರು ಪ್ರಸ್ತುತ ಪಿಎಚ್.ಡಿ ನಿಬಂಧವನ್ನು R. S. Yelli ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ೨೦೦೩ರಲ್ಲಿ ಸಲ್ಲಿಸಿದ್ದಾರೆ. ಸಮಾಜದಲ್ಲಿನ ಪ್ರಾಥಮಿಕ ಹಂತದ ಕನಿಷ್ಟ ಮಟ್ಟದ ಕಲಿಕೆಯಲ್ಲಿ ಜಾತಿ, ವರ್ಗ, ಸ್ಥಳ, ಮತ್ತು ಲಿಂಗ ತಾರತಮ್ಯತೆ ಇರುವುದನ್ನು ಗುರುತಿಸಿದ್ದಾರೆ. ಪ್ರಾಥಮಿಕ ಹಂತದ ಕಲಿಕೆಯನ್ನು ಪರಿಣಾಮಕಾರಿಯಾಗಿಸಲು ಹಲವಾರು ಯೋಜನೆಗಳನ್ನು ಹಾಕಿಕೊಂಡರೂ ಒಂದರಿಂದ ಐದನೆಯ ತರಗತಿಯವರೆಗಿನ ಕನಿಷ್ಟ ಮಟ್ಟದ ಕಲಿಕೆ ಸುಧಾರಣೆಯಾಗಿಲ್ಲ. ಕನಿಷ್ಟ ಮಟ್ಟದ ಕಲಿಕೆ ಎಂದರೆ ಪ್ರಾಥಮಿಕ ಹಂತದಲ್ಲಿಯೇ ಭಾಷಾ ಕೌಶಲ್ಯಗಳನ್ನು ಬೆಳೆಸುವುದು ಎಂದಿದ್ದಾರೆ. ಮಕ್ಕಳಿಗೆ ಬೋಧನಾ ಪದ್ದತಿಯಲ್ಲಿ ಬಾಯಿಪಾಠ ಮಾಡಿಸುವ ವಿಧಾನ ಕೈ ಬಿಡಬೇಕು. ಕನಿಷ್ಟ ಕಲಿಕಾ ಸಾಧನೆ ಎಂದರೆ ಕಲಿಕಾರ್ಥಿಗಳು ತಮ್ಮ ಜೀವನಕ್ಕೆ ಉಪಯುಕ್ತವಾಗುವಂತಾದರೂ ಕಲಿಕೆ ಸುಧಾರಿಸಬೇಕು. ನಿರೀಕ್ಷೆಯ ಮಟ್ಟದಲ್ಲಿ ಪ್ರಾಥಮಿಕ ಶಾಲಾ ಹಂತದಲ್ಲಿ ಕಲಿಕೆಯಾಗುತ್ತಿಲ್ಲ ಎನ್ನುವುದನ್ನು ಅಧ್ಯಯನದ ಮೂಲಕ ಸ್ಪಷ್ಟಪಡಿಸಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಲಿಂಗತಾರತಮ್ಯತೆ ಹೆಚ್ಚಾಗಿರುವುದರಿಂದ ಮತ್ತು ಬಡತನ, ಆರ್ಥಿಕ ಅಸಮಾನತೆ, ಮನೆಯ ಪರಿಸರ ಈ ಎಲ್ಲಾ ಅಂಶಗಳಿಂದ ಕನಿಷ್ಟ ಮಟ್ಟದ ಕಲಿಕೆಯನ್ನು ಹೆಚ್ಚಾಗಿ ಗ್ರಾಮೀಣ ಪ್ರದೇಶದಲ್ಲಿ ಸಾಧಿಸದೆ ಇರುವುದನ್ನು ಗುರುತಿಸಿದ್ದಾರೆ.

Lexical study of primary text 5th standard text

ನಂದಾ ಆರ್. ಇಟ್ಟರ್ ಅವರು ಈ ಪಿಎಚ್.ಡಿ. ನಿಬಂಧವನ್ನು ಕೃ. ಅನ್ಬನ್ ರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡಕ್ಕೆ ಸಲ್ಲಿಸಿದ್ದಾರೆ. ಇಲ್ಲಿ ಸಂಶೋಧಕರು ಪದಗಳ ರೂಪವನ್ನು ಪಟ್ಟಿಮಾಡಿದ್ದಾರೆ. ಅಲ್ಲದೇ ಒಂದು ಪದವನ್ನು ತೆಗೆದುಕೊಂಡು ಮೂಲ ಪದ, ರೂಪಾಂತರ ಪದ ಎಂದು ವಿಂಗಡಿಸಿ ವಿಶ್ಲೇಷಣೆ ಮಾಡಿದ್ದಾರೆ. ಉದಾ: ಮೂಲ ಪದದಲ್ಲಿನ ಪದ ರಚನೆ ಹೇಳಿದ್ದಾರೆ. ಅಂಕ, ಅಂಕುಶ, ಅಂಗಡಿ ಎಂದಾಗಿದೆ ಎಂದು ಹೇಳುತ್ತಾರೆ.

ಮಕ್ಕಳಲ್ಲಿ ಕನ್ನಡ ಭಾಷಾ ಕಲಿಕೆ

ಎಂ. ವಿ. ಗಿರಿಜಮ್ಮ ಅವರು ಪ್ರಸ್ತುತ ಪಿಎಚ್.ಡಿ. ನಿಬಂಧವನ್ನು ಸಿ. ಎಸ್. ರಾಮಚಂದ್ರರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ೨೦೦೭ರಲ್ಲಿ ಸಲ್ಲಿಸಿದ್ದಾರೆ. ಒಂಬತ್ತು ತಿಂಗಳಿನಿಂದ ನಾಲ್ಕುವರೆ ವರ್ಷ ವಯಸ್ಸಿನ ಮಕ್ಕಳ ಧ್ವನಿ, ಪದ, ಪದಪುಂಜ ಹಾಗೂ ವಾಕ್ಯಗಳ ಕಲಿಕೆ ಮತ್ತು ಬೆಳವಣಿಗೆಯನ್ನು ವಿವರಣಾತ್ಮಕವಾಗಿ ಅಧ್ಯಯನ ಮಾಡಿದ್ದಾರೆ. ಜೊತೆಗೆ ಕಲಿಕೆಯ ಸಂದರ್ಭದಲ್ಲಿ ಮಗುವಿನ ಮೇಲಾಗುವ ಪರಿಸರದ ಹಾಗೂ ಭಾಷಿಕೇತರ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಅಧ್ಯಯನ ಮಾಡಿದ್ದಾರೆ.

೨.೨. ಎಂ.ಇಡಿ. ಕಿರು ಪ್ರಬಂಧಗಳು

ಕನ್ನಡ ಭಾಷೆಯ ಓದುಗಾರಿಕೆಯಲ್ಲಿನ ದೋಷಗಳ ಕುರಿತು ಒಂದು ಅಧ್ಯಯನ

ಕುವೆಂಪು ವಿಶ್ವವಿದ್ಯಾನಿಲಯ ದೂರ ಶಿಕ್ಷಣ ವಿಭಾಗಕ್ಕೆ ಬಸವರಾಜ ಹಿರೇಮಠ ಅವರು ೨೦೦೮ರಲ್ಲಿ ಸಲ್ಲಿಸಿದ ನಿಬಂಧ ಇದಾಗಿದೆ. ಕುಷ್ಟಗಿ ತಾಲೂಕಿನ ಹಿರೇಮನ್ನಾಪೂರ ಗ್ರಾಮದ ೫ನೇ ತರಗತಿ ವಿದ್ಯಾರ್ಥಿಗಳನ್ನು ಅನುಲಕ್ಷಿಸಿ ಈ ಅಧ್ಯಯನವನ್ನು ಕೈಗೊಂಡಿದ್ದಾರೆ. ವಿದ್ಯಾರ್ಥಿಗಳು ಓದುವಾಗ ಮಾಡುವ ದೋಷಗಳನ್ನು ಪ್ರಾಯೋಗಿಕವಾಗಿ ವಿದ್ಯಾರ್ಥಿಗಳನ್ನು ಬಳಸಿಕೊಂಡು ತಪ್ಪುಗಳನ್ನು ದಾಖಲಿಸಿದ್ದಾರೆ. ತಪ್ಪುಗಳಿಗೆ ಕಾರಣಗಳನ್ನು ಪರಿಶೀಲಿಸಿದ್ದಾರೆ. ಉದಾ. ಅಮ್ಮ ಹಸು ಹಾಲು ಕರೆಯಿತು ಎಂಬುವುದಕ್ಕೆ ವಿದ್ಯಾರ್ಥಿಗಳು ಅಸು ಆಲು ಕರೆಯಿತು ಎಂದು ತಪ್ಪಾಗಿ ಓದುತ್ತಾರೆ. ಅಂದರೆ ಇಲ್ಲಿ ಮಗುವಿಗೆ 'ಹ' ಕಾರಕ್ಕೂ ಮತ್ತು 'ಅ' ಕಾರಕ್ಕೂ ಸರಿಯಾದ ಸ್ಪಷ್ಟನೆಯಿಲ್ಲ ಎಂಬುವುದನ್ನು ತಿಳಿಸಿದ್ದಾರೆ. ಆದರೆ ಇಂತಹ ತಪ್ಪು ಇಡಿ ತರಗತಿಯ ಮಕ್ಕಳೆಲ್ಲರೂ ಮಾಡುತ್ತಾರೆಯೇ? ಅಥವಾ ಕೆಲವು ಮಕ್ಕಳು ಮಾತ್ರ ಮಾಡುತ್ತಾರೆಯೇ? ಎಂಬುದನ್ನು ಸ್ಪಷ್ಟಪಡಿಸಿಲ್ಲ.

ಕೊಪ್ಪಳ ಜಿಲ್ಲೆಯ ಪ್ರಾಥಮಿಕ ಶಾಲೆಯ ಮಕ್ಕಳ ನಿಧಾನ ಕಲಿಕೆಗೆ ಕಾರಣಗಳು

ಕುವೆಂಪು ವಿಶ್ವವಿದ್ಯಾಲಯ ದೂರ ಶಿಕ್ಷಣ ವಿಭಾಗಕ್ಕೆ ವಿಪ್ಲವಿಯವರು ನಾಗರಾಜ ಕೆ. ಅವರ ಮಾರ್ಗದರ್ಶನದಲ್ಲಿ ಈ ಕಿರು ನಿಬಂಧವನ್ನು ೨೦೦೮-೦೯ರಲ್ಲಿ ಸಲ್ಲಿಸಿದ್ದಾರೆ. ಅಧ್ಯಯನದಲ್ಲಿ ನಿಧಾನಗತಿ ಕಲಿಕೆಗೆ ಕಾರಣಗಳನ್ನು ಕಂಡುಕೊಂಡಿದ್ದಾರೆ. ಅಧ್ಯಯನಕಾರರು ವಾಕ್ಯಗಳುಳ್ಳ ಪ್ರಶ್ನಾವಳಿಗಳನ್ನು ರಚಿಸಿಕೊಂಡು ಮಕ್ಕಳಿಗೆ ಕೇಳಿ ಅವರಿಂದ ಬಂದ ಮಾಹಿತಿಯನ್ನು ಕ್ರೋಢೀಕರಿಸಿ ದತ್ತಾಂಶಗಳ ಮೂಲಕ ನಿಧಾನಗತಿಯ ಕಲಿಕೆಗೆ ಕಾರಣಗಳೇನು ಎಂಬುದನ್ನು ಗುರುತಿಸಿದ್ದಾರೆ. ಮಕ್ಕಳ ಬೌದ್ಧಿಕ ಮಟ್ಟ, ಬೆಳೆಯುತ್ತಿರುವ ಪರಿಸರವನ್ನು ಗ್ರಹಿಸಿಕೊಳ್ಳುವ ಶಕ್ತಿ, ಪೋಷಕರ ಪ್ರಚೋದನೆ ಇಲ್ಲದಿರುವುದು ಬೋಧಕರು ವಿಶೇಷವಾದ ಕಾಳಜಿ ತೋರದೆ ಇರುವುದು, ಶಾಲಾ ಸೌಲಭ್ಯಗಳ ಕೊರತೆ, ದೈಹಿಕ ಸಮಸ್ಯೆ ಇಂತಹ ಹಲವಾರು ಅಂಶಗಳು ಮಕ್ಕಳ ನಿಧಾನಗತಿಯ ಕಲಿಕೆಗೆ ಕಾರಣಗಳಾಗಿವೆ ಎಂಬುದನ್ನು ಗುರುತಿಸಿದ್ದಾರೆ. ಈ ಅಧ್ಯಯನವು ಕೊಪ್ಪಳ ಜಿಲ್ಲೆಯ ವ್ಯಾಪ್ತಿಗೆ ಒಳಪಡುವ ಮಕ್ಕಳನ್ನು ಮಾತ್ರ ಒಳಗೊಂಡಿದೆ.

ಪ್ರಾಥಮಿಕ ವಿಭಾಗದ ಆರನೆಯ ತರಗತಿಯ ವಿದ್ಯಾರ್ಥಿಗಳ ಕನ್ನಡ ಭಾಷಾ ಬರವಣಿಗೆಯಲ್ಲಿ, ಉಕ್ತಲೇಖನ ಹಾಗೂ ವೀಕ್ಷಿತ ಲೇಖನದಲ್ಲಿ ಕಂಡು ಬರುವ ದೋಷಗಳ ವಿಶ್ಲೇಷಣೆ ಮತ್ತು ಪರಿಹಾರ ವಿಧಾನ ಕುರಿತು ಒಂದು ಅಧ್ಯಯನ

ಈರಮ್ಮ ಎಚ್. ಅವರು ಕುರಿತು ಎಂ. ಗೀತಾರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಯಪುರಕ್ಕೆ ೨೦೦೮ರಲ್ಲಿ ಸಲ್ಲಿಸಿದ ಕಿರು ನಿಬಂಧ ಇದಾಗಿದೆ. ಅಧ್ಯಯನದಲ್ಲಿ ಪ್ರಾಥಮಿಕ ಮಕ್ಕಳು ಕನ್ನಡ ಭಾಷಾ ಬರವಣಿಗೆಯಲ್ಲಿ ಮಾಡುವ ತಪ್ಪುಗಳನ್ನು ಗುರುತಿಸಲು ಉಕ್ತಲೇಖನ ಮತ್ತು ವಿಕ್ಷಿತ ಲೇಖನಗಳನ್ನು ಬರೆಯಿಸಿ ಅದರಲ್ಲಿರುವಂತಹ ತಪ್ಪುಗಳನ್ನು ಅಂಕಿ ಸಂಖ್ಯೆಗಳ ಮೂಲಕ ಗುರುತಿಸಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ.

ವಿಜಾಪೂರ ಜಿಲ್ಲೆಯ ಕಾಖಂಡಕಿ ಗ್ರಾಮದ ಪ್ರಾಥಮಿಕ ಶಾಲೆಯ ಆರನೆಯ ಮತ್ತು ಏಳನೆಯ ತರಗತಿಯ ಭಾಷಾ ಓದುಗಾರಿಕೆಯಲ್ಲಿ ಮಕ್ಕಳ ಸಾಮಾನ್ಯ ದೋಷಗಳ ಕುರಿತು ಒಂದು ಅಧ್ಯಯನ

ಪ್ರಸ್ತುತ ಎಂ.ಇಡಿ. ಕಿರು ಪ್ರಬಂಧವನ್ನು ಸುಜಾತ ಎಲ್. ಅವರು ಹೇಮಂತಕುಮಾರ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಯಪುರಕ್ಕೆ ೨೦೦೮-೦೯ರಲ್ಲಿ ಸಲ್ಲಿಸಿದ್ದಾರೆ. ಈ ಅಧ್ಯಯನದಲ್ಲಿ ಭಾಷಾ ಕೌಶಲ್ಯಗಳಾದ ಓದುವುದು, ಬರೆಯುವುದು, ಮಾತಾಡುವುದು ಮತ್ತು ಆಲಿಸುವುದು ಇವುಗಳಲ್ಲಿನ ದೋಷಗಳನ್ನು ಗುರುತಿಸಿ ಅಂಕಿ ಸಂಖ್ಯೆಗಳ ಮೂಲಕ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಬರವಣಿಗೆ ಮತ್ತು ಓದುಗಾರಿಕೆಯಲ್ಲಿನ ಸಮಸ್ಯೆಗಳನ್ನು ಕೋಷ್ಟಕಗಳ ಮೂಲಕ ಪ್ರತಿಶತವನ್ನು ಪಟ್ಟಿಮಾಡಿದ್ದಾರೆ.

ಮಹಿಳಾ ಪ್ರೌಢಶಾಲಾ ಶಿಕ್ಷಕಿಯರ ಬೋಧನಾ ಪರಿಣಾಮಕಾರಿತ್ವ ಕುರಿತು ಒಂದು ಅಧ್ಯಯನ

ಸಂತೋಷಕುಮಾರಿ ಎಸ್. ಅವರು ಈ ನಿಬಂಧವನ್ನು ವೆಂಕೋಬಾ ನಾರಾಯಣಪ್ಪ ಅವರ ಮಾರ್ಗದರ್ಶನದಲ್ಲಿ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಯಪುರಕ್ಕೆ ಎಂ.ಇಡಿ ಪದವಿಯ ಆಂಶಿಕ ಅವಶ್ಯಕತೆಗಾಗಿ ೨೦೦೬-೦೭ರಲ್ಲಿ ಸಲ್ಲಿಸಿದ್ದಾರೆ. ಈ ಅಧ್ಯಯನದಲ್ಲಿ ವಿಜಾಪೂರ ಜಿಲ್ಲೆಯ ಪ್ರೌಢ ಶಾಲೆಯ ಅರವತ್ತನಾಲ್ಕು ಮಹಿಳಾ ಶಿಕ್ಷಕಿಯರನ್ನು ಆಯ್ಕೆಮಾಡಿಕೊಂಡಿದ್ದಾರೆ. ದತ್ತಾಂಶಗಳ ವಿಶ್ಲೇಷಣೆಗಾಗಿ ಸರಾಸರಿ ಮಾನಕ ವಿಚಲನೆ ಮತ್ತು 't' ಮೌಲ್ಯಾಂಕಗಳು ಮತ್ತು 'r' ಮೌಲ್ಯಾಂಕಗಳನ್ನು ಬಳಸಿದ್ದಾರೆ. ವೃತ್ತಿಯಲ್ಲಿ ದಕ್ಷತೆ, ವರ್ಗಕೋಣೆ, ಸಂಘಟನೆ, ವಿಷಯ ವಸ್ತುವಿನ ಪ್ರಭುತ್ವ, ಬೋಧನಾ ಕೌಶಲ್ಯ, ವಿದ್ಯಾರ್ಥಿಗಳೊಂದಿಗೆ ಸೌಹರ್ದಯುತ ಸಂಬಂಧ, ಶೈಕ್ಷಣಿಕ ಗುರಿಗಳನ್ನು ಸಾಧಿಸುವ ಜ್ಞಾನ ಮತ್ತು ಸಾಮರ್ಥ್ಯ, ಹಾಸ್ಯಮಯ ಪ್ರವೃತ್ತಿ ಮುಂತಾದ ಗುಣಗಳನ್ನು ಅಳವಡಿಸಿಕೊಂಡು ಮಾಡಿದ ಬೋಧನೆಯು ಪರಿಣಾಮಕಾರಿ ಬೋಧನೆಯಾಗುತ್ತದೆ ಎಂದು ಸ್ಪಷ್ಟಪಡಿಸಿದ್ದಾರೆ. ಮಹಿಳಾ ಬೋಧಕಿಯರ ಬೋಧನೆಯ ಪರಿಣಾಮಕಾರಿತ್ವದ ಮೇಲೆ ಸ್ವತಂತ್ರ ಚಳಕಗಳಾದ

ಸ್ಥಳ, ಸಂಸ್ಥೆ ವಿಷಯಗಳು ಪ್ರಭಾವ ಬೀರುವುದರಿಂದ ಪರಿಣಾಮಕಾರಿ ಬೋಧನೆಯಲ್ಲಿ ವ್ಯತ್ಯಾಸಗಳನ್ನು ಗುರುತಿಸಿದ್ದಾರೆ.

ಪ್ರಶಿಕ್ಷಕರ ಬೋಧನಾ ಪರಿಣಾಮಕಾರತ್ವದ ಕುರಿತು ಒಂದು ಅಧ್ಯಯನ

ದೀಪಾ ಎಮ್. ದಾನಪ್ಪ ಅವರು ಕುರಿತು ವೆಂಕೋಬಾ ನಾರಯಣಪ್ಪ ಅವರ ಮಾರ್ಗದರ್ಶನದಲ್ಲಿ ಎಂ.ಇಡಿ ಪ್ರಬಂಧವನ್ನು ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರಕ್ಕೆ ೨೦೦೬–೦೭ರಲ್ಲಿ ಸಲ್ಲಿಸಿದ್ದಾರೆ. ಬೋಧನೆಯಲ್ಲಿ ಸೇವಾನಿರತ ಬೋಧಕರಿಗಿಂತ ಪ್ರಶಿಕ್ಷಣಾರ್ಥಿಗಳ ಬೋಧನೆಯು ಪರಿಣಾಮಕಾರಿಯಾಗಿರುತ್ತದೆ ಎಂದು ಅಧ್ಯಯನದ ಮೂಲಕ ಸ್ಪಷ್ಟಪಡಿಸಿದ್ದಾರೆ. ಪ್ರಶಿಕ್ಷಣಾರ್ಥಿಗಳು ಪಾಠಯೋಜನೆಯ ಹಂತಗಳನ್ನು ನಿರ್ದಿಷ್ಟ ಅವಧಿಯಲ್ಲಿ ಪೂರೈಸುತ್ತಾರೆ. ಕಡಿಮೆ ಕಲಿಕಾ ಘಟಕವನ್ನು ತೆಗೆದುಕೊಂಡು ಹೆಚ್ಚಿನ ಅವಧಿಯಲ್ಲಿ ಬೋಧಿಸುವುದರಿಂದ ಬೋಧನೆಯು ಪರಿಣಾಮಕಾರಿಯಾಗುತ್ತದೆ. ಎಂದು ಸರಾಸರಿ ಅಂಕಿ ಸಂಖ್ಯೆಗಳ ಮೂಲಕ ಕೋಷ್ಟಕದಲ್ಲಿ ದಾಖಲಿಸುವ ಮೂಲಕ ಗುರುತಿಸಿದ್ದಾರೆ.

ಪ್ರೌಢಶಾಲಾ ಶಿಕ್ಷಕರ ಮೌಲ್ಯ

ರತ್ನಾಬಾಯಿ ಸಂಗಣಗೌಡ ಅವರು ಎಂ.ಇಡಿ ಪದವಿಯ ಅವಶ್ಯಕತೆಗಾಗಿ ವೆಂಕೋಬಾ ನಾರಯಣಪ್ಪ ಅವರ ಮಾರ್ಗದರ್ಶನದಲ್ಲಿ ಈ ಕಿರು ಪ್ರಬಂಧವನ್ನು ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರಕ್ಕೆ ೨೦೦೮ರಲ್ಲಿ ಸಲ್ಲಿಸಿದ್ದಾರೆ. ಈ ಅಧ್ಯಯನದಲ್ಲಿ ಇವರು ಪ್ರಮುಖವಾಗಿ ವಿದ್ಯಾರ್ಥಿ ಮತ್ತು ಬೋಧಕರಿಬ್ಬರಲ್ಲಿಯು ಒಳ್ಳೆಯ ಮೌಲ್ಯಗಳು ಇರಬೇಕು. ಅಂದರೆ ತಾಳ್ಮೆ, ಆರೋಗ್ಯ, ಹವ್ಯಾಸ, ಸೃಜನಶೀಲತೆ ಇತ್ಯಾದಿ ಮೌಲ್ಯಗಳು ಇದ್ದಾಗ ಬೋಧನೆಯು ಪರಿಣಾಮಕಾರಿಯಾಗಲು ಸಾಧ್ಯ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಚಿತ್ತಾಪೂರ ತಾಲೂಕಿನ ಪ್ರೌಢಶಾಲೆಗಳ ೯ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯ ಮೇಲೆ ಅವರ ಕುಟುಂಬದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳ ಪ್ರಭಾವ ಕುರಿತು ಒಂದು ಅಧ್ಯಯನ

ಪ್ರಸ್ತುತ ನಿಬಂಧವನ್ನು ವಿಜಯಕುಮಾರ ಶಿವರಾಮ ಅವರು ಟಿ. ಎನ್. ಲೋಕೇಶ ಅವರ ಮಾರ್ಗದರ್ಶನದಲ್ಲಿ ಎಂ.ಇಡಿ ಪದವಿಯ ಆಂಶಿಕ ಅವಶ್ಯಕತೆಗಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮಾನಸ ಗಂಗೋತ್ರಿ, ಮೈಸೂರು ಇಲ್ಲಿಗೆ ೨೦೧೦–೧೧ರಲ್ಲಿ ಸಲ್ಲಿಸಿದ್ದಾರೆ. ಈ ಅಧ್ಯಯನ ಗಮನಿಸಿದಾಗ ಕಲಿಕಾರ್ಥಿಗಳು ಕಲಿಕೆಯಲ್ಲಿ ಸಮಸ್ಯೆಯನ್ನು ಎದುರಿಸುತ್ತಿರುವುದಕ್ಕೆ ಅವರ ಮನೆಯ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯು ಕಾರಣ ಎಂಬ ಅಂಶವನ್ನು ಕ್ಷೇತ್ರ ಕಾರ್ಯ ಅಧ್ಯಯನದ ಮೂಲಕ ಪ್ರತಿಶತದಲ್ಲಿ ಗುರುತಿಸಿದ್ದಾರೆ.

ಹಿರೇಕೆರೂರ ತಾಲೂಕಿನ ಗ್ರಾಮೀಣ ಪ್ರದೇಶದ ಹಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿನಿಯರು ಶಿಕ್ಷಣ ಪಡೆಯುವಲ್ಲಿ ಎದುರಿಸುತ್ತಿರುವ ಸಮಸ್ಯೆಗಳ ಒಂದು ಅಧ್ಯಯನ

ಮಧು ಎಚ್ ಗೋವಿಂದಪ್ಪನವರು ಶಿವಕುಮಾರ ಅವರ ಮಾರ್ಗದರ್ಶನದಲ್ಲಿ ಈ ಎಂ.ಇಡಿ ಕಿರು ಪ್ರಬಂಧವನ್ನು ಶ್ರೀಸತ್ಯಂ ಶಿಕ್ಷಣ ಸ್ನಾತಕೋತ್ತರ ಅಧ್ಯಯನ ಕೇಂದ್ರ ಬಳ್ಳಾರಿಗೆ ೨೦೦೮ರಲ್ಲಿ ಸಲ್ಲಿಸಿದ್ದಾರೆ. ಈ ಶೀರ್ಷಿಕೆಯಡಿ ಸಂಶೋಧಕರು ಕೇವಲ ಹೆಣ್ಣು ಮಕ್ಕಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರ ಕಲಿಕೆಯಲ್ಲಿ ಉಂಟಾಗುವ ಸಮಸ್ಯೆಗಳನ್ನು ಗುರುತಿಸಿದ್ದಾರೆ. ಹಾಗೂ ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ಹೆಣ್ಣು ಮಕ್ಕಳು ಹೆಚ್ಚು ಶೈಕ್ಷಣಿಕ ಕ್ಷೇತ್ರದಲ್ಲಿ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ ಎಂಬುದನ್ನು ಗಮನಿಸಿ ಅಂಕಿ ಸಂಖ್ಯೆಗಳ ಮೂಲಕ ದಾಖಲಿಸಿದ್ದಾರೆ.

೨.೩. ಎಂ.ಫಿಲ್. ಸಂಪ್ರಬಂಧಗಳು

ಉನ್ನತ ಶಿಕ್ಷಣದಲ್ಲಿ ಕನ್ನಡ (ಒಂದು ಅಧ್ಯಯನ ಸ್ನಾತಕೋತ್ತರ ಪದವಿಧರರನ್ನು ಅನುಲಕ್ಷಿಸಿ)

ಎಚ್. ವರಲಕ್ಷ್ಮೀ ಅವರು ಪ್ರಸ್ತುತ ಎಂ.ಫಿಲ್ ಸಂಪ್ರಬಂಧವನ್ನು ಮಾಧವ ಪೆರಾಜೆಯವರ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೮ರಲ್ಲಿ ಸಲ್ಲಿಸಿದ್ದಾರೆ. ಇದರಲ್ಲಿ ಕರ್ನಾಟಕದಲ್ಲಿನ ಸ್ನಾತಕೋತ್ತರ ಪದವಿಧರರ ಕನ್ನಡ ಪಠ್ಯಕ್ರಮವನ್ನು ಕುರಿತು ಅಧ್ಯಯನ ಮಾಡಲಾಗಿದೆ. ಉನ್ನತ ಶಿಕ್ಷಣದಲ್ಲಿ ಬೋಧನಾ ಪದ್ಧತಿ, ಕನ್ನಡ ಸಾಹಿತ್ಯ ಬೋಧನಾ ಪದ್ಧತಿ, ಗುರು–ಶಿಷ್ಯರ ನಡಾವಳಿ, ಕರ್ನಾಟಕದ ಉನ್ನತ ಶಿಕ್ಷಣದ ಇತಿಹಾಸ, ಉನ್ನತ ಶಿಕ್ಷಣದ ಕುರಿತು ವಿವಿಧ ಆಯೋಗಗಳ ವರದಿಗಳು, ಇಂದಿನ ಸೆಮಿಸ್ಟರ್ ಪದ್ಧತಿ, ಈ ಎಲ್ಲಾ ವಿಷಯಗಳನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಮತ್ತು ದೂರ ಶಿಕ್ಷಣ ಪದ್ಧತಿಯ ಮೂಲಕ ಕಲಿಯುವಂತಹ ಶಿಕ್ಷಣಾರ್ಥಿಗಳಲ್ಲಿ ಕನ್ನಡ ಸಾಹಿತ್ಯ ಯಾವ ರೀತಿ ಬೆಳೆದು ಬಂದಿದೆ ಎಂಬುದನ್ನು ನಕ್ಷೆಯ ಮೂಲಕ ಗುರುತಿಸಿದ್ದಾರೆ.

ಪ್ರೌಢಶಾಲಾ ಮಕ್ಕಳ ಕನ್ನಡದ ಬಳಕೆಯಲ್ಲಿ ಕಾಗುಣಿತ ದೋಷಗಳು

ಸಿದ್ದಲಿಂಗಪ್ಪ ಎಸ್. ದೇಶಮುಖ್ ಅವರು ಕೃಷ್ಣಪರಮೇಶ್ವರ ಭಟ್ಟ ಅವರ ಮಾರ್ಗದರ್ಶನದಲ್ಲಿ ಎಂ.ಫಿಲ್ ಸಂಪ್ರಬಂಧವನ್ನು ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಬೆಂಗಳೂರು ೨೦೦೭–೦೮ರಲ್ಲಿ ಸಲ್ಲಿಸಿದ್ದಾರೆ. ಈ ಶೀರ್ಷಿಕೆಯಡಿಯಲ್ಲಿ ಪ್ರೌಢಶಾಲೆಯ ಮಕ್ಕಳು ಕಾಗುಣಿತದ ರೇಖಾವಿನ್ಯಾಸಗಳನ್ನು ಸರಿಯಾಗಿ ಅಳವಡಿಸದೆ ಬರೆಯುವುದು, ತಲೆಕಟ್ಟು, ಏತ್ವ, ದೀರ್ಘ, ಕೊಂಬು, ಅರ್ಕಾವತ್ತು, ಅರ್ಧಾಕ್ಷರ ಚಿಹ್ನೆ ಬರೆಯುವುದನ್ನು ಗುರುತಿಸಿದ್ದಾರೆ. ಅಲ್ಪಪ್ರಾಣ ಮತ್ತು ಮಹಾಪ್ರಾಣಗಳ ವ್ಯತ್ಯಾಸ ತಿಳಿಯದೆ ಓದುವುದು, ಬರೆಯುವುದು ಶ,ಷ,ಸ, ಅಕಾರಾದಿ, ಸ್ವರಾದಿ ಇತ್ಯಾದಿ ವರ್ಣಗಳಲ್ಲಿ ಆಗುವ ದೋಷಗಳನ್ನು ಗುರುತಿಸಿದ್ದಾರೆ. ಗ್ರಾಮೀಣ ಮತ್ತು ನಗರ ಪ್ರೌಢಶಾಲಾ ಮಕ್ಕಳ ಸ್ವವಿವರಗಳ ಹಿನ್ನೆಲೆಯಲ್ಲಿ ಅಧ್ಯಯನವನ್ನು ಕೈಗೊಂಡಿದ್ದಾರೆ.

ಕನ್ನಡ ಉಪಭಾಷೆಗಳು

ರೇಣುಕ ಎಚ್. ಆರ್. ಅವರು ಚಂದು ಕಾಳೆನ್ ಹಳ್ಳಿಯವರ ಮಾರ್ಗದರ್ಶನದಲ್ಲಿ ಪ್ರಸ್ತುತ ಎಂ.ಫಿಲ್ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೮ರಲ್ಲಿ ಸಲ್ಲಿಸಿದ್ದಾರೆ. ಈ ಶೀರ್ಷಿಕೆಯಡಿಯಲ್ಲಿ ಧ್ವನಿ, ಧ್ವನಿಮಾ, ಆಕೃತಿಮಾ, ವ್ಯಾಕರಣಗಳನ್ನು ಕುರಿತು ಅಧ್ಯಯನ

ಮಾಡಿದ್ದಾರೆ. ವಿಸ್ತಾರವಾದ ಕನ್ನಡ ಉಪಭಾಷೆಯನ್ನು ಸೀಮಿತ ವ್ಯಾಪ್ತಿ ಪ್ರದೇಶಗಳಲ್ಲಿ ಅಧ್ಯಯನ ಕೈಗೊಂಡಿದ್ದಾರೆ. ಧಾರವಾಡ, ಮಂಗಳೂರು, ಮೈಸೂರು, ಕಲಬುರ್ಗಿ ಕನ್ನಡದಲ್ಲಿನ ಧ್ವನಿ, ಧ್ವನಿಮಾಗಳ ಬದಲಾವಣೆಯನ್ನು ಈ ಅಧ್ಯಯನದಲ್ಲಿ ಸ್ಪಷ್ಟಪಡಿಸಿದ್ದಾರೆ.

ಕನ್ನಡ ಭಾಷೆಯ ಮೇಲೆ ಅನ್ಯ ಭಾಷೆಗಳ ಪ್ರಭಾವ

ಮಹಾದೇವ ಅವರು ಎಚ್. ಎಲ್. ಮಹಾದೇವ ಅವರ ಮಾರ್ಗದರ್ಶನದಲ್ಲಿ ಎಂ.ಫಿಲ್ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೮ರಲ್ಲಿ ಸಲ್ಲಿಸಿದ್ದಾರೆ. ಈ ಶೀರ್ಷಿಕೆಯಡಿಯಲ್ಲಿ ಕನ್ನಡ ಭಾಷೆಯು ಕೊಟ್ಟಿರುವುದಕ್ಕಿಂತ ತೆಗೆದುಕೊಂಡಿರುವುದೇ ಹೆಚ್ಚು. ಭೌಗೋಳಿಕ ವರ್ಗೀಕರಣ, ಜನಾಂಗಿಕ ವರ್ಗೀಕರಣ, ರಾಚನಿಕ ವರ್ಗೀಕರಣ, ವಾಂಶೀಕ ವರ್ಗೀಕರಣಗಳ ಮೂಲಕ ಅನ್ಯಭಾಷೆಗಳು ಯಾವ ರೀತಿಯಾಗಿ ಕನ್ನಡ ಭಾಷೆಯ ಮೇಲೆ ಪ್ರಭಾವ ಬೀರಿವೆ ಎಂಬುದನ್ನು ಅಧ್ಯಯನದ ಮೂಲಕ ಗುರುತಿಸಿಕೊಂಡಿದ್ದಾರೆ.

ಮಕ್ಕಳ ಭಾಷೆ ಒಂದು ಅಧ್ಯಯನ

ಬಸವರಾಜ ಕೋಡಗುಂಟಿ ಅವರು ಸಂಗಮೇಶ ಸವದತ್ತಿಮಠ ಅವರ ಮಾರ್ಗದರ್ಶನದಲ್ಲಿ ಪ್ರಸ್ತುತ ಎಂ.ಫಿಲ್. ಸಂಪ್ರಬಂಧವನ್ನು ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಈ ವಿಷಯದ ಮೇಲೆ ಮಕ್ಕಳ ಭಾಷೆಯ ವಿಕಾಸದ ಹಂತಗಳು ಹೇಗೆ ಪ್ರಾರಂಭವಾಗುತ್ತದೆ ಎಂಬುದನ್ನು ಉದಾಹರಣೆ ಮೂಲಕ ಸ್ಪಷ್ಟಪಡಿಸಿದ್ದಾರೆ. ಅಲ್ಪಪ್ರಾಣ, ಮಹಾಪ್ರಾಣ, ಹ್ರಸ್ವಸ್ವರ, ದೀರ್ಘಸ್ವರಗಳು, ವ್ಯಂಜನಗಳ ಬಗ್ಗೆ ತಿಳುವಳಿಕೆ ಇದ್ದು ಆ ಮಕ್ಕಳು ಪದಗಳನ್ನು ಬಳಸುವಾಗ ಆಗುವ ವ್ಯತ್ಯಾಸಗಳನ್ನು ವಿವರಿಸಿದ್ದಾರೆ. ಮಹಾಪ್ರಾಣಕ್ಷರಗಳನ್ನು ಹಾಗೂ ಪಠ್ಯದಲ್ಲಿರುವ ಮಹಾಪ್ರಾಣ ಪದಗಳನ್ನು ಮಕ್ಕಳು ಹೇಗೆ ಉಚ್ಚಾರ ಮಾಡುತ್ತಾರೆ ಎಂಬುದನ್ನು ಚರ್ಚಿಸಿದ್ದಾರೆ.

ಕನ್ನಡ ಸಂಧಿ ಸಮಸ್ಯೆಯ ಸ್ವರೂಪ

ತಿಪ್ಪನಾಯಕ ಎಸ್.ಪಿ. ಅವರು ಪಿ. ಮಹಾದೇವಯ್ಯ ಅವರ ಮಾರ್ಗದರ್ಶನದಲ್ಲಿ ಎಂ.ಫಿಲ್ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೧೦ರಲ್ಲಿ ಸಲ್ಲಿಸಿದ್ದಾರೆ. ಈ ಶೀರ್ಷಿಕೆಯಡಿಯಲ್ಲಿ ಪ್ರಾಥಮಿಕ ಕನ್ನಡ ಭಾಷಾ ಪಠ್ಯಗಳನ್ನು ಅನುಲಕ್ಷಿಸಿ ಕನ್ನಡ ಸಂಧಿ ಸಮಸ್ಯೆಯ ಸ್ವರೂಪವನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಕನ್ನಡ ಭಾಷಾ ಪಠ್ಯಗಳಲ್ಲಿ ಕನ್ನಡ, ಸಂಸ್ಕೃತ ಸಂಧಿಗಳೆಂದು ಬೇರೆ ಬೇರೆ ಹೇಳಲಾಗುತ್ತದೆ. ಆದರೆ ಅವೆರಡು ಸಂಧಿಗಳು ಒಂದಕ್ಕೊಂದು ಹೇಗೆ ಭಿನ್ನ ಎಂಬುದನ್ನು ಯಾವ ಕನ್ನಡ ಭಾಷಾ ಪಠ್ಯಗಳಲ್ಲೂ ಹೇಳಿಕೊಡುತ್ತಿಲ್ಲ ಎಂಬುದನ್ನು ಉದಾಹರಣೆಯ ಮೂಲಕ ಕನ್ನಡ ಸಂಧಿ ಸ್ವರೂಪವನ್ನು ವಿಶ್ಲೇಷಿಸಿದ್ದಾರೆ.

೨.೩. ಪತ್ರಿಕಾ ಲೇಖನಗಳು

ಬರೆದು ಬರೆದು ಅರೆದು ಕುಡಿಯುವದೇ ಉತ್ತಮ ಎಂಬ ಲೇಖನವು ವಿಜಯಕರ್ನಾಟಕ ಪತ್ರಿಕೆಯಲ್ಲಿ ಪ್ರಕಟಗೊಂಡಿತು. ಕಂಪ್ಯೂಟರ್‌ನಲ್ಲಿ ಟೈಪ್ ಮಾಡಿ ಕಲಿಯುವುದಕ್ಕಿಂತ ಓದುವುದು ಮತ್ತು ಬರೆಯುವುದರಿಂದ ಮೆದುಳಿನ ವಿವಿಧ ಭಾಗಗಳು ಉತ್ತೇಜನಗೊಳ್ಳುತ್ತವೆ ಎಂದು ತಜ್ಞರು ಒಪ್ಪಿ ಹೇಳಿರುತ್ತಾರೆ. ಮಕ್ಕಳು ಪೆನ್ನಿನಿಂದ ಬರೆಯುವುದರಿಂದ ಭಾಷೆ ಸಹ ಕಲಿಯುವಿಕೆ ಪ್ರಕ್ರಿಯೆ ಮೇಲೆ ಪ್ರಭಾವ ಬೀರುತ್ತದೆ. ಕಲಿಯುವಿಕೆಯಲ್ಲಿ ಕಷ್ಟವಿರುವ ಮಂದಿಗೆ ವಿಶೇಷ ಶಿಕ್ಷಣದ ಭಾಗವಾಗಿರುತ್ತದೆ ಎಂದು ಮ್ಯಾಂಗೇನ್ ರವರು ಹೇಳುತ್ತಾರೆ. ಒಟ್ಟಿನಲ್ಲಿ ಈ ಲೇಖನದಲ್ಲಿ ತಿಳಿಸುವುದೇನೆಂದರೆ ಬರವಣಿಗೆಯಿಂದ ಕಲಿಕೆ ಸ್ಪಷ್ಟಗೊಳ್ಳುತ್ತದೆ.

ನಮ್ಮ ಮಕ್ಕಳು ಆಟ-ಪಾಠ-ಒಡನಾಟ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡ ಗಿರಿಮನೆ ಶ್ಯಾಮರಾವ್ ಅವರ ಈ ಲೇಖನ ಮಕ್ಕಳ ಕಲಿಕೆ ಹೇಗಿರಬೇಕು, ಮಕ್ಕಳನ್ನು ಯಾವ ರೀತಿ ಕಲಿಕೆಗೆ ಪ್ರೇರೆಪಿಸಬೇಕು, ಕಲಿಕೆಯ ಸಂದರ್ಭ ತಂದೆ-ತಾಯಿಯರ ಕರ್ತವ್ಯವೇನು, ಮಕ್ಕಳ ಮೇಲೆ ಶಿಕ್ಷಕರು ತಮಗೆ ಗೊತ್ತಿಲ್ಲದೆ ಹೇಗೆ ಒತ್ತಡ ಹಾಕುತ್ತಾರೆ, ಮಕ್ಕಳ ಮೇಲೆ ಒತ್ತಡ ಹಾಕದೆ ಹೇಗೆ ಕಲಿಸಬೇಕು, ಎಂಬಿತ್ಯಾದಿ ಅಂಶಗಳನ್ನು ಕುರಿತು ವಿವರಣೆಯನ್ನು ಕೊಡುತ್ತಾರೆ.

ಸಿಕ್ಕಿದವರಿಗೆ ಸೀರುಂಡೆ ವಿಜಯಕರ್ನಾಟಕ ಪತ್ರಿಕೆಯಲ್ಲಿ ಪ್ರಕಟಗೊಂಡ ಈ ಲೇಖನದಲ್ಲಿ ವ್ಯಾಕರಣ ಹಾಸ್ಯಕ್ಕೆ ಗುರಿಯಾಗಿದೆ ಎಂಬ ವಿಷಯವನ್ನು ಕುರಿತು ಎಂ.ವಿ ಸೀತಾರಾಮಯ್ಯನವರು ಹೀಗೆ ಹೇಳುತ್ತಾರೆ. ಕಬ್ಬಿಣದ ಕಡಲೆಯಂತಿರುವ ವ್ಯಾಕರಣವು ಆದಿಕವಿ ಪಂಪನಿಂದ ಇಂದಿಗೂ ಅವಹೇಳನ ಮತ್ತು ಹಾಸ್ಯಕ್ಕೆ ಗುರಿಯಾಗಿದೆ ಎನ್ನುತ್ತಾರೆ. ಇಂತಹ ವ್ಯಾಕರಣವನ್ನು ಕಲಿಸುವುದಕ್ಕಾಗಿಯೆ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ವಿದ್ಯಾರ್ಥಿಗಳಿಗೆ ಭಾಷಾ ಕಲಿಕೆಯ ಸಂದರ್ಭದಲ್ಲಿ ವ್ಯಾಕರಣ ಕಲಿಕೆ ಸಮಸ್ಯೆಯಾಗುತ್ತದೆ ಎಂದು ಹೇಳಿದ್ದಾರೆ.

ಕನ್ನಡ ಶಬ್ದ ಸಂಪತ್ತು ವಿನಾಶ ತಡೆ ನಮ್ಮೆಲ್ಲರ ಜವಾಬ್ದಾರಿ ಎನ್ನುವ ಪತ್ರಿಕಾ ಸಂವಾದದಲ್ಲಿ ಜಿ.ವೆಂಕಟಸುಬ್ಬಯ್ಯನವರು ಇವತ್ತಿನ ಕನ್ನಡ ಬರವಣಿಗೆ ಶೈಲಿ, ಓದುಗಾರಿಕೆ, ಕನ್ನಡ ಕೃತಿಗಳನ್ನು ಕುರಿತು ಮಾತನಾಡುತ್ತ ಕನ್ನಡಕ್ಕೆ ಬೇಕಾದ ಕೆಲಸಗಳು ಆಗುತ್ತಿಲ್ಲ ಇಂಗ್ಲೀಷ್ ಅಡುಗೆ ಮನೆಯವರೆಗೆ ಕಾಲಿಟ್ಟಿದೆ ಹಾಗಾಗಿ ನಮ್ಮ ಮಕ್ಕಳು ಕನ್ನಡ ಮೊದಲು ಅಭ್ಯಾಸ ಮಾಡಲಿ ನಂತರ ಬೇಕಿದ್ದರೆ ಬೇರೆ ಭಾಷೆ ಕಲಿಯಲಿ ಎಂದು ಅಭಿಪ್ರಾಯಪಟ್ಟಿದ್ದಾರೆ.

ಅಕ್ಷರ ವಂಚಿತರ ಪರ ಇರುವ ಮೂಲಭೂತ ಶಿಕ್ಷಣ ಹಕ್ಕು ಎನ್ನುವ ಲೇಖನವು ಪ್ರಜಾವಾಣಿ ಪತ್ರಿಕೆಯಲ್ಲಿ ೨೦-೦೮-೧೧ರಂದು ಪ್ರಕಟಗೊಂಡಿತು ಲೇಖನಕಾರರು ಟಿ.ಎಂ.ಕುಮಾರರವರು. ಆರ್.ಟಿ.ಇ ನಿಯಮ ೨೯ರಂತೆ ರಾಜ್ಯಗಳು ತಮ್ಮಲಿರುವ ಎಲ್ಲ ಶಾಲೆಗಳ ಶೈಕ್ಷಣಿಕ ನಿರ್ವಹಣೆಗಾಗಿ ಶೈಕ್ಷಣಿಕ ಪ್ರಾಧಿಕಾರ ರಚಿಸಲು ಅವಕಾಶ ಕಲ್ಪಿಸಲಾಗಿದೆ. ರಾಜ್ಯ ಪಠ್ಯಕ್ರಮ ಹಾಗೂ ಕೇಂದ್ರ ಪಠ್ಯಕ್ರಮಗಳಲ್ಲಿ ಏಕರೂಪತೆ ಬರಬೇಕಾಗುತ್ತಾದೆ. ಆಗ ಗುಣಮಟ್ಟ ಕುಸಿಯುತ್ತದೆ. ಆದ್ದರಿಂದ ರಾಜ್ಯ ಹಂತದ ನಿರ್ವಹಣೆ ಬೇಡ ಎಂದಿದ್ದಾರೆ.

ಕನ್ನಡ ಲಿಪಿ ಪರಿಷ್ಕರಣೆ ಎನ್ನುವ ಲೇಖನವು ಆರ್ ವೈ ಗೋಪಾಲ ಬಿಳಿಮಲೆ ಎನ್ನುವವರು ವಿಜಯಕರ್ನಾಟಕ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಕನ್ನಡ ಭಾಷೆಯಲ್ಲಿ ಪ್ರಸ್ತುತದಲ್ಲಿರುವ ಲಿಪಿ ರಚನೆಯ ಮೂಲ ಸ್ವರೂಪವನ್ನು ಉಳಿಸಿಕೊಂಡು ಸ್ವಲ್ಪ ಮಟ್ಟಿಗೆ ಆಧುನೀಕರಿಸಿಕೊಳ್ಳಬೇಕು.

ಆಗ ಅದು ಸರಳ ಸುಲಲಿತವಾಗುತ್ತದೆ. ಕನ್ನಡ ಭಾಷೆಯ ಒಟ್ಟಾರೆ ಮೌಲ್ಯ ವೃದ್ಧಿಯಾಗಲಿದ್ದು, ಮಾದರಿ ಭಾರತೀಯ ಭಾಷೆಯನ್ನು ಕಾಣಬಹುದು. ಅಕ್ಷರಗಳ ಪರಿಷ್ಕರಣೆಯಲ್ಲಿ ಎಲ್ಲಾ ಅಕ್ಷರಗಳು ಹ್ರಸ್ವದಲ್ಲಿರಬೇಕು, ಲಿಪಿಗಳನ್ನು ಒತ್ತಕ್ಷರಗಳ ಕ್ಲಿಷ್ಟತೆಯಿಂದ ಮುಕ್ತಮಾಡಿ ಸರಳಗೊಳಿಸಬೇಕು. ಇದರಿಂದ ಮೂಲಾಕ್ಷರಗಳ ಒಟ್ಟು ಸಂಖ್ಯೆ ೫೨ ರಿಂದ ೨೮ಕ್ಕೆ ಇಳಿಯುತ್ತದೆ. ಉದಾ: ಸ್ವರಾಕ್ಷರಗಳು ೧೪ ರಿಂದ ೫ ಮತ್ತು ವ್ಯಂಜನಾಕ್ಷರಗಳು ೩೮ ರಿಂದ ೨೩ ಮಾತ್ರ. ಈ ರೀತಿಯ ಅಕ್ಷರಗಳ ಕಡಿತದಿಂದ ಬರವಣಿಗೆಯು ಸರಳವೂ, ಸುಲಲಿತವೂ ಮತ್ತು ನೋಡುವುದಕ್ಕೆ ಬಹಳ ಆಕರ್ಷಕವಾಗಿ ಕಾಣುತ್ತದೆ ಎನ್ನುತ್ತಾರೆ. ಇಂತಹ ಒಂದು ಬದಲಾವಣೆಯಿಂದ ಭಾರತೀಯ ಎಲ್ಲಾ ಭಾಷೆಗಳಲ್ಲಿಯೂ ಏಕರೂಪತೆಯನ್ನು ತರಬಹುದು ಎಂದಿದ್ದಾರೆ.

ಪಠ್ಯಕ್ರಮ ಹತ್ತೆಂಟು ಮಜಲು ಹಲವು ಗೋಜಲು ಎನ್ನುವ ಲೇಖನವನ್ನು ವಿಜಯಕರ್ನಾಟಕ ಪತ್ರಿಕೆಯಲ್ಲಿ ಟಿ.ಎಂ. ಕುಮಾರ ಇವರು ಪ್ರಕಟಿಸಿದ್ದಾರೆ. ರಾಷ್ಟ್ರೀಯ ಪಠ್ಯಕ್ರಮವನ್ನು ರೂಪಿಸುವ ಬಗ್ಗೆ ಕೇಳಿಬರುತ್ತಿರುವ ಮಾತುಗಳನ್ನು ಮತ್ತು ಈ ಕುರಿತು ಪ್ರಯತ್ನಗಳು ಸಾಗಿಬಂದ ಹಾದಿ ಯಾವುದು ಹಾಗೂ ಪಠ್ಯಕ್ರಮ ಪರಿಚಯಿಸುವುದರ ಹಿಂದಿನ ತೊಳಲಾಟಗಳೇನು ಎಂಬ ವಿಷಯಗಳನ್ನು ಕುರಿತು ಚರ್ಚಿಸಿದ್ದಾರೆ.

ಗಡಿಯಲ್ಲಿ ಭಾಷಿಕ ಅಸ್ಮಿತೆ ಸಾಫಲ್ಯ-ವೈಫಲ್ಯ ಎಂಬ ಲೇಖನವನ್ನು ಡಿ.ಎಸ್. ಚೌಗಲೆಯವರು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಭಾಷಾವಾರು ಪ್ರಾಂತ್ಯಗಳ ರಚನೆಯಾದ ಮೇಲೆ ಗಡಿಯಲ್ಲಿರುವ ಪ್ರದೇಶಗಳು ಎರಡೆರಡು ಭಾಷೆಗಳ ಬಳಕೆಯಿಂದ ಎದುರಿಸುವ ಸಮಸ್ಯೆಗಳನ್ನು ಕುರಿತು ವಿವರಿಸಿದ್ದಾರೆ.

ಸರಕಾರವೆ ಶಿಕ್ಷಣ ನೀಡುವುದೋ? ನಾವೇ ಮೌಲ್ಯ ಬಿಸಾಡಿ ಖರಿದಿಸುವುದೋ? ಎಂಬ ಹರ್ಷವರ್ಧನ ವಿ. ಶೀಲವಂತ ರವರು ವಿಜಯಕರ್ನಾಟಕ ಪತ್ರಿಕೆಗೆ ನೀಡಿದ ಲೇಖನದಲ್ಲಿ ಬೋಧಕರನ್ನು ಸರಕಾರ ಯಾವ ರೀತಿಯಾಗಿ ಪರಿಗಣಿಸಲ್ಪಡುತ್ತಿದೆ ಎನ್ನುವುದನ್ನು ಕುರಿತು ವಿಶ್ಲೇಷಿಸಿದ್ದಾರೆ.

ಪ್ರಶ್ನೆ: ವಿದ್ಯಾರ್ಥಿ-ಬೋಧಕ ದಿನಾಂಕ ೨೩-೧೦-೨೦೧೦ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ಈ ಲೇಖನದಲ್ಲಿ ಪದ್ಯಾಣ ಪರಮೇಶ್ವರ ಭಟ್ ರವರು ಬೋಧಕ ಮತ್ತು ವಿದ್ಯಾರ್ಥಿಯ ಮಧ್ಯೆ ಸಂಪರ್ಕ ಸಾಧಿಸುವ, ಬೆಳೆಸುವ ಪ್ರಮುಖ ಸಾಧನವೆ ಪ್ರಶ್ನೆ ಎನ್ನುತ್ತಾರೆ. ಬೋಧನೆಯ ಸಂದರ್ಭದಲ್ಲಿ ಪ್ರಶ್ನೆಗಳು ಸಂಶಯಾಸ್ಪದವಾಗಿರಕೂಡದು. ಪ್ರಶ್ನೆ ಅರ್ಥವಾಗಿ ವಿದ್ಯಾರ್ಥಿಗಳು ಉತ್ತರಿಸುವ ರೀತಿಯಲ್ಲಿ ಪ್ರಶ್ನೆಗಳಿರಬೇಕು ಎನ್ನುತ್ತಾರೆ. ಹಾಗೂ ಬೋಧಕರು ಎರಡನೇ ಬಾರಿಗೆ ವಿದ್ಯಾರ್ಥಿಯಾಗಿ ನಿರಂತರ ಅಧ್ಯಯನ ಶೀಲರಾಗಿರಬೇಕು. ಇದು ಶೈಕ್ಷಣಿಕ ಪ್ರಗತಿಯನ್ನು ಸಾಧಿಸುವ ಮಾರ್ಗ ಎನ್ನುತ್ತಾರೆ.

ಶೈಕ್ಷಣಿಕ ಗುಣಮಟ್ಟ ಗ್ರಾಮೀಣ ಶಿಕ್ಷಣಕ್ಕೆ ಕಾಯಕಲ್ಪ ಅಗತ್ಯ ಇದು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡ ಅಂಜನಾದ್ರಿಯವರ ಲೇಖನವಾಗಿದೆ. ಖಾಸಗಿ ಶಾಲೆಗಳಿಗಿಂತ ಸರಕಾರಿ ಶಾಲೆಗಳ ಶೈಕ್ಷಣಿಕ ಗುಣಮಟ್ಟ ಏಕೆ ಹಿಂದೆ ಬಿದ್ದಿದೆ ಎಂದರೆ ಸರಕಾರಿ ಶಾಲೆಗಳಲ್ಲಿ ಬಿಸಿಯೂಟ

ಯೋಜನೆ, ಸೈಕಲ್, ಪುಸ್ತಕ, ಸಮವಸ್ತ್ರ ವಿತರಣೆ, ಹೀಗೆ ಖರ್ಚು ಆಧಾರಿತ ಸರಕಾರಿ ಸ್ವಾಮ್ಯದ ಶಿಕ್ಷಣ ಕ್ಷೇತ್ರ ಸಂಪನ್ಮೂಲವನ್ನು ಅವಲಂಬಿಸಿದೆ. ಅದಕ್ಕಾಗಿ ಏಕರೂಪದ ಶಿಕ್ಷಣ ನೀತಿ ಜಾರಿಯಾಗಬೇಕು. ಖಾಸಗಿ ಶಾಲೆಗಳಲ್ಲಿ ಕಲಿಕಾ ಗುಣಮಟ್ಟ ಇದೆ. ಆದರೆ ಶುಲ್ಕ ನೀತಿಯು ಬೇರೆ ಬೇರೆಯಾಗಿದೆ. ಹಾಗೂ ಗ್ರಾಮಾಂತರ ಶಿಕ್ಷಕರು ಅವರವರ ಪ್ರದೇಶದಲ್ಲಿ ವಾಸ್ತವ್ಯ ಮಾಡಬೇಕು. ನೋಡಿಕಲಿ, ಮಾಡಿತಿಳಿ, ಎಂಬಂತಾಗಿ ಕಲಿಕಾ ಸಾಮಾಗ್ರಿಗಳ ವ್ಯವಸ್ಥೆಯಾಗಬೇಕು. ಗ್ರಂಥಾಲಯ, ಪ್ರಯೋಗಾಲಯಗಳ ವ್ಯವಸ್ಥೆಯಿರಬೇಕು. ಈ ಎಲ್ಲಾ ಅನುಕೂಲಗಳು ಖಾಸಗಿ ಶಾಲೆಗಳಿಗೆ ಮಾತ್ರ ಲಭ್ಯ. ಸರಕಾರಿ ಶಾಲೆಗಳಲ್ಲಿ ಇಲ್ಲದಿರುವುದರಿಂದ ಕಲಿಕಾ ಗುಣಮಟ್ಟ ಕುಸಿದಿದೆ ಆದಕಾರಣ ಏಕರೂಪದ ಶಿಕ್ಷಣ ಜಾರಿಯಾಗಬೇಕು ಎಂದು ಅಭಿಪ್ರಾಯಿಸಿದ್ದಾರೆ.

ಕಾದಿದೆ ಕನ್ನಡ ಶಾಲೆಗಳಿಗೆ ಇನ್ನಷ್ಟು ಗಂಡಾಂತರ ೧೨ ಜನೆವರಿ ೨೦೧೨ರಂದು ಸುಧಾಕರ ಎಸ್.ಶೆಟ್ಟಿಯವರ ಲೇಖನವು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡಿದೆ. ಸರಕಾರವು ಶೇಕಡಾ ೨೫ ರಷ್ಟು ಬಡ ಮಕ್ಕಳಿಗಾಗಿ ಖಾಸಗಿ ಶಾಲೆಗಳಲ್ಲಿ ಸೀಟನ್ನು ಕಾಯ್ದಿರಿಸಬೇಕು. ಅಷ್ಟು ಸೀಟುಗಳ ಶುಲ್ಕ ಸರಕಾರವೆ ಭರಿಸುತ್ತದೆ. ಇದರಿಂದ ಸರಕಾರಿ ಶಾಲೆಗಳಿಗೆ ಬರುವ ಮಕ್ಕಳ ಸಂಖ್ಯೆ ಕಡಿಮೆಯಾಗಿ ಸರಕಾರಿ ಶಾಲೆಗಳನ್ನು ಮುಚ್ಚುವ ಪರಿಸ್ಥಿತಿ ಬರುತ್ತದೆ. ಅದನ್ನು ಹೊರತು ಪಡಿಸಿ ಸರಕಾರಿ ಶಾಲೆಗಳನ್ನು ಖಾಸಗಿ ಶಾಲೆಯವರು ದತ್ತು ಪಡೆದುಕೊಂಡು ಗುಣಮಟ್ಟದ ಶಿಕ್ಷಣವನ್ನು ನೀಡಲಿ ಏಕೆಂದರೆ ಖಾಸಗಿ ಶಾಲೆಗಳಲ್ಲಿ ಎಲ್ಲಾ ರೀತಿಯ ಕಲಿಕಾ ಸೌಕರ್ಯವಿರುತ್ತದೆ ಎಂದಿದ್ದಾರೆ.

ಕಲಿಸಬೇಕಿದೆ ಕನ್ನಡಿಗರಿಗೆ ಅಪ್ಪಟ ಕನ್ನಡ ೫ನೇ ಜನವರಿ ೨೦೧೨ರಲ್ಲಿ ಸಿ.ಎನ್ ಕೃಷ್ಣಮಾಚಾರ್ ಅವರ ಲೇಖನವು ಪ್ರಜಾವಾಣಿಯಲ್ಲಿ ಪ್ರಕಟಗೊಂಡಿದ್ದು. ಕನ್ನಡ ಭಾಷೆಯ ಮೇಲೆ ತೆಲುಗು, ಮಲೆಯಾಳಿ, ಪಂಜಾಬಿ, ಉರ್ದು, ಗುಜರಾತಿ, ಬೆಂಗಾಲಿ ಅತಿ ಹೆಚ್ಚು ಎಂದರೆ ಇಂಗ್ಲೀಷ್ ಭಾಷೆ ಈ ಎಲ್ಲಾ ಭಾಷೆಗಳ ಪ್ರಭಾವದಿಂದಾಗಿ ಕನ್ನಡ ಭಾಷೆಯನ್ನು ಮಾತನಾಡುವಂತಹ ಕಿರಿಯರಿಂದ ಹಿರಿಯರವರೆಗೆ ಕನ್ನಡದ ಭಾಷೆಯ ಒಂದು ಪದವಾದರೆ ಇಂಗ್ಲೀಷ್ ಭಾಷೆಯ ಮತ್ತೊಂದು ಪದವನ್ನು ಸೇರಿಸಿ ಹೇಳುವವರೆಗೆ ಅವರಲ್ಲಿ ಯಾರಿಗೂ ಸಮಾಧಾನವೇ ಆಗುವದಿಲ್ಲ, ಆದಕಾರಣ ಕನ್ನಡಿಗರಿಗೆ ಮೊದಲು ಅಪ್ಪಟ ಕನ್ನಡ ಭಾಷೆಯನ್ನು ಕಲಿಸಬೇಕು, ಕಲಿಸುವ ಕನ್ನಡದಲ್ಲಿ ತನ್ನತನವಿರಲಿ ಬೇರಾವುದೆ ಭಾಷೆ ಸುಳಿಯಬಾರದು. ಮನೆಯ ಪರಿಸರದಲ್ಲಿ ಮೊದಲು ತಮ್ಮ ತಮ್ಮ ಮಕ್ಕಳೊಂದಿಗೆ ಕನ್ನಡ ಭಾಷೆಯಲ್ಲಿಯೇ ಮಾತನಾಡಿದಾಗ ಮಾತ್ರ ಕನ್ನಡ ಉಳಿಯುತ್ತದೆ ಎಂದಿದ್ದಾರೆ.

ಶಾಲೆಗಳನ್ನು ಮುಚ್ಚುವದೇ ಸುಧಾರಣೆಯಲ್ಲ ಡಾ.ಎಸ್.ಬಿ. ಜೋಗೂರ ಅವರ ಲೇಖನವು ೨ನೇ ನವೆಂಬರ್ ೨೦೧೧ರಲ್ಲಿ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡಿದೆ. ಫಲಿತಾಂಶದಲ್ಲಿ ಇಳಿಮುಖವಾಗಲು ಕಾರಣ ಕೇವಲ ಕಲಿಸುವವರು ಮಾತ್ರ ಕಾರಣವಾಗಿರದೇ ಆ ವಿದ್ಯಾರ್ಥಿಯ ಕೌಟುಂಬಿಕ ವಾತಾವರಣ, ಗೆಳೆಯರ ಬಳಗ, ಶೈಕ್ಷಣಿಕ ಪರಿಸರ, ಪಠ್ಯಕ್ರಮ, ಆಡಳಿತ ಮಂಡಳಿ, ಮೌಲ್ಯಮಾಪನದ ಕ್ರಮ, ಗ್ರಂಥಾಲಯ, ವಿದ್ಯಾರ್ಥಿಯ ಅಧ್ಯಯನದ ಕ್ರಮ ಮುಂತಾದವುಗಳು ಪ್ರಮುಖ ಕಾರಣವಾಗುತ್ತವೆ. ಎಲ್ಲದಕ್ಕೂ ಬೋಧಕರನ್ನೆ ಹೊಣೆಗಾರರನ್ನಾಗಿ ಮಾಡುವ ಮೂಲಕ ಗುಣಮಟ್ಟದ ಶಿಕ್ಷಣ ನಿರೀಕ್ಷಿಸುವುದು ತಪ್ಪು. ಅದಕ್ಕಾಗಿ ಶಾಲೆಗಳನ್ನು ಮುಚ್ಚುವ

ಬದಲು ಸರಕಾರಿ ಶಾಲೆಗಳಲ್ಲಿ ಸುಧಾರಣೆಯಾದಾಗ ಮಾತ್ರ ಕಲಿಕೆಯ ಗುಣಮಟ್ಟ ಹೆಚ್ಚಾಗುತ್ತದೆ ಎನ್ನುತ್ತಾರೆ.

ಮಾತೃಭಾಷೆ ಜೀವ ಉಳಿಸುವ ಹಾಲು ನಿರಂಜನಾರಾಧ್ಯ ವಿ.ಪಿ.ಯವರ ಲೇಖನ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡಿದೆ. ಸರಕಾರವೇ ಸರಕಾರಿ ಶಾಲೆಗಳಲ್ಲಿ ಆರನೇ ತರಗತಿಯಿಂದ ಇಂಗ್ಲೀಷ್ ಮಾಧ್ಯಮದಲ್ಲಿ ಬೋಧಿಸುವ ತೀರ್ಮಾನವನ್ನು ಕೈಗೊಂಡಿದ್ದರಿಂದ ಖಾಸಗಿ ಶಾಲೆಗಳು ಇದರ ಹೆಚ್ಚಿನ ಲಾಭವನ್ನು ಪಡೆದುಕೊಳ್ಳುತ್ತವೆ. ಜೀವನ ರೂಪಿಸಿದ ಮಾತೃಭಾಷೆಯನ್ನೆ ಮರೆತಂತೆ ಆಗುತ್ತದೆ. ಹಾಗಾಗಿ ೧೨ನೇ ತರಗತಿಯ ವರೆಗೆ ಮಾತೃಭಾಷೆಯಲ್ಲಿಯೇ ಬೋಧನೆ ಕಡ್ಡಾಯಗೊಳಿಸಬೇಕು ಎಂದಿದ್ದಾರೆ.

ಸರಕಾರಿ/ಖಾಸಗಿ ಶಾಲೆ ನಮಗೆ ದಕ್ಕಿದೆಯೇ ವಸ್ತುಸ್ಥಿತಿ? ಪ್ರಜಾವಾಣಿ ಪತ್ರಿಕೆಯ ಸಾಪ್ತಾಹಿಕ ಪುರಾವಣಿಯಲ್ಲಿ ಪ್ರಕಟಗೊಂಡ ಸುಮಂಗಲ ಅವರ ವಿಮರ್ಶಾ ಲೇಖನ ಇದಾಗಿದೆ. ಸರಕಾರಿ ಶಾಲೆ ಮತ್ತು ಖಾಸಗಿ ಶಾಲೆಯ ನಿಜವಾದ ವಸ್ತುಸ್ಥಿತಿ ಎಂದರೆ ಖಾಸಗಿ ಶಾಲೆಯಲ್ಲಿ ಎಲ್ಲಾ ರೀತಿಯ ಸೌಲಭ್ಯಗಳಿರುತ್ತವೆ. ಹಾಗೂ ಇಂಗ್ಲೀಷ್ ಶಿಕ್ಷಕರು ಇರುತ್ತಾರೆ. ಆದರೆ ಸರಕಾರಿ ಶಾಲೆಗಳಲ್ಲಿ ಯಾವುದೇ ಸೌಲಭ್ಯಗಳು ಇರುವುದಿಲ್ಲ. ಮತ್ತು ಇಂಗ್ಲೀಷ್ ಬೋಧನೆಯ ಸಮಸ್ಯೆ ಇರುವುದರಿಂದ ಜನರು ಹಳ್ಳಿಯಲ್ಲಿ ಸರಕಾರಿ ಶಾಲೆ ಇದ್ದರು ಪಟ್ಟಣಗಳಲ್ಲಿರುವ ಖಾಸಗಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳಿಸುತ್ತಾರೆ.

ಮಗುವಿನ ಭಾಷೆ ಮತ್ತು ನಾವು ನೀವು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡ ಗುರುಸ್ವಾಮಿಯವರ ಲೇಖನದಲ್ಲಿ ಭಾಷೆ ಚಿಂತನೆಗೆ, ಭಾವನೆಗೆ, ಅನುಭವಕ್ಕೆ ಆಕಾರ ಕೊಡುವ ಸಾಧನ. ಮಗುವಿನಲ್ಲಿ ಶೈಕ್ಷಣಿಕ ಪ್ರಗತಿಯಲ್ಲಿ ಭಾಷೆ ವಹಿಸುವ ಪಾತ್ರದ ಅರಿವು ಶಿಕ್ಷಕರಿಗೆ ಮಾತ್ರವೆ ಅಲ್ಲ ಪೋಷಕರಿಗೂ ಇರಬೇಕು. ಭಾಷಾ ಕಲಿಕೆಗೆ ಸಂಬಂಧಿಸಿದ ಬಾಹ್ಯ ವರ್ತನೆಗಳಲ್ಲಿ ಪ್ರಮುಖವಾದ ಸರಕಾರಿ ಶಾಲೆಗಳಲ್ಲಿ ವಂಚಿತರಾಗುತ್ತಿದ್ದಾರೆ. ಶೇಕಡಾ ೩೯ರಷ್ಟು ಮಕ್ಕಳು ಒಂದರಿಂದ ಬಂಬತ್ತರವರೆಗಿನ ಅಂಕಿಗಳನ್ನು ಕ್ರಮಬದ್ಧವಾಗಿ ಗುರುತಿಸುವುದಿಲ್ಲ ಎಂಬ ಅಂಶಗಳು ಸಮೀಕ್ಷೆಯಲ್ಲಿ ಬಹಿರಂಗವಾಗಿದೆ. ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿಸಿ ಆ ಮೂಲಕ ಶೇ. ೧೦೦ ಸಾಕ್ಷರತೆ ಸಾಧಿಸಲು ಎದುರು ನೋಡುತ್ತಿರುವ ಸರಕಾರ ಗುಣಮಟ್ಟದ ಶಿಕ್ಷಣದ ಬಗ್ಗೆ ಚಿಂತಿಸುವ ಕಾಲ ಬಂದಿದೆ ಎಂದಿದ್ದಾರೆ.

ಮಕ್ಕಳಿಗೆ ಬೇಕು ಭಾಷಾ ಕೌಶಲ್ಯ ೨೧-೫-೨೦೧೨ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾದ ಸಾ.ದು ಶಿವಮಲ್ಲಯ್ಯ ಸಾಸಲಾಪೂರ ರವರ ಲೇಖನ ಇದಾಗಿದೆ. ಭಾಷಾ ಕೌಶಲ್ಯ ಮಗುವಿನ ಶೈಕ್ಷಣಿಕ ಬೆಳವಣಿಗೆಯ ಮುಖ್ಯ ಹಂತ. ಆದರೆ ಈಗಿನ ಮಕ್ಕಳಿಗೆ ಸರಿಯಾಗಿ ಬರೆಯಲು ಬರುವುದಿಲ್ಲ. ಓದುವ ಹವ್ಯಾಸವು ಇಲ್ಲ ಎಂಬ ಟೀಕೆ ಸರ್ವೆಸಾಮಾನ್ಯ. ಇದರ ಹೊಣೆಯನ್ನು ಬೋಧಕರು ಹೋರಬೇಕಾಗುತ್ತದೆ ಎನ್ನುತ್ತಾರೆ.

ಗ್ರಹಿಕೆಗೆ ಇಂಗ್ಲೀಷ್; ವಿಷಯ ಜ್ಞಾನಕ್ಕೆ ಕನ್ನಡ ೨೧-೬-೨೦೧೨ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡ ಯು.ಆರ್ ಅನಂತಮೂರ್ತಿ ರವರ ಲೇಖನ. ವರ್ತಮಾನದಲ್ಲಿ ಸರಕಾರಿ ಶಾಲೆಗಳಿಗೆ ಸೇರುವ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿರುವುದರಿಂದ ಸರಕಾರ ನೇಮಿಸಿರುವ

ಶಿಕ್ಷಕರಿಗೆ ಕೆಲಸವಿಲ್ಲದಂತಾಗಿ ಹಲವು ಶಿಕ್ಷಕರಿಗೆ ಕೆಲಸ ಮಾಡಿಸಿಕೊಳ್ಳದೇ ಸಂಬಳ ಕೊಡಬೇಕಾದ ಪರಿಸ್ಥಿತಿ ಬಂದಿದೆ. ಇಂತಹ ಸಮಸ್ಯೆಯ ಸ್ವರೂಪ ಕುರಿತು ಖಾಸಗಿ ಶಾಲೆ ಮತ್ತು ಸರಕಾರಿ ಶಾಲೆಗಳ ಕ್ಷೇತ್ರ ಅಧ್ಯಯನ ಕೈಗೊಂಡಾಗ ತಿಳಿದು ಬಂದ ನಿಜಸಂಗತಿ ಎಂದರೆ ಶಿಕ್ಷಕರಾಗಿ ಸೇವೆ ಸಲ್ಲಿಸಲು ಬೇಕಾಗುವಂತ ಕನಿಷ್ಠ ಮಟ್ಟದ ಅರ್ಹತೆಯನ್ನು ಹೊಂದದ ಶಿಕ್ಷಕರು ಖಾಸಗಿ ಶಾಲೆಗಳಲ್ಲಿದ್ದಾರೆ. ಆದರೂ ಜನರು ಇಂಗ್ಲೀಷ್ ವ್ಯಾಮೋಹಕ್ಕೆ ಒಳಗಾಗಿ ಸರಕಾರಿ ಶಾಲೆಗಳಿಗೆ ಕಳುಹಿಸದೆ ಖಾಸಗಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸುತ್ತಿದ್ದಾರೆ. ಇಂಗ್ಲೀಷ್ ಎನ್ನುವುದು ಕೇವಲ ಗ್ರಹಿಸಿಕೊಳ್ಳುವುದಕ್ಕೆ ಮಾತ್ರ. ವಿಷಯದ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಕನ್ನಡ ಭಾಷೆಯ ಕಲಿಕೆಯ ಅಗತ್ಯ ಇದೆ ಎನ್ನುತ್ತಾರೆ.

ಸುಧಾರಣೆ ಕಾಣದ ಪೂರ್ವ ಪ್ರಾಥಮಿಕ ಶಿಕ್ಷಣ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡ ಡಿ. ಸಿ. ನಂಜುಂಡರವರ ಲೇಖನದಲ್ಲಿ ಇಂದು ಉನ್ನತ ಶಿಕ್ಷಣಕ್ಕೆ ಮಾತ್ರ ಆದ್ಯತೆ ನೀಡುತ್ತ ಪೂರ್ವ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯನ್ನು ಕೇಳುವವರೇ ಇಲ್ಲದಂತಾಗಿದೆ. ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಒಂದು ಮೂಲಭೂತ ಹಕ್ಕನ್ನಾಗಿ ಪರಿಗಣಿಸಲು ಸರಕಾರಗಳು ಚಿಂತಿಸಬೇಕಾಗಿದೆ ಎನ್ನುತ್ತಾರೆ.

ಸರಕಾರಿ ಶಾಲೆ ಬೇಡವಾಗುವುದೇಕೆ? ದಿನಾಂಕ ೬-೨-೨೦೧೨ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡ ಡಾ.ಚಂದ್ರಶೇಖರ ದಾಮ್ಲೆಯವರ ಲೇಖನದಲ್ಲಿ ಸರಕಾರಿ ಶಾಲೆ ಬೇಡವಾಗುದಕ್ಕೆ ಇಂಗ್ಲೀಷ್ ಕಲಿಕೆ ಇಲ್ಲದಿರುವುದು ಅಷ್ಟೆ ಅಲ್ಲ ಸರಕಾರಿ ಶಾಲೆ ಬೇಡವೆನಿಸುವುದಕ್ಕೆ ಪಠ್ಯಕ್ರಮದ ವೈಫಲ್ಯವು, ಮಕ್ಕಳೊಂದಿಕೆ ಸಂವಹನಕ್ಕೆ ಅಗತ್ಯವಿರುವಷ್ಟು ಬೋಧಕರು ಇಲ್ಲದಿರುವುದು ಕಾರಣವಾಗಿದೆ. ಕಡಿಮೆ ಸಂಖ್ಯೆಯ ಬೋಧಕರಿರುವ ಶಾಲೆಗಳಲ್ಲಿ ಒಂದನೇ, ಎರಡನೇ ತರಗತಿಯ ಮಕ್ಕಳನ್ನು ಒಂದೇ ಕೋಣೆಯಲ್ಲಿ ಹಾಕಿ ಸುಮ್ಮನೆ ಕುಡಿಸುವುದು ಬೇರೆ ತರಗತಿಗಳಿಗೆ ಪಾಠ ಬೋಧಿಸುವದು. ಹೀಗಾಗಿ ಬುನಾದಿ ಕಲಿಕೆಯಲ್ಲಿ ಕಲಿಕಾರ್ಥಿಗಳು ಸಮಸ್ಯೆ ಎದುರಿಸಿವಂತಾಗಿದೆ. ಅದಕ್ಕಾಗಿ ಖಾಸಗಿ ಶಾಲೆಗಳತ್ತ ಪಾಲಕರು ಆಸಕ್ತಿ ತೋರುತ್ತಿದ್ದಾರೆ. ಎಂಬ ಅಂಶವನ್ನು ಪ್ರಸ್ತಾಪಿಸಿದ್ದಾರೆ.

(ಪಠ್ಯವಿವಾದ) ಪಠ್ಯ ರಾಜಕೀಯ ೪-೨-೨೦೧೨ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡ ಲೇಖನ. ಇದರ ಲೇಖಕರು ಸಾರ್ವಜನಿಕ ಶಿಕ್ಷಣ ಇಲಾಖೆ ನಿವೃತ್ತ ನಿರ್ದೇಶಕರು ಹೆಸರು ಹೇಳಿಲ್ಲ. ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು ೨೦೦೦ನೆಯ ಇಸ್ವಿಯಲ್ಲಿ ಪಠ್ಯಕ್ರಮ ಕುರಿತು ಪ್ರಕಟಗೊಂಡ ನಂಬಿಕೆಗಳು ಮಣ್ಣು ಪಾಲಾಗುವುದಕ್ಕೆ ಬಿಜೆಪಿ ಸರಕಾರವೆ ಕಾರಣ. ಏಕೆಂದರೆ ತನಗೆ ಇಷ್ಟ ಬಂದಂತೆ ೨೦೦೫ರಲ್ಲಿ ನೂತನ ಪಠ್ಯಪುಸ್ತಕ ರಚನೆಗೆ ಮುಂದಾಯಿತು. ಇದರಲ್ಲಿ ಪಠ್ಯಪುಸ್ತಕ ರಚನಾಕಾರರು ಮಾಹಿತಿ ತುರುಕಿದ್ದಾರೆ ಹೊರತು ಜ್ಞಾನವಲ್ಲ. ಎಲ್ಲವನ್ನು ಏಕಕಾಲಕ್ಕೆ ಹೇಳುವ ತವಕ, ಬಹಳ ಬೋಧಿಸುವುದು, ಕಲಿಕೆ ಮಾತ್ರ ಕಡಿಮೆ. ಇದಕ್ಕೆ ಪರೀಕ್ಷೆಗಳ ವೈಭವಿಕರಣಕ್ಕೆ ಪಠ್ಯಪುಸ್ತಕ ಕೊಡುಗೆ ನೀಡಿದಂತಿವೆ.

ಭಾಷಾವಲೋಕನ-೨ (ಆಳ-ನಿರಾಳ) ೧-೭-೨೦೧೧ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡ ಕೆ.ವಿ ತಿಮಲೇಶರವರ ಲೇಖನದಲ್ಲಿ ಎಲ್ಲಾಭಾಷೆಗಳೂ ಮೂಲತಃ ಒಂದೇ ಭಾಷೆಯಿಂದ ಹುಟ್ಟಿದುವು ಎಂಬ ಕಲ್ಪನೆ ಕೆಲವರಲ್ಲಿದೆ. ಉದಾ: ಎಲ್ಲಾ ಭಾಷೆಗಳಿಗೂ

ಸಂಸ್ಕೃತವೇ ಮೂಲವೆಂದು ಕೆಲವರ ಅಂಬೋಣ. ಆದರೆ ಇದು ಅವರ ಸಂಸ್ಕೃತಾಭಿಮಾನಕ್ಕೆ ಸೇರಿದ ಸಂಗತಿಯಲ್ಲದೇ ಇದಕ್ಕೆ ಯಾವ ಆಧಾರವೂ ಇಲ್ಲ. ಭಾಷಾ ಅಧ್ಯಯನವೂ ಭಾಷೆಯೊಂದರ ರಚನೆ ಹೇಗಿದೆ ಎಂದು ಪರಿಶೀಲಿಸುವುದು ಒಂದು ರೀತಿಯ ಅಧ್ಯಯನ. ನೆರೆಕೆರೆಯ ಭಾಷೆಗಳು ಯಾವುವು? ಗಡಿನಾಡುಗಳಲ್ಲಿ ಅದರ ರೂಪ ಮತ್ತು ಬಳಕೆ ಹೇಗಿದೆ? ಅದರ ಒಳ ಪ್ರಭೇದಗಳು ಯಾವುವು? ಶಿಕ್ಷಣ ಮತ್ತು ಮಾಧ್ಯಮಗಳಲ್ಲಿ ಪ್ರಚಲಿತವಿರುವ ಪ್ರಭೇದ ಯಾವುದು? ಆಡುನುಡಿಗೂ ಬರಹದ ಭಾಷೆಗೂ ಇರುವ ಅಂತರ ಎಷ್ಟು ಮಟ್ಟಿನದು? ಅರ್ಥಾತ್ ಈ ವ್ಯತ್ಯಾಸ ದ್ವಿಭಾಷಿಕತ್ವಕ್ಕೆ ಎಡೆಮಾಡಿದೆಯೇ ಇತ್ಯಾದಿ ಅಂಶಗಳನ್ನು ಈ ಲೇಖನ ಒಳಗೊಂಡಿದೆ.

ಪೂರ್ವ ಪ್ರಾಥಮಿಕ ಶಿಕ್ಷಣ ಹೀಗಿರಬೇಕು ೨೧-೮-೨೦೧೧ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟಗೊಂಡ ಯು.ಎಸ್.ಸಂಗನಾಳ ಮಠರವರ ಲೇಖನ ಮಗುವಿಗೆ ಕಥೆ ಹೇಳಬೇಕು. ಚಿಕ್ಕ ಕಥೆಗಳನ್ನು ಹೇಳುವ, ಮಹಾಪುರುಷರ ಬಗ್ಗೆ ಹೇಳುವ ಕತೆಯನ್ನು ಬೋಧಕರು ಕರಗತ ಮಾಡಿಕೊಳ್ಳಬೇಕು. ಮತ್ತು ಹಾಡು, ನೃತ್ಯ, ಶಿಶುಗೀತೆಗಳನ್ನು ಹೇಳಿಕೊಡುವುದರ ಜೊತೆಗೆ ಕನ್ನಡ-ಆಂಗ್ಲ-ಹಿಂದಿ ಅಕ್ಷರಗಳ ಕಲ್ಪನೆಯನ್ನು ಮೂಡಿಸಬೇಕು. ಮಗು ಯಾವ ಜಾತಿ ಮತ ಪಂಥಕ್ಕೆ ಸೇರಿದ್ದರು ಪ್ರತಿಯೊಂದು ಮಗುವನ್ನು ಗೌರವಿಸಬೇಕು ಎಂಬ ಅಂಶಗಳನ್ನು ಈ ಲೇಖನ ಒಳಗೊಂಡಿದೆ. ಬೋಧಕರು ವಿವರಿಸುತ್ತಾರೆ, ಅದಮ ಬೋಧಕರು ದೂರುತಾರೆ. 'ವಿದ್ಯಾಧನಂ ಸರ್ವಧನಂ ಪ್ರಧಾನಂ' ಸೂಕ್ತಿಗೆ ಪಾತ್ರನು ಉತ್ತಮ ಬೋಧಕರಾಗಿರುತ್ತಾರೆ. ಎಂದು ಅಭಿಪ್ರಾಯಿಸಿದ್ದಾರೆ.

ನಿರಂತರ ಸಹಪಠ್ಯ ಚಟುವಟಿಕೆಗಳು ಶಿಕ್ಷಕರ ಮತ್ತು ಕ್ಷೇತ್ರ ಮಟ್ಟದ ಅಧಿಕಾರಿಗಳ ಕೈಪಿಡಿ. ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಸರ್ವ ಶಿಕ್ಷಣ ಅಭಿಯಾನ-ಕರ್ನಾಟಕ ಇವರು ಪ್ರಕಟಿಸಿರುವ ಈ ಸಂಚಿಕೆಯಲ್ಲಿ ಕಲಿಕೆ ಮತ್ತು ಬೋಧನೆಯಲ್ಲಿ ಸಹಪಠ್ಯ ಚಟುವಟಿಕೆಗಳು ಹೇಗೆ ಮಹತ್ವವಾದವು ಎಂದು ವಿವರಿಸಲಾಗಿದೆ.

ಕನ್ನಡ ಉಳಿಯುವುದೇ? ನಮ್ಮ ಕನ್ನಡ ಸಂಚಿಕೆ ೧೧ರಲ್ಲಿ ಕೆ.ವಿ ನಾರಾಯಣರವರು ಅವರು ಬಾಷೆಗಳು ನಾಶವಾಗಲು ಹಲವಾರು ಕಾರಣಗಳಿರುತ್ತವೆ. ಒಂದು ಭಾಷೆಯನ್ನಾಡುವ ಜನರು ತಮ್ಮ ಭಾಷೆಯನ್ನು ಬಿಟ್ಟು ಮತ್ತೊಂದು ಭಾಷೆಯ ಪ್ರಭಾವಕ್ಕೆ ಒಳಗಾಗಿ ಮುಂದೊಂದು ದಿನ ತಮ್ಮ ಭಾಷೆಯನ್ನು ತಮಗೆ ಉಳಿಸಿಕೊಳ್ಳಲು ಆಗದೆ ಹೊಗಬಹುದು. ಅಂತಹ ಒಂದು ಪರಿಸ್ಥಿತಿ ಕನ್ನಡ ಭಾಷೆಗೆ ಬಂದೊದಗಬಹುದು ಎಂದಿದ್ದಾರೆ.

ಬರವಣಿಗೆ ದೋಷಗಳು ನಮ್ಮ ಕನ್ನಡ ಸಂಚಿಕೆ ೩೪ರಲ್ಲಿ ಕೆ.ವಿ ನಾರಾಯಣರವರ ಲೇಖನ ಕನ್ನಡ ಬರವಣಿಗೆಯಲ್ಲಿ ಮತ್ತು ಮುದ್ರಣದಲ್ಲಿ ಹಲವಾರು ಕಾಗುಣಿತ ದೋಷಗಳು ಸಂಭವಿಸುತ್ತವೆ. ಪ್ರಮುಖವಾಗಿ ಮಹಾಪ್ರಾಣ 'ಧ' ಕಾರವನ್ನು ಹೆಚ್ಚಾಗಿ ಅಲ್ಪಪ್ರಾಣವಾಗಿ ಬಳಸುತ್ತಿದ್ದರು. ಅದನ್ನು ಗಮನಿಸದೆ ಹೋಗುವ ಪ್ರಸಂಗಗಳು ಹೆಚ್ಚಾಗುತ್ತಿವೆ ಎನ್ನುತ್ತಾರೆ.

ನಮ್ಮ ಕನ್ನಡ ೬೦ನೆ ಸಂಚಿಕೆಯಲ್ಲಿ ವಿಶೇಷ ಸಂಚಿಕೆಯಲ್ಲಿ 'ಕನ್ನಡ ಕಲಿಕೆ' ಕೆ.ವಿ.ನಾರಾಯಣ, 'ಭಾಷಾ ಶಿಕ್ಷಣದ ಆಯಾಮಗಳು' ಡಿ. ಪಾಂಡುರಂಗಬಾಬು, 'ಭಾಷಾ ಬೋಧನೆ ಮತ್ತು

ಕಲಿಕೆಯ ಸಂದರ್ಭದಲ್ಲಿ ಓದು' (ಪ್ರಾಥಮಿಕ ಹಂತದ ಶಿಕ್ಷಣವನ್ನು ಅನುಲಕ್ಷಿಸಿ) ಅಶೋಕಕುಮಾರ ರಂಜೇರೆ 'ಪ್ರಾಥಮಿಕ ಶಾಲೆಗಳಲ್ಲಿ ಬರಹದ ಕೌಶಲ್ಯ ಉತ್ತಮ ಪಡಿಸುವಿಕೆ', 'ಬೋಧನೆಗೆ ಸಲಹೆಗಳು' ಸಾಂಬಮೂರ್ತಿ, 'ಕನ್ನಡ ಬಾಷೆ ಕಲಿಕೆ ಮತ್ತು ಬೋಧನೆ ಅನ್ಯಭಾಷಿಕ ಮಕ್ಕಳನ್ನು ಅನುಲಕ್ಷಿಸಿ' ಪಿ.ಮಹಾದೇವಯ್ಯ, 'ಕನ್ನಡ ಪಠ್ಯಪುಸ್ತಕ ರಚನೆಯಲ್ಲಿನ ಸಮಸ್ಯೆಗಳು' ಪಿ.ಮಹಾದೇವಯ್ಯ.) ಈ ಎಲ್ಲಾ ಲೇಖನಗಳಲ್ಲಿ ಲೇಖಕರು ಕಲಿಕೆ, ಬೋಧನೆ, ಬರವಣಿಗೆ, ಪಠ್ಯಪುಸ್ತಕಗಳಲ್ಲಿನ ಸಮಸ್ಯೆಗಳನ್ನು ಕುರಿತು ಚರ್ಚೆ ಮಾಡಿದ್ದಾರೆ.

ಭಾವೈಕ್ಯ ಬಂಧ (ಸ್ಮರಣ ಸಂಚಿಕೆ) ಕಲಬುರ್ಗಿ ಜಿಲ್ಲಾ ೧೧ನೇಯ ಸಾಹಿತ್ಯ ಸಮ್ಮೇಳನದಲ್ಲಿ ಬಿಡುಗಡೆಗೊಂಡ ಈ ಸಂಚಿಕೆಯಲ್ಲಿ 'ಯಾದಗಿರಿ ಕನ್ನಡ' ನಾಗೇಂದ್ರ ಮಸೂತಿಯವರ ಲೇಖನ. ಯಾದಗಿರಿ ಕನ್ನಡದಲ್ಲಿರುವ ಧ್ವನಿ, ಧ್ವನಿಮಾ ವ್ಯತ್ಯಾಸವನ್ನು ಗುರುತಿಸಿದ್ದಾರೆ. **ಅ** ಕಾರದಿಂದ **ಳ** ಕಾರದವರೆಗಿನ ಧ್ವನಿ ಶಿಷ್ಟ ಭಾಷೆಗಿಂತ ಹೇಗೆ ಭಿನ್ನವಾಗಿದೆ ಎಂಬುದನ್ನು ಗಮನಿಸಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾಲಯವು ಎಂ.ಎಡ್.ಪದವಿಗಾಗಿ ಪ್ರಕಟಿಸಿರುವ ಪಠ್ಯಪುಸ್ತಕಗಳು ಶೈಕ್ಷಣಿಕ ನಾಯಕರ ಇತಿಹಾಸ ಇದರಲ್ಲಿ ಫ್ರೋಬೆಲ್ ಮಾಂಟೋಸೋರಿ ರೋಸೋ, ಪೆಸ್ಟೋಲಾಜಿ, ಠಾಗೋರ ಅರಬಿಂದೋ ವಿವೇಕಾನಂದ, ಮಹಾತ್ಮಗಾಂಧಿ, ಜಾಕೀರ ಹುಸೇನ ಮತ್ತು ರಾಧಾಕೃಷ್ಣರವರುಗಳ ಶಿಕ್ಷಣದಲ್ಲಿ ಕಲಿಕೆ ಮತ್ತು ಬೋಧನೆಯನ್ನು ಕುರಿತು ಹೇಳಿರುವ ಅಂಶಗಳನ್ನು ಒಳಗೊಂಡಿದೆ. **ಶಿಕ್ಷಣದ ಮನೋವಿಜ್ಞಾನ** ಕಲಿಕಾ ಸಿದ್ಧಾಂತಗಳಾದ ಸಂಜ್ಞಾತ್ಮಕ, ಗೆಸ್ಟಾ ಸಿದ್ಧಾಂತ, ಅನಪೇಕ್ಷಣಾ ಕಲಿಕೆ, ಮಾನವತವಾದಿ ಕಲಿಕೆಯ ದೃಷ್ಟಿಕೋನಗಳನ್ನು ಒಳಗೊಂಡಿದೆ. **ಶಿಕ್ಷಣದ ತಾತ್ವಿಕ ವಿಶ್ಲೇಷಣೆ** ಈ ಘಟಕದಲ್ಲಿ ಶಿಶುಕೇಂದ್ರಿತ ಮತ್ತು ವಿದ್ಯಾರ್ಥಿ ಕೇಂದ್ರಿದ ಕಲಿಕೆ, ಕಲಿಕಾ ಸಮಾಜ, ಜೀವನ ಪರ್ಯಂತ ಕಲಿಕೆ, ಮುಕ್ತ ಕಲಿಕೆ ಮಾಡುತ್ತಾ ಕಲಿಯುವಿಕೆ ಎಂಬಂತಹ ಅಂಶಗಳನ್ನು ಒಳಗೊಂಡಿದೆ.

೨.೪ ಸಂಶೋಧನಾ ಕೃತಿಗಳು

ಮಹಾಬಲೇಶ್ವರ ರಾವ್ ರವರ **ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಬೋಧನೆ** ಎಂಬ ಕೃತಿಯಲ್ಲಿ ಪ್ರಾಥಮಿಕ ಹಂತದಲ್ಲಿ ನಡೆಯುವ ಕನ್ನಡ ಬೋಧನೆಯ ವಿವಿಧ ಕ್ರಮಣಿಕೆಯನ್ನು ವಿವರಿಸಿದ್ದಾರೆ. ಅಲ್ಲದೇ ಕನ್ನಡ ಬೋಧನೆ ನಡೆಯುವ ಪ್ರಕ್ರಿಯೆಯನ್ನು ವಿವರಿಸಿದ್ದಾರೆ. ಪಠ್ಯಪುಸ್ತಕಗಳು ಹೇಗಿರಬೇಕು ಎಂಬುದನ್ನು ಈ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ. ಪಠ್ಯಪುಸ್ತಕದ ಮೂಲಕ ಭಾಷೆ ಕಲಿಯುವುದು ಅತ್ಯಂತ ಅವೈಜ್ಞಾನಿಕ ಎಂಬ ಮಾತಿದೆಯಾದರೂ ಶಿಕ್ಷಕರಿಗೆ ಮಾರ್ಗದರ್ಶಿಯಾಗಿ ಭಾಷಾ ಪಠ್ಯಪುಸ್ತಕಗಳು ತೀರಾ ಅನಿವಾರ್ಯ ಎಂದಿದ್ದಾರೆ. ಬೋಧಕರಿಗೆ ಭಾಷಾ ಸಾಮರ್ಥ್ಯಗಳನ್ನು ತಿಳಿಸಲು ಒಂದು ಸಾಧನವಿದ್ದಂತೆ. ಓದುಗಾರಿಕೆಯನ್ನು ನಿರ್ದೇಶಿಸುವ ದಿಕ್ಸೂಚಿ ಮಕ್ಕಳ ಮನಸ್ಸನ್ನು ಸೆಳೆಯುವಂತಹ ಪಠ್ಯಪುಸ್ತಕಗಳಿರಬೇಕು. ಪ್ರತಿಯೊಂದು ತರಗತಿಯ ಬೋಧನೆಯ ಉದ್ದೇಶಕ್ಕೆ ತಕ್ಕಂತೆ ಪುಸ್ತಕ ರಚಿತವಾಗಿರಬೇಕು ಎಂದಿದ್ದಾರೆ.

ಕನ್ನಡ ಭಾಷೆಯ ಕಲಿಕೆಯ ಸಮಸ್ಯೆಗಳು (ಪ್ರಾಥಮಿಕ ಶಾಲೆಯ ಉರ್ದುಭಾಷಿಕ ಮಕ್ಕಳನ್ನು ಅನುಲಕ್ಷಿಸಿ) ಇದು ಪಿ. ಮಹಾದೇವಯ್ಯ ಅವರ ಕೃತಿಯಾಗಿದೆ. ಉರ್ದುಭಾಷಿಕ ಮಕ್ಕಳು ಕನ್ನಡ ಭಾಷೆಯನ್ನು ಕಲಿಯುವಾಗ ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ಓದುವಾಗ ಮತ್ತು ಬರೆಯುವಾಗ ಯಾವ ರೀತಿಯ ಸಮಸ್ಯೆಯನ್ನು ಎದುರಿಸುತ್ತಾರೆ ಎಂಬುದನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ.

ಜಿ. ಪುರುಷೋತ್ತಮರವರ **ಕಲಿಕೆಯ ತೊಂದರೆಗಳು** ಎಂಬ ಪುಸ್ತಕದಲ್ಲಿ ವೈಜ್ಞಾನಿಕವಾಗಿ ಮಕ್ಕಳನ್ನು ಪರೀಕ್ಷಿಸಿದಾಗ ಕೆಲವು ಮಕ್ಕಳು ನರದೌರ್ಬಲ್ಯದಿಂದ ಓದಿನ ಕಲಿಕೆಯಲ್ಲಿ ಸಮಸ್ಯೆಯನ್ನು ಎದುರಿಸುತ್ತಾರೆ. ಮಿದುಳಿನ ಒಂದು ಕಡೆಯ ಭಾಗ (ಸಾಮಾನ್ಯವಾಗಿ ಎಡಭಾಗ) ಭಾಷೆಯ ಕೆಲಸದಲ್ಲಿ ಹೆಚ್ಚು ತೊಡಗುತ್ತದೆ. ಈ ಭಾಗಕ್ಕೆ ತೊಂದರೆಯಾದರೆ ಮಾತು ಮತ್ತು ಭಾಷೆಯನ್ನೇ ಅರಿಯದೆ ಹೋಗುತ್ತದೆ. ಮತ್ತು ಮಾನಸಿಕ ತೊಂದರೆಯಿಂದ, ಕಣ್ಣಿನ ತೊಂದರೆಯಿಂದಲೂ ಕಲಿಕೆಯಲ್ಲಿ ತೊಂದರೆ ಅನುಭವಿಸುತ್ತಾರೆ. ಎಂದರೆ ಒತ್ತಕ್ಷರಗಳು ಸರಳ–ಅಕ್ಷರಗಳು, ಒತ್ತಕ್ಷರಗಳಿಂದ ಕೂಡಿದ ಪದಗಳು, ವ್ಯಂಜನಾಕ್ಷರಗಳಿಂದ ಕೂಡಿದ ಪದಗಳು ಇತ್ಯಾದಿ. ಅದೇ ರೀತಿಯಾಗಿ ಬರವಣಿಗೆಯಲ್ಲಿಯೂ ಕಲಿಕಾರ್ಥಿಗಳಲ್ಲಿ ತೊಂದರೆಯನ್ನು ಎದುರಿಸುತ್ತಾರೆ ಎಂದು ಮಕ್ಕಳನ್ನು ಪರೀಕ್ಷೆಗೆ ಒಳಪಡಿಸಿ ಸ್ಪಷ್ಟಪಡಿಸಿದ್ದಾರೆ.

ಕೆ.ವಿ ನಾರಾಯಣರವರ **ಮತ್ತೆ ಭಾಷೆಯ ಸುತ್ತಮುತ್ತ** ಎಂಬ ಪುಸ್ತಕದಲ್ಲಿ ಮಕ್ಕಳ ಭಾಷೆಯ ಕಲಿಕೆಯ ವಿವಿಧ ಹಂತಗಳನ್ನು ವಿಶ್ಲೇಷಿಸಿದ್ದಾರೆ. ಅದರ ಜೊತೆಗೆ "ಶಾಲೆಯಲ್ಲಿ ಭಾಷೆ" ಎಂಬ ಲೇಖನದಲ್ಲಿ ಭಾಷೆಯನ್ನು ಕಲಿಸಲು ಹಾಕಿಕೊಂಡಿರುವ ಯೋಜನೆಗಳು ನಿಯಮಗಳು ಅವುಗಳ ಉದ್ದೇಶ, ಪಠ್ಯಕ್ರಮದ ಹಿನ್ನೆಲೆಯಲ್ಲಿ ಇರುವ ಗೊಂದಲಗಳನ್ನು ವಿವರಿಸುತ್ತಾರೆ. ಇದರಿಂದ ಆಗುವ ಪರಿಣಾಮವೇನು? ಜೊತೆಗೆ ಕಲಿಸುವ ಭಾಷೆ ಪಠ್ಯ ಬದಲಾವಣೆ ಹೊಂದುತ್ತದೆ. ಆದರೆ ಇನ್ನೂ ಬದಲಾಗಬೇಕು ಎಂದು ಅಭಿಪ್ರಾಯಪಡುತ್ತಾರೆ.

ಮಹಾಬಲೇಶ್ವರರಾವ್ ರವರು **ಶಿಕ್ಷಣ ಚಿಂತನೆ** ಎಂಬ ಪುಸ್ತಕದಲ್ಲಿ ಪಠ್ಯಪುಸ್ತಕಗಳಿಲ್ಲದೇ ಪಾಠ ಮಾಡಲು ಬರುವುದೇ ಇಲ್ಲ ಎಂಬ ಹಾಗೆ ನಮ್ಮ ಶಿಕ್ಷಣ ವ್ಯವಸ್ಥೆ ರೂಪಗೊಂಡಿದೆ. ಆದುದರಿಂದಲೇ ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಕೆಲವರು 'ಪಠ್ಯಪುಸ್ತಕ ಕೇಂದ್ರಿತ' ಪರೀಕ್ಷಾ ಆಧಾರಿತ ವ್ಯವಸ್ಥೆ ಎಂದು ಟೀಕಿಸುವುದು ಎಂದಿದ್ದಾರೆ. ಶಿಕ್ಷಣ ನೈತಿಕತೆಯನ್ನು ಮಕ್ಕಳಲ್ಲಿ ಬೆಳೆಸುವಂತಾಗಿ ಶಾಲಾ ಹಂತದಲ್ಲಿ ಶಿಕ್ಷಕರಿಗೆ ಸ್ವಾತಂತ್ರ್ಯ ಸಿಗುವಂತಹ ವ್ಯವಸ್ಥೆ ನಮ್ಮ ಶಿಕ್ಷಣ ರಂಗದಲ್ಲಿ ಆಗಬೇಕಿದೆ ಎಂದಿದ್ದಾರೆ.

ಬಿ.ಬಿ. ರಾಜಪುರೋಹಿತರವರ **ಭಾಷೆ ಮತ್ತು ಅರ್ಥಗಳ ಗುಟ್ಟು** ಎಂಬ ಪುಸ್ತಕದಲ್ಲಿ ವಚನಗಳ ಭಾಷೆ, ವ್ಯಾಕರಣ, ಕನ್ನಡ ವರ್ಣಗಳ ಸ್ವರೂಪ ಮತ್ತು ಲಕ್ಷಣಗಳನ್ನು ಕುರಿತು ವಿವರಿಸಿದ್ದಾರೆ. ಕನ್ನಡ ಭಾಷೆಯಲ್ಲಿ ಒಂದು ಅಕ್ಷರ ಒಂದು ವಾಕ್ಯಗಳಲ್ಲಿ ಕೂಡಿರುವಂತಹ ಒಟ್ಟಾರೆ ಅರ್ಥವನ್ನು ತಿಳಿಸಲಾಗಿದೆ. ಅಕ್ಷರವು ವರ್ಣಗಳ ಅಥವಾ ಧ್ವನಿಗಳ ಪೂರ್ಣತೆಯಾಗುವುದಿಲ್ಲ ಉದಾಹರಣೆ ಕ. ಮ. ಲ ಈ ಅಕ್ಷರಗಳ ಲ. ಕ. ಮ ಮ. ಕ. ಲ ಹೀಗೆ ಯಾವ ಕ್ರಮದಲ್ಲಿ ಹೊಂದಿಸಿದರೂ ಅರ್ಥ ಕೊಡದೆ 'ಕಮಲ' ಎಂದು ಹೊಂದಿಸಿದಾಗಲೇ ಅರ್ಥ ಕೊಡುತ್ತದೆ. ಅದೇ ರೀತಿ ವಾಕ್ಯ ಕೂಡ ಧ್ವನಿ, ಅಕ್ಷರ, ಪದಗಳಾನ್ನಾಗಿ ಗುರುತಿಸಿ ವಾಕ್ಯದ ಅರ್ಥಕ್ಕೆ ಹೋಗುವುದು ಮಕ್ಕಳ

ತಿಳುವಳಿಕೆಗಾಗಿ ಮಾತ್ರ ಎಂದಿದ್ದಾರೆ. ಮತ್ತು ವಚನಗಳ ಭಾಷೆಯಲ್ಲಿ ಕೆಲವು ಸ್ವರಗಳು ಪ್ರತ್ಯೇಕವಾಗಿ ಬಳಕೆಯಾಗಿರುವುದನ್ನು ಗುರುತಿಸಿದ್ದಾರೆ. ವಚನಕಾರರು ಸಂಧಿ ಇರುವ ಕಡೆಗಳಲೆಲ್ಲ ಸಂಧಿವಿಕಲ್ಪ ಮಾಡಿದ್ದನ್ನು ಗುರುತಿಸಿದ್ದಾರೆ. ಉದಾಹರಣೆ:– "ಅಪ್ಪುವಿನಲ್ಲಿ ಅದ್ದಿ" ಮತ್ತು ವಚನ ಸಾಹಿತ್ಯದ ಕಾಲದಲ್ಲಿಯೆ ಆ ಭಾಷೆಯ ಮೇಲೆಯೂ ಅನ್ಯ ಭಾಷೆಯ ಪ್ರಭಾವ ಆಗಿರುವುದನ್ನು ಗಮನಿಸಿದ್ದಾರೆ. ಉದಾಹರಣೆ. ಚಪ್ಪನ್ನದೇಶ ಬತ್ತಿಸರಾಗ ಇತ್ಯಾದಿ. ಹಾಗೂ ಕನ್ನಡದ ಬರವಣಿಗೆ ಸ್ವರೂಪವನ್ನು ಕುರಿತು ಹೀಗೆ ಹೇಳುತ್ತಾರೆ. ಸಾಮಾನ್ಯವಾಗಿ ಬರವಣಿಗೆಯ ರೂಪದಲ್ಲಿ ಇರುವ ಧ್ವನಿಗಳು ಉಚ್ಚರಣೆಯ ರೂಪದಲ್ಲಿ ಇರಲು ಸಾಧ್ಯವಿಲ್ಲ. ಉದಾಹರಣೆಗೆ ನೋಡುವುದಾದರೆ "ಒಂದೇ ಜಾತಿಯ ಧ್ವನಿಗಳಾದ 'ಪ್' ಮತ್ತು 'ಬ್' ಗಳು ಒಂದೇ ಪದದಲ್ಲಿ ಅಕ್ಕಪಕ್ಕ ಬರಲು ಸಾಧ್ಯವಿಲ್ಲವೆಂಬುದನ್ನು ಗುರುತಿಸಿದ್ದಾರೆ.

ಐ.ಎ. ಲೋಕಾಪುರ ರವರ **ಪ್ರೌಢ ಶಿಕ್ಷಣ ಹಾಗೂ ಶಿಕ್ಷಕನ ಕಾರ್ಯಗಳು** ಎಂಬ ಪುಸ್ತಕವೂ ಗಮನಿಸಿದಾಗ ಪ್ರೌಢ ಶಿಕ್ಷಣಾರ್ಥಿ ಮತ್ತು ಶಿಕ್ಷಣಾರ್ಥಿಗಳ ಭಾಷಾ ಬೋಧನೆಯ ನಡುವಿನ ವ್ಯತ್ಯಾಸವನ್ನು ಗುರುತಿಸಲು ಸಹಕಾರಿಯಾಗಿದೆ. ನಮ್ಮ ಒಟ್ಟು ಶಿಕ್ಷಣ ವ್ಯವಸ್ಥೆಯು ಒಬ್ಬ ಉತ್ತಮ ವಿದ್ಯಾರ್ಥಿಯನ್ನಾಗಿಸುವಲ್ಲಿ ವಿವಿಧ ಹಂತಗಳಲ್ಲಿ ಬೋಧನಾ ವ್ಯವಸ್ಥೆಯು ಜರಗುತ್ತದೆ. ಅವುಗಳೆಂದರೆ,

೧. ಪೂರ್ವ ಪ್ರಾಥಮಿಕ ಶಿಕ್ಷಣ

೨. ಪ್ರಾಥಮಿಕ ಶಿಕ್ಷಣ

೩. ಮಾಧ್ಯಮಿಕ ಅಥವಾ ಪ್ರೌಢ ಶಿಕ್ಷಣ

೪. ಪದವಿ ಪೂರ್ವ, ಪದವಿ ಶಿಕ್ಷಣ ಇತ್ಯಾದಿ

ಈ ಎಲ್ಲಾ ಹಂತಗಳು ಉತ್ತಮ ಕಲಿಕಾರ್ಥಿಯನ್ನಾಗಿಸುವ ರಂಗಮಂದಿರಗಳಾಗಿವೆ. ಅವುಗಳಲ್ಲಿ ಪ್ರೌಢಶಿಕ್ಷಣದ ಹಂತವು ಅತ್ಯಂತ ಪ್ರಮುಖವಾದದ್ದು. ಪ್ರೌಢಶಾಲೆಯಲ್ಲಿ ಭಾಷೆ ಕಲಿಸುವ ಮತ್ತು ಕಲಿಯುವ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿ, ಶಿಕ್ಷಕ ಹಾಗೂ ಪಠ್ಯಪುಸ್ತಕಗಳ ಮಧ್ಯದ ಅಂತರ್ ಸಂಬಂಧ ಸಂಪೂರ್ಣ ಪ್ರಕ್ರಿಯೆಯನ್ನು ಅರ್ಥಪೂರ್ಣಗೊಳಿಸುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತದೆ. ಒಟ್ಟಾರೆಯಾಗಿ ಬೋಧನೆ, ಬೋಧಕ, ಕಲಿಕಾರ್ಥಿಯನ್ನು ಕುರಿತ ಅಂಶಗಳನ್ನು ಈ ಕೃತಿಯಲ್ಲಿ ವಿವರಿಸಿದ್ದಾರೆ.

ಶಿಕ್ಷಣದ ಭಾಷೆ ಮತ್ತು ಬುದ್ಧಿವಂತಿಕೆ ಕೃತಿಯು ಚಿ. ವಿ. ಶ್ರೀನಾಥ ಶಾಸ್ತ್ರೀ, ಎನ್. ಎಸ್. ರಘುನಾಥ, ಜಿ. ಪುರುಷೋತ್ತಮ, ಸಿ. ಆರ್. ಚಂದ್ರಶೇಖರ್, ಜಿ. ರಾಮಕೃಷ್ಣ ಮೊದಲಾದವರ ಲೇಖನಗಳನ್ನು ಒಳಗೊಂಡಿದೆ. ಶಿಕ್ಷಣದ ಬಾಷೆ ಮತ್ತು ಬುದ್ಧಿವಂತಿಕೆ, ಭಾರತದಲ್ಲಿ ಇಂಗ್ಲೀಷ್ ಭಾಷೆಯ ಸ್ಥಾನ ಈ ಶತಮಾನದ ಪ್ರಶ್ನೆ. ಮಗು ಯಾವಾಗ ಎರಡು ಭಾಷೆಯನ್ನು ಕಲಿಯಬೇಕು? ಬೆಳೆಯುವ ಮಗು, ಭಾಷೆ ಮತ್ತು ಶಿಕ್ಷಣ, ಪ್ರಾಥಮಿಕ ಶಿಕ್ಷಣದ ಸುಧಾರಣೆ, ಕುರಿತಂತಹ ವಿಚಾರಗಳನ್ನು ವಿವರಿಸಿದ್ದಾರೆ.

ಭಾಷೆ ಮತ್ತು ಶಿಕ್ಷಣ ಅಶೋಕಕುಮಾರ ರಂಜೇರೆ ಅವರ ಈ ಕೃತಿಯು ಪ್ರಮುಖವಾಗಿ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯನ್ನು ಕುರಿತು ಪ್ರತಿಬಿಂಬಿಸುತ್ತದೆ. ಹಾಗೂ ಪ್ರಾಥಮಿಕ ಶಿಕ್ಷಣದ ಸಮಸ್ಯೆಗಳು, ಪ್ರಾಥಮಿಕ ಶಿಕ್ಷಣದ ಭಾಷಾ ಬೋಧನೆ, ಭಾಷಾ ಕಲಿಕೆ ಸಂದರ್ಭದಲ್ಲಿ ಭಾಷಾ ಬೋಧನೆ ಮತ್ತು ತಂತ್ರಜ್ಞಾನಗಳ ಕುರಿತು ಲೇಖನಗಳ ಮೂಲಕ ಪ್ರಾಥಮಿಕ ಶಿಕ್ಷಣದ ಸ್ವರೂಪವನ್ನು ವಿವರಿಸಿದ್ದಾರೆ. ಪ್ರಾಥಮಿಕ ಕನ್ನಡ ಭಾಷಾ ಪಠ್ಯದಲ್ಲಿರುವ ತಪ್ಪುಗಳನ್ನು ಗುರುತಿಸಿದ್ದಾರೆ. ಬೋಧನೆ, ಕಲೆಯ ಸಮಸ್ಯೆ ಇಂದಿನ ಬೋಧಕರಲ್ಲಿ ಇರುವುದನ್ನು ಗಮನಿಸಿ ಬೋಧಕ ವೃತ್ತಿಯೂ ಕೇವಲ ಸಂಬಳ ದೊರೆಯುವ ಹುದ್ದೆಯಾಗಬಾರದು ಎಂದಿದ್ದಾರೆ. ಸರಕಾರ ಮಕ್ಕಳಿಗೆ ಮಧ್ಯಾಹ್ನದ ಊಟ ಮತ್ತು ಹಾಲು ಕೊಡುವುದನ್ನು ಬಿಟ್ಟು ಮೂಲಭೂತ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಮುಂದಾಗಬೇಕು ಹಾಗೂ ಪ್ರಜ್ಞಾವಂತ ಶಿಕ್ಷಣ ತಜ್ಞರೊಂದಿಗೆ ಸಮಾಲೋಚಿಸಿ ಇಂದಿನ ಮಕ್ಕಳಿಗೆ ಯಾವ ಶಿಕ್ಷಣ ಕೊಡಬೇಕು ಎಂದು ಸೂಕ್ಷ್ಮವಾಗಿ ಪರಿಶೀಲಿಸಿ ಅದರ ಅಡಿಯಲ್ಲಿ ಶಿಕ್ಷಣ ಪದ್ಧತಿ ರೂಪಿಸಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ.

ಮಾತೃಭಾಷೆ ಕನ್ನಡ ತತ್ವ ಮತ್ತು ಬೋಧನಾ ಮಾರ್ಗ ಅನಸೂಯ ವಿ. ಪರಗಿ ಅವರ ಪುಸ್ತಕ ಇದಾಗಿದೆ. ಈ ಪುಸ್ತಕವು ಪ್ರೌಢ ಶಾಲೆಗೆ ಸಂಬಂಧಿಸಿದ ಕನ್ನಡ ಭಾಷೆಯ ಪಠ್ಯ ಪುಸ್ತಕಗಳು ಹೇಗಿರಬೇಕು ಎಂದು ವಿಶ್ಲೇಷಿಸಿದ್ದಾರೆ. ಶಾಲೆ, ಬೋಧಕ, ಕುಟುಂಬದ ವ್ಯವಸ್ಥೆಯಲ್ಲಿ ಭಾಷೆಯು ಹೇಗೆ ಬಳಕೆಯಾಗುತ್ತದೆ ಎಂಬ ಅಂಶವನ್ನು ವಿವರಿಸಿದ್ದಾರೆ.

ಭಾಷೆಗೆ ಸಂಬಂಧ ಪಟ್ಟಂತೆ ಡಿ.ಎನ್. ಶಂಕರಭಟ್ ರವರ ಕೆಲವು ಪುಸ್ತಕಗಳು ಇಂತಿವೆ. "ಕನ್ನಡಕ್ಕೆ ಬೇಕು ಕನ್ನಡದ್ದೇ, ವ್ಯಾಕರಣ", "ಕನ್ನಡ ಬರಹವನ್ನು ಸರಿಪಡಿಸೋಣಾ", "ನಿಜಕ್ಕೂ ಹಳೆಗನ್ನಡ ವ್ಯಾಕರಣ ಎಂತಹದು?", "ಭಾಷೆಯ ಬಗೆಗೆ ನೀವೇನು ಬಲ್ಲಿರಿ?", "ಕನ್ನಡ ಪದಗಳ ಒಳರಚನೆ", "ಕನ್ನಡ ವಾಕ್ಯಗಳ ಒಳರಚನೆ", "ಕನ್ನಡ ನುಡಿ ನಡೆದು ಬಂದ ದಾರಿ", ಯಂತಹ ಹಲವಾರು ಪುಸ್ತಕಗಳನ್ನು ರಚಿಸಿದ್ದಾರೆ. ಸಂಶೋಧನಾ ಬರಹದ ಪುಸ್ತಕಗಳನ್ನು ಬರೆದು ಕನ್ನಡ ಭಾಷೆಗೆ ಕ್ರಾಂತಿಕಾರಿ ಅಂಶಗಳನ್ನು ಬಿತ್ತರಿಸಿದ್ದಾರೆ. ಸಂಸ್ಕೃತ ಭಾಷೆಯ ಅಡಿಯಲ್ಲಿ ಕನ್ನಡ ಭಾಷೆಯು ರಚನೆಯಾಗುತ್ತಿದೆ. ಅದನ್ನು ಬದಲಾಯಿಸುವ ಅಗತ್ಯವಿದೆ ಎಂದಿದ್ದಾರೆ. ನಾವು ಕಲಿಸುವ ಕನ್ನಡ ಭಾಷಾ ಪಠ್ಯಗಳು ಸಹ ಸಂಸ್ಕೃತದ ಹಿನ್ನೆಲೆಯಲ್ಲಿ ರಚನೆಯಾಗಿವೆ. ಅವುಗಳ ಬಳಕೆಗಳು ಹಿಂದಿನ ಸಮಾಜ ವ್ಯವಸ್ಥೆಯಲ್ಲಿ ಕಾಣುತ್ತಿಲ್ಲ. ಆದರೆ ಕಲಿಸುವುದು ಮಾತ್ರ ಬೇರೆ ಎಂಬ ಚಿಂತನೆಯ ಅಂಶಗಳನ್ನು ಒಳಗೊಂಡ ಸಂಶೋಧನ ಮಾದರಿಯ ಪುಸ್ತಕಗಳನ್ನು ಬರೆದಿದ್ದಾರೆ. ಕನ್ನಡ ಬರಹ ಎಲ್ಲರ ಸೊತ್ತಾಗಬೇಕು. ಓದಲು ಬರೆಯಲು ಕಲಿತರೆ ಪರಿಪೂರ್ಣವಾದಂತಲ್ಲ. ತಮ್ಮ ಜೀವನದಲ್ಲಿ ಕಲಿತ ಕಲಿಕೆಯ ಮೂಲಕ ಎಂತಹ ಪ್ರಯೋಜನೆಗಳನ್ನೆಲ್ಲ ಪಡೆಯಲು ಸಾಧ್ಯ ಎಂಬುದನ್ನು ಎಲ್ಲಾ ಕನ್ನಡಿಗರು ಸರಿಯಾಗಿ ತಿಳಿದುಕೊಳ್ಳಬೇಕು. ಕನ್ನಡ ಬರಹಕ್ಕೂ ಸಾಮಾನ್ಯ ಕನ್ನಡಿಗರ ಮಾತಿಗೂ ನಡುವೆ ಇರುವ ಅಂತರ ಹೆಚ್ಚಾಗುತ್ತಿರುವುದಕ್ಕೆ ಎರಡು ಮುಖ್ಯ ಕಾರಣಗಳಿವೆ. ಮೊದಲನೆಯದು ಕನ್ನಡದವೇ ಆದ ಪದಗಳನ್ನು ಬರೆಯಲು ಒಟ್ಟು ಮೂವತ್ತುಮೂರು ಅಕ್ಷರಗಳು ಇದ್ದರೆ ಸಾಕು. ಎರಡನೆಯದು ಅವಶ್ಯವಿಲ್ಲದ ಸಂಸ್ಕೃತ ಪದಗಳನ್ನು ಹೇಳಿಕೊಡುವುದರಿಂದ ಕನ್ನಡ ಕಲಿಸುವುದು ಕಠಿಣವಾಗುತ್ತದೆ. ಆದ್ದರಿಂದ ಸಂಸ್ಕೃತ ಪದಗಳ ಸಡಲಿಕೆ ಅಗತ್ಯ ಎಂದಿದ್ದಾರೆ. ಇದು ಲಿಪಿಕ್ರಾಂತಿಯಿಂದ ಮಾತ್ರ ಸಾಧ್ಯವಾಗುತ್ತದೆ. ಮತ್ತು ಪಠ್ಯಪುಸ್ತಕಗಳಲ್ಲಿ ಸಂಸ್ಕೃತ

ಪದಗಳನ್ನು ಬಳಸುವುದನ್ನು ಬಿಟ್ಟು ಕನ್ನಡದಲ್ಲಿನ ತದ್ಭವ ರೂಪಗಳನ್ನು ಬಳಸಬೇಕು ಎಂದಿದ್ದಾರೆ. ಕನ್ನಡವನ್ನು ಕಲಿಸುವಾಗ ಸಂಸ್ಕೃತದ ನಿಯಮಗಳನ್ನು ನೇರವಾಗಿ ಕನ್ನಡ ಪಠ್ಯಗಳಲ್ಲಿ ಅಳವಡಿಸಿಕೊಳ್ಳದೆ ಅವುಗಳನ್ನು ಸಂಸ್ಕೃತದಿಂದ ಮೊದಲಿಗೆ ಹೊಸಗನ್ನಡಕ್ಕೆ ಎಂತಹ ಪದಗಳು ಎರವಲಾಗಿ ಬಂದಿವೆ ಎಂಬುದನ್ನು ತಿಳಿಸಬೇಕು. ಹೀಗೆ ಈ ಎಲ್ಲಾ ಸಂಶೋಧನಾ ಕೃತಿಗಳು ಕನ್ನಡ ಭಾಷೆ ವ್ಯಾಕರಣ, ಬರಹ ಇತ್ಯಾದಿ ಅಂಶಗಳು ಹೇಗಿರಬೇಕು ಎಂದು ತಿಳಿಸುತ್ತದೆ.

ಶಿಕ್ಷಕರೆ, ಮಕ್ಕಳೆ, ಪಾಲಕರೆ ಶೈಕ್ಷಣಿಕ ಯೋಜನಾಕಾರ್ಯ ಯೋಚಿಸುತ್ತಿದ್ದೀರಾ? ಇದು ಅರವಿಂದ ಚೊಕ್ಕಾಡಿಯವರ ಕೃತಿಯಾಗಿದೆ. ಇಲ್ಲಿ ಬೋಧನೆಯಲ್ಲಿ ಕಲಿಕಾರ್ಥಿಗಳಿಂದ ಯೋಜನಾಕಾರ್ಯಗಳನ್ನು ಮಾಡಿಸುವುದರಿಂದ ಕಲಿಕೆಯು ಪರಿಣಾಮಕಾರಿಯಾಗುತ್ತದೆ ಎಂಬುದನ್ನು ಪ್ರಯೋಗಗಳ ಮೂಲಕ ಗುರುತಿಸಿದ್ದಾರೆ.

ಶಾಲೆಯಲ್ಲಿ ಹಿಂದುಳಿಯುವಿಕೆ ಎಂಬ ಕೃತಿಯಲ್ಲಿ ಜಿ ಪುರುಷೋತ್ತಮ ರವರು ಒಂದು ಮಗು ಶಾಲೆಯಲ್ಲಿ ಕಲಿಯುವುದರಲ್ಲಿ ಹಿಂದುಳಿಯುವುದಕ್ಕೆ ನಾನಾ ರೀತಿಯ ಕಾರಣಗಳು ಇವೆ. ಮಗುವಿಗೆ ಅಕ್ಷರ ಅಭ್ಯಾಸದ ಕೊರತೆ ಮಗುವನ್ನು ಸರಿಯಾಗಿ ಗಮನಿಸದಿರುವುದು, ಸ್ಪಷ್ಟಮಾತನಾಡಲು ಬರದೆ ಇರುವುದು, ದೃಷ್ಟಿದೋಷದಿಂದ, ಹೀಗೆ ಇತ್ಯಾದಿ ಕಾರಣಗಳಿಂದ ಕಲಿಕೆಯಲ್ಲಿ ಮಗು ಹಿಂದುಳಿಯುತ್ತದೆ ಎಂದು ವೈಜ್ಞಾನಿಕ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ.

ಶಿಕ್ಷಣ ಬಿಂಬ ವಿಷ್ಣು ಎಂ.ಶಿಂದೆ ಯವರ ಲೇಖನ ಸಂಗ್ರಹ ಕೃತಿಯಲ್ಲಿ "ಬೋಧನೆಯಲ್ಲಿ ಧ್ವನಿ ಪರಿಣಾಮ" ಲೇಖನವನ್ನು ಗಮನಿಸಿದಾಗ ನಮ್ಮ ಇಂದಿನ ಶಿಕ್ಷಣ ರಂಗದಲ್ಲಿ ಪರಿಣಾಮಕಾರಿ ಬೋಧನೆ ಎಂದರೆ, ಇರುವ ವಿಷಯವಸ್ತುವನ್ನು ಶಿಕ್ಷಕರು ತಮಗೆ ಬೇಕಿರುವ ಪರಿಕರಗಳನ್ನು ಬಳಸಿಕೊಂಡು ತರಗತಿಯಲ್ಲಿ ತಮಗೆ ಬೇಕಾದಂತೆ ಪ್ರಸ್ತುತ ಪಡಿಸುವ ಕಾರ್ಯವಾಗಿದೆ ಎಂದು ತಿಳಿದಿದ್ದೇವೆ. ತರಗತಿಯಲ್ಲಿ ತಂತ್ರಜ್ಞಾನವನ್ನು ಬಳಸಿಕೊಂಡರೆ ಮಾತ್ರ ಅದು ಉನ್ನತ ಗುಣಮಟ್ಟದ ಬೋಧನೆಯೆಂದು ಬಿಂಬಿಸಲಾಗುತ್ತದೆ. ಪರಿಣಾಮಕಾರಿ ಬೋಧನೆಗೆ ಮುಖ್ಯವಾಗಿ ಬೋಧಕರು ಈ ಅಂಶಗಳನ್ನು ಗಮನಿಸಲೇಬೇಕು. ತನ್ನ ದೈಹಿಕ ಹಾಗೂ ಮಾನಸಿಕ ಆರೋಗ್ಯ, ಭಾಷಾಕೌಶಲಗಳು ವಿಷಯ ಪಾಂಡಿತ್ಯ, ಕಲಿಕೆಯ ಮನೋವಿಜ್ಞಾನ, ತರಗತಿ ನಿರ್ವಹಣಾ ತಂತ್ರಗಳು, ಬೋಧನಾ ಸಲಕರಣೆಗಳು, ಬೋಧನಾ ಕೌಶಲಗಳು, ಧ್ವನಿಯ ಪರಿಣಾಮ ಮತ್ತು ಬೋಧಕರಿಗೆ ಈ ಕೆಳಕಂಡ ಕೊರತೆಗಳು ಇದ್ದರೆ ಬೋಧನೆ ಪರಿಣಾಮಕಾರಿಯಾಗಲಾರದು. ಉಚ್ಚಾರಣೆ ದೋಷ ಪದಸಂಪತ್ತಿನ ಕೊರತೆ, ಪಾಠದ ಭಾವವನ್ನು ಗುರುತಿಸಲಾಗದ ಅಸಮರ್ಥತೆ ಇತ್ಯಾದಿ ಅಂಶಗಳಿಂದ ಪರಿಣಾಮಕಾರಿ ಬೋಧನೆ ಸಾಧ್ಯವಾಗದು ಎಂದಿದ್ದಾರೆ.

ಕಡ್ಡಾಯದ ಪ್ರಾಥಮಿಕ ಶಿಕ್ಷಣ ಕೃತಿಯನ್ನು ಜಯಕುಮಾರ ಅನಗೋಳರವರು ಬರೆದಿದ್ದಾರೆ. ಪ್ರಾಚೀನ ಕಾಲದಿಂದ ಇಂದಿನವರೆಗೂ ಪ್ರಾಥಮಿಕ ಶಿಕ್ಷಣ ಕಡ್ಡಾಯಗೊಳಿಸಬೇಕೆಂಬ ವಾದವನ್ನು ಕುರಿತು ಕೆ.ಟಿ. ಶಹಾರವರು ಅಭಿಪ್ರಾಯ ವ್ಯಕ್ತಪಡಿಸಿದರು. ಇವರು ಸಂವಿಧಾನದ ಮೂಲಭೂತ ಹಕ್ಕುಗಳ ಉಪಸಮಿತಿಯ ಸದಸ್ಯರಾಗಿದ್ದರು. "ಶಿಕ್ಷಣವನ್ನು ನ್ಯಾಯ ನಿರ್ಣಾಯಕವಲ್ಲದ (ನಾನ್‌ಜಸ್ಟೀಬಲ್) ಹಕ್ಕುಗಳ ಪಂಕ್ತಿಗೆ ಸೇರಿಸಿದ್ದರಿಂದ ಅದು ಕೇವಲ

ಪವಿತ್ರ ಆಕಾಂಕ್ಷಿಯಾಗಿ ಉಳಿಯುವುದು. ಈ ಭೇದವನ್ನು ಮಾಡುವುದರಿಂದ ಕೇಂದ್ರ ಮತ್ತು ರಾಜ್ಯ ಸರಕಾರಗಳು ಈ ನ್ಯಾಯ ನಿರ್ಣಾಯಕವಲ್ಲದ ಹಕ್ಕುಗಳನ್ನು ಚಲಾವಣೆಗೆ ತರಲು ಸಾಧ್ಯವಿಲ್ಲ ಎಂಬುದಕ್ಕೆ ಕಾರಣಗಳನ್ನು/ನೆಪಗಳನ್ನು ಹುಡುಕಬಹುದು. ನಾಗರಿಕರ ಬಗ್ಗೆ ರಾಜ್ಯದ ಮೇಲೆ ಯಾವುದೇ ನಿರ್ಣಾಯಕ ಜವಾಬ್ದಾರಿಯನ್ನು ಹೇರದೆ, ಕೇವಲ ಕಾನೂನು ಪುಸ್ತಕದಲ್ಲಿ ಅವುಗಳ ಸೇರ್ಪಡೆ ಮಾಡುವುದೆಂದರೆ, ಅದೊಂದು ಪ್ರಜೆಗಳ ಮೇಲೆಸಗಿದ ಮೋಸ ಅದು ಅಂಗಡಿಯಲ್ಲಿ ಆಕರ್ಷಕ ಕಿಟಕಿಯನ್ನು ನಿರ್ಮಿಸಿ ಅದರಲ್ಲಿ ಸರಕುಗಳನ್ನು ಇಡದೆ ಇರುವಂತಾಗುವುದು" ಇಂತಹ ಅಭಿಪ್ರಾಯಗಳನ್ನು ಇಟ್ಟುಕೊಂಡು ಕಡ್ಡಾಯ ಶಿಕ್ಷಣದ ಮೂಲಕ ಗುಣಮಟ್ಟದ ಕಲಿಕೆ ನೀಡುವುದು ಅಸಾಧ್ಯ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಖ್ಯಾತ ಶಿಕ್ಷಣ ಮನೋವಿಜ್ಞಾನಿಗಳು ಇದು ಮಹಾಬಲೇಶ್ವರರಾವ್ ರವರ ಕೃತಿಯಾಗಿದೆ. ಇದರಲ್ಲಿ ಪ್ರಸಿದ್ಧ ಮನೋವಿಜ್ಞಾನಿಗಳಾದ ಪಾವ್ಲೊವ್, ಥಾರ್ನ್ಡೈಕ್, ಸ್ಕಿನರ್, ಕೊಹ್ಲರ್, ಕೋಲ್‌ಬರ್ಗ್, ಪಿಯಾಜೆ, ಮುಂತಾದವರುಗಳು ಕಲಿಕೆಯನ್ನು ಕುರಿತು ಹೇಳಿರುವ ವಿಚಾರಗಳನ್ನು ವಿವರಿಸಿದ್ದಾರೆ.

ಆಡಿ ಕಲಿಯೋಣ ಕನ್ನಡ ಇದು ಮಂಜುನಾಥರವರ ಕೃತಿಯಾಗಿದೆ. ಕನ್ನಡ ಭಾಷೆಯನ್ನು ಸರಳಿಕರಿಸಿ ಕಲಿಯಲೂ ಕೆಲವೊಂದು ಆಟಗಳನ್ನು ಹೆಸರಿಸಿದ್ದಾರೆ. ಅಂತ್ಯಾಕ್ಷರಿ ಆಟ, ಸಮನಾರ್ಥಕ ಮತ್ತು ವಿರುದ್ಧಾರ್ಥಕ ಪದಗಳ ಆಟವನ್ನು ತಂಡಗಳನ್ನಾಗಿ ಮಾಡಿ ಆಡಿಸುವುದು. ಪ್ರಾಸ ಪದಗಳ ಆಟ, ಪದರಚಿಸುವ ಆಟ, ಅಕ್ಷರ ಪಲ್ಲಟದಿಂದ ಹೊಸಪದ ರಚಿಸುವ ಆಟ, ಪದಗಳನ್ನು ಸರಿಹೊಂದಿಸುವ ಆಟ, ಇಂತಹ ಹಲವಾರು ಆಟಗಳನ್ನು ಆಡಿಸುವ ಮೂಲಕ ಮಕ್ಕಳಲ್ಲಿ ಭಾಷಾಭಿವೃದ್ಧಿಸಲು ಸಹಾಯಕವಾಗುತ್ತದೆ. ಕಲಿಕೆಯಲ್ಲಿಯೂ ಮಕ್ಕಳು ಸಕ್ರಿಯವಾಗಿ ಕ್ರಿಯಾಶೀಲರಾಗಿ ಭಾಗವಹಿಸುತ್ತಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಶಿಕ್ಷಣದ ಆಧಾರಗಳು ಇದು ಭರತ್‌ಭೂಷಣ್ ಬಿ. ರವರ ಕೃತಿಯಾಗಿದೆ. ಪ್ರಥಮ ಪಿ.ಯು.ಸಿ ಯ ಶಿಕ್ಷಣ ಶಾಸ್ತ್ರದ ಪಠ್ಯ ಪುಸ್ತಕವಾಗಿದೆ. ಇದರಲ್ಲಿ ಶಿಕ್ಷಣದ ಅರ್ಥ, ವ್ಯಾಖ್ಯೆಗಳು, ಶಿಕ್ಷಣದ ಮಹತ್ವ, ಮನಶಾಸ್ತ್ರೀಯ ಆಧಾರದ ಮೇಲೆ ಶಿಕ್ಷಣ, ಶಿಕ್ಷಣದ ಪ್ರಾಚೀನತೆ ಇತ್ಯಾದಿ ಅಂಶಗಳನ್ನು ಕುರಿತು ವಿವರಿಸಿದ್ದಾರೆ.

ಸ್ವತಂತ್ರ ಭಾರತದಲ್ಲಿ ಶಿಕ್ಷಣ ಇದು ಶಂಕರಲಿಂಗ ಜಿ. ಹೆಂಬಾಡೆಯವರ ಕೃತಿಯಾಗಿದೆ. ಇದು ಬಿ.ಎ. ೫ನೇ ಸೆಮಿಸ್ಟರ್ ಪಠ್ಯ ಪುಸ್ತಕವಾಗಿದೆ. ಶಿಕ್ಷಣದ ಆಯೋಗಗಳು. ಹೊಸ ಶಿಕ್ಷಣ ನೀತಿ, ರಾಷ್ಟ್ರೀಯ ಶಿಕ್ಷಣ ಪದ್ದತಿ, ಶಿಕ್ಷಣಕ್ಕೆ ಶಿಕ್ಷಣ ನೀತಿ, ರಾಷ್ಟ್ರೀಯ ಶಿಕ್ಷಣ ಪದ್ದತಿ, ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಂವಿಧಾನಾತ್ಮಕ ಅವಕಾಶಗಳು ಈ ಎಲ್ಲ ಅಂಶಗಳನ್ನು ಕುರಿತು ವಿವರಿಸಿದ್ದಾರೆ.

ಪಠ್ಯಾಧಾರಿತ ಕನ್ನಡ ಭಾಷಾ ಬೋಧನೆ ಇದು ಅಕ್ಕಮಹಾದೇವಿ ಬಿ. ಹಿರೇಮಠ ರವರ ಕೃತಿಯಾಗಿದೆ. ಕನ್ನಡ ಭಾಷೆಯ ಅರ್ಥ ಮತ್ತು ಸ್ವರೂಪ ಕನ್ನಡ ಬೋಧನೆಯ ಉದ್ದೇಶ, ಗದ್ಯ ಮತ್ತು ಪದ್ಯ ಬೋಧನೆಯ ಉದ್ದೇಶ, ಪಠ್ಯ ಪುಸ್ತಕದ ಮಹತ್ವ, ಭಾಷಾ ಬೋಧನೆ ಕಲಿಕೆಗಳ ಪರಿಣಾಮಗಳ ಮೌಲ್ಯಮಾಪನ ವಿಚಾರಗಳನ್ನು ಕುರಿತು ವಿವರಿಸಿದ್ದಾರೆ.

ಸಾಮಾಜಿಕ ಮತ್ತು ತಾತ್ವಿಕ ಬುನಾದಿಗಳು ಕೃತಿಯಲ್ಲಿ ಶ್ರೀಮತಿ ಗಿರಿಜಾ ಹಸಬಿಯವರು ಶಿಕ್ಷಣದ ತಾತ್ವಿಕ ಬುನಾದಿ, ಪ್ರಮುಖ ತತ್ತ್ವಜ್ಞಾನಿಗಳ ಕೊಡುಗೆ, ಕರ್ನಾಟಕ ರಾಜ್ಯದ ಶಿಕ್ಷಣ ವ್ಯವಸ್ಥೆ, ಆಧುನೀಕರಣ ಮತ್ತು ಶಿಕ್ಷಣ ಪಠ್ಯಪುಸ್ತಕ, ಬೋಧನಾ ಪದ್ಧತಿ, ಶಿಕ್ಷಣ ಮತ್ತು ವಿದ್ಯಾರ್ಥಿ ಇನ್ನಿತರ ಅಂಶಗಳನ್ನು ಕುರಿತು ಚರ್ಚಿಸಿದ್ದಾರೆ.

"ಶೈಕ್ಷಣಿಕ ಮನೋವಿಜ್ಞಾನ" ಆರ್.ಓಬಳೇಶಘಟ್ಟಿಯವರ ಈ ಕೃತಿಯಲ್ಲಿ ಗಮನಿಸಿದ ಅಂಶ ಕಲಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳು ಮತ್ತು ಕಲಿಕೆಯ ವರ್ಗಾವಣೆ, ಒಬ್ಬ ವ್ಯಕ್ತಿಯಲ್ಲಿ ಕಲಿಕೆಯುಂಟಾಗಬೇಕೆಂದರೆ ಆತನ ಮೇಲೆ ಯಾವ ಅಂಶಗಳು ಪ್ರಭಾವ ಬೀರುತ್ತವೆ ಮತ್ತು ಕಲಿಕೆಯು ಹೇಗೆ ವರ್ಗಾವಣೆಗೊಳ್ಳುತ್ತದೆ ಎಂಬ ಸಂಗತಿಯನ್ನು ವಿವರಿಸಿದ್ದಾರೆ.

"ಶಿಕ್ಷಣದ ಆಧಾರಗಳು" ಭಾರತ್ ಭೂಷಣ್ ಬಿ. ರವರ ಕೃತಿಯಾಗಿದೆ. ಈ ಕೃತಿಯಲ್ಲಿ ಮಹಾನ್ ಶಿಕ್ಷಣತಜ್ಞರುಗಳನ್ನು ಕುರಿತು ಪರಿಚಯಿಸುತ್ತಾ ಪ್ರಾಚೀನ ಭಾರತ, ವೇದಕಾಲದಲ್ಲಿನ ಶಿಕ್ಷಣ, ಬೌದ್ಧ, ಮಧ್ಯಕಾಲಿನ ಭಾರತ, ಆಧುನಿಕ ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯಲ್ಲಿನ ಶಿಕ್ಷಣದ ಸ್ಥಿತಿಗತಿಯೊಂದಿಗೆ ಸ್ವತಂತ್ರ ಭಾರತದಲ್ಲಿನ ಶಿಕ್ಷಣ ಕುರಿತು ವಿವರಿಸಿದ್ದಾರೆ.

ಕನ್ನಡ ಭಾಷೆ ಇತಿಹಾಸ ಇದು ಬಿ. ರಾಮಚಂದ್ರರಾವ್‌ರವರ ಕೃತಿಯಾಗಿದೆ. ಚಾರಿತ್ರಿಕವಾಗಿ ಕನ್ನಡ ಭಾಷೆಯ ಉತ್ತರದ ಗಡಿಯು ರೇವಾ ನದಿಯ ತಟ ಇಟ್ಟುಕೊಳ್ಳಬಹುದು. ಚರಿತ್ರೆಗೆ ಪೂರ್ವದಲ್ಲಿ ವಿಂದ್ಯಾದ್ರಿಯ ತಪ್ಪಲಲ್ಲಿ ವಾಸಿಸುತ್ತಿದ್ದ ಒಂದು ವರ್ಗದ ಗಿರಿಜನರ ಮನೆಮಾತು ಕನ್ನಡವಾಗಿತ್ತು ಎಂದಿದ್ದಾರೆ. ಹಾಗೂ ಕನ್ನಡ ಭಾಷೆಯ ವ್ಯಾಪ್ತಿ ಸ್ವರೂಪ ಎಲ್ಲಿಯವರೆಗೆ ಹಬ್ಬಿತ್ತು ಮತ್ತು ಕನ್ನಡ ಭಾಷೆಯು ಬದಲಾವಣೆಗೊಂಡ ರೂಪವನ್ನು ಕುರಿತು ವಿವರಿಸಿದ್ದಾರೆ.

ಕನ್ನಡ ಜಗತ್ತು ಅರ್ಧಶತಮಾನ ಇದು ಕೆ. ವಿ. ನಾರಾಯಣರವರ ಕೃತಿಯಾಗಿದೆ. ಕರ್ನಾಟಕದಲ್ಲಿ ಕನ್ನಡಿಗರು ಕನ್ನಡ ಭಾಷೆಯನ್ನೆ ಮಾತ್ರ ಮಾತನಾಡುತ್ತಿದ್ದಾರೆ ಎಂಬುದು ಈಗ ಸುಳ್ಳಾಗಿದೆ. ಏಕೆಂದರೆ ಕಳೆದ ಅರ್ಧಶತಮಾನದಿಂದ ಇತ್ತೀಚೆಗೆ ಕರ್ನಾಟಕದ ಮೇಲೆ ಅನ್ಯ ಭಾಷೆಗಳ ಪ್ರಭಾವ ಹೆಚ್ಚಾಗಿ ಕನ್ನಡ ಭಾಷೆಯ ಜೊತೆಗೆ ಒಂದಕ್ಕಿಂತ ಹೆಚ್ಚು ಭಾಷೆಯನ್ನು ಮಾತನಾಡುವ ಸಮುದಾಯಗಳು ಹೆಚ್ಚಾಗುತ್ತಿವೆ. ರಾಜ್ಯಗಳು ತಂತಮ್ಮ ಪ್ರಾಂತೀಯ ಭಾಷೆಗಳನ್ನು ಆಡಳಿತ ಭಾಷೆಯಾಗಿ ಬಳಸಬಹುದು ಎಂಬ ಅವಕಾಶ ರಾಜ್ಯಾಂಗದಲ್ಲಿದೆ. ಹೀಗಿದ್ದರೂ ಕೂಡ ನಮ್ಮ ಸರಕಾರದಲ್ಲಿ ಇಂಗ್ಲಿಷ್‌ನೊಂದಿಗೆ ಕನ್ನಡ ಭಾಷೆಯು ಜೊತೆಯಲ್ಲಿ ಆಡಳಿತ ಭಾಷೆಯಾಗಿ ಕಾರ್ಯನಿರ್ವಹಿಸಲಿ ಎಂಬ ಪರಿಸ್ಥಿತಿ ಉಂಟಾಯಿತು. ಕನ್ನಡ ಭಾಷೆಯು ತನ್ನ ಧ್ವನಿ ಉಚ್ಚರಣೆಯಲ್ಲಿ ಕೆಲವೊಂದು ಧ್ವನಿಗಳನ್ನು ಇಂಗ್ಲಿಷ್ ಭಾಷೆಯ ಪ್ರಭಾವದಿಂದ ಕಳೆದುಕೊಳ್ಳುವ ಪರಿಸ್ಥಿತಿ ಬಂದೊದಗಿದೆ. ಇಂತಹ ಹಲವಾರು ವಿಷಯಗಳನ್ನು ಚರ್ಚಿಸಿದ್ದಾರೆ.

ಭಾಷೆ ರಚನೆ ಬಳಕೆ ಸೋಮಶೇಖರ ಗೌಡ ಅವರ ಕೃತಿಯಾಗಿದೆ. ಆಡುಗ ಮತ್ತು ಕೇಳುಗನ ಅವಶ್ಯಕತೆಗೆ ತಕ್ಕಂತೆ ಭಾಷೆ ರಚನೆ ಗೊಂಡಿರುತ್ತದೆ. ಶಿಷ್ಟ ಭಾಷೆಯೂ ಹೆಚ್ಚು ಜನರು ಅರ್ಥ ಮಾಡಿಕೊಳ್ಳುವಂತಹದ್ದು. ಏಕೆಂದರೆ ಇದು ವ್ಯಾಕ್ಯ ರಚನೆ ಹಾಗೂ ವ್ಯಾಕರಣ ರೂಪ ಪಡೆದುಕೊಂಡಿರುತ್ತದೆ. ಪ್ರಾದೇಶಿಕ ಉಪಭಾಷೆಗಳು ಆಯಾ ಪ್ರದೇಶದ ಜನರಿಗೆ

ಅರ್ಥವಾಗುತ್ತದೆ. ಒಂದು ಪ್ರದೇಶದ ಭಾಷೆ ಮತ್ತೊಂದು ಪ್ರದೇಶದ ಜನರಿಗೆ ಹೆಚ್ಚು ಅರ್ಥವಾಗದೆ ಹೋಗಬಹುದು, ಇಂತಹ ಹಲವಾರು ಭಾಷಿಕ ಅಂಶಗಳನ್ನು ವಿವರಿಸಿದ್ದಾರೆ.

ಪಠ್ಯ ಸಂವಹನ ತತ್ವಗಳು ರಾಜೇಶ್ ಬೆಳ್ಳೇರಿ ಅವರ ಕೃತಿಯಾಗಿದೆ. ಪಠ್ಯಕ್ರಮ ಮತ್ತು ಶೈಕ್ಷಣಿಕ ತಂತ್ರಜ್ಞಾನ, ಬೋಧನೆ ಮತ್ತು ಬೋಧನಾ ತಂತ್ರಜ್ಞಾನ, ಸಾಮರ್ಥ್ಯಧಾರಿತ– ಬೋಧನೆ ಕಲಿಕೆ ಮಾರ್ಗ, ಪಾಠಯೋಜನೆ ಮತ್ತು ಮೌಲ್ಯಮಾಪನ, ಶಿಕ್ಷಣದಲ್ಲಿ ದೃಕ್ ಶ್ರವಣ ಸಾಧನ, ತಂತ್ರಜ್ಞಾನ ಮಾಧ್ಯಮಗಳನ್ನು ಕುರಿತು ವಿವರಿಸಿದ್ದಾರೆ.

ವಿಷಯಾಧಾರಿತ ಕನ್ನಡ ಭಾಷಾ ಬೋಧನಾ ವಿಧಾನ ಪಠ್ಯಕ್ರಮ ಇದು ವಿಜಯಕುಮಾರ ಕೆ. ಗೋತಗಿ ಯವರ ಕೃತಿಯಾಗಿದೆ. ಈ ಕೃತಿಯು ಕನ್ನಡ ಬೋಧನೆಯ ಉದ್ದೇಶಗಳು ಬೋಧನೆಯ ವಿಧಾನಗಳನ್ನು ತಿಳಿಸುತ್ತದೆ ಮತ್ತು ಕನ್ನಡ ಭಾಷಾ ಬೋಧನೆಗೆ ಬೇಕಾಗುವಂತಹ ಬೋಧನಾ ಸಂಪನ್ಮೂಲಗಳನ್ನು ಕುರಿತು ಅವುಗಳ ಮಹತ್ವವನ್ನು ವಿವರಿಸುತ್ತದೆ.

ಭಾಷೆ ಮತ್ತು ಕನ್ನಡ ಭಾಷಾ ಬೋಧನೆ ಆರ್. ಓಬಳೇಶಘಟ್ಟಿ ಅವರ ಕೃತಿಯಾಗಿದೆ. ಇದರಲ್ಲಿ ಭಾಷೆ ಮತ್ತು ಮಾತೃಭಾಷೆ ಎರಡರ ನಡುವಿನ ಸೂಕ್ಷ್ಮತೆಯನ್ನು ತಿಳಿಸುತ್ತಾ ಕನ್ನಡ ಮಾತೃ ಭಾಷಾ ಬೋಧನೆ ಮತ್ತು ಬೋಧಕನ ಲಕ್ಷಣಗಳನ್ನು ವಿವರಿಸಿದ್ದಾರೆ. ಹಾಗೂ ಭಾಷಾ ಪಠ್ಯಪುಸ್ತಕದ ಅವಶ್ಯಕತೆ, ರಚನಾ ತತ್ವಗಳು, ಬೋಧಕನ ಗಮನಿಸಬೇಕಾದ ಅಂಶಗಳನ್ನು ಕುರಿತು ವಿವರಿಸಿದ್ದಾರೆ.

ಶೈಕ್ಷಣಿಕ ಮನೋವಿಜ್ಞಾನ ಹೆಚ್. ವಿ ವಾಸುದೇವಪ್ಪ ರವರ ಪುಸ್ತಕವಾಗಿದೆ. ವಿಶಿಷ್ಟ ಮಕ್ಕಳ ಶಿಕ್ಷಣ, ಕಲಿಕೆ, ಅರ್ಥ, ಸ್ವರೂಪ ಕಲಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳು. ಈ ಅಂಶಗಳನ್ನು ಕುರಿತು ವಿವರಣಾತ್ಮಕವಾಗಿ ವಿವರಿಸಿದ್ದಾರೆ.

ಶಿಕ್ಷಣ ಈ ಕೃತಿಯನ್ನು ಎಸ್. ಬಿ ಯಾದವಾಡ ಅವರು ಬರೆದಿದ್ದಾರೆ. ಇದರಲ್ಲಿ ಶೈಕ್ಷಣಿಕ ಆಡಳಿತದಲ್ಲಿ ವಿವಿಧ ಶಿಕ್ಷಣ ನಿಯೋಗಗಳ ಪಾತ್ರ(ಸಮಾಜ ಮನೆ, ಶಾಲೆ) ಹಾಗೂ ಅವುಗಳ ಅಂತರ್ ಸಂಬಂಧ, ರಾಷ್ಟ್ರೀಯ ಗುರಿಗಳು ಹಾಗೂ ಅಂತರಾಷ್ಟ್ರೀಯ ತಿಳುವಳಿಕೆ ಗೆ ಸಂಬಂಧಿಸಿದಂತೆ ಶಿಕ್ಷಣದ ಗುರಿಗಳು ಕುರಿತು ವಿಮರ್ಶಾತ್ಮಕ ವಿಶ್ಲೇಷಣೆ, ಶಿಕ್ಷಣದ ಗುಣಾತ್ಮಕತೆ, ಹಾಗೂ ಪರಿಣಾತ್ಮಕ ಬೆಳವಣಿಗೆಗೆ ಸಂಬಂಧಿಸಿದಂತೆ ಶಾಲಾ ಸಮುದಾಯದ ಸಂಬಂಧ, ಕಡ್ಡಾಯ ಪ್ರಾಥಮಿಕ ಶಿಕ್ಷಣ ಹಾಗೂ ಅದಕ್ಕಾಗಿ ಪ್ರೋತ್ಸಾಹದಾಯಕ ಯೋಜನೆಗಳು, ಕಲಿಕೆ ವಿಧಗಳು. ಕಲಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳು, ಸೇವಾ ನಿರತ / ಸೇವಾವಧಿ ಶಿಕ್ಷಕರ ಕಾರ್ಯಕ್ರಮಗಳು, ಸೇವಾ ಪೂರ್ವ ಶಿಕ್ಷಕರ ಕಲ್ಯಾಣ ಕಾರ್ಯಕ್ರಮಗಳು ಮುಂತಾದ ವಿಷಯಗಳನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

ಶಿಕ್ಷಣ ರೂಪಾಂತರ (ವಿವಿಧ ಶಿಕ್ಷಣ ತಜ್ಞರ ಲೇಖನಗಳು) ವಿದ್ಯಾಂಕುರ ರವರ ಸಂಪಾದನಾ ಕೃತಿಯಾಗಿದೆ. 'ಶಿಶು ಕೇಂದ್ರಿತ ಶಿಕ್ಷಣ ' ಲೇಖನವನ್ನು ಜೇನ್ ಸಾಹಿ ಯವರು ಬರೆದಿದ್ದಾರೆ. ಇದು ಶಿಶುಕೇಂದ್ರಿತ ವಿಷಯಗಳನ್ನು ಒಳಗೊಂಡಿದ್ದು ತಾತ್ವಿಕ ಮತ್ತು ಮನೋವೈಜ್ಞಾನಿಕ ರೀತಿಯ ವಿವರಣೆ ನೀಡುತ್ತದೆ. ಶಿಕ್ಷಣದಲ್ಲಿ ಶಿಶುಕೇಂದ್ರಿತ ಶಿಕ್ಷಣವನ್ನು ಅಪೇಕ್ಷಿಸುವ ಶಿಕ್ಷಕರು ಏನು ಮಾಡಬೇಕೆಂಬುದರ ಸಲಹೆ ನೀಡುತ್ತದೆ. ಶಿಶು, ಮಗುವಾಗಿ,

ವ್ಯಕ್ತಿಯಾಗಿ, ಕಲಿಯುವವ ನಾಗಿ, ಪರಸ್ಪರ ಕಲಿಕೆಯಲ್ಲಿ ಮಗು– ಶಿಕ್ಷಕರ ಸಂಬಂಧ ಯಾವ ರೀತಿಯಲ್ಲಿರುತ್ತದೆ ಎಂಬುದನ್ನು ವಿವರಿಸಿದ್ದಾರೆ. ಅದೇ ರೀತಿಯಾಗಿ ಶಿಶುಕೇಂದ್ರಿತ ಎಂದರೇನು, ಮಕ್ಕಳು ಹೇಗೆ ಕಲಿಯುತ್ತಾರೆ, ಬದುಕಿಗಾಗಿ ಕಲಿಕೆ, ನನ್ನ ಶಿಕ್ಷಣ ಇಂತಹ ಹಲವಾರು ಲೇಖನಗಳನ್ನು ಈ ಕೃತಿ ಒಳಗೊಂಡಿದೆ.

ಅಧ್ಯಯನ ಸಮೀಕ್ಷೆಯಲ್ಲಿ ಒಳಪಡಿಸಿದ ಎಲ್ಲಾ ಎಂ.ಫಿಲ್ ಪ್ರಬಂಧಗಳು ಮತ್ತು ಎಂ. ಇಡಿ ಕಿರು ಪ್ರಬಂಧಗಳು ಪ್ರಸ್ತುತ ಅಧ್ಯಯಸಕ್ಕೆ ನೇರ ಮತ್ತು ಪರೋಕ್ಷವಾದ ಮಾಹಿತಿಯನ್ನು ಒದಗಿಸುತ್ತವೆ. ಅದೇ ರೀತಿಯಾಗಿ ಸಂಶೋಧನಾ ಕೃತಿಗಳಾದ ಪುರುಷೋತ್ತಮ ಅವರ ಕಲಿಕೆಯ ತೊಂದರೆಗಳು, ಮಹಾಬಲೇಶ್ವರ ಅವರ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಬೋಧನೆ, ಡಿ. ಎನ್. ಶಂಕರಭಟ್ಟ ಅವರ ಕನ್ನಡಕ್ಕೆ ಬೇಕು ಕನ್ನಡದ್ದೆ ವ್ಯಾಕರಣ, ಕನ್ನಡ ಬರಹವನ್ನು ಸರಿಪಡಿಸೋಣ, ಇತ್ಯಾದಿ ಕೃತಿಗಳು ಅಧ್ಯಯನಕ್ಕೆ ನೇರವಾದ ಪೂರಕ ಮಾಹಿತಿಯನ್ನು ಒದಗಿಸುತ್ತವೆ. ಅದೇ ರೀತಿಯಾಗಿ ಸರಕಾರ ನೀಡುವ ತರಬೇತಿಗಳು ಅಧ್ಯಯನದ ನಾಲ್ಕನೆಯ ಅಧ್ಯಾಯಕ್ಕೆ ನೇರವಾದ ಮಾಹಿತಿಯನ್ನು ಒದಗಿಸಿದೆ. ಪತ್ರಿಕಾ ಲೇಖನಗಳು ಪರೋಕ್ಷವಾದ ಮಾಹಿತಿಯನ್ನು ಒದಗಿಸುವುದರ ಜೊತೆಗೆ ಅಧ್ಯಾಯಗಳನ್ನು ವಿವರಿಸುವಲ್ಲಿ ಸಹಕಾರಿಯಾಗಿವೆ. ಈ ಮೇಲೆ ತಿಳಿಸಿದ ಎಲ್ಲಾ ಸಂಶೋಧನಾ ನಿಬಂಧಗಳು, ಸಂಶೋಧನಾ ಕೃತಿಗಳು ಪ್ರಸ್ತುತ ಅಧ್ಯಯನಕ್ಕೆ ನೇರವಾಗಿ ಸಂಬಂಧಿಸಿದ್ದರೂ ಕೂಡ ಈ ಮೇಲಿನ ಅಧ್ಯಯನಗಳಿಗಿಂತ ಪ್ರಸ್ತುತ ಅಧ್ಯಯನವು ಭಿನ್ನವಾಗಿದೆ. ಏಕೆಂದರೆ ಮುಖ್ಯವಾಗಿ ಪ್ರಸ್ತುತ ನಿಬಂಧ ಬಹುಭಾಷಿಕ ಪರಿಸರವೊಂದರ ಕನ್ನಡೇತರ ಮನೆಮಾತುಳ್ಳ ಮಕ್ಕಳ ಕಲಿಕೆಯ ಬಗೆಗೆ ಅಧ್ಯಯನ ಕೈಗೊಂಡ ನಿಬಂಧವಾಗಿದೆ. ಅದರಲ್ಲಿಯೂ ದಕ್ಷಿಣ ಕನ್ನಡದಲ್ಲಿನ ಬಹುಭಾಷಿಕತೆಗೆ ತನ್ನದೇ ಆದ ವಿಶಿಷ್ಟತೆಯಿದೆ. ಆದುದರಿಂದ ಮೇಲಿನ ಎಲ್ಲ ಸಂಶೋಧನಾ ನಿಬಂಧಗಳು, ಕೃತಿಗಳು ಮತ್ತು ಲೇಖನಗಳನ್ನು ಗಮನದಲ್ಲಿಟ್ಟುಕೊಂಡು ಈ ನಿಬಂಧವನ್ನು ವಿಶಿಷ್ಟವಾಗಿ ಕಟ್ಟಿಕೊಡಲಾಗಿದೆ.

* * * * *

ಅಧ್ಯಾಯ – ಮೂರು

ದಕ್ಷಿಣ ಕನ್ನಡದ ಭಾಷಿಕ ಪರಿಸರ

ಅಧ್ಯಾಯ – ಮೂರು

ದಕ್ಷಿಣ ಕನ್ನಡದ ಭಾಷಿಕ ಪರಿಸರ

ಕರ್ನಾಟಕದ ಕರಾವಳಿಯಲ್ಲಿರುವ ದಕ್ಷಿಣ ಕನ್ನಡ ಜಿಲ್ಲೆ ಪ್ರಾರಂಭದಲ್ಲಿ ಕೆನರಾ ಜಿಲ್ಲೆ[೧] ಎಂಬುದಾಗಿ ಕರೆಯಲ್ಪಡುತ್ತಿತ್ತು. ಕ್ರಿ.ಶ. ೧೮೦೦ರಲ್ಲಿ ಕೇರಳದ ಕಾಸರಗೋಡು, ಮಂಗಳೂರು, ಬಾರಕೂರು ಮತ್ತು ಉತ್ತರ ಕನ್ನಡ ಜಿಲ್ಲೆಯ ಕೆಲವು ಭಾಗವನ್ನು ಒಳಗೊಂಡಿದ್ದ ವಿಶಾಲ ಪ್ರದೇಶ ಇದಾಗಿತ್ತು. ಈಗ ಜಿಲ್ಲೆಯ ಒಟ್ಟು ವಿಸ್ತೀರ್ಣ ೪೮೪೫ ಚ.ಕೀ.ಮೀ. ಆಗಿರುತ್ತದೆ. ಜಿಲ್ಲೆಯು ಪಶ್ಚಿಮದಲ್ಲಿ ಅರಬ್ಬೀ ಸಮುದ್ರ, ಪೂರ್ವದಲ್ಲಿ ಪಶ್ಚಿಮ ಘಟ್ಟ, ಉತ್ತರದಲ್ಲಿ ಉಡುಪಿ ಜಿಲ್ಲೆ ಹಾಗೂ ದಕ್ಷಿಣದಲ್ಲಿ ಕೇರಳ ರಾಜ್ಯಗಳಿಂದ ಸುತ್ತುವರಿದಿದೆ. ಮಂಗಳೂರು ನಗರ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಕೇಂದ್ರ ಸ್ಥಾನವಾಗಿದೆ. ಇದು ಮದ್ರಾಸ್ ಪ್ರಾಂತದ ಭಾಗವಾಗಿದ್ದ ಸಂದರ್ಭದಲ್ಲಿ ಉತ್ತರ ಕನ್ನಡ ಜಿಲ್ಲೆಯನ್ನೂ ಒಳಗೊಂಡಿತ್ತು.[೨] ನಂತರ ೧೮೬೨ರ ಏಪ್ರಿಲ್ ೧೬ರಂದು ಉತ್ತರ ಕನ್ನಡ ಜಿಲ್ಲೆಯ ಭಾಗವನ್ನು ಮುಂಬಯಿ ಪ್ರಾಂತಕ್ಕೆ ವರ್ಗಾಯಿಸಲಾಯಿತು.[೩] ಈ ಪರಿಸರವು ಭೌಗೋಳಿಕವಾಗಿ ಹಾಗೂ ಚಾರಿತ್ರಿಕವಾಗಿ ಹಲವು ವಿಶಿಷ್ಟತೆಗಳನ್ನು ಒಳಗೊಂಡಿರುವ ಭೂಭಾಗವಾಗಿದೆ. ಪಶ್ಚಿಮ ಘಟ್ಟಗಳು, ದಟ್ಟ ಅರಣ್ಯ ಪ್ರದೇಶಗಳು, ಅರಬ್ಬೀ ಸಮುದ್ರ, ಹಲವಾರು ನದಿಗಳು ಇತ್ಯಾದಿ. ಜಿಲ್ಲೆಯ ಬಹುತೇಕ ಗ್ರಾಮಗಳು ಬೆಟ್ಟಗುಡ್ಡಗಳಿಂದ ಆವೃತವಾಗಿದ್ದು, ಕಾಡು, ಬೆಟ್ಟ ಹಾಗೂ ನಾಡು ಅಥವಾ ಬಯಲುಪ್ರದೇಶಗಳೆಂಬ ವಿಭಿನ್ನ ಜನಜೀವನ ಸಂಸ್ಕೃತಿಯ ಹಾಗೂ ವಸತಿಯ ನೆಲೆಗಳಾಗಿವೆ. ದಕ್ಷಿಣ ಕನ್ನಡ ಜಿಲ್ಲೆಯು ಮಂಗಳೂರನ್ನು ಕೇಂದ್ರಸ್ಥಾನವಾಗಿ ಹೊಂದಿದ್ದು ಭೌಗೋಳಿಕವಾಗಿ ಘಟ್ಟಪ್ರದೇಶ, ನದಿಕಣಿವೆ ಮತ್ತು ದೀರ್ಘವಾದ ಕಡಲತೀರವನ್ನು ಒಳಗೊಂಡಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ ರಚನೆಗೆ ಹಾಗೂ ಈ ಪ್ರದೇಶದ ಕುರಿತಾಗಿ ಉಲ್ಲೇಖಿಸುವ ಹಲವು ಕಾಲಮಾನದ ಸಾಹಿತ್ಯಕ ಆಕರಗಳು ದೊರೆಯುತ್ತವೆ. ಈ ಪ್ರದೇಶವನ್ನು ತುಳುನಾಡು ಎಂದು ಉಲ್ಲೇಖಿಸುವ ಹಲವು ಆಕರಗಳು ದೊರೆಯುತ್ತವೆ. ಸ್ಕಂಧ ಪುರಾಣದ ಸಹ್ಯಾದ್ರಿ ಕಾಂಡದಲ್ಲಿ ಈ ಪ್ರದೇಶದ ಉಲ್ಲೇಖವನ್ನು ಕಾಣಬಹುದಾಗಿದೆ.[೪] ಕ್ರಿ. ಶ. ಆರಂಭಕಾಲದ ಸಂಗಂ ಸಾಹಿತ್ಯದಲ್ಲಿಯೂ ಈ ಪ್ರದೇಶವನ್ನು ತುಳುನಾಡು ಎಂದೇ ಉಲ್ಲೇಖಿಸಲಾಗಿದೆ. ಅದೇರೀತಿ ಆಳುಪ ಒಂದನೆ ಬಂಕಿದೇವನ ಬಾರಕೂರು ಶಾಸನವು 'ತುಳು ವಿಷಯ' ಎಂದು ಕರೆದಿದೆ. ವಿಜಯನಗರ ಶಾಸನಗಳು ಈ ಪ್ರದೇಶವನ್ನು ತುಳುರಾಜ್ಯ ಮತ್ತು ತುಳುದೇಶ ಎಂದು ಉಲ್ಲೇಖಿಸಿವೆ. ಆದರೆ ಈ ಪ್ರದೇಶದಿಂದ ಹೊರಗೆ ದೊರೆತಿರುವ ಕೆಲವು ಶಾಸನಗಳು ಮಾತ್ರ ಈ ಪ್ರದೇಶವನ್ನು 'ಆಳ್ವಕೇಡ' ಎಂದು ಉಲ್ಲೇಖಿಸುತ್ತವೆ..[೫] ಕರಾವಳಿ ಕರ್ನಾಟಕದ ಒಂದು ಭಾಗವಾಗಿ 'ತುಳುನಾಡು' ಎಂದು ಕರೆಸಿಕೊಳ್ಳುತ್ತಿರುವ ಜಿಲ್ಲೆಯೇ ದಕ್ಷಿಣ ಕನ್ನಡ.

೧೯೫೬ರಲ್ಲಿ ರಾಜ್ಯಗಳ ಪುನರ್ ವಿಂಗಡಣೆ ಸಮಯದಲ್ಲಿ ಕಾಸರಗೋಡನ್ನು ದಕ್ಷಿಣ ಕನ್ನಡದಿಂದ ಪ್ರತ್ಯೇಕಿಸಿ ಕೇರಳ ರಾಜ್ಯದಲ್ಲಿ ಹಾಗೂ ದಕ್ಷಿಣ ಕನ್ನಡವನ್ನು ಮೈಸೂರು ರಾಜ್ಯದಲ್ಲಿ ವಿಲೀನಗೊಳಿಸಲಾಯಿತು. ಆಗಸ್ಟ್ ೨೫, ೧೯೯೭ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯನ್ನು ವಿಭಜಿಸಿ ಉಡುಪಿಯನ್ನು ಹೊಸ ಜಿಲ್ಲೆಯನ್ನಾಗಿ ರೂಪಿಸಲಾಗಿದೆ. ಹಿಂದಿನ ಅವಿಭಜಿತ ಜಿಲ್ಲೆಯ ದಕ್ಷಿಣದ ಭಾಗವು ದಕ್ಷಿಣ ಕನ್ನಡ ಜಿಲ್ಲೆಯಾಗಿದ್ದು, ಈಗಿನ ಕರ್ನಾಟಕದ ಚಿಕ್ಕಮಗಳೂರು, ಹಾಸನ, ಕೊಡಗು ಮತ್ತು ಉಡುಪಿ ಜಿಲ್ಲೆ ಹಾಗೂ ಕೇರಳದ ಕಾಸರಗೋಡು ಜಿಲ್ಲೆಗಳ ಭೂ ಭಾಗಗಳ ನಡುವೆ ಇದ್ದು, ಪಶ್ಚಿಮದಲ್ಲಿ ಅರಬ್ಬೀ ಸಮುದ್ರಕ್ಕೆ ಹೊಂದಿಕೊಂಡಿದೆ. ಅದೇರೀತಿ ಜಿಲ್ಲೆಯ ಪೂರ್ವ ಭಾಗವು ಪಶ್ಚಿಮ ಘಟ್ಟಗಳಿಂದ ಆವೃತವಾಗಿದ್ದು ಐತಿಹಾಸಿಕ ಹಾಗೂ ಸಾಂಸ್ಕೃತಿಕ ಮಹತ್ವ ಪಡೆದಿದೆ.

ಸ್ಥಳ ಪುರಾಣಗಳಿಗೆ ಸಂಬಂಧಿಸಿದಂತೆ ಜಿಲ್ಲೆಯ ಅನೇಕ ತಾಣಗಳು ಪೌರಾಣಿಕ ಹಾಗೂ ಜಾನಪದೀಯ ಆಕರಗಳಲ್ಲಿ ಉಲ್ಲೇಖಗೊಂಡಿರುವುದು ವ್ಯಕ್ತವಾಗುತ್ತದೆ. ಪುರಾಣ ಪುರುಷರ ಹಾಗೂ ಪೌರಾಣಿಕ ಶಕ್ತಿಗಳ ಒಡನಾಟವನ್ನು ದಕ್ಷಿಣ ಕನ್ನಡ ಜಿಲ್ಲೆಯ ಹಲವಾರು ಧಾರ್ಮಿಕ ಕ್ಷೇತ್ರಗಳೊಂದಿಗೆ ಸ್ಥಳೀಯವಾಗಿ ತಳುಕು ಹಾಕಿ ವಿವರಿಸಲಾಗುತ್ತದೆ. ತುಳುನಾಡು ಎಂದೇ ಕರೆಸಿಕೊಳ್ಳುವ ದಕ್ಷಿಣ ಕನ್ನಡ ಜಿಲ್ಲೆಯ ಬಗೆಗೆ ಹಲವು ವಿವರಣೆಗಳು ತಿಳಿದುಬರುತ್ತವೆ. ಈ ಕರಾವಳಿ ಪ್ರದೇಶವು ರಾಮಭೋಜನೆಂಬ ಪೌರಾಣಿಕ ರಾಜನ ಹತೋಟಿಯಲ್ಲಿದ್ದು, ಆತನು ಮೂಲತಃ ತುಳುವ ವಂಶದವನಾಗಿದ್ದು ತುಳುನಾಡಿನ ಆಡಳಿತಗಾರನಾಗಿದ್ದನೆಂದು ತಿಳಿದುಬರುತ್ತದೆ[೬] ರಾಜ ರಾಮಭೋಜನು ಈ ಪ್ರದೇಶದಲ್ಲಿ ಹಲವಾರು ದತ್ತಿಗಳನ್ನು ನೀಡಿದ ಕಾರಣ ಆತನನ್ನು ಇಲ್ಲಿನ ಜನರು ಗೌರವದಿಂದ ಕಾಣುತ್ತಾರೆ. ಹೀಗಾಗಿ ಪ್ರದೇಶವನ್ನು 'ತುಳುವ ನಾಡು' ಅಥವಾ 'ತುಳುದೇಶ' ಎಂದು ಪರಿಗಣಿಸಲಾಗುತ್ತದೆ. ತುಳುಭಾಷೆ ಮಾತನಾಡುವವರು ಹೆಚ್ಚಿನ ಪ್ರಮಾಣದಲ್ಲಿ ಇಲ್ಲಿ ವಾಸಿಸುತ್ತಿರುವುದರಿಂದ ಈ ಪ್ರದೇಶಕ್ಕೆ 'ತುಳುನಾಡು' ಎಂಬ ಹೆಸರು ಬಂದಿದೆ ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.[೭] ಸಾಂಪ್ರದಾಯಿಕ ನಂಬಿಕೆಯಂತೆ ತುಳು ಬ್ರಾಹ್ಮಣರು ಅನುಸರಿಸುವ 'ಗ್ರಾಮ ಪದ್ಧತಿ'[೮] ಎಂಬ ಪೌರಾಣಿಕ ಗ್ರಂಥದ ಪ್ರಕಾರ ತುಳುವ ನಾಡನ್ನು ಪರಶುರಾಮನು ಸೃಷ್ಟಿಸಿದನೆಂದು ಹೇಳಲಾಗುತ್ತದೆ. ಪರಶುರಾಮನು[೯] ತನ್ನ ಪರಶು(ಕೊಡಲಿ)ವನ್ನು ಪಶ್ಚಿಮ ಘಟ್ಟಗಳ ಮೇಲೆ ನಿಂತು ಸಮುದ್ರದ ಕಡೆಗೆ ಎಸೆದ ಪರಿಣಾಮವಾಗಿ ಕರಾವಳಿಯ ಭೂಭಾಗವು ಗೋಚರವಾಯಿತೆಂದು ಇಂದಿಗೂ ನಂಬಲಾಗುತ್ತದೆ. ಈ ಪ್ರದೇಶವನ್ನು ಪರಶುರಾಮ ಸೃಷ್ಟಿಯ ತುಳುನಾಡು 'ಪರಶುರಾಮ ಕ್ಷೇತ್ರ' ಎಂದು ಕರೆಯಲಾಗಿದೆ. 'ಕೇರಳೋತ್ಪತ್ತಿ ಮತ್ತು ಬ್ರಹ್ಮಾಂಡ ಪುರಾಣಗಳನ್ನು ಆಧರಿಸಿ ಪರಶುರಾಮನು ಆರ್ಯವರ್ತದಿಂದ ವೈದಿಕ ಬ್ರಾಹ್ಮಣರ ಕುಟುಂಬಗಳನ್ನು ಈ ಪ್ರದೇಶಕ್ಕೆ ಬರಮಾಡಿಕೊಂಡು ಅವರುಗಳನ್ನು ತುಳುರಾಜ್ಯದ ೧೬ ಗ್ರಾಮಗಳಲ್ಲಿ ನೆಲೆಸುವಂತೆ ಮಾಡಿದನೆಂಬ ಐತಿಹ್ಯವಿದೆ.[೧೦] ಐಗಳ ಗಣಪತಿರಾವ್ ತಿಳಿಸುವಂತೆ, ಪರಶುರಾಮನು ಪ್ರಾಗಿತಿಹಾಸ ಕಾಲದವನು ಏಕೆಂದರೆ ಸಾವಿರಾರು ದಶಕಗಳ ಹಿಂದೆ ಪಶ್ಚಿಮ ಘಟ್ಟದುದ್ದಕ್ಕೂ ದಟ್ಟವಾದ ಕಾಡು ಆವರಿಸಿದ್ದು, ಅದು ಸಾಮಾನ್ಯ ಜನತೆಗೆ ನೆಲೆಸಲು ಕಷ್ಟಸಾಧ್ಯವಾಗಿತ್ತು. ಇದನ್ನು ಪರಶುರಾಮನು ಜನವಸತಿಗೆ ಅನುಕೂಲವಾಗುವಂತೆ ರೂಪಿಸಿದ್ದರಿಂದ ಈ ಪ್ರದೇಶಕ್ಕೆ ಪರಶುರಾಮ ಕ್ಷೇತ್ರ ಎಂದು ಹೆಸರು ಬಂದಿದೆ ಎಂಬುದಾಗಿ ನಂಬಲಾಗಿದೆ.[೧೧] ಪೌರಾಣಿಕ ದಾಖಲೆಗಳ ಪ್ರಕಾರ, ಸುಬ್ರಹ್ಮಣ್ಯ ಸಮೀಪದ ಪುಷ್ಪಗಿರಿ, ಕೊಲ್ಲೂರು ಬಳಿಯ ಕೂಟಶೈಲ

ಅಥವಾ ಕೊಡಚಾದ್ರಿಯು ಮೂಕಾಂಬಿಕ ದೇವಿಯ ಬಗ್ಗೆ ಮಾರ್ಕಂಡೇಯ ಪುರಣದಲ್ಲಿ ಉಲ್ಲೇಖವಿದೆ.[೧೨] ಈ ಜಿಲ್ಲೆಯಲ್ಲಿ ಹರಿಯುತ್ತಿರುವ ಕುಮಾರಧಾರಾ, ಪಯಸ್ವಿನಿ, ಚಂದ್ರಗಿರಿ ಮತ್ತು ನೇತ್ರಾವತಿ ನದಿಗ:ಳ ಬಗ್ಗೆ ಪುರಾಣ ಗ್ರಂಥಗಳಲ್ಲಿ ಸಾಕಷ್ಟು ಬಾರಿ ಉಲ್ಲೇಖಿಸಲಾಗಿದೆ. ಮಹಾಭಾರತದಲ್ಲಿ ತುಳುವನಾಡಿನ ಬಗ್ಗೆ ನೇರವಾಗಿ ಉಲ್ಲೇಖಗಳು ದೊರೆಯದಿದ್ದರೂ ಮಂಗಳೂರು ಸಮೀಪದ ಕದ್ರಿಯಲ್ಲಿ ಪಾಂಡವರ ಗವಿಗಳಿವೆ ಎಂದು ಹೇಳಲಾಗುತ್ತದೆ. ಸಾಮಾನ್ಯವಾಗಿ ಪೂರ್ವ ಇತಿಹಾಸ ಕಾಲದ ಶಿಲಾಗೋರಿಗಳಿಗೆ ಹಾಗೂ ನೆಲೆಗಳಿಗೆ ಪಾಂಡವರ ಗುಡಿ ಹಾಗೂ ನೀರು ನಿಲ್ಲುವ ಸ್ಥಳಗಳಿಗೆ ಪಾಂಡವರ ಬಾವಿಗಳೆಂದು ಹೆಸರಿಟ್ಟುಕೊಂಡು ಆರಾಧಿಸುವ ಪರಂಪರೆಯನ್ನು ಸಾಮಾನ್ಯವಾಗಿ ಕಾಣಬಹುದು.

ದಕ್ಷಿಣ ಕನ್ನಡ ಪರಿಸರವನ್ನು ಮೌರ್ಯರು, ಆಳುಪರು, ಹೊಯ್ಸಳರು, ವಿಜಯನಗರದ ಅರಸರು, ಬಂಗಾಡಿಯ ಬಂಗರಸರು, ಕೆಳದಿಯ ಅರಸರು, ಕಾರ್ಕಳದ ಭೈರರಸರು ಇವರಲ್ಲದೇ ಮೂಡಬಿದಿರೆ, ಮುಲ್ಕಿ, ಹೊಸಂಗಡಿ, ವೇಣೂರು, ಸೂರಾಲು ಮೊದಲಾದ ಕಡೆ ಬಲ್ಲಾಳ, ಚೌಟ, ಸಾವಂತ, ಅಜಿಲ, ಮೂಲಾ,, ತೋಳಹಾರ, ಹೊನ್ನಕಂಬಳಿ, ವಿಠಲಾ, ಕುಂಬಳ ಮೊದಲಾದ ಸಣ್ಣ ವಂಶಗಳೂ ಅಲ್ಲಲ್ಲಿ ಆಳ್ವಿಕೆ ನಡೆಸಿರುವುದು ಇತಿಹಾಸದಲ್ಲಿ ದಾಖಲಾಗಿರುವುದನ್ನು ಗಮನಿಸಬಹುದು.[೧೩] ದಕ್ಷಿಣ ಕನ್ನಡದ ಇತಿಹಾಸದಲ್ಲಿ ಕ್ರಿ.ಶ.೧೭೬೮ರವರೆಗೂ ಆಂಗ್ಲರು ಆಡಳಿತಗಾರರಾಗಿ ಪ್ರವೇಶಿಸಲಿಲ್ಲ. ಕೇರಳದಲ್ಲಿ ಆಂಗ್ಲರಿಗೆ ಬೆಂಬಲ ದೊರೆತ ಪರಿಣಾಮವಾಗಿ ೧೭೩೬ರಲ್ಲಿ ಕಾವರ್ಯ ನದಿತೀರದಲ್ಲಿದ್ದ ಅಲಿಕುಣ್ಣು ಕೋಟೆಯನ್ನು ಆಂಗ್ಲಸೇನೆಯು ತನ್ ವಶಕ್ಕೆ ಪಡೆದುಕೊಂಡಿತು. ಆಂಗ್ಲರ ಪ್ರಾಬಲ್ಯದಿಂದಾಗಿ ಮಂಗಳೂರಿನ ರಾಜ್ಯಪಾಲನಾಗಿದ್ದ ಬಿದನೂರಿನ ಸೂರಪ್ಪಯ್ಯನು ಫೆಬ್ರವರಿ ೧೭೩೭ರಲ್ಲಿ ಆಂಗ್ಲ ಅಧಿಖಾರಿ ಲಿಂಚ್‌ನೊಡನೆ ಒಪ್ಪಂದ ಮಾಡಿಕೊಂಡನು. ಈ ಒಪ್ಪಂದದ ಪ್ರಕಾರ ಆಂಗ್ಲರು ಆಕ್ರಮಿತ ಬಿದನೂರಿನ ಪ್ರಾಂತ್ಯವಾಗಿದ್ದ ಕೊಳ್ಳಾತಿರಿ ಪ್ರದೇಶದಲ್ಲಿ ಮೆಣಸು ಮತ್ತು ಏಲಕ್ಕಿಯ ಸಾಗರೋತ್ತರ ವ್ಯಾಪಾರದ ಏಕಸ್ವಾಮ್ಯವನ್ನು ಕ್ರಮೇಣ ಂಆಡಿಕೊಂಡರು. ಹೀಗೆ ಮಾಡಿದ ಪರಿಣಾಮವಾಗಿ ಬಿದನೂರಿನ ನಾಯಕನು ಕೊಳ್ಳಾತಿರಿ ಎಲ್ಲೆಯಲ್ಲಿ ಬರುವ ನೀಲೇಶ್ವರದ ಭಾಗವನ್ನು ತನ್ನ ಅಧಿಕಾರಕ್ಕೆ ತೆಗೆದುಕೊಂಡನು.[೧೪]

೧೮೫೮–೧೮೫೯ರ ಡಿಸೆಂಬರ್ ವರೆಗೂ ನಡೆದ ಆಂಗ್ಲರ ವಿರುದ್ಧದ ಸೆಣೆಸಾಟವು ದಕ್ಷಿಣ ಕನ್ನಡ ಜಿಲ್ಲೆಯ ಮೇಲೂ ಪ್ರಭಾವ ಬೀರಿತು. ಕೆನರಾ ಜಿಲ್ಲೆಯ (ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನೊಳಗೊಂಡಂತೆ) ಆಡಳಿತವು ಮುಂಬೈ ಪ್ರೆಸಿಡೆನ್ಸಿ ಹತೋಟಿಯಲ್ಲಿ ೧೮೬೦ರವರೆಗೂ ಮುಂದುವರೆದಿತ್ತು. ಆಡಳಿತದ ಹತೋಟಿಯ ದೃಷ್ಠಿಯಿಂದ ಈ ಎರಡು ಜಿಲ್ಲೆಗಳನ್ನು ೧೬ನೆ ಏಪ್ರಿಲ್ ೧೮೬೦ರಲ್ಲಿ ಬೇರ್ಪಡಿಸಿ ಉತ್ತರ ಕನ್ನಡ ಜಿಲ್ಲೆಯನ್ನು ಮುಂಬೈ ಪ್ರೆಸಿಡೆನ್ಸಿಗೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯನ್ನು ಮದ್ರಾಸು ಪ್ರೆಸಿಡೆನ್ಸಿಗೆ ವರ್ಗಾಯಿಸಲಾಯಿತು.

ಬಹುಭಾಷೆ, ಬಹುಸಂಸ್ಕೃತಿಯನ್ನು ಒಳಗೊಂಡಿರುವ ದಕ್ಷಿಣ ಕನ್ನಡ ಪರಿಸರವು ಕರ್ನಾಟಕದ ಇತರ ಪ್ರದೇಶಗಳಿಗಿಂತ ಸಾಂಸ್ಕೃತಿಕವಾಗಿ ಸಾಹಿತ್ಯಕವಾಗಿ ಭಿನ್ನವಾಗಿ ಕಾಣುತ್ತದೆ. ಇಲ್ಲಿನ ಆಚರಣೆಗಳಲ್ಲಿ ಪ್ರಮುಖವೆನಿಸಿಕೊಳ್ಳುವ ಯಕ್ಷಗಾನ, ತಾಳಮದ್ದಳೆ, ಭೂತಕೋಲ, ಕಂಬಳ, ಹುಲಿಕುಣಿತ, ಕಂಗೀಲು ಮೊದಲಾದ ಹಲವಾರು ಆಚರಣೆಗಳು ಭಾಷಿಕವಾಗಿ ಅಧ್ಯಯನಯುಕ್ತ ಆಕರಗಳಾಗಿವೆ. ಇವೆಲ್ಲವೂ ಇಲ್ಲಿನ ಬಹುಭಾಷಿಕತೆಗೆ ಒಂದಲ್ಲ ಒಂದು

ರೀತಿಯಲ್ಲಿ ಕಾರಣವಾಗಿವೆ. ಇದರ ಜೊತೆಗೆ ದಕ್ಷಿಣ ಕನ್ನಡ ಪರಿಸರದಲ್ಲಿ ಆಳ್ವಿಕೆ ನಡೆಸಿದ ವಿವಿಧ ಅರಸು ಮನೆತನಗಳು, ಬ್ರಿಟಿಷ್ ಆಡಳಿತದ ಸಂದರ್ಭಗಳು, ಮತಪ್ರಚಾರ, ವ್ಯಾಪಾರ-ವಹಿವಾಟಿನ ಸಂದರ್ಭಗಳು ಇಲ್ಲಿನ ಬಹುಭಾಷಿಕತೆಯೊಂದಿಗೆ ಒಂದಲ್ಲ ಒಂದು ರೀತಿಯಲ್ಲಿ ಸಂಬಂಧವನ್ನಿಟ್ಟುಕೊಂಡಿರುವುದನ್ನು ಗಮನಿಸಬಹುದು.

ಶಿಕ್ಷಣ ಕ್ಷೇತ್ರಕ್ಕೆ ದಕ್ಷಿಣ ಕನ್ನಡ ಜಿಲ್ಲಯ ಕೊಡುಗೆ ಗಣನೀಯವಾದುದು. ಆರಂಭದ ದಿನಗಳಿಂದ ಇಂದಿನವರೆಗೂ ಇಲ್ಲಿ ನಾವು ವಿವಿಧ ಮಾಧ್ಯಮಗಳಲ್ಲಿ ಬೇರೆಬೇರೆ ಶಿಕ್ಷಣಕ್ರಮಗಳ ಪ್ರಸರಣವನ್ನು ಗಮನಿಸಬಹುದು.ರಾಜ್ಯದ ಇತರ ಜಿಲ್ಲೆಗಳಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಪ್ರಾಚೀನ ಕಲಿಕಾ ಕೇಂದ್ರಗಳ ಬಗ್ಗೆ ಶಾಸನೋಕ್ತ ಉದಾಹರಣೆಗಳು ಲಭ್ಯವಿವೆ.[೧೫] ಜಿಲ್ಲೆಯಲ್ಲಿ ಮೊದಲು 'ಅಯ್ಯಗಳ ಮಠ'ಗಳೆಂಬ ಸ್ಥಳೀಯ ಶಾಲೆಗಳು ಪ್ರಾಥಮಿಕ ಶಿಕ್ಷಣ ನೀಡುತ್ತಿದ್ದವು. ಸಾಮಾನ್ಯವಾಗಿ ಮಠಗಳಲ್ಲಿ ಅಥವಾ ದೇವಸ್ಥಾನಗಳಲ್ಲಿ ನಡೆಸಲ್ಪಡುತ್ತಿದ್ದ ಈ ಶಿಕ್ಷಣ ಕ್ರಮದಲ್ಲಿ ಪಂಡಿತರು ಅಥವಾ ಅರ್ಚಕರು ಶಿಕ್ಷಕರಾಗಿರುತ್ತಿದ್ದರು. ಈ ಹಂತದ ಶಿಕ್ಷಣ ಕ್ರಮ ಮೌಖಿಕವಾಗಿ ನಡೆಯುತ್ತಿತ್ತು. ಅಲ್ಲಿ ಕನ್ನಡ ವರ್ಣಮಾಲೆಯ ಮೂಲಕ ಶಿಕ್ಷಣ ಪ್ರಾರಂಭವಾಗುತ್ತಿತ್ತು. ಗಣಿತವು ಕಲಿಕೆಯ ಮುಖ್ಯ ವಿಷಯವಾಗಿದ್ದು, ಮಗ್ಗಿ, ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಕಾರಗಳನ್ನು ಬೋಧಿಸಲಾಗುತ್ತಿತ್ತು.

ಪ್ರಸ್ತುತ ದಕ್ಷಿಣ ಕನ್ನಡವು ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡಿರುವ ಶಿಕ್ಷಣ ಕೇಂದ್ರವಾಗಿ ಬೆಳವಣಿಗೆ ಹೊಂದಿದ್ದು, ಅಂಗನವಾಡಿ ಕೇಂದ್ರಗಳು, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು, ಸರ್ಕಾರಿ ಪ್ರೌಢಶಾಲೆಗಳು, ಸರ್ಕಾರಿ ಪದವಿ ಪೂರ್ವ ಕಾಲೇಜುಗಳು, ಸರ್ಕಾರಿ ಪದವಿ ಕಾಲೇಜುಗಳು, ಅನುದಾನಿತ ಕಿರಿಯ ಪ್ರಾಥಮಿಕ ಶಾಲೆಗಳು, ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಗಳು, ಅನುದಾನಿತ ಪ್ರೌಢಶಾಲೆಗಳು, ಅನುದಾನಿತ ಪದವಿ ಪೂರ್ವ ಕಾಲೇಜುಗಳು, ಅನುದಾನಿತ ಪದವಿ ಕಾಲೇಜುಗಳು, ಖಾಸಗಿ ಕಿಂಡರ್ ಗಾರ್ಡನ್/ ಪ್ಲೇ ಹೋಂಗಳು, ಖಾಸಗಿ ಕಿರಿಯ ಪ್ರಾಥಮಿಕ ಶಾಲೆಗಳು, ಖಾಸಗಿ ಹಿರಿಯ ಪ್ರಾಥಮಿಕ ಶಾಲೆಗಳು, ಖಾಸಗಿ ಪ್ರೌಢಶಾಲೆಗಳು, ಖಾಸಗಿ ಪದವಿ ಪೂರ್ವ ಕಾಲೇಜುಗಳು, ಖಾಸಗಿ ಪದವಿ ಕಾಲೇಜುಗಳು, ಇಂಜಿನಿಯರಿಂಗ್ ಕಾಲೇಜುಗಳು, ವೈದ್ಯಕೀಯ ಕಾಲೇಜುಗಳು, ಶಿಕ್ಷಕರ ತರಬೇತಿ ಸಂಸ್ಥೆಗಳು, ಐಟಿಐ ಕಾಲೇಜುಗಳು, ಕಾನೂನು ಕಾಲೇಜುಗಳು, ವಿಶ್ವವಿದ್ಯಾಲಯಗಳು ಇದ್ದು ಶಿಕ್ಷಣ ಪ್ರಸಾರ ಮಾಡುತ್ತಿವೆ. ಅನಕ್ಷರಸ್ಥರನ್ನು ಸಾಕ್ಷರರನ್ನಾಗಿಸುವ ಸಲುವಾಗಿ ೧೯೪೯ರಲ್ಲಿ ಮೈಸೂರು ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯನ್ನು ಸ್ಥಾಪಿಸಲಾಯಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸದರಿ ಸಮಿತಿಯ ಕಾರ್ಯಗಳು ೧೯೭೦ರಲ್ಲಿ ಆರಂಭಗೊಂಡವು. ಹೀಗೆ ಶಿಕ್ಷಣ ಕ್ಷೇತ್ರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪಾತ್ರ ಮಹತ್ತರವಾಗಿರುವುದನ್ನು ಗಮನಿಸಬಹುದು.

ದಕ್ಷಿಣ ಕನ್ನಡ ಜಿಲ್ಲೆಯ ಭಾಷಿಕ ಪರಿಸರ

ದಕ್ಷಿಣ ಕನ್ನಡದಲ್ಲಿನ ದ್ವಿಭಾಷಿಕತೆ ಮತ್ತು ಬಹುಭಾಷಿಕತೆ

ದಕ್ಷಿಣ ಕನ್ನಡ ಜಿಲ್ಲಾ ಪರಿಸರದ ಭಾಷಿಕ ಮೇರೆಗಳು ಬಹುಮಟ್ಟಿಗೆ ಸ್ಪಷ್ಟವಾಗಿಯೇ ಕಂಡುಬರುತ್ತವೆ. ತುಳುನಾಡನ್ನು ಅಂದರೆ ದಕ್ಷಿಣ ಕನ್ನಡ ಜಿಲ್ಲೆಯನ್ನು ಆಳ್ವಿಕೆ ನಡೆಸಿದ ಅರಸು ಮನೆತನಗಳೆಲ್ಲವೂ ಭಾಷಿಕವಾದ ತುಳುನಾಡನ್ನೇ ಕೇಂದ್ರವನ್ನಾಗಿಟ್ಟುಕೊಂಡು ಆಳ್ವಿಕೆ ನಡೆಸಿದವ. ಅರಸುಮನೆತನಗಳ ಏಳುಬೀಳುಗಳಿಗೂ ಗಡಿರೇಖೆಗಳಲ್ಲಿನ ಬದಲಾವಣೆಗಳಿಗೂ ನೇರವಾದ ಸಂಬಂಧವಿದ್ದರೂ ಸಹ ಇದು ತುಳು ಭಾಷೆಯ ಮೇಲೆ ಹೆಚ್ಚೇನು ಪ್ರಭಾವ ಬೀರಲಿಲ್ಲ. ಏಕೆಂದರೆ ತುಳು ದೇಶಿ ಭಾಷೆಯಾಗಿದ್ದು ಸ್ಥಳೀಯರೊಂದಿಗೆ ಬೆರೆತುಕೊಂಡಿದ್ದ ಭಾಷೆ. ಅರೆಬಿಯಾ, ಪರ್ಷಿಯಾ, ಪೋರ್ಚುಗೀಸ್, ಇಂಗ್ಲಿಶ್, ಉರ್ದು, ಮಲೆಯಾಳಂ, ಮರಾಠಿ ಮುಂತಾದ ಭಾಷೆಗಳು ಈ ಪರಿಸರಕ್ಕೆ ನಾನಾ ಕಾರಣಗಳಿಂದ ಬಂದರೂ ತುಳುವಿನಂತೆ ಬೇರೂರಲು ಸಾಧ್ಯವಾಗಲಿಲ್ಲ. ಆದರೆ ಕನ್ನಡ ಅರಸು ಮನೆತನಗಳ ಆಳ್ವಿಕೆಯ ಪರಿಣಾಮವಾಗಿ, ಕರ್ನಾಟಕ ಸರ್ಕಾರದ ಆಡಳಿತ ಭಾಷೆಯಾಗಿರುವ ಕಾರಣದಿಂದ ಗಟ್ಟಿಯಾಗಿ ಬೇರೂರಲು ಸಾಧ್ಯವಾಯಿತು.

ಬಹುಭಾಷಿಕತೆ ಎಂದರೆ ದಿನನಿತ್ಯದ ಜೀವನದಲ್ಲಿ ಹಲವು ಭಾಷೆಗಳು ಬಳಕೆಯಲ್ಲಿರುವುದು. ಒಂದೇ ಪ್ರದೇಶದಲ್ಲಿ ಹಲವಾರು ಭಾಷಿಕರು ಖಾಯಂ ಆಗಿ ಜೀವಿಸುತ್ತಿರುವುದು, ದಿನನಿತ್ಯದ ಕೆಲಸಕಾರ್ಯಗಳಲ್ಲಿ ನಿರಂತರ ಕೊಡುಕೊಳ್ಳುವಿಕೆಯನ್ನು ಇಟ್ಟುಕೊಂಡಿರುವುದು. ಹಾಗೂ ಬಹುತೇಕ ಜನರು ಎರಡಕ್ಕಿಂತ ಹೆಚ್ಚು ಭಾಷೆಗಳನ್ನು ಒಳಗೊಂಡಿರುವುದು ಬಹುಭಾಷಿಕತೆಯ ಲಕ್ಷಣವಾಗಿದೆ. ಸಾಮಾನ್ಯವಾಗಿ ಗಡಿಭಾಗದಲ್ಲಿರುವ ಪ್ರದೇಶಗಳು ದ್ವಿಭಾಷಿಕ ಪ್ರದೇಶಗಳಾಗಿರುತ್ತವೆ. ಆದರೆ ಈ ಮಟ್ಟಿಗೆ ದಕ್ಷಿಣ ಕನ್ನಡ ಪರಿಸರ ಬಹುಭಾಷಿಕವಾಗಿದೆ.

ದಕ್ಷಿಣ ಕನ್ನಡವು ಕೇರಳದೊಂದಿಗೆ ನೇರ ಸಂಪರ್ಕವನ್ನು ಹೊಂದಿರುವುದರಿಂದಾಗಿ ಮಲೆಯಾಳಂ ಭಾಷೆ ಇಲ್ಲಿನವರಿಗೆ ಪರಿಚಿತವಾಗಿತ್ತು. ಕರ್ನಾಟಕದ ಅರಸು ಮನೆತನಗಳು ಇಲ್ಲಿಗೆ ಪ್ರವೇಶ ಪಡೆದಂದಿನಿಂದ ಇಲ್ಲಿ ಕನ್ನಡ ಗಟ್ಟಿಯಾಗಿ ನೆಲೆಯೂರಿತು. ಅದೇರೀತಿ ಕನ್ನಡ ಸಮುದಾಯಗಳೂ ಇಲ್ಲಿಗೆ ವಲಸೆ ಬಂದವು. ಪೋರ್ಚುಗೀಸರು ಗೋವಾವನ್ನು ಕೇಂದ್ರವಾಗಿಟ್ಟುಕೊಂಡು ವ್ಯಾಪಾರ ನಡೆಸುತ್ತಿದ್ದಾಗ ಕರಾವಳಿ ಕರ್ನಾಟಕವು ಪೋರ್ಚುಗೀಸರ ನಿಯಂತ್ರಣದಲ್ಲಿತ್ತು. ಆ ಸಂದರ್ಭ ಕರಾವಳಿ ತೀರದ ಪ್ರಮುಖ ವರ್ತಕರಾದ ಕೊಂಕಣಿ ವರ್ತಕರು ಇಲ್ಲಿಗೆ ಬಂದು ನೆಲೆಸಿದುದರ ಕಾರಣ ಕೊಂಕಣಿಯು ಪ್ರವೇಶ ಪಡೆಯಿತು. ಮುಸಲ್ಮಾನ ವರ್ತಕರು ಇಲ್ಲಿ ಬಂದು ನೆಲೆಸಿದುದರ ಪರಿಣಾಮವಾಗಿ ಬ್ಯಾರಿ ಬಾಷೆ ಇಲ್ಲಿ ಚಾಲ್ತಿಗೆ ಬಂದಿತು. ಇದರ ಜೊತೆಗೆ ಮಾಪಿಳ್ಳೆಗಳ 'ಮಾಪ್ಳಾ' ಭಾಷೆಯು ಇಲ್ಲಿ ಬಳಕೆಯಲ್ಲಿದೆ. ಟಿಪ್ಪು ಸುಲ್ತಾನನ ಆಳ್ವಿಕೆಯ ಸಂದರ್ಭದಲ್ಲಿ ಮಂಗಳೂರಿನಲ್ಲಿ ಭದ್ರ ನೆಲೆಯನ್ನು ಕಂಡುಕೊಂಡ ರಾಜಸ್ಥಾನಿ ಹಾಗೂ ಗುಜರಾತಿ ವರ್ತಕರು ತಮ್ಮ ಭಾಷೆಗಳನ್ನು ಚಾಲ್ತಿಯಲ್ಲಿರಿಸಿಕೊಂಡಿದ್ದಾರೆ. ಶಿವಾಜಿ ಹಾಗೂ ನಂತರ ಪೇಶ್ವೆಗಳ ಆಡಳಿತಾವಧಿಯಲ್ಲಿ ಇಲ್ಲಿಗೆ ಆಗಮಿಸಿದ ಮರಾಠಿಗಳು ಮರಾಠಿ ಭಾಷೆಯನ್ನು ಮಾತನಾಡುತ್ತಾರೆ. ಟಿಪ್ಪುವಿನ ಕಾಲದಲ್ಲಿ ಪರ್ಷಿಯಾ ಬಳಕೆಯಲ್ಲಿತ್ತು. ಅದೇರೀತಿ ಉರ್ದು ಭಾಷಿಕರೂ ಇದೇ ಸಂದರ್ಭದಲ್ಲಿ ಬಂದವರಾಗಿದ್ದಾರೆ. ಹೀಗೆ ನಾನಾ ಕಾರಣಗಳಿಗಾಗಿ ದಕ್ಷಿಣ ಕನ್ನಡ ಪರಿಸರಕ್ಕೆ ಬಂದವರು ತಮ್ಮ ಮನೆಮಾತುಗಳನ್ನೇ ಉಳಿಸಿಕೊಂಡಿದ್ದಾರೆ. ಇದರ ಜೊತೆಗೆ ವ್ಯವಹಾರಕ್ಕಾಗಿ ಕನ್ನಡ ಮತ್ತು ತುಳುವನ್ನು

ಉಳಿಸಿಕೊಂಡಿದ್ದಾರೆ.[೧೬] ಹೀಗೆ ನಾವು ದಕ್ಷಿಣ ಕನ್ನಡ ಪರಿಸರವನ್ನು ಬಹುಭಾಷಿಕ ಪರಿಸರ ಎಂದು ಗುರುತಿಸಬಹುದು.

ಒಂದು ಭಾಷೆ ಹತ್ತಾರು ಪ್ರದೇಶಗಳಲ್ಲಿ ಬಳಕೆಯಾಗುವುದು ಸಾಮಾನ್ಯ. ಆದರೆ ಹತ್ತಾರು ಭಾಷೆಗಳು ಒಂದು ಪರಿಸರದಲ್ಲಿ ಬಳಕೆಯಾಗುತ್ತಿರುವುದಕ್ಕೆ ಉದಾಹರಣೆ ಸಿಗುವುದು ವಿರಳ. ಇಂತಹ ಒಂದು ಸನ್ನಿವೇಶಕ್ಕೆ ಒಂದು ಉತ್ತಮ ಉದಾಹರಣೆ ದಕ್ಷಿಣ ಕನ್ನಡ ಪರಿಸರ ಈ ಕಾರಣಕ್ಕಾಗಿಯೇ ಎಂ. ಮರಿಯಪ್ಪ ಭಟ್ಟರು ಈ ಕರಾವಳಿ ಪ್ರದೇಶವನ್ನು 'ಭಾಷೆಗಳ ಆಡಂಬೋಲ'[೧೭] ಎಂದು ಕರೆದಿರುವುದು. ಭಾಷಾವೈವಿಧ್ಯಗಳನ್ನು ಗಮನದಲ್ಲಿಟ್ಟುಕೊಂಡು ನೋಡಿದರೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನೊಳಗೊಂಡ ಪ್ರದೇಶವು ಒಂದು ಚಿಕ್ಕ ಭಾರತದ ಭೂಪಟದಂತೆ ಭಾಸವಾಗುತ್ತದೆ. ಹಲವು ಸಂದರ್ಭಗಳಲ್ಲಿ ನಾವು ಬಹುಭಾಷಿಕ ಪರಿಸರ[೧೮]ವನ್ನು ಕಾಣುತ್ತೇವೆ. ಆದರೆ ದಕ್ಷಿಣ ಕನ್ನಡದ ಮಟ್ಟಿಗೆ ಹೇಳುವುದಾದರೆ ಇದು ಬಹುಭಾಷಿಕ ಪರಿಸರದ ಜೊತೆಗೆ ಬಹುಭಾಷಿಕರು ಇರುವ ಪ್ರದೇಶವೂ ಹೌದು. ಇಲ್ಲಿನ ಪ್ರದೇಶದ ಭಾಷೆ ತುಳು, ರಾಜ್ಯಭಾಷೆ ಕನ್ನಡದ ಜೊತೆಗೆ ಇಲ್ಲಿ ಕೊಂಕಣಿ ಅಲ್ಲದೆ, ಕಾರ್ಯನಿಮಿತ್ತವಾಗಿಯೋ ವಲಸೆಯ ಕಾರಣದಿಂದಲೋ ಇಲ್ಲಿ ಬಂದು ನೆಲೆಸಿರುವ ಅಥವಾ ಬಂದುಹೋಗುವ ಅನ್ಯಭಾಷಿಕರಿಂದಾಗಿ ಇಲ್ಲಿ ಮಲೆಯಾಳಂ, ಹಿಂದಿ ಉರ್ದು, ಮರಾಠಿ, ತಮಿಳು, ಗುಜರಾತಿ, ಹಿಂದೂಸ್ಥಾನಿ, ತೆಲುಗು ಮೊದಲಾದ ಅನೇಕ ಭಾಷೆಗಳು ಪ್ರಚಲಿತದಲ್ಲಿವೆ. ಇವುಗಳ ಜೊತೆಗೆ ವಿವಿಧ ಜನಾಂಗದವರು ತಮ್ಮ ಮನೆಮಾತಾಗಿ ಕರಾಡ, ಚಿತ್ಪಾವನಿ, ಶಾಲಿ, ಬಂಜಾರ, ಗೌಡಕನ್ನಡ ಮೊದಲಾದವುಗಳನ್ನು ಬಳಸುತ್ತಿದ್ದಾರೆ. ಮುಂದೆ ಇಲ್ಲಿ ಬಳಕೆಯಲ್ಲಿರುವ ಒಂದೊಂದೆ ಭಾಷೆಯನ್ನು ವಿವರಣಾತ್ಮಕವಾಗಿ ನೋಡಲಾಗಿದೆ.

ತುಳು

ಕರಾವಳಿಯ ಅತ್ಯಂತ ಪ್ರಮುಖ ಮತ್ತು ಜನಪ್ರಿಯ ಭಾಷೆ ತುಳು. ಪಂಚದ್ರಾವಿಡ ಭಾಷೆಗಳಲ್ಲಿ ಒಂದಾದ ತುಳು ಇಲ್ಲಿಯ ನೆಲದ ಭಾಷೆ; ಇಲ್ಲಿಯೇ ನೆಲೆಯನ್ನು ಕಂಡುಕೊಂಡ ಭಾಷೆ. ಹಿಂದೆ ಇಂದಿನ ಕೇರಳದಲ್ಲಿರುವ ಕಾಸರಗೋಡು, ಉಡುಪಿಯ ಬ್ರಹ್ಮಾವರದವರೆಗಿನ ಪಡುಗಡಲ ಕರೆನಾಡು ಕೂಡ ತುಳುನಾಡಿನ ಭಾಗವೇ ಆಗಿತ್ತು.[೧೯] ಇಂದೂ ಕೂಡ ಅನೌಪಚಾರಿಕವಾಗಿ ಈ ಪ್ರದೇಶವು ತುಳುನಾಡು ಎಂದೇ ಪ್ರಚಲಿತದಲ್ಲಿದೆ. ಆಡಳಿತಾತ್ಮಕವಾಗಿ ಹಂಚಿಹೋಗಿದ್ದರೂ ಇಂದಿಗೂ ದಕ್ಷಿಣ ಕನ್ನಡ, ಉಡುಪಿ ಮತ್ತು ಕೇರಳದ ಕಾಸರಗೋಡು ಪರಿಸರದಲ್ಲಿ ಸ್ಥಳೀಯ ಜನರ ಮನೆಮಾತು ತುಳು. ವಿವಿಧ ಔಪಚಾರಿಕ ಮತ್ತು ಅನೌಪಚಾರಿಕ ಸಂದರ್ಭಗಳಲ್ಲಿ ನೆರೆದವರ ಮನೆಮಾತು ಬೇರೆಬೇರೆ ಆಗಿದ್ದರೂ ತುಳುವನ್ನೇ ಸಂವಹನ ಮಾಧ್ಯಮವಾಗಿ ಬಳಸುತ್ತಿರುವುದನ್ನು ಕಾಣಬಹುದು.

ತುಳುವಿನ ಭಾಷಾವೈವಿಧ್ಯ

ತುಳು ಭಾಷಿಗರಲ್ಲಿ ಭೌಗೋಳಿಕವಾಗಿ ಮತ್ತು ಸಾಮಾಜಿಕವಾಗಿ ಹೀಗೆ ಎರಡೂ ರೀತಿಯಲ್ಲಿ ವಿವಿಧತೆಯನ್ನು ಕಾಣಬಹುದು. ೧.ಭೌಗೋಳಿಕವಾಗಿ ನೇತ್ರಾವತಿ ನದಿಗಿಂತ ದಕ್ಷಿಣ ಭಾಗದ ತುಳು, ೨.ನೇತ್ರಾವತಿ ನದಿಗಿಂತ ಉತ್ತರ ಭಾಗದ ತುಳು, ಇದರಲ್ಲಿಯೂ ಅ. ದಕ್ಷಿಣ-ಪಶ್ಚಿಮದ


ತುಳು, ಆ.ದಕ್ಷಿಣ-ಮಧ್ಯಮ ತುಳು, ಇ. ದಕ್ಷಿಣ ಪೂರ್ವದ ತುಳು, ಈ. ಉತ್ತರ-ಪಶ್ಚಿಮದ ತುಳು ಹಾಗೂ ಉತ್ತರ-ಪೂರ್ವದ ತುಳು ಎಂದು ಒಟ್ಟು ಐದು ವಿಭಾಗಗಳನ್ನು ಮಾಡಬಹುದಾಗಿದೆ.

ಇನ್ನು ಸಾಮಾಜಿಕವಾಗಿ ಇಲ್ಲಿನ ಪ್ರಮುಖ ಸಾಮಾಜಿಕ ವರ್ಗಗಳನ್ನು ಪರಿಗಣಿಸಿ ಅವು ಬಳಸುವ ತುಳುವನ್ನು ಬ್ರಾಹ್ಮಣ ತುಳು, ಜೈನ ತುಳು, ಸಾಮಾನ್ಯ ತುಳು, ಪರಿಶಿಷ್ಟರ ತುಳು ಎಂದು ನಾಲ್ಕು ಸ್ಥೂಲವಿಭಾಗಗಳನ್ನು ಕಂಡುಕೊಳ್ಳಲಾಗಿದೆ.[೨೦] ಹೀಗೆ ತುಳು ಭಾಷೆಯು ಇಲ್ಲಿನ ಎಲ್ಲ ವಿವಿಧ ಮನೆಮಾತುಳ್ಳ ಜನರ ಪ್ರಮುಖ ವ್ಯಾವಹಾರಿಕ ಭಾಷೆಯಾಗಿದೆ.

ಕನ್ನಡ

ದಕ್ಷಿಣ ಕನ್ನಡ ಪರಿಸರದಲ್ಲಿ ಪ್ರಮುಖ ಸಂವಹನ ಭಾಷೆಯಾಗಿ ತುಳು ಇದ್ದರೆ ಎರಡನೆಯ ಸ್ಥಾನ ಕನ್ನಡಕ್ಕಿದೆ. ಆದರೆ ನಗರ ಪ್ರದೇಶಗಳಲ್ಲಿ ವ್ಯಾಪಾರ ವಹಿವಾಟುಗಳ ಸಂದರ್ಭದಲ್ಲಿ ಮತ್ತು ಕಚೇರಿಗಳಲ್ಲಿ ಔಪಚಾರಿಕ ಭಾಷಾ ಮಾಧ್ಯಮವಾಗಿ ಕನ್ನಡವೇ ಪ್ರಬಲವಾಗಿದೆ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ನೆಲದ ಭಾಷೆ ತುಳು. ಈ ಕಾರಣದಿಂದ ತುಳು ಭಾಷೆಯು ಈ ಪರಿಸರದ ಕನ್ನಡವನ್ನು ಉಳಿದ ಪ್ರದೇಶಗಳ ಕನ್ನಡ ಭಾಷಾ ಪ್ರಭೇದಗಳಿಗಿಂತ ವಿಭಿನ್ನವಾಗಿ ರೂಪಿಸಿದೆ. ದಕ್ಷಿಣ ಕನ್ನಡ ಪರಿಸರದಲ್ಲಿ ಕನ್ನಡವನ್ನೇ ಮನೆಮಾತಾಗಿರಿಸಿಕೊಂಡ ಕುಟುಂಬಗಳು ಇದ್ದರೂ ಅವುಗಳ ಸಂಖ್ಯೆ ಕಡಿಮೆ. ಈ ಪರಿಸರದಲ್ಲಿ ಕನ್ನಡೇತರರೇ ಅಧಿಕ ಸಂಖ್ಯೆಯಲ್ಲಿರುವುದರಿಂದ ಇಲ್ಲಿಯವರಿಗೆ ಕನ್ನಡವು ಶಾಲೆಗಳಲ್ಲಿ ಪುಸ್ತಕಗಳ ಮೂಲಕ ಕಲಿತು ಬರುವ ಭಾಷೆ. ಆದರೆ ಇತ್ತೀಚಿನ ದಿನಗಳಲ್ಲಿ ಕನ್ನಡೇತರ ಮನೆಮಾತುಳ್ಳ ಮನೆಗಳಲ್ಲಿಯೂ ಬಾಲ್ಯದಿಂದಲೇ ಕನ್ನಡ ಕಲಿಸುವ ಪ್ರಯತ್ನ ನಡೆದಿರುವುದನ್ನು ಕಾಣಬಹುದು. ಇಲ್ಲಿನ ಕನ್ನಡವು ಶಿಷ್ಟಶೈಲಿಗಿಂತ ಭಿನ್ನವಾದ ಆಡುಮಾತಿನ ಶೈಲಿಯಾಗಿದೆ. ಸ್ಥಳೀಯ ಪಾರಿಭಾಷಿಕ ಪದಗಳಿಂದಾಗಿ ಇಲ್ಲಿನ ಕನ್ನಡ ಮತ್ತಷ್ಟು ವಿಶಿಷ್ಟವಾಗಿ ಮೂಡಿಬಂದಿದೆ. ತುಳುವಿನ ಅಸಂಖ್ಯಾತ ಶಬ್ದಗಳು ಯಥಾವತ್ತಾಗಿ ಇಲ್ಲವೇ ಸ್ವಲ್ಪ ಮಾರ್ಪಾಡಿನೊಂದಿಗೆ ಈ ಪರಿಸರದ ಕನ್ನಡದಲ್ಲಿ ಹಾಸುಹೊಕ್ಕಾಗಿ ಬೆರೆತಿವೆ.[೨೧]

ಸಾಮಾನ್ಯವಾಗಿ ಕರಾವಳಿ ಕನ್ನಡ ಅಥವಾ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಕನ್ನಡ ಎಂದಕೂಡಲೇ ಪುಸ್ತಕದ/ ಬರಹದ ಕನ್ನಡದಂತೆ ಕಾಣುತ್ತದೆ. ಇಲ್ಲಿ ಔಪಚಾರಿಕ ಸಂದರ್ಭಗಳಲ್ಲಿ ಶಿಷ್ಟ ಕನ್ನಡವನ್ನೇ ಬಳಸಲಾಗುತ್ತದೆ. ಬಹುತೇಕರು ಶಾಲಾ ಪರಿಸರದಲ್ಲಿ ಕನ್ನಡವನ್ನು ಕಲಿಯುವುದರಿಂದ ಹೀಗೆ ಶಿಷ್ಟ ಕನ್ನಡ ಬಳಕೆಯಾಗುತ್ತದೆ. ಮನೆಯಲ್ಲಿ ಮಾತನಾಡುವ ಸಂದರ್ಭ ತುಳು, ಕೊಂಕಣಿ, ಬ್ಯಾರಿ, ಮರಾಠಿ, ಬಳಕೆಯಾದರೆ ಕನ್ನಡದ ವಿವಿಧ ಪ್ರಭೇಧಗಳನ್ನು ಮಾತನಾಡುವವರು ಹವ್ಯಕ ಕನ್ನಡ, ಗೌಡ ಕನ್ನಡ, ಭೈರರ ಕನ್ನಡ, ಕೋಟ-ಕುಂದಾಪುರ ಕನ್ನಡ, ಉತ್ತರ ಕನ್ನಡದ ಹಾಲಕ್ಕಿ ಒಕ್ಕಲಿಗರ ಭಾಷೆ ಮುಂತಾದ ಆಡುನುಡಿಗಳನ್ನು ಬಳಸುತ್ತಾರೆ. ಆಡುನುಡಿಗಳಾಗಿ ಬಳಸುವ ಇಂತಹ ಪ್ರಭೇದಗಳನ್ನು ಬಿಟ್ಟರೆ ಇಲ್ಲಿನ ಜನರು ಬಳಸುವುದು ಶಿಷ್ಟ ಕನ್ನಡವೇ ಆಗಿದೆ. ಕರಾವಳಿಯ ಕೆಲವು ಆಡುನುಡಿಗಳಲ್ಲಿ ಹಳಗನ್ನಡಕ್ಕಿಂತಲೂ ಪೂರ್ವದ ಮೂಲಭಾಷೆಯ ಕೆಲವು ಅಂಶಗಳು ಉಳಿದುಕೊಂಡಿವೆ.[೨೨]



ಕೊಂಕಣಿ

ಕರಾವಳಿಯಲ್ಲಿ ತುಳು ಮತ್ತು ಕನ್ನಡದ ಅನಂತರ ಹೆಚ್ಚು ಬಳಕೆಗೊಳ್ಳುವ ಭಾಷೆ ಕೊಂಕಣಿ, ಬಳಕೆಯ ಮಟ್ಟಿಗೆ ಇದು ಮೂರನೆಯ ಸ್ಥಾನವನ್ನು ಪಡೆಯಲು ಇದು ಕೊಂಕಣಿ ಭಾಷಿಗರ ಮಧ್ಯೆ ಮಾತ್ರ ಬಳಕೆಯಲ್ಲಿರುವುದೇ ಮುಖ್ಯ ಕಾರಣ. ಇದರಿಂದಾಗಿ ಇತರರು ಕೊಂಕಣಿಯನ್ನು ಸಂವಹನ ಮಾಧ್ಯಮವಾಗಿ ಬಳಸುವುದಿಲ್ಲ. ದಕ್ಷಿಣ ಕನ್ನಡ ಪರಿಸರದಲ್ಲಿ ಕೊಂಕಣಿಯನ್ನು ಸಾರಸ್ವತರು, ಗೌಡ ಸಾರಸ್ವತರು, ರಾಜಾಪುರ ಸಾರಸ್ವತರು ಹಾಗೂ ರೋಮನ್ ಕೆಥೋಲಿಕರು ತಮ್ಮ ಮನೆಮಾತಾಗಿ ಬಳಸುತ್ತಿದ್ದಾರೆ. ಆದರೆ ಇವರ ಆಡುಮಾತಿನೊಳಗೆ ಸಹಜವಾಗಿಯೇ ಪರಸ್ಪರ ಹಲವು ಬಗೆಯ ವ್ಯತ್ಯಾಸಗಳಿರುವುದನ್ನು ಕಾಣಬಹುದು. ಸಾರಸ್ವತ ಹಾಗೂ ಗೌಡ ಸಾರಸ್ವತರ ಕೊಂಕಣಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಂಸ್ಕೃತ ಶಬ್ದಗಳು ಸೇರ್ಪಡೆಗೊಂಡಿದ್ದರೆ ರಾಜಾಪುರ ಸಾರಸ್ವತರ ಕೊಂಕಣಿಯಲ್ಲಿ ಮರಾಠಿ ಶಬ್ದಗಳು ಯಥೇಚ್ಚವಾಗಿ ಬಳಕೆಯಲ್ಲಿರುವುದನ್ನು ಗಮನಿಸಬಹುದು. ಅದೇರೀತಿ ರೋಮನ್ ಕೆಥೋಲಿಕರ ಕೊಂಕಣಿಯಲ್ಲಿ ಗೋವಾದ ಕೊಂಕಣಿಯಂತೆ ಪೋರ್ಚುಗೀಸ್ ಪ್ರಭಾವ ಕಂಡುಬರುತ್ತದೆ. ಈ ಪರಿಸರದ ಕೊಂಕಣಿಯಲ್ಲಿ ಸ್ವಲ್ಪ ಮಟ್ಟಿಗೆ ಕನ್ನಡ ಮತ್ತು ತುಳುವಿನ ಪ್ರಭಾವವೂ ಇದೆ.[೨೩] ಆಯಾ ಪ್ರದೇಶದಲ್ಲಿ ಬಳಕೆಯಲ್ಲಿರುವ ಲಿಪಿಯನ್ನೇ ಬಳಸಿಕೊಂಡು ಸಾಹಿತ್ಯ ಸೃಷ್ಟಿ ಮಾಡುವ ಕೊಂಕಣಿ ಭಾಷಿಕರು ಈ ಪರಿಸರದಲ್ಲಿ ಕನ್ನಡ ಲಿಪಿಯನ್ನೇ ಬಳಸುವುದನ್ನು ಗಮನಿಸಬಹುದು.

ಕನ್ನಡದ ವಿವಿಧ ಪ್ರಭೇದಗಳು

ಹವ್ಯಕ ಕನ್ನಡ

ಹವ್ಯಕ ಬ್ರಾಹ್ಮಣರು ಕರಾವಳಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಕಾರಣ ಇವರ ಮನೆಮಾತಾದ ಹವ್ಯಕ ಕನ್ನಡವು ಇಲ್ಲಿನ ಭಾಷಾವೈವಿಧ್ಯದಲ್ಲಿ ಒಂದಾಗಿದೆ. ಈ ಭಾಷೆಯು ಹಳೆಗನ್ನಡದ ಹಲವಾರು ವಿಶಿಷ್ಟತೆಗಳನ್ನು ತನ್ನೊಳಗೆ ಉಳಿಸಿಕೊಂಡಿದೆ. ಕನ್ನಡದ ಸಾಮಾಜಿಕ ಪ್ರಭೇದಗಳಲ್ಲಿ ಒಂದಾದ ಹವ್ಯಕ ಕನ್ನಡವು ಗ್ರಾಂಥಿಕವಾಗಿ ಬಳಕೆಯಲ್ಲಿರುವುದಕ್ಕಿಂತ ಹೆಚ್ಚಾಗಿ ಆಡುನುಡಿಯಾಗಿ ಬಳಕೆಯಲ್ಲಿದೆ. ಹವ್ಯಕ ಕನ್ನಡದಲ್ಲಿಯೂ ನಾವು ಪ್ರಾದೇಶಿಕ ಭಿನ್ನತೆಯನ್ನು ಗುರುತಿಸಬಹುದು. ಪಂಜ–ಸುಳ್ಯ ಸೀಮೆಯ ಹವ್ಯಕ ಕನ್ನಡ, ಪುತ್ತೂರು–ವಿಟ್ಲ ಸೀಮೆಯ ಹವ್ಯಕ ಕನ್ನಡ ಮತ್ತು ಕುಂಬಳೆ ಸೀಮೆಯ ಹವ್ಯಕ ಕನ್ನಡ ಎಂದು ಮೂರು ವಿಭಾಗಗಳನ್ನು ಗುರುತಿಸಲಾಗಿದೆ. ಈ ಮೂರು ಪ್ರಭೇದಗಳ ಮೇಲೂ ಇಲ್ಲಿನ ಮೂಲ ಭಾಷೆ ತುಳು ಗಣನೀಯ ಪ್ರಮಾಣದಲ್ಲಿ ಪಣಾಮ ಬೀರಿದೆ.

ಕನ್ನಡದಲ್ಲಿ ಕಂಡುಬರದ ಸಾನುನಾಸಿಕ 'ಅ'ಕಾರ, ತುಳುವಿನಿಂದ ಸ್ವೀಕರಿಸಿದ ಅರ್ಧ ಉಕಾರ, ಶಿಷ್ಟ ಕನ್ನಡದಲ್ಲಿ ಧ್ವನಿಮಾದ ಸ್ಥಾನವನ್ನು ಪಡೆಯದ 'ಜ','ಞ'ಗಳು ಸಹ ತುಳುವಿನಂತೆಯೇ ಇಲ್ಲಿ ಬಳಕೆಗೊಳ್ಳುವುದು, ಉತ್ತಮ ಪುರುಷ ಸರ್ವನಾಮದಲ್ಲಿ ವ್ಯಾವರ್ತಕ–ಅವ್ಯಾವರ್ತಕಭೇದ, ಪುಲ್ಲಿಂಗ ಮತ್ತು ನಪುಂಸಕ ಲಿಂಗ ಎಂಬ ಎರಡೇ ಲಿಂಗ ವ್ಯವಸ್ಥೆ ಮೊದಲಾದವು ಕರಾವಳಿಯ ಹವ್ಯಕ ಕನ್ನಡದ ವಿಶಿಷ್ಟತೆಗಳಾಗಿವೆ. ಜೊತೆಗೆ ಅಸಂಖ್ಯಾತ ತುಳು ಪದಗಳು ಹವ್ಯಕ ಕನ್ನಡದಲ್ಲಿ ಯಥೇಚ್ಛ ಬಳಕೆಯಾಗುತ್ತದೆ.

ಅರೆಗನ್ನಡ/ ಗೌಡ ಕನ್ನಡ

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಪುತ್ತೂರು ಮತ್ತು ಬೆಳ್ತಂಗಡಿ ಪರಿಸರದಲ್ಲಿ ಮತ್ತು ಕೊಡಗಿನ ಮಡಿಕೇರಿ, ಸೋಮವಾರಪೇಟೆ, ಭಾಗಮಂಡಲ ಪರಿಸರದಲ್ಲಿ ಮತ್ತು ಕಾಸರಗೋಡಿನ ಬಂದಡ್ಕ ಪ್ರದೇಶಗಳಲ್ಲಿ ಪ್ರಚಲಿತದಲ್ಲಿರುವ ಅರೆಭಾಷೆಯು ಕನ್ನಡದ ಒಂದು ಸಾಮಾಜಿಕ ಉಪ ಭಾಷೆಯಾಗಿದೆ. ಅರೆಭಾಷೆ ಅಥವಾ ಗೌಡ ಕನ್ನಡ ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳ ಗೌಡ ಜನರು ಉಪಯೋಗಿಸುವ ಕನ್ನಡ ಭಾಷೆಯ ಒಂದು ವಿಧ. ಅರೆಭಾಷೆ ಗೌಡರು ಸುಳ್ಯ ತಾಲೂಕು ಅಥವಾ ಕೊಡಗು ಗೌಡರು ಮಡಿಕೇರಿ ಮತ್ತು ಸೋಮವಾರಪೇಟೆ ಮತ್ತು ತುಳು ಗೌಡರು ದಕ್ಷಿಣ ಕನ್ನಡದ ಸುಳ್ಯ, ಪುತ್ತೂರು, ಬೆಳ್ತಂಗಡಿ, ಬಂಟ್ವಾಳ, ವಿಟ್ಲ, ಮಂಗಳೂರು, ಕಡಬ ಭಾಗಗಳಲ್ಲಿ ಒಂದು ಪ್ರಮುಖ ಜನಾಂಗದ ಗುಂಪಾಗಿದ್ದಾರೆ. ಆದ್ದರಿಂದ, ಕೆಲವು ಬಾರಿ ಕೊಡಗು (ಕೂರ್ಗ್) ಭಾಗವಾದ ಸುಳ್ಯದಲ್ಲಿ ಬದುಕುತ್ತಿರುವ ತುಳುವರು ಮತ್ತು ದಕ್ಷಿಣ ಕನ್ನಡ ಗೌಡರನ್ನು ಕೊಡಗು ಮತ್ತು ದಕ್ಷಿಣಕನ್ನಡದ ಗೌಡರು ಎಂದು ಕರೆಯಲಾಗುತ್ತದೆ. ಈ ಭಾಷೆಯಲ್ಲಿ ಇಂದಿಗೂ ಕಾಣಸಿಗುವ ಕೆಲವು ವಿಶಿಷ್ಟ ಪದಗಳು ಸಾವಿರ ವರ್ಷಗಳಿಗೂ ಹಳೆಯವು ಹೌದಾದರೂ, ಅವು ಅರೆಭಾಷೆಯ ರೂಪದಲ್ಲಿ ಕಾಣಿಸಿಕೊಂಡು ೫೦೦ ವರ್ಷಗಳಷ್ಟು ಹಳೆಯದು.[೨೪] ಏಕೆಂದರೆ ಅರೆಭಾಷೆಯನ್ನು ಪ್ರಧಾನವಾಗಿ ಮಾತಾಡುವ ಸುಳ್ಯ ಪರಿಸರದ ಗೌಡ ಸಮುದಾಯದ ಜನರು, ಮೇಲೆ ಹೇಳಿದ ಭೌಗೋಳಿಕ ಪರಿಸರದ ಮೂಲ ನಿವಾಸಿಗಳೇನೂ ಅಲ್ಲ. ಅವರು ಈಗಿನ ಹಾಸನ ಪರಿಸರದಲ್ಲಿರುವ ಐಗೂರು ಪ್ರಾಂತ್ಯದಿಂದ ಕರಾವಳಿಯ ಕಡೆಗೆ ವಲಸೆ ಹೋದವರು. ಈ ವಲಸೆಗೆ ನಿರ್ದಿಷ್ಟ ಕಾರಣಗಳೇನು? ಈ ವಲಸೆ

ಯಾವಾಗ ನಡೆಯಿತು ಎಂದೆಲ್ಲಾ ಹೇಳಲು ಲಿಖಿತ ಆಧಾರಗಳೇನೂ ಇಲ್ಲ. ಮೌಖಿಕ ಆಧಾರಗಳ ಸಹಾಯದಿಂದ ಇದು ೧೫–೧೬ನೇ ಶತಮಾನದಲ್ಲಿ ನಡೆದಿರಬಹುದಾದ ಘಟನೆ ಎಂದು ಊಹಿಸಬಹುದು. ಅಂದಿನಂತೆ ಇಂದಿಗೂ ಹಾಸನ ಪರಿಸರದಲ್ಲಿ ಅರೆ ಭಾಷೆ ಪ್ರಚಲಿತದಲ್ಲಿ ಇಲ್ಲ. ಇದು ಹೌದಾದರೆ ಅರೆ ಭಾಷೆಗೆ ಹೆಚ್ಚೆಂದರೆ ೪೦೦ರಿಂದ ೫೦೦ ವರ್ಷಗಳ ಇತಿಹಾಸವಿದೆ.[೨೫] ಅರೆಭಾಷೆಯಲ್ಲಿರುವ ಅನೇಕ ಪದಗಳು ಮೂಲ ದ್ರಾವಿಡದ ಕಾಲಕ್ಕೆ ಹೋಗಬಹುದು, ಆದರೆ ಅದರ ಆ ಭಾಷೆಯ ಈಗಿನ ಸ್ವರೂಪ ಅಷ್ಟು ಹಳೆಯದಲ್ಲ.

ಈ ಅರೆಭಾಷಿಕ ಗೌಡರು ಇತರ ಸಮುದಾಯದ ಜನರೊಂದಿಗೆ ಸೇರಿಕೊಂಡು ಕೊಡಗಿನಿಂದ ಬ್ರಿಟಿಷರನ್ನು ಪದಚ್ಯುತಗೊಳಿಸಲು ಸುಮಾರು ೫ ವರ್ಷಗಳ ಕಾಲ (೧೮೩೨–೩೭) ಹೋರಾಡಿದ್ದು ಇದೀಗ 'ಕಲ್ಯಾಣಪ್ಪನ ಕಾಟುಕಾಯಿ' ಎಂದು ಪ್ರಸಿದ್ಧವಾಗಿದೆ. ಈ ಹೋರಾಟದಿಂದ ಬ್ರಿಟಿಷರ ಅವಕ್ರಪೆಗೆ ಒಳಗಾದ ಸುಳ್ಯ ಪರಿಸರವು ಅಭಿವದ್ಧಿಯಾಗದೆ ಹಿಂದೆ ಬಿತ್ತು. ೧೯೭೦–೮೦ರ ದಶಕದಲ್ಲಿ ಅಡಿಕೆಗೆ ಒಳ್ಳೆಯ ಮಾರುಕಟ್ಟೆ ದೊರಕಿದ ಆನಂತರ ಸುಳ್ಯವು ಅಭಿವದ್ಧಿಯಾಯಿತು. ಇಂಥ ಬೆಳವಣಿಗೆಗಳ ಜತೆಗೆ ಅರೆಭಾಷೆ– ಸಾಹಿತ್ಯಗಳ ಬಗೆಗೂ ನಿಧಾನವಾಗಿ ಜನರಲ್ಲಿ ತಿಳಿವಳಿಕೆ ಹೆಚ್ಚತೊಡಗಿತು. ಅಣ್ಣಾಮಲೈನಲ್ಲಿ ಇದ್ದು, ಮುಂದೆ ಮದ್ರಾಸು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಪ್ರಸಿದ್ಧ ಭಾಷಾ ವಿಜ್ಞಾನಿ ಪ್ರೊ. ಕೋಡಿ ಕುಶಾಲಪ್ಪಗೌಡರು ಅರೆಭಾಷೆಯನ್ನು 'ಗೌಡ ಕನ್ನಡ'ವೆಂದು ಕರೆದು, ಇಂಗ್ಲಿಷಿನಲ್ಲಿ ಪುಸ್ತಕ ಪ್ರಕಟಿಸಿದ ಮೊದಲಿಗರು. ಆದರೆ ಸುಳ್ಯ ಪರಿಸರದಲ್ಲಿ ಗೌಡೇತರರೂ ಈ ಭಾಷೆಯನ್ನು ಆಡುವುದರಿಂದ 'ಅರೆ ಭಾಷೆ'ಯೆಂಬ ಪದ ಬಳಕೆಯಲ್ಲಿ ಉಳಿಯಿತು. ಈ ಭಾಷೆಯಲ್ಲಿ ಕನ್ನಡವು ಅರ್ಧರೂಪದಲ್ಲಿ ಉಳಿದಿರುವುದರಿಂದ ಅದನ್ನು ಯಾರೋ ಅರೆಭಾಷೆಯೆಂದು ಕರೆದಿರಬೇಕು. ಉದಾಹರಣೆಗೆ 'ಹೋಗುತ್ತೇನೆ' ಎಂಬ ಕನ್ನಡ ಪದವು ಅರೆಭಾಷೆಯಲ್ಲಿ 'ಹೋನೆ'; 'ಬರುತ್ತೇನೆ–ಬನ್ನೆ'; 'ತಿನ್ನುತ್ತೇನೆ' ಎಂಬುದು 'ತಿಂದನೆ' ಎಂದೆಲ್ಲಾ ಆಗುತ್ತದೆ. ಕನ್ನಡದಿಂದ ಇದೀಗ ಮರೆಯಾಗುತ್ತಿರುವ ಙ, ಞ, ಗಳೆಲ್ಲ ಈ ಭಾಷೆಯಲ್ಲಿ ಈಗಲೂ ಉಳಿದಿದೆ.[೨೬]

ಬ್ಯಾರಿ ಭಾಷೆ

ದಕ್ಷಿಣ ಕನ್ನಡ ಪರಿಸರದಲ್ಲಿರುವ ಮುಸಲ್ಮಾನರಲ್ಲಿ ಅತ್ಯಧಿಕ ಸಂಖ್ಯೆಯಲ್ಲಿರುವ ಜನವರ್ಗವೇ ಬ್ಯಾರಿಗಳು. ಬ್ಯಾರಿಗಳು ತುಳುನಾಡು ಎಂದು ಹಿಂದೆ ಕರೆಯಲಾಗುತ್ತಿದ್ದ ಕರ್ನಾಟಕದ ಈಗಿನ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ ಮತ್ತು ಉಡುಪಿಯಲ್ಲಿ ವಾಸವಾಗಿರುವ ಒಂದು ಮುಸ್ಲಿಮ್ ಜನಾಂಗ. ಅವರು ತಮ್ಮದೇ ಆದ ವಿಶಿಷ್ಟ ಸಂಪ್ರದಾಯ ಮತ್ತು ಸಾಂಸ್ಕೃತಿಕ ಅನನ್ಯತೆಯನ್ನು ಹೊಂದಿರುವ ಒಂದು ಸಾಮಾಜಿಕ ಪಂಗಡ. ಬ್ಯಾರಿಗಳಿಗೆ ಕೊಂಕಣ ತೀರದ ನವಾಯತರು ಮತ್ತು ಮಲಬಾರಿನ ಮಾಪಿಳ್ಳೆಗಳಿಗೆ ಸಮನಾದ ಒಂದು ಮಹತ್ವದ ಸಾಂಸ್ಕøತಿಕ ಸಂಪ್ರದಾಯವಿದೆ. ೧೯೯೧ರ ಕೂಚ್‌ಮನ್ ಸಮೀಕ್ಷಾ ವರದಿಯಲ್ಲಿ ನಮೂದಾಗಿರುವಂತೆ ಈ ಜನಾಂಗದ ಪ್ರಮುಖ ಗುರುತು ಎಂದರೆ ಪುರುಷರಿಗೆ ಬ್ಯಾರಿ ಮತ್ತು ಮಹಿಳೆಯರಿಗೆ ಬ್ಯಾರ್ದಿ ಎಂಬ ಒಕ್ಕಣೆಯಿರುವುದು. ಅಲ್ಲದೆ ಈ ಜನಾಗಕ್ಕೂ ತುಳುನಾಡಿನ ಸಂಪ್ರದಾಯಗಳಿಗೂ ನಡುವೆ ಒಂದು ಬಗೆಯ ಸಾಂಸ್ಕøತಿಕ ಸಾಮರಸ್ಯವಿದೆ. ಬ್ಯಾರಿಗಳು ತುಳು ಸಂಸ್ಕøತಿಗೆ ತಮ್ಮನ್ನು ತೆರೆದುಕೊಂಡಿರುವುದರ ಜತೆಗೆ ಮಲಬಾರಿನ ಮಾಪಿಳ್ಳೆಗಳ ವಿಭಿನ್ನ

ಸಂಪದ್ರಾಯಗಳನ್ನೂ ಅಳವಡಿಸಿಕೊಂಡಿದ್ದಾರೆ. ಬ್ಯಾರಿಗಳು ಧಾರ್ಮಿಕ ನಂಬಿಕೆಯ ದೃಷ್ಟಿಯಿಂದ ಮುಸ್ಲಿಮರಾಗಿದ್ದು ಇಸ್ಲಾಮಿನ ಶಾಫಿ ಎಂಬ ಕರ್ಮಶಾಸ್ತ್ರ ವಿಭಾಗಕ್ಕೆ ಸೇರಿದವರಾಗಿದ್ದಾರೆ. ಇವರಲ್ಲಿ ೯೫% ಬ್ಯಾರಿ ಮಾತನಾಡುವವರಾಗಿದ್ದಾರೆ.

ಬ್ಯಾರಿ ಭಾಷೆಯು ಪಶ್ಚಿಮ ಕರಾವಳಿ ಪ್ರದೇಶದ ದಕ್ಷಿಣ ಕನ್ನಡ, ಉಡುಪಿ ಮತ್ತು ಕಾಸರಗೋಡು ಜಿಲ್ಲೆಯ ಬಹುಭಾಗಗಳಲ್ಲಿ ಪ್ರಚಲಿತವಿರುವ ದ್ರಾವಿಡ ಭಾಷೆಗಳಲ್ಲಿ ಒಂದಾಗಿದೆ.[೨೭] ಬ್ಯಾರಿ ಭಾಷೆಯು ತನ್ನ ವಿಶಿಷ್ಟ ಪ್ರಯೋಗ ವಿಧಾನದ ಮೂಲಕ ತನ್ನ ಸ್ವಂತಿಕೆಯನ್ನು ಇಂದಿಗೂ ಉಳಿಸಿಕೊಂಡಿದೆ. ಕೆಲವು ಅರಬೀ ಪದಗಳನ್ನು ಬ್ಯಾರಿ ಭಾಷೆಯು ಎರವಲು ಪಡೆದಿದೆಯಾದರೂ ಬ್ಯಾರಿಗಳ ಸಂಸ್ಕೃತಿಯ ಮೇಲೆ ಅದು ಹೆಚ್ಚಿನ ಪ್ರಭಾವ ಬೀರಿಲ್ಲ. ಧರ್ಮಾಧಾರಿತವಾಗಿ ಸಂಸ್ಕೃತಿಯ ಭಾಗವಾಗಿ ಅರಬೀ ಪದಗಳು ಬ್ಯಾರಿ ಭಾಷೆಗೆ ನೆರವಾಗಿವೆ.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಮುಸಲ್ಮಾನರ ಜನಗಣತಿ ೨೦೧೧ರಂತೆ[೨೮]

	ಒಟ್ಟು ಜನಸಂಖ್ಯೆ	ಮುಸ್ಲಿಮರು	ಶೇಕಡಾವಾರು	ಪುರುಷರು	ಮಹಿಳೆಯರು
ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ	೩೫,೯೨,೯೯೧	೫೦,೨೬೮	೧೫.೦೩೬%	೨,೬೮,೧೨೩	೨,೭೨,೧೪೫

ಜನಪ್ರಿಯವಾಗಿ ಬೆಳೆದ ಅರಬೀ-ಮಲೆಯಾಳ ಎಂಬ ಲಿಪಿಯಾಧಾರಿತ ಭಾಷೆಯ ಸಾಹಿತ್ಯಗಳು ಬ್ಯಾರಿ ಸಂಸ್ಕೃತಿ ಮತ್ತು ಭಾಷೆಯ ಮೇಲೆ ಸಾಕಷ್ಟು ಪ್ರಭಾವ ಬೀರಿವೆ. ಅರಬೀ-ಮಲೆಯಾಳ ಲಿಪಿಯಲ್ಲಿದ್ದ ಮಾಲೆಪ್ಪಾಟ್ಟುಗಳು, ಕಿಸ್ಸಪಾಟ್ಟುಗಳು, ಸೆಬೀನಾ ಪಾಟ್ಟುಗಳು[೨೯] ಬ್ಯಾರಿ ಭಾಷೆಯ ಮೇಲೂ ಪ್ರಬಾವ ಬೀರಿದ್ದವು. ಈ ಪ್ರಭಾವದಿಂದ ಅರಬೀ- ಮಲೆಯಾಳದ ಹಲವು ಪದಗಳು ಬ್ಯಾರಿ ಭಾಷೆಯೊಂದಿಗೆ ಸೇರ್ಪಡೆಗೊಂಡಿವೆ. ಒಂದು ಕಾಲದಲ್ಲಿ ಬ್ಯಾರಿಗಳು ಬಳಸುತ್ತಿದ್ದರೆನ್ನಲಾದ 'ಬಟ್ಟೆಲುತ್ತು' (ಬಟ್ಟೆಬರಹ)[೩೦] ಲಿಪಿಯಲ್ಲಿ ಹಲವಾರು ದಾಖಲೆಗಳಿದ್ದರೂ, ಆ ಲಿಪಿಯಲ್ಲಿ ಬ್ಯಾರಿ ಸಾಹಿತ್ಯ ಬೆಳೆದಿದ್ದರ ಬಗೆಗೆ ಯಾವುದೇ ಸುಳಿವಿಲ್ಲ.

ತುಳುನಾಡಿನ ಇತಿಹಾಸವನ್ನು ತೆಗೆದುಕೊಂಡರೆ ಅತ್ಯಂತ ಪ್ರಾಚೀನ ಮುಸ್ಲಿಮ್ ಜನಾಂಗವಾಗಿದ್ದಾರೆ. ಇಡೀ ಭಾರತದಲ್ಲೇ ಅತ್ಯಂತ ಪುರಾತನ ಮುಸ್ಲಿಮ್ ಸಮುದಾಯವಾಗಿರುವ ಬ್ಯಾರಿಗಳಿಗೆ ೧,೨೦೦ವರ್ಷಕ್ಕೂ ದೀರ್ಘವಾದ ನಿಖರ ಐತಿಹಾಸಿಕ ಹಿನ್ನಲೆಯಿದೆ. ತುಳು ಜನಪದ ಹಾಡಾಗಿರುವ ಪಾಡ್ದನ ಮತ್ತಿತರ ದಾಖಲೆಗಳು ಕೂಡಾ ಈ ಜನಾಂಗಕ್ಕೆ ತುಳುನಾಡು ಮತ್ತು ಅದರ ಸಂಸ್ಕೃತಿಯೊಂದಿಗೆ ಇದ್ದ ಅಂತರ್ಗತ ಸಂಬಂಧಗಳನ್ನು ಎತ್ತಿ ತೋರಿಸುತ್ತದೆ.

ಬ್ಯಾರಿ ಭಾಷೆಯಲ್ಲಿ ಮಹಾಪ್ರಾಣ ಅಕ್ಷರಗಳಿಲ್ಲ. ಇದರಲ್ಲಿ ಅ, ಆ, ಇ, ಈ, ಉ, ಊ, ಒ, ಓ, ಸೇರಿದಂತೆ ಹತ್ತು ಸ್ವರಾಕ್ಷರಗಳು, ಕ, ಗ, ಚ, ಜ, ಟ, ಡ, ತ, ದ, ಪ, ಬ, ಯ, ರ, ಲ, ವ, ಶ, ಸ, ಹ ಸೇರಿದಂತೆ ೧೭ ವ್ಯಂಜನಾಕ್ಷರಗಳು ಹಾಗೂ ಅನುನಾಸಿಕಗಳಾದ ಙ, ಞ, ನ಼, ಮ ಗಳು ಅಲ್ಲದೆ ವಿಶೇಷ ಅಕ್ಷರಗಳಾಗಿ ಸಾಂದರ್ಭಿಕವಾಗಿ ಬಳಸಲಾಗುವ ಕ಼, ಝ಼, ಫ಼, ಎಲ್ಲ ಸೇರಿ ಒಟ್ಟು ೩೪ ಅಕ್ಷರಗಳನ್ನು ಗುರುತಿಸಬಹುದು.

ಬ್ಯಾರಿ ವರ್ಣಮಾಲೆ[೩೧]

ಸ್ವರಗಳು	ಇ	ಈ	ಅ್		ಉ	ಊ	
	ಎ	ಏ				ಒ	ಓ
			ಅ	ಆ			
ವ್ಯಂಜನಗಳು							
ಸ್ಪರ್ಶ, ಸ್ಪರ್ಶ ಸಂಘರ್ಷ	ಪ	ತ	ಟ	ಚ	ಕ		
	ಬ	ದ	ಡ	ಜ	ಗ		
ಅನುನಾಸಿಕಗಳು	ಮ	ನ		ಞ	ಙ		
ಘರ್ಷಗಳು	(ಫ)	ಸ		(ಶ)	(ಖ)	ಹ	
		(ಝ)					
ಕಂಪಿತ		ರ					
ಪಾರ್ಶ್ವಿಕ		ಲ					
ಅರ್ಧಸ್ವರಗಳು	ವ			ಯ			

ಕಂಸದೊಳಗೆ ಕೊಟ್ಟಿರುವ ವರ್ಣಗಳು ಎರವಲು ಪದಗಳಲ್ಲಿ ಮಾತ್ರ ಬರುತ್ತವೆ. ಅ್ ಕಾರಕ್ಕೆ ದೀರ್ಘರೂಪವಿಲ್ಲ. ಅದು ಪದಮಧ್ಯ ಹಾಗೂ ಪದಾಂತ್ಯದಲ್ಲಿ ಮಾತ್ರ ಬರುತ್ತದೆ.[೩೨] ಹೀಗೆ ಬ್ಯಾರಿ ನುಡಿಯಲ್ಲಿ ಒಟ್ಟು ೩೪ ಧ್ವನಿಗಳಿವೆ.

ಬ್ಯಾರಿ ಭಾಷೆಯಲ್ಲಿ ಲಿಂಗಸೂಚಕ ಪದಗಳು ಸ್ಪಷ್ಟವಾಗಿ ಬಳಕೆಯಾಗಿವೆ. ಸ್ತ್ರೀವಾಚಕ ಶಬ್ದಗಳಲ್ಲಿ 'ಇ' ಕಾರ್ತಿ, ಗಾರ್ತಿ ಪ್ರತ್ಯಯ ಸೇರ್ಪಡೆಯಾಗುತ್ತದೆ. ಉದಾ; ಬ್ಯಾರಿ(ಪು),

ಬ್ಯಾರ್ದಿ(ಸ್ತ್ರೀ) ಬ್ಯಾರಿ ಭಾಷೆಯಲ್ಲಿರುವ ಬಹುವಚನ ಪ್ರತ್ಯಯಗಳು ಜ ಮತ್ತು ರ್ ಉದಾ; ದಾದ(ಏ.ವ) ದಾದಡಜ(ಬ.ವ) ಬ್ಯಾರಿ ಭಾಷೆಯಲ್ಲಿ 'ಪಾಟ್/ ಬಾಟ್' ಎಂಬ ಅಂತ್ಯ ಪ್ರತ್ಯಯಗಳು ಸಂಆನ್ಯವಾಗಿ ಬಳಸಲ್ಪಡುತ್ತವೆ. ಅರಬೀ ಪದಗಳು ಬ್ಯಾರಿ ಭಾಷೆಗೆ ಎರವಲು ರೂಪದಲ್ಲಿ ಬಂದ ಕಾರಣ ಅವುಗಳ ಬರವಣಿಗೆಗಾಗಿ ಕ಼, ಜ಼, ಫ಼ ಗಳನ್ನು ವಿಶೇಷವಾಗಿ ತೆಗೆದುಕೊಳ್ಳಲಾಗಿದೆ. ಇವು ಮೂಲ ಕ, ಜ, ಪ ಗಳಿಗಿಂತ ಉಚ್ಚಾರಣೆಯಲ್ಲಿ ಭಿನ್ನವಾಗಿವೆ.

ವ್ಯುತ್ಪತ್ತಿ

ಬ್ಯಾರಿ ಎಂಬ ಪದವು ತುಳುವಿನ ಬ್ಯಾರ ಎಂಬ ಶಬ್ದ ದಿಂದ ಉದ್ಭವಗೊಂಡಿದ್ದು ವ್ಯಾಪಾರ ವಹಿವಾಟು ಎಂದು ಅದರ ಅರ್ಥ. ಪ್ರಾಚೀನ ಕಾಲದಿಂದಲೂ ಈ ಜನಾಗದ ಹೆಚ್ಚಿನ ಜನರು ವ್ಯಾಪಾರ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಡಿದ್ದರು. ಆದ್ದರಿಂದ ಸ್ಥಳೀಯ ತುಳುವರು ಅವರನ್ನು ಬ್ಯಾರಿಗಳೆಂದು ಕರೆಯುತ್ತಿದ್ದರು. ಕ್ರಿ.ಶ.೧೮೯೧ರ ಜನಗಣತಿಯ ಪ್ರಕಾರ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆ ಕಾಲದಲ್ಲಿ ೯೦,೩೪೫ ಬ್ಯಾರಿಗ ವ್ಯಾಪಾರಿಗಳಿದ್ದರು. ಮತ್ತು ಇದು ಒಟ್ಟು ವರ್ಕರ ಪ್ರಮಾನಕ್ಕೆ ಹೋಲಿಸಿದರೆ ಸುಮಾರು ಶೇಕಡಾ ೯೭ರಷ್ಟಾಗಿತ್ತು. ಆದ್ದರಿಂದಲೇ ಅವರನ್ನು ಬ್ಯಾರಿಗಳೆಂದು ಕರೆಯಲಾಗುತ್ತಿತ್ತು ಮತ್ತು ಇದು ಅನ್ವರ್ಥಕನಾಮವೂ ಆಗಿತ್ತು.

ಭೌಗೋಳಿಕ ವಿಸ್ತರಣೆ

ಬ್ಯಾರಿಗಳು ಹಿಂದಿನ ಅವಿಭಜಿತ ದಕ್ಷಿಣ ಕನ್ನಡದ ಭಾಗಗಳಾದ ಮಂಗಳೂರು, ಉಡುಪಿ ಮತ್ತು ಕಾಸರಗೋಡಿಗೆ ಆಗಮಿಸಿದ್ದ ಪ್ರಾಚೀನ ಅರಬ್ ವರ್ತಕರು ಮತ್ತು ಸ್ಥಳೀಯ ಮೂಲನಿವಾಸಿಗಳ ಸಂತಾನವಾಗಿದ್ದಾರೆ. ಒಂದು ವರ್ತಕ ಸಮುದಾಯವಾಗಿದ್ದ ಕಾರಣ ಇವರು ನದಿ ತಟಗಳಲ್ಲಿ ವಾಸ ಹೂಡಿದರು. ಮಂಗಳೂರಿನ ಕಡೆ ಅರಬಿ ಸಮುದ್ರದ ಹಿನ್ನೀರಿನಿಂದ ಆವೃತ್ತವಾದ ಉಳ್ಳಾಲದಿಂದ ಮೂಲ್ಕಿಯವರೆಗಿನ ದೋಣಿಯಲ್ಲಿ ಸಂಚರಿಸಲು ಸಾಧ್ಯವಿರುವ ೧೫ ಕಿ.ಮೀ. ವ್ಯಾಪ್ತಿಯಲ್ಲಿ ಈ ಜನಾಂಗ ವಾಸ ಹೂಡಿತು. ಮತ್ತೊಂದೆಡೆ ಕಾಸರಗೋಡಿನಿಂದ ಮಂಜೇಶ್ವರದವರೆಗಿನ ತೀರ ಪ್ರದೇಶದಲ್ಲಿ ಕೂಡಾ ಇವರು ಠಿಕಾಣಿ ಹೂಡಿದರು. ಇವು ಬ್ಯಾರಿಗಳ ಪ್ರಾಚೀನ ವಸತಿ ಪ್ರದೇಶಗಳಾಗಿದ್ದವು ಮತ್ತು ಇಲ್ಲಿ ಕ್ರಿ.ಶ. ಏಳನೇ ಶತಮಾನದಷ್ಟು ಹಿಂದೆಯೇ ಇಸ್ಲಾಮಿನ ಪ್ರವೇಶವಾಗಿತ್ತು.[೩೩]

ಕ್ರಮೇಣ ಬ್ಯಾರಿಗಳು ಕೊಡಗು, ಚಿಕ್ಕಮಗಳೂರು, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳಿಗೂ ಹರಡಿದರು. ಕ್ರಿ.ಶ.೧೯೫೦ರ ನಂತರ ಇವರು ಕೇವಲ ಭಾರತದಲ್ಲಷ್ಟೇ ಅಲ್ಲ, ಗಲ್ಫ್, ಅಮೇರಿಕಾ, ಆಸ್ಟ್ರೇಲಿಯಾ ಮತ್ತಿತರ ರಾಷ್ಟ್ರಗಳಿಗೂ ತಮ್ಮ ವ್ಯಾಪ್ತಿಯನ್ನು ವಿಸ್ತರಿಸಿಕೊಂಡರು. ಇಂದು ಇವರು ಭಾರತದ ಪ್ರಮುಖ ನಗರಗಳಾದ ಬೆಂಗಳೂರು, ಮುಂಬೈ, ಗೋವಾ ಮತ್ತು ಮೈಸೂರಿನಲ್ಲೂ ಕಂಡು ಬರುತ್ತಾರೆ. ಇಂದು ಬ್ಯಾರಿಗಳ ಜನಸಂಖ್ಯೆ ೧೫ಲಕ್ಷವನ್ನೂ ದಾಟಿದ್ದು ವಿಶ್ವದಾದ್ಯಂತ ಇವರು ಹಬ್ಬಿಕೊಂಡಿದ್ದಾರೆ.

ಉಗಮ ಮತ್ತು ಇತಿಹಾಸ

ಬ್ಯಾರಿ ಸಮುದಾಯದ ಉಗಮವು ಸಮರ್ಪಕವಾಗಿ ದಾಖಲುಗೊಂಡಿಲ್ಲ. ಡಾ. ಸುಶೀಲಾ ಉಪಾಧ್ಯಾಯ ಮತ್ತು ಪ್ರೊ. ಬಿ.ಎಂ. ಇಚ್ಲಂಗೋಡುರಂಥವರು ಬಾರಿಗಳ ಉಗಮವನ್ನು ಪತ್ತೆಹಚ್ಚಲು ಬಹಳ ಪ್ರಯತ್ನಗಳನ್ನು ನಡೆಸಿದ್ದಾರೆ. ತುಳುನಾಡಿನೊಂದಿಗೆ ಅರಬ್ ವರ್ತಕರ ಸಂಪರ್ಕವು ಒಂದು ಸಂತತಿ ಮತ್ತು ಸಮುದಾಯಕ್ಕೆ ಜನ್ಮ ಕೊಟ್ಟಿತೆಂಬುದು ವ್ಯಕ್ತ. ಇಸ್ಲಾಮಿನ ಪ್ರವೇಶದೊಂದಿಗೆ ತಮ್ಮ ವ್ಯಾಪಾರ ವಹಿವಾಟುಗಳ ಜತೆಗೆ ಈ ಅರಬರು ಧರ್ಮ ಪ್ರಚಾರ ಚಟುವಟಿಕೆಗಳಲ್ಲೂ ತಮ್ಮನ್ನು ತೊಡಗಿಸಿಕೊಂಡರು. ಅಂದಿನ ಕಾಲದಲ್ಲಿ ತುಳುನಾಡಿನಲ್ಲಿ ಊಳಿಗಮಾನ್ಯ ವ್ಯವಸ್ಥೆ ಇತ್ತು ಮತ್ತು ಜಾತಿ ಪದ್ಧತಿಯು ಅಳವಾಗಿ ಬೇರೂರಿತ್ತು. ಅರಬರು ತಮ್ಮ ಔದಾರ್ಯ, ಪ್ರಾಮಾಣಿಕತೆ ಮತ್ತು ಶಿಸ್ತುಬದ್ಧ ಜೀವನಶೈಲಿಯ ಮೂಲಕ ಸ್ಥಳೀಯರನ್ನು ತಮ್ಮತ್ತ ಆಕರ್ಷಿಸಿದರು. ಇದೇ ಬಗೆಯ ಅರಬ್ ಸಂಪರ್ಕಗಳಿಂದಾಗಿ ಪಶ್ಚಿಮ ಕರಾವಳಿಯ ವಿವಿಧ ಭಾಗಗಳಲ್ಲಿ ಹಲವು ಜನಸಮುದಾಯಗಳು ಉಗಮಗೊಂಡವು. ಮಲಬಾರ್, ಕೊಂಕಣ್, ಕೋರಮಂಡಲ್ ತೀರಗಳಲ್ಲಿ ಜನ್ಮತಳೆದ ಈ ಜನಾಂಗಗಳು ಕ್ರಮೇಣ ಮಾಪಿಳ್ಳ, ನವಾಯತ್ ಮತ್ತು ಲಬ್ಬಾಯಿಗಳೆಂಬ ಹೆಸರಿನಿಂದ ಗುರುತಿಸಲ್ಪಟ್ಟರು.[೩೪]

ಅರಬ್ ಸಂಪರ್ಕದಿಂದಾಗಿ ದಕ್ಷಿಣ ಕರಾವಲಿಯಲ್ಲಿ ಹೊಸ ಜನಾಂಗಗಳು ಜನ್ಮ ತಳೆದವು ಎಂಬ ವಾದವನ್ನು ತಾರಾಚಂದ್, ಥೋಮಸ್ ಆರ್ನಾಲ್ಡ್, ಸಾಲೆತೂರೆ ಮತ್ತಿತರ ಹಲವು ಇತಿಹಾಸಜ್ಞರು ಬೆಂಬಲಿಸುತ್ತಾರೆ. ಹೀಗೆ ಇಸ್ಲಾಮಿಗೆ ಮತಾಂತರಗೊಂಡವರಲ್ಲಿ ಹೆಚ್ಚಿನವರು ಕೆಳ ವರ್ಗಕ್ಕೆ ಸೇರಿದವರೂ ಸ್ಥಳೀಯ ಮತವನ್ನು ಪಾಲಿಸುತ್ತಿದ್ದವರೂ ಆಗಿದ್ದರು. ಆದರೆ ಇವರು ಇತರ ಸ್ಥಳೀಯ ಜನತೆಯೊಂದಿಗೆ ತಮ್ಮ ಸ್ನೇಹ ಸಂಬಂಧವನ್ನು ಮುಂದುವರೆಸುತ್ತಲೇ ಹೋದರು. ೧೮೮೬ರ ಪಾಡ್ದನಗಳು ಅರ್ಥಾತ್ ನಡವಳಿಕೆ ಗುಚ್ಛದಲ್ಲಿ ಎರಡು ಗುಂಪಿನ ಬ್ಯಾರಿಗಳ ಬಗ್ಗೆ ಪ್ರಸ್ತಾಪವಿದೆ – ಜಾತಿ ನೀತಿ ಬ್ಯಾರಿಗಳು ಮತ್ತು ಜಾತಿ ಶೆಟ್ಟಿ ಬ್ಯಾರಿಗಳು. ಜಾತಿ ನೀತಿ ಬ್ಯಾರಿಗಳಿಗೆ ಸ್ಥಳೀಯರ ದೃಷ್ಟಿಯಲ್ಲಿ ಹೆಚ್ಚಿನ ಮನ್ನಣೆ ಗೌರವವಿತ್ತು ಮತ್ತು ಅವರು ಇಸ್ಲಾಮೀ ನಂಬಿಕೆ ಮತ್ತು ಶಿಸ್ತನ್ನು ಪಾಲಿಸುತ್ತಿದ್ದರು. ಇನ್ನೊಂದು ಗುಂಪು ಕೇವಲ ಇಸ್ಲಾಮಿನ ಪವಿತ್ರ ವಚನ (ಕಲಿಮಾ)ದ ಪ್ರತಿಜ್ಞೆಯನ್ನು ಸ್ವೀಕರಿಸಿತ್ತಾದರೂ ಇಸ್ಲಾಮೀ ಆಚರಣೆಗಳನ್ನು ಪಾಲಿಸುತ್ತಿರಲ್ಲಿಲ್ಲ. ಇವರ ಹೆಸರುಗಳಿಗೂ ಸ್ಥಳೀಯ ಹೆಸರುಗಳಿಗೂ ನಿಕಟ ಸಾಮ್ಯತೆ ಇತ್ತು. ಉದಾ: ಆದು, ಸೇಕು, ಬಪ್ಪ, ಸಾದು, ಸೈದು ಇತ್ಯಾದಿ.[೩೫]

ಧರ್ಮ ಪ್ರಚಾರ

ಮಲಬಾರ್ ಮತ್ತು ತುಳುನಾಡಿನಲ್ಲಿ ಇಸ್ಲಾಮ್ ಧರ್ಮ ಪ್ರಚಾರಕ್ಕೆ ದೀನಾರ್ ಮಿಷನರಿಯೇ ಕಾರಣ. ಹಿಂದೆ ಸಿಂಹಳೀಯ ತೀರ್ಥಯಾತ್ರಿಕ ಶೇಕ್ ಸಿಕಾವುದ್ದೀನ್ ಎಂಬವರು ರಾಜ ಚೆರುಮಾನ್ ನ ರಾಜಧಾನಿ ಕೊಡುಂಗಲ್ಲೂರ್ ಗೆ ಭೇಟಿ ನೀಡಿದ್ದರೆಂದೂ ಮಕ್ಕಾದಲ್ಲಿ ಚಂದ್ರ ವಿಭಜನೆಗೊಂಡ ಕತೆಯನ್ನು ವಿವರಿಸಿದ್ದರೆಂದೂ ಹೇಳಲಾಗುತ್ತದೆ. ಕೊಡುಂಗಲ್ಲೂರಿನ

ರಾಜನಿಗೆ ಅದಾಗಲೇ ಈ ಕನಸು ಬಿದ್ದಿತ್ತು ಮತ್ತು ಇದೊಂದು ಪವಾಡವೆಂಬುದು ಮನವರಿಕೆಯಾದ ಬಳಿಕ ಅವರು ಮಕ್ಕಾಗೆ ಹೊರಟು ಪ್ರವಾದಿಯನ್ನು ನೋಡುವ ಅಭಿಲಾಷೆ ವ್ಯಕ್ತಪಡಿಸಿದರು. ಆ ವ್ಯಕ್ತಿಯ ಹೆಸರು ಅಬ್ದುಲ್ ರಹ್ಮಾನ್ ಸಾಮಿರಿ ಎಂದಾಗಿತ್ತು.[೩೬] ರೆಹಾಬಿಯಾ ಅವರ ಪತ್ನಿಯಾಗಿದ್ದರು. ಅವರು ಮಕ್ಕಾ ಸಂದರ್ಶನದಿಂದ ಹಿಂದಿರುಗುವಾಗ ಮಾರ್ಗ ಮಧ್ಯದಲ್ಲಿ ಮೃತಪಟ್ಟರು. ಮಾತ್ರವಲ್ಲ, ಇಸ್ಲಾಮಿನ ಪ್ರಚಾರದ ಹೊಣೆಗಾರಿಕೆಯನ್ನು ಅವರು ತನ್ನ ಸಂಗಾತಿಗಳಾದ ಮಾಲಿಕ್ ಬಿನ್ ದೀನಾರ್ ಮತ್ತವರ ಅನುಯಾಯಿಗಳಿಗೆ ವಹಿಸಿಕೊಟ್ಟರು. ದೀನಾರ್ ಎಂಬವರ ನಾಯಕತ್ವದಲ್ಲಿ ಈ ಧರ್ಮಪ್ರಚಾರಕರ ತಂಡವು ಮಲಬಾರ್ ಕರಾವಳಿಯನ್ನು ತನ್ನ ಕರ್ಮಭೂಮಿಯನ್ನಾಗಿ ಮಾಡಿಕೊಂಡಿತು. ಕೇರಳೊಳ್ಪತ್ತಿ ಎಂಬ ಆರಂಭ ಕಾಲದ ಮಲಯಾಳಂ ಕೃತಿ ಹಾಗೂ ಲೋಗನ್ ಬರೆದ ಮಲಬಾರ್ ಮ್ಯಾನುವಲ್ ನ ಭಾಗ ಒಂದರಲ್ಲಿ ಈ ಮಿಷನರಿಗಳು ಸ್ಥಾಪಿಸಿದ ಹತ್ತು ಮಸೀದಿಗಳ ಪ್ರಸ್ತಾಪವಿದೆ. ಈ ಪೈಕಿ ಮೂರು ಮಸೀದಿಗಳು ತುಳುನಾಡಿನಲ್ಲಿ, ಅಂದರೆ ಕಾಸರಗೋಡು, ಮಂಗಳೂರು ಮತ್ತು ಬಾರಕೂರಿನಲ್ಲಿ ಸ್ಥಾಪನೆಗೊಂಡಿದ್ದವು. ಈ ಮೂರು ಕೇಂದ್ರಗಳಿಗೆ ಖಾಝಿಗಳನ್ನೂ ನೇಮಕ ಮಾಡಲಾಗಿತ್ತು. ಮಾಲಿಕ್ ಬಿನ್ ಹಬೀಬ್ ರ ಮಕ್ಕಳಾದ ಇಬ್ರಾಹೀಮ್, ಮೂಸಾ ಮತ್ತು ಮಹಮೂದ್ ಖಾಝಿಯ ಕರ್ತವ್ಯ ನಿರ್ವಹಿಸುತ್ತಿದ್ದರು. ತುಳುನಾಡಿಗೆ ಇಸ್ಲಾಮ್ ಪ್ರವೇಶವಾದ ಕುರಿತ ಈ ವಿಚಾರಣೆಯು ಅತ್ಯಂತ ವಿಶ್ವಾಸಾರ್ಹವಾದುದೆಂದು ಲೋಗನ್ ಹೇಳಿದ್ದಾನೆ.[೩೭] ಈ ಮಸೀದಿ ಮತ್ತು ಮುಸ್ಲಿಮ್ ಕೇಂದ್ರಗಳ ಪೈಕಿ ಬಾರಕೂರು ಸೂಕ್ತ ಬೆಂಬಲ ಇಲ್ಲದ ಕಾರಣ ಕ್ರಮೇಣ ಮರೆಯಾಗುತ್ತಾ ಹೋಯಿತು. ತದನಂತರ ಬಾಬಾ ಫಕ್ರುದ್ದೀನ್, ಸಯ್ಯದ್ ಶರೀಫುಲ್ ಮದನಿ ಮತ್ತಿತರ ಹಲವು ಸೂಫಿ ಸಂತರು ಈ ಪ್ರದೇಶಗಳಲ್ಲಿ ಇಸ್ಲಾಮಿನ ಸಂದೇಶ ಪ್ರಚಾರ ನಡೆಸಿದರು. ಮಲಬಾರ್ ನಲ್ಲಿ ಈ ಜನಾಂಗವು ಮಾಪಿಳ್ಳ ಎಂಬ ಹೆಸರಿನಿಂದ ಪ್ರಸಿದ್ಧವಾಯಿತು ಮತ್ತು ಇವರು ಸ್ಥಳೀಯ ಮಲಯಾಳಂ ಭಾಷೆಯನ್ನು ಸಂವಹನಕ್ಕೆ ಬಳಸಿಕೊಂಡರು.

ಮಾಪಿಳ್ಳಗಳ ಸಂದೇಶ ಪ್ರಚಾರ ಚಟುವಟಿಕೆಗಳ ಪ್ರಭಾವದಿಂದಾಗಿ ತುಳುನಾಡಿನ ಬ್ಯಾರಿಗಳು ಕೂಡಾ ಮಾಪಿಳ್ಳಗಳೆಂದೇ ಗುರುತಿಸ್ಪಟ್ಟರು. ಅವರ ಹೆಸರಿನಲ್ಲಿ ಬ್ಯಾರಿ ಎಂಬ ಒಕ್ಕಣೆ ಇದ್ದರೂ ಎಲ್ಲ ಕಂದಾಯ ದಾಖಲೆಗಳಲ್ಲಿ ಅವರು ಮಾಪಿಳ್ಳ ಜಾತಿ ಎಂದೇ ಇತ್ತೀಚಿನವರೆಗೂ ಕರೆಯಲ್ಪಡುತ್ತಿದ್ದರು. ಇಪ್ಪತ್ತನೇ ಶತಮಾನದ ದ್ವಿತೀಯಾರ್ಧದಲ್ಲಿ ಪ್ರೊ. ಬಿ.ಎಂ. ಇಚ್ಲಂಗೋಡು ಮತ್ತಿತರ ಮೇಧಾವಿಗಳು ಬ್ಯಾರಿಗಳ ಪ್ರತ್ಯೇಕ ಅನನ್ಯತೆಯನ್ನು ಪ್ರಬಲವಾಗಿ ಪ್ರತಿಪಾದಿಸಿದರು. ಮಾಪಿಳ್ಳ ಪ್ರಭಾವದ ಕಾರಣ ಇತಿಹಾಸಕಾರರು ಮತ್ತು ಬರೆಹಗಾರರು ಬ್ಯಾರಿಗಳನ್ನು ಮಾಪಿಳ್ಳಗಳೆಂದೇ ಉಲ್ಲೇಖಿಸಿದ್ದು, ಅದೇ ರೀತಿಯ ಜಾತಿ ಉಲ್ಲೇಖಗಳನ್ನೂ ನಮೂದಿಸಿರುವುದು ನಮಗೆ ಕಾಣ ಸಿಗುತ್ತದೆ. ಆದರೆ ಪ್ರೊ. ಬಿ.ಎಂ. ಇಚ್ಲಂಗೋಡು ಬ್ಯಾರಿಗಳು ಮಾಪಿಳ್ಳಗಳಲ್ಲ ಎಂಬುದನ್ನು 'ಮುಸ್ಲಿಮ್ಸ್ ಆಫ್ ತುಳುನಾಡು' ಎಂಬ ಕೃತಿಯಲ್ಲಿ ಸಾಕ್ಷ್ಯಾಧಾರ ಸಮೇತ ವಾದಿಸಿದ್ದಾರೆ.[೩೮] ಬ್ಯಾರಿಗಳು ತಮ್ಮ ಹೆಸರಿನಲ್ಲಿ ಬ್ಯಾರಿ ಎಂಬ ಒಕ್ಕಣೆಯನ್ನು ಅತ್ಯಂತ ಹೆಮ್ಮೆಯಿಂದ ಸೇರಿಸುತ್ತಿದ್ದರು. ತಮ್ಮ ಸ್ವತಂತ್ರ ಸಾಮಾಜಿಕ ಸ್ಥಾನಮಾನವನ್ನು ಘೋಷಿಸಿ ಕೊಳ್ಳುವುದು ಅಂದಿನ ತುಳುನಾಡಿನ ಸಾಮಾನ್ಯ ಸಂಪ್ರದಾಯವಾಗಿತ್ತು – ಶೆಟ್ಟಿ, ಹೆಗ್ಡೆ, ಆಳ್ವ,

ಕಾಮತ್ ಇತ್ಯಾದಿ. ಆದರೆ ಮಾಪಿಳ್ಳಗಳು ಈ ಬಗೆಯ ಒಕ್ಕಣೆ ಬಳಸಿರುವುದು ಕಂಡು ಬರುವುದಿಲ್ಲ. ಮಲಬಾರ್ ದಾಖಲೆಗಳಲ್ಲೂ ಇದು ಕಂಡು ಬರುವುದಿಲ್ಲ.

ಬ್ಯಾರಿ ಭಾಷೆಯನ್ನು ಕೂಡಾ ಮಾಪಿಳ್ಳ ಎಂದು ತಪ್ಪಾಗಿ ಗುರುತಿಸಿರುವುದು ಕಂಡು ಬರುತ್ತದೆ. ತಮ್ಮ ಪಿಎಚ್‌ಡಿ ಪ್ರಬಂಧ 'ಮಾಪಿಳ್ಳ ಮಲಯಾಳಂ'ನಲ್ಲಿ ಸುಶೀಲಾ ಉಪಾಧ್ಯಾಯ ಎಂಬವರು ಬ್ಯಾರಿ ಭಾಷೆಯಲ್ಲಿರುವ ವಿಶಿಷ್ಟ ಗುಣಲಕ್ಷಣಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಿದ್ದಾರೆ. ಈ ಭಾಷೆಯು ತುಳಿವಿನ ವ್ಯಾಕರಣವನ್ನು ಹೊಂದಿದ್ದು ಇದು ಮಲಯಾಳಂಗಿಂತ ಭಿನ್ನವಾಗಿದೆ. ಶೇ.೫೦ಕ್ಕೂ ಹೆಚ್ಚು ತುಳು ಪದಗಳು ಈ ಭಾಷೆಯಲ್ಲಿವೆ.[೩೯] ಮಾಪಿಳ್ಳಗಳು ಆಡುವ ಮಲಯಾಳಂನಲ್ಲಿ ತುಳು ಪದಗಳು ಕಂಡುಬರುವುದು ಬಹಳ ಅಪರೂಪ. ಬ್ಯಾರಿ ಭಾಷೆಯಲ್ಲೂ ಮಲಯಾಳಂನ ಪದಗಳಿವೆ. ಆದರೆ ಹೆಚ್ಚಾಗಿ ಬಳಕೆಯಾಗುವ ಮಲಯಾಳಂ ಪದಗಳು ಕೂಡಾ ಈ ಭಾಷೆಯಲ್ಲಿ ಸೇರ್ಪಡೆಯಾಗಿಲ್ಲ. ಸಂಸ್ಕೃತ ಪದಗಳು ಕೂಡಾ ಈ ಭಾಷೆಯಲ್ಲಿ ಕಂಡುಬರುವುದಿಲ್ಲ. ಅರಬಿ ಮತ್ತು ಪರ್ಶಿಯನ್ ಭಾಷೆಯ ಪದಗಳು ಸಾಮಾನ್ಯವಾಗಿ ಬಳಕೆಯಲ್ಲಿವೆ. ಭಾಷೆಯ ಉಚ್ಚಾರ ಮತ್ತು ಧ್ವನಿಯು ಮಲಯಾಳಂಗಿಂತ ತೀರಾ ಭಿನ್ನವಾಗಿವೆ. ಈ ವಿಶೇಷತೆಗಳಿಂದಾಗಿ ಬ್ಯಾರಿ ಭಾಷೆಯು ಮಲಯಾಳಂಗಿಂತ ಭಿನ್ನ ಎಂಬುದು ಸ್ಪಷ್ಟವಾಗುತ್ತದೆ.

ಬ್ಯಾರಿಗೆ ಲಿಪಿಯಿಲ್ಲ. ಕೆಲವು ದಾಖಲೆಗಳ ಪ್ರಕಾರ ಬಟ್ಟೆಬರಹ ಎಂಬ ಲಿಪಿ ಬಳಕೆಯಲ್ಲಿತ್ತು ಎಂಬುದನ್ನು ದೃಢಪಡಿಸಿದೆ. ಈ ಲಿಪಿಯನ್ನು ಬಟ್ಟೆಳುತು ಎಂದು ಗುರುತಿಸಲಾಗಿದ್ದು, ಇದು ಪ್ರಾಚೀನ ತುಳು ಲಿಪಿಯಾಗಿದೆ. ಬಳಕೆ ಮತ್ತು ಆಕಾರದಲ್ಲಿಯೂ ಹಲವು ಬದಲಾವಣೆಗಳಿವೆ. ಇದು ಮಲಯಾಳಂನಲ್ಲಿ ಕಂಡು ಬರುವುದಿಲ್ಲ. ಆಧುನಿಕ ಮಲಯಾಳಂ ಲಿಪಿಯು ಇದರಿಂದಲೇ ಉದ್ಭವವಾಯಿತು ಎಂದೂ ಹೇಳಲಾಗುತ್ತದೆ.[೪೦]

ಜೈನ ಬೀಡುಗಳು ಮತ್ತು ಗುತ್ತುಗಳು ಎಂಬ ಊಳಿಗಮಾನ್ಯ ಕುಟುಂಬಗಳಲ್ಲಿ ಸೇವಕರಾಗಿ ಬ್ಯಾರಿಗಳು ಕೆಲಸ ಮಾಡುತ್ತಿದ್ದರು. ತುಳುನಾಡಿನಲ್ಲಿ ಆಗ ಇನ್ನೂರಕ್ಕೂ ಹೆಚ್ಚು ಜೈನ ಬೀಡುಗಳು ಮತ್ತು ಬಹಳ ಸಂಖ್ಯೆಯ ಗುತ್ತುಗಳು ಅಸ್ತಿತ್ವದಲ್ಲಿದ್ದವು. ಬ್ಯಾರಿಗಳಿಗೆ ತುಳು ಭಾಷೆಯೂ ಅತ್ಯಂತ ಪರಿಚಿತ ಭಾಷೆಯಾಗಿತ್ತು. ಇದರಿಂದಾಗಿ ಅವರನ್ನು ಕೆಲಸಕ್ಕೆ ಇಟ್ಟುಕೊಳುವುದು ಸುಲಭವಾಗಿತ್ತು. ಆದರೆ ಮಾಪಿಳ್ಳಗಳು ಈ ಕುಟುಂಬಗಳ ಆಳುಗಳಾಗಿ ನೌಕರಿ ಮಾಡಿರುವುದು ಕಂಡುಬರುವುದಿಲ್ಲ. ಆದರೆ ಕೆಲವು ಬರಹಗಾರರು ಬ್ಯಾರಿಗಳನ್ನೇ ಮಾಪಿಳ್ಳಗಳೆಂದು ಉಲ್ಲೇಖಿಸಿರುವುದು ಕಂಡು ಬರುತ್ತದೆ.

ಅಂದಿನ ಊಳಿಗಮಾನ್ಯ ವ್ಯಾಪಾರಿ ಸಂಘಟನೆಗಳಿಗೆ ಕೊಡಬಹುದಾದ ಅತ್ಯುತ್ತಮ ಉದಾಹರಣೆಯೆಂದರೆ ಜೈನ ವರ್ತಕ ಸಂಘಗಳು. ಎಂಟು ಅಥವಾ ೧೬ ಮಂದಿ ಮಾತ್ರ ಈ ಸಂಘಗಳಲ್ಲಿ ಸದಸ್ಯರಾಗಿರಬಹುದಾಗಿತ್ತು. ಬ್ಯಾರಿಗಳ ಊಳಿಗಮಾನ್ಯ ವ್ಯವಸ್ಥೆ 'ಪದಿನಾರಗ'ವನ್ನು ಇದಕ್ಕೆ ಹೋಲಿಸಬಹುದಾಗಿದೆ. ಹಂಜುಮನ್ (ಅಂಜುಮನ್)ಗಳು ಕೂಡಾ ಇದರಿಂದಲೇ ಪ್ರೇರಿತವಾಗಿವೆ ಮತ್ತು ಹೆಚ್ಚಿನ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕೂಡಾ ಜೈನರ ಪ್ರಭಾವವನ್ನು

ಗುರುತಿಸಬಹುದಾಗಿದೆ. ಇದಕ್ಕೆ ತದ್ವಿರುದ್ಧವಾಗಿ ಮಾಪಿಳ್ಳಗಳಲ್ಲಿ ಸ್ಥಳೀಯ ಅಥವಾ ಜೈನ ಪ್ರಭಾವ ಕಂಡು ಬರುವುದಿಲ್ಲ.

ಪ್ರಾಚೀನ ಕಾಲದ ಬ್ಯಾರಿಗಳ ಹೆಸರಿನಲ್ಲೂ ಸ್ಥಳೀಯ ತುಳುವರ ಪ್ರಭಾವ ಬಹಳಷ್ಟಿತ್ತು. ಉದಾಹರಣೆ : ಬಪ್ಪ, ಸಾಧುರಿ, ಸಾಯಿರಿ, ಕಾಯಿರಿ, ಉಮ್ಮಾತು, ಬಿಪಮ್ಮ, ಕುಂಞಮ್ಮ ಇತ್ಯಾದಿ. ಮಾಪಿಳ್ಳಗಳಲ್ಲಿ ಈ ಬಗೆಯ ಹೆಸರುಗಳಿಲ್ಲ. ಆರಂಭ ಕಾಲದ ಬ್ಯಾರಿಗಳಲ್ಲಿ ಪ್ರಚಲಿತವಿದ್ದ ಇಲ್ಲಂ ಪದ್ಧತಿಯು ಬಂಟ ಸಮುದಾಯದ ಬ್ಯಾರಿ (ಬಲಿ) ಪದ್ಧತಿಯನ್ನು ಹೋಲುತ್ತದೆ. ಇದು ಸ್ತ್ರೀಪ್ರಧಾನ (ಮ್ಯಾಟ್ರಿಮೋನಿಯಲ್) ಆಚರಣೆಯಾಗಿದ್ದು ಮಾಪಿಳ್ಳಗಳಲ್ಲಿ ಕಂಡುಬರುವುದಿಲ್ಲ. ಪ್ರಾಚೀನ ಬ್ಯಾರಿಗಳಲ್ಲಿ ಊಳಿಗಮಾನ್ಯ ಪ್ರಭಾವ ಎದ್ದು ಕಾಣುತ್ತದೆ. ಕೆಲವರನ್ನು ಕೆಳ ದರ್ಜೆಯವರೆಂದು ಪರಿಗಣಿಸಲಾಗುತ್ತಿತ್ತು. 'ತಲೆಯಿಲ್ಲಾತವರು' ಎಂದರೆ ಕೆಳ ಸ್ಥಾನಮಾನದವರೆಂದರ್ಥ. ವೃತ್ತಿಪರ ಕಸಾಯಿಗಳು ಮತ್ತು ಮುಂಜಿ ಮಾಡುವವರನ್ನು ವಾಸನ್ ಗಳೆಂದು ಕರೆಯಲಾಗುತ್ತಿತ್ತು. ಮತ್ತು ಗುಲಾಮರಿಗೆ ಸಮಾನವಾದ ಬದುವಾಗಾಗಳನ್ನು ಕೂಡ ಇದೇ ವರ್ಗಕ್ಕೆ ಸೇರಿಸಲಾಗಿತ್ತು. ಅವರನ್ನು ಒಪ್ಪನ, ತಾಳ ಮೊದಲಾದ ಸಮಾರಂಭಗಳಲ್ಲಿ ಸೇರಿಸಿಕೊಳ್ಳುತ್ತಿರಲಿಲ್ಲ. ಆದರೆ ಮಾಪಿಳ್ಳಗಳಲ್ಲಿ ಈ ರೀತಿಯ ಯಾವುದೇ ಪದ್ದತಿಯಿಲ್ಲ.[೪೧] ಈ ಮೇಲಿನ ವಿಶಿಷ್ಟ ಲಕ್ಷಣಗಳು ಹಾಗೂ ಇದೇ ರೀತಿಯ ಇತರ ಅಂಶಗಳು ಬ್ಯಾರಿಗಳು ಮಾಪಿಳ್ಳಗಳಿಗಿಂತ ಭಿನ್ನ ಎಂಬುದನ್ನು ಎತ್ತಿ ತೋರಿಸುತ್ತದೆ. ತುಳುನಾಡಿನ ಮುಸ್ಲಿಮರ ಪೈಕಿ ಅತ್ಯಂತ ದೊಡ್ಡ ಸಮದಾಯವಾಗಿರುವ ಹಿನ್ನಲೆಯಲ್ಲಿ ಅವರ ಸಾಂಸ್ಕೃತಿಕ ಕೊಡುಗೆಗಳೂ ಗಮನಾರ್ಹವಾಗಿದೆ.

ಏಳನೇ ಶತಮಾನದ ತುಳುನಾಡು ಮತ್ತು ಮಲಬಾರ್ ನೊಂದಿಗೆ ಅರಬ್ ಮುಸ್ಲಿಮರ ನಂಟನ್ನು ಈಗ ಲಭ್ಯವಿರುವ ಹಲವು ಆಕರ ಗ್ರಂಥಗಳಲ್ಲಿ ಕಾಣಬಹುದು. ಹೆನ್ರಿ ಮಯೆರ್ಸ್, ಈಲಿಯಟ್, ಎಚ್.ಜಿ.ರೋವಿಲ್ಸನ್ ಮೊದಲಾದವರು ಕೂಡಾ ಈ ಅಭಿಪ್ರಾಯಕ್ಕೆ ಮನ್ನಣೆ ನೀಡಿದ್ದಾರೆ. ಸ್ಟರ್ರ್ಕ್ ತನ್ನ ಮಲಬಾರ್ ಡಿಸ್ಟಿಕ್ಟ್ ಮ್ಯಾನುವಲ್ ನಲ್ಲಿ ಅರಬ್ ವ್ಯಾಪಾರಿಗಳು ಏಳನೇ ಶತಮಾನದಲ್ಲಿ ಮಲಬಾರ್ ಮತ್ತು ತುಳುನಾಡಿದಿನಲ್ಲಿ ವಾಸವಾಗಿದ್ದಾರೆಂದು ಬರೆದಿದ್ದಾರೆ.

ಮಂಗಳೂರು ಬ್ಯಾರಿಗಳ ಅತ್ಯಂತ ಪ್ರಮುಖ ಕೇಂದ್ರಗಳಲ್ಲೊಂದು. ತುಳುವರು ಅದನ್ನು ಕುಡ್ಲ ಎಂಬ ಹೆಸರಿನಿಂದ ಕರೆಯುತ್ತಿದ್ದರು. ಆದರೆ ಬ್ಯಾರಿಗಳು ಅದನ್ನು ಮೈಕಾಲ ಎಂದು ಕರೆಯುತ್ತಿದ್ದರು. ನಾಥಪಂಥ ಮಿಷನರಿಗಳಿಂದಾಗಿ ಈ ಹೆಸರು ಬಂತೆಂದು ಹೇಳಗಾಗುತ್ತದೆ. ಮಾಯಾದೇವಿ ಎಂಬ ದೇವತೆ ಕದ್ರಿಯಲ್ಲಿ ವಾಸವಾಗಿದ್ದರು ಮತ್ತು ಅದು ಪ್ರಸಿದ್ಧ ಆರಾಧನಾ ಕೇಂದ್ರವಾಗಿ ಕ್ರಮೇಣ ತಲೆಯಿಂದ ನಿಂತಿತ್ತು. ಹೀಗಾಗಿ ಮಾಯಾಕಾಲ ಎಂಬುದು ಮೈಕಾಲ ಎಂದೂ ಬದಲಾಯಿತು. ಆದರೆ ಪ್ರೊ. ಬಿ.ಎಂ. ಇಚ್ಲಂಗೋಡು ಈ ವಾದವನ್ನು ಒಪ್ಪುವುದಿಲ್ಲ. ಅವರು ಮಂಗಳಾದೇವಿಯಿಂದ ನಾಥಪಂಥ ಪ್ರಚಾರವಾಗಿರುವುದನ್ನು ಉಲ್ಲೇಖಿಸಿದ್ದಾರೆ.. ಮಂಗಳಾದೇವಿ ಕೇರಳದಿಂದ ತಮ್ಮ ಭಕ್ತರೊಂದಿಗೆ ಮಂಗಳೂರಿಗೆ ಬಂದು ನೆಲೆಸಿದ್ದರು. ತುಳುನಾಡಿನಲ್ಲಿ ಅವರ ಪ್ರಭಾವಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳಿವೆ. ಜೆಪ್ಪು ಸಮೀಪ ನಿರ್ಮಾಣಗೊಂಡ ಒಂದು ದೇವಸ್ಥಾನದವಿದ್ದು, ಈ ಪ್ರದೇಶವು ಇಂದು ಮಂಗಳಾದೇವಿ ಎಂಬ ಹೆಸರಿನಿಂದ ಪ್ರಖ್ಯಾತವಾಗಿದೆ. ಮಲಯಾಳಿಗಳು ಮಂಗಳೂರನ್ನು ಮಂಗಳಾಪುರ ಎಂದು

ಕರೆಯುತ್ತಾರೆ. ಮಂಗಳೆಯ ನಗರ ಎಂದು ಇದರ ಅರ್ಥ. ಮೈಕಾಲ ಎಂಬುದು ಮಂಗಳ ಎಂಬುದರ ಬ್ಯಾರಿ ರೂಪ. ಸಾಮಾನ್ಯವಾಗಿ ಈ ಅಭಿಪ್ರಾಯವನ್ನು ಎಲ್ಲರೂ ಒಪ್ಪುತ್ತಾರೆ. ಮಂಗಳ-ಊರು ಎಂಬುದೇ ಕ್ರಮೇಣ ಮಂಗಳೂರು ಅಥವಾ ಮಂಗಳೆಯ ಊರು ಎಂದು ಮಾರ್ಪಾಟಾಯಿತು ಎನ್ನಲಾಗುತ್ತದೆ. ಜೈನರೊಂದಿನ ಸಂಪರ್ಕದಿಂದಾಗಿ ಬ್ಯಾರಿಗಳು ಪ್ರವರ್ಧಮಾನಕ್ಕೆ ಬಂದರು. ಹದಿನಾರನೇ ಶತಮಾನದಲ್ಲಿ ಚೌಟರು, ಬಂಗರು ಮತ್ತು ಅಜಿಲಗಳೆಂಬ ಜೈನ ಕುಟುಂಬಗಳು ಬ್ಯಾರಿಗಳ ವ್ಯಾಪಾರ ಮತ್ತು ಸೇವೆಗೆ ಹೆಚ್ಚಿನ ಉತ್ತೇಜನ ಕೊಟ್ಟರು. ಬ್ಯಾರಿಗಳು ಅತ್ಯಂತ ನಂಬಿಗಸ್ಥ ಸೇವಕರೆಂಬ ಗೌರವವನ್ನೂ ಸಂಪಾದಿಸಿದರು. ರಾಣಿ ಅಬ್ಬಕ್ಕ ಜತೆ ಸೇವಕರಾಗಿ ಕಾರ್ಯ ನಿರ್ವಹಿಸಿದ ಬಗ್ಗೆಯೂ ಉಲ್ಲೇಖಗಳು ಕಂಡು ಬರುತ್ತವೆ. ಪೋರ್ಚುಗೀಸರ ವಿರುದ್ಧದ ಸ್ವಾತಂತ್ರ್ಯ ಹೋರಾಟದಲ್ಲಿ ಸೇನಾನಿಗಳಾಗಿಯೂ ಅಬ್ಬಕ್ಕ ಸೈನಿಕರಾಗಿಯೂ ಅವರು ಕಾರ್ಯ ನಿರ್ವಹಿಸಿದವರು. ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಆಡಳಿತ ಕಾಲದಲ್ಲಿ ಹಲವು ಬ್ಯಾರಿ ನಾಯಕರು ಪ್ರಮುಖ ಅಧಿಕಾರಿಗಳಾಗಿಯೂ ಸೇವೆ ಸಲ್ಲಿಸಿದ್ದರು. ಬ್ರಿಟಿಷ್ ಸೇನೆಯ ವಿರುದ್ಧ ಸಾಧುರಿ ಬ್ಯಾರಿಗಳು ನಡೆಸಿದ ಮೆರವಣಿಗೆಯು ಒಂದು ಸ್ಮರಣೀಯ ಘಟನೆಯಾಗಿ ದಾಖಲಾಗಿದೆ. ಟಿಪ್ಪು ಸುಲ್ತಾನರ ಪತನದ ನಂತರ ಬ್ರಿಟಿಷರು ಕೂಡಾ ಬ್ಯಾರಿಗಳನ್ನು ಗೌರವದಿಂದ ನಡೆಸಿಕೊಂಡಿರುವುದು ಕಂಡು ಬರುತ್ತದೆ. ಕೆಲವು ಬ್ಯಾರಿ ನಾಯಕರನ್ನು ಬಹದುರ್ ಗಳು ಮತ್ತು ಖಾನ್ ಬಹಾದುರ್ ಗಳೆಂಬ ಬಿರುದಿನಿಂದ ಸನ್ಮಾನಿಸಲಾಗಿತ್ತು. ಬ್ರಿಟಿಷ್ ಆಡಳಿತದ ಪತನದ ನಂತರ ಮತ್ತು ಊಳಿಗಮಾನ್ಯ ನಾಯಕರು ಕಾಲಾವಶೇಷಗೊಂಡ ಬಳಿಕ ಬ್ಯಾರಿಗಳ ಶಕ್ತಿ ಕುಂದಿತು. ನಾಯಕತ್ವ ಮತ್ತು ಕೀರ್ತಿ ಹೊರಟು ಹೋಡ ಮೇಲೆ ಬ್ಯಾರಿಗಳು ತಮ್ಮ ಸಾಮಾಜಿಕ ಸ್ಥಾನಮಾನವನ್ನು ಕಳೆದುಕೊಂಡರು.

ಬ್ಯಾರಿ ಭಾಷೆಯು ದಕ್ಷಿಣ ಕನ್ನಡ ಹಾಗೂ ಸುತ್ತಮುತ್ತಲಿನ ಪ್ರದೇಶದ ಮುಸ್ಲಿಮರ ಆಡು ಭಾಷೆಯಾಗಿದೆ. ಬ್ಯಾರಿ ಭಾಷೆಯು ಕನ್ನಡ, ಹಿಂದಿ,ತುಳು, ತಮಿಳು, ಅರಬ್ಬಿ ಹಾಗೂ ಮಲಯಾಳಂ ಭಾಷೆಯ ಶಬ್ದಗಳನ್ನೊಳಗೊಂಡಿದೆ. ಬರವಣಿಗೆಗೆ ಬ್ಯಾರಿ ಭಾಷೆಯಲ್ಲಿ ಕನ್ನಡ ಲಿಪಿಯನ್ನು ಉಪಯೊಗಿಸಲಾಗಿದೆ ಹಾಗೂ ವ್ಯಾಕರಣದಲ್ಲಿ ತುಳು ಭಾಷೆಯನ್ನು ಹೋಲುತ್ತದೆ. ಬ್ಯಾರಿ ಸಮುದಾಯಕ್ಕೆ ತುಳುನಾಡಿನಲ್ಲಿ ೧೨೦೦ ವರ್ಷಗಳ ಇತಿಹಾಸವಿದೆ. ೧೮೯೧ರ ಜನಗಣತಿಯ ಪ್ರಕಾರ ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯಲ್ಲಿ ೯೦,೩೪೫ ಬ್ಯಾರಿ ವ್ಯಾಪಾರಿಗಳಿದ್ದರೆಂದೂ ಹಾಗೂ ೨೦೧೧ರ ಜನಗಣತಿಯ ಅಂದಾಜು ಲೆಕ್ಕದಲ್ಲಿ ೧೦ಲಕ್ಷ ಬ್ಯಾರಿ ಸಮುದಾಯದವರಿದ್ದಾರೆಂದು ದಾಖಲಾಗಿದೆ. ಮಂಗಳೂರಿನಲ್ಲಿ ಕರ್ನಾಟಕ ಬ್ಯಾರಿಭಾಷೆ ಸಾಹಿತ್ಯ ಅಕಾಡೆಮಿಯನ್ನು ೨೦೦೭ರಲ್ಲಿ ಸ್ಥಾಪಿಸಲಾಯಿತು.

ಬ್ಯಾರಿ ಪದ ನಿಷ್ಪತ್ತಿ: ಸಂಸ್ಕೃತ ಭಾಷೆಯ 'ವ್ಯವಹಾರಿನ್' ಶಬ್ದದ ತದ್ಭವವೆ 'ಬೇಹಾರಿ'. 'ವ್ಯಾಪಾರ' ಎಂಬ ಪದಕ್ಕೆ ತುಳುವಿನಲ್ಲಿ 'ಬೇರ'/ 'ಬ್ಯಾರ' ಎಂಬ ಅರ್ಥವಿದೆ. ವ್ಯವಹಾರಿನ್> ಬೇಹಾರಿ> ಬೇರ> ಬ್ಯಾರಿ ಎಂಬ ರೂಪ ಪಡೆದಿರಬೇಕು. ಮಲಯಾಳಿ ಮಾತನಾಡುವ ಮುಸ್ಲಿಮರನ್ನು ಸುಳ್ಯದ ಕಡೆಯ ತುಳು ಮಾತನಾಡುವರು 'ಮಾಪ್ಲೆ' ಎಂದು ಕರೆಯುತ್ತಾರೆ. ಬ್ಯಾರಿ ಭಾಷೆಯನ್ನು ಸಾಮಾನ್ಯವಾಗಿ ತುಳುನಾಡಿನಲ್ಲಿ ಮಾತ್ರ ಮಾತನಾಡುತ್ತಾರೆ. ತೋರಿಕೆಗೆ ಬ್ಯಾರಿಭಾಷೆಯು ಮಲೆಯಾಳಿಯ ಉಪಭಾಷೆಯಂತಿದ್ದರೂ ಈ ಭಾಷೆಯಲ್ಲಿ ಶೇ.೫೦ರಷ್ಟು

ತುಳುವಿನ ಪದಗಳಿವೆ. ಆದುದರಿಂದ ಬ್ಯಾರಿಭಾಷೆಯನ್ನು ತುಳುಭಾಷೆಯ ಉಪಭಾಷೆಯೆಂದು ಕರೆಯುತ್ತಾರೆ. ಬ್ಯಾರಿ ತುಳು ಮತ್ತು ಕನ್ನಡ ಭಾಷೆಯ ಕೆಲವು ಸಮಾನಾರ್ಥ ಪದಗಳು ಹೀಗಿವೆ.

ಬ್ಯಾರಿ	ತುಳು	ಕನ್ನಡ
ಉಂಡು	ಉಂಡು	ಉಂಟು/ಇದೆ
ಒಟ್ಟೆ	ಒಟ್ಟೆ	ತೂತು
ಪುಂಡಿ	ಕಡುಂಬು	ಕಡುಬು
ಪೊಡಿ	ಪೊಡಿ	ನಶ್ಯ
ಬೀಲ	ಬೀಲ	ಬಾಲ

ಬ್ಯಾರಿ ಭಾಷೆಯ ಸರ್ವನಾಮ, ಲಿಂಗ ಮತ್ತು ವಚನಗಳು[೪೨]

ಪುರುಷವಾಚಕ	**ಲಿಂಗ**	**ಏಕವಚನ**	**ಬಹುವಚನ**
ಉತ್ತಮ	**ಪುಲ್ಲಿಂಗ**	ನಾಞ್/ನಾನ್	ನಜಳ್/ನಜ
	ಸ್ತ್ರೀಲಿಂಗ	ನಾಞ್/ನಾನ್	ನಜಳ್/ನಜ
ಮಧ್ಯಮ	**ಪುಲ್ಲಿಂಗ**	ನೀ/ನೀನ್	ನಿಜಳ್/ನಿಜ
	ಸ್ತ್ರೀಲಿಂಗ	ನೀ/ನೀನ್	ನಿಜಳ್/ನಿಜ
ಪ್ರಥಮಾ	**ಪುಲ್ಲಿಂಗ**	ಅಂವೊ/ಅವ್ನ	ಅವೊರು/ಅಯ್ಯಲ್
	ಸ್ತ್ರೀಲಿಂಗ	ಅವೊ/ಅವ್ನ	ಅಯಿಮಾ>ಅವರು
	ನಪುಂಸಕಲಿಂಗ	ಅದು	ಅದ್

ಬ್ಯಾರಿ ಭಾಷೆಯ ವಾಕ್ಯರಚನೆಗಳು

ಪುಲ್ಲಿಂಗ ಅವನು ಹುಡುಗ > ಅವ್ನು ಆನ್‌ (ಏ.ವ.)

ಅವರು ಹುಡುಗರು > ಅಜ ಎಲ್ಲಾ ಆನ್‌ ಮಕ್ಕ (ಬ.ವ.)

ನೀನು ದೊಡ್ಡವನು > ನಾನ್ ಬೆಳಿಯವುನೆ;

ಅವರೆಲ್ಲ ಗಂಡಸರು > ಅಜ ಎಲ್ಲಾ ಆಣಿಜ

ಸ್ತ್ರೀಲಿಂಗಅವಳು ಹುಡುಗಿ > ಅವ್ಳು ಪೆಣ್ಣ್ (ಏ.ವ.)

ಅವರು ಹುಡುಗಿಯರು > ಅಜ ಎಲ್ಲಾ ಪೆನ್ಣ್ ಮಕ್ಕ (ಬ.ವ.)

ನೀನ್ ದೊಡ್ಡವಳು > ನೀನ್ ಬೆಳಿಯವುಳ್

ಅವರೆಲ್ಲ ಹೆಂಗಸರು > ಅಂಜ ಎಲ್ಲಾ ಪೆನ್ಣಜ

ನಪುಸಂಕಲಿಂಗ ಅದು ನಾಯಿ > ಅದ್ ನಾಯಿ (ಏ.ವ.)

ಅವು ನಾಯಿ > ಅದೆಲ್ಲಾ ನಾಯಿ (ಬ.ವ.)[೪೩]

ಬ್ಯಾರಿಗಳು ವಿಶ್ವದಾದ್ಯಂತ ವಾಪಿಸಿದ್ದರೂ ಕೂಡ ಸದ್ಯ ಬ್ಯಾರಿ ಭಾಷೆ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಾತ್ರ ಹೆಚ್ಚಾಗಿ ಬಳಕೆಯಲ್ಲಿರುವುದು ಕಂಡುಬರುತ್ತದೆ. ಕೇರಳದ ಕಾಸರಗೋಡಿನಲ್ಲಿ ಬಹುಸಂಖ್ಯೆಯಲ್ಲಿ ಬ್ಯಾರಿಗಳು ವಾಸಿಸುತ್ತಿದ್ದರೂ ಅಲ್ಲಿನ ಭಾಷೆ ಮಲೆಯಾಳೀಕರಣಗೊಂಡಿದೆ. ಇನ್ನು ಬ್ಯಾರಿಗಳೆಲ್ಲರೂ ಮುಸಲ್ಮಾನರೇ ಆಗಿದ್ದರೂ ಕೂಡ ಅಲ್ಲಿನ ಧಾರ್ಮಿಕ ಶಿಕ್ಷಣ, ಬೋಧನೆ ಕಾರ್ಯಕ್ರಮಗಳಲ್ಲಿ ಬ್ಯಾರಿ ಭಾಷೆ ಬಳಕೆಯಾಗುತ್ತಿಲ್ಲ. ಆಧುನಿಕ ಶಿಕ್ಷಣ ಪದ್ಧತಿಯಲ್ಲಿ ಆಂಗ್ಲ ಭಾಷೆಯ ಪ್ರಭಾವ ಬೆಳೆದು, ಬ್ಯಾರಿಗಳು ಅತ್ತ ಗಮನಹರಿಸಿರುವುದರಿಂದಾಗಿ ಬ್ಯಾರಿ ಭಾಷೆಯ ಬೆಳವಣಿಗೆಗೆ ತೊಡಕಾಗಿದೆ ಎನ್ನಬಹುದು. ಒಟ್ಟಾರೆಯಾಗಿ ದಕ್ಷಿಣ ಕನ್ನಡ ಪರಿಸರವು ಒಂದು ಬಹುಭಾಷಾ ಪರಿಸರವಾಗಿದೆ ಎಂಬುದನ್ನು ಕಂಡುಕೊಳ್ಳಬಹುದು.

ಟಿಪ್ಪಣಿಗಳು

---

[೧] ಜಿಲಾನಿ ಎಸ್. ಎ. (ಸಂ.), ೨೦೦೭, ದಕ್ಷಿಣ ಕನ್ನಡ ಜಿಲ್ಲಾ ಗ್ಯಾಜೆಟೆಯರ್, ಪು.೬

[೨] ಅದೇ, ಪು.೭

[೩] ಅದೇ.

[೪] ಶಿವತಾರಕ್ ಕೆ. ಬಿ. ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ ಆಕರಗಳ ಅಧ್ಯಯನ (ಲೇ.), ಗೋಪಾಲ್ ಆರ್. ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಪು.೨೬

[೫] ಅದೇ.

[೬] ಶೆಟ್ಟಿ ಎಸ್. ಡಿ, ರಜತಪೀಠಪುರ ಮಹಾತ್ಮೆ, ಪು. ಸಂ. ೪

[೭] ಸಾಲೆತೋರ್ ಬಿ. ಎ., ಸಂಶೋಧನಾ ಲೇಖನಗಳು, ಪು.ಸಂ. ೧೬

೮ ಸುಶೀಲ ಪಿ. ಉಪಾಧ್ಯಾಯ, ಭಾಷೆಗಳ ಆಡುಂಬೋಲ ನಮ್ಮ ಕರಾವಳಿ. ಪು.೧೨

೯ ಬ್ರಹ್ಮಾಂಡ ಪುರಾಣದಲ್ಲಿನ ಉಲ್ಲೇಖಗಳ ಪ್ರಕಾರ ಪರಶುರಾಮನು ತ್ರೇತಾಯುಗದ ಭೃಗುಋಷಿಯ ವಂಶದವನು. ಇವನನ್ನು ವಿಷ್ಣುವಿನ ಆರನೇ ಅವತಾರವೆಂದು ಹಿಂದೂಗಳು ಪರಿಗಣಿಸುತ್ತಾರೆ. ಇವನ ತಂದೆ ಜಮದಗ್ನಿ ಋಷಿ ಹಾಗೂ ತಾಯಿ ರೇಣುಕಾದೇವಿ.

೧೦ ಐಗಳ ಗಣಪತಿರಾವ್.

೧೧ ಅದೇ, ಪು.ಸಂ. ೮

೧೨ ಮಾರ್ಕಂಡೇಯ ಪುರಾಣ, ಪು.ಸಂ.೫೬–೫೮

೧೩ ಜಿಲಾನಿ ಎಸ್. ಎ. (ಸಂ.), ೨೦೦೭, ದಕ್ಷಿಣ ಕನ್ನಡ ಜಿಲ್ಲಾ ಗ್ಯಾಜೆಟಿಯರ್, ಪು.೬೧

೧೪ ಅದೇ, ಪು.೯೮

೧೫ ಜಿಲಾನಿ ಎಸ್. ಎ. (ಸಂ.), ೨೦೦೭, ದಕ್ಷಿಣ ಕನ್ನಡ ಜಿಲ್ಲಾ ಗ್ಯಾಜೆಟಿಯರ್, ಪು.೫೪೯

೧೬ ಹೆಚ್ಚಿನ ವಿವರಗಳಿಗೆ, ಮೋಹನಕೃಷ್ಣ ರೈ ಕೆ, ತುಳುನಾಡು ಕನ್ನಡ ನುಡಿ, ೨೦೧೦, ಪು.೭೯–೮೧

೧೭ ಸುಶೀಲ ಪಿ. ಉಪಾಧ್ಯಾಯ, ಕರಾವಳಿಯ ಭಾಷಾನುಸಂಧಾನ, ಪು.೬

೧೮ ಅದೇ, ಪು.೧೧

೧೯ ಇಚ್ಲಂಗೋಡು ಬಿ. ಎಂ., ತುಳುನಾಡಿನ ಬ್ಯಾರಿಗಳು, ಪು. ೧೧

೨೦ ಸುಶೀಲ ಪಿ. ಉಪಾಧ್ಯಾಯ, ಕರಾವಳಿಯ ಭಾಷಾನುಸಂಧಾನ, ಪು.೯೮

೨೧ ಉದಾಹರಣೆಗೆ, ತುಳುವಿನ ಮಡಲು, ಕೊತ್ತಳಿಗೆ, ಬೊಂಡ, ನೇಜಿ, ಭೂತ, ಮಾರಾಯ/ ಮಾರಾಯ್ತಿ, ದಳಿ, ಅಡರು, ಚಂಡಿ,

ಚೊರೆ, ಕೋಲ ಮುಂತಾದ ಶಬ್ದಗಳು ದಕ್ಷಿಣ ಕನ್ನಡ ಪರಿಸರದ ಕನ್ನಡದಲ್ಲಿ ಮಾತ್ರ ವಿಶೇಷವಾಗಿ ಕಂಡುಬರುತ್ತವೆ.

೨೨ ಸುಶೀಲ ಪಿ. ಉಪಾಧ್ಯಾಯ, ಭಾಷೆಗಳ ಆಡುಂಬೋಲ ನಮ್ಮ ಕರಾವಳಿ. ಪು.೨೨

೨೩ ಆದರೆ ಇದಕ್ಕೆ ಅಪವಾದವೆಂಬಂತೆ ಸಂಖ್ಯೆಗಳನ್ನು ಮಾತ್ರ ಕನ್ನಡದಲ್ಲಿಯೇ ಬಳಸಲಾಗುತ್ತಿದೆ.

೨೪ ORGI. "Census of India: Abstract of speakers' strength of languages and mother tongues – 2001

೨೫ http://www.coorga2z.in/regional/kodagu-arebhashe-gowdas-ethnic-group

೨೬ ಮಾಹಿತಿಗೆ, http://arebhase.blogspot.in/

೨೭ ಇಚ್ಲಂಗೋಡು ಬಿ. ಎಂ.(ಸಂ.), ಬ್ಯಾರಿ– ಕನ್ನಡ– ಇಂಗ್ಲೀಷ್ ನಿಘಂಟು, ಸಂಪಾದಕೀಯ ಪು.೧೧

೨೮ ರಾಜೇಶ್ವರಿ ಮಹೇಶ್ವರಯ್ಯ, ಕರ್ನಾಟಕದ ಭಾಷೆಗಳು, ಪು.೩೦೭

೨೯ ಹಿಂದೆ ಬ್ಯಾರಿ ಸಮುದಾಯದಲ್ಲಿ ಅತ್ಯಂತ ಜನಪ್ರಿಯವಾಗಿದ್ದ ಜನಪದ ಹಾಡುಗಳು

೩೦ ಸುಶೀಲ ಪಿ. ಉಪಾಧ್ಯಾಯ, ಕರಾವಳಿಯ ಭಾಷಾನುಸಂಧಾನ, ಪು.೫೨

೩೧ ಸುಶೀಲ ಪಿ ಉಪಾಧ್ಯಾಯ, ದಕ್ಷಿಣ ಕನ್ನಡದ ಬ್ಯಾರಿಗಳು, ಪು.೧

೩೨ ಅದೇ.

೩೩ ಇಚ್ಲಂಗೋಡು ಬಿ. ಎಂ., ತುಳುನಾಡಿನ ಬ್ಯಾರಿಗಳು, ಪು. ೧೩

೩೪ ಇಚ್ಲಂಗೋಡು ಬಿ. ಎಂ., ತುಳುನಾಡಿನ ಮುಸ್ಲಿಮರು, ಪು. ೨೧

೩೫ ವಹ್ಹಾಬ್ ದೊಡ್ಡಮನೆ, ತುಳುನಾಡ ಮುಸ್ಲಿಮರು, ಪು.೨೫

೩೬ ಇಚ್ಲಂಗೋಡು ಬಿ. ಎಂ., ತುಳುನಾಡಿನ ಬ್ಯಾರಿಗಳು, ಪು. ೪೩

೩೭ ಅದೇ, ಪು. ೫೧

೩೮ ಇಚ್ಲಂಗೋಡು ಬಿ. ಎಂ., ಮುಸ್ಲಿಮ್ಸ್ ಆಫ್ ತುಳುನಾಡು, ಪು. ೨೯

೩೯ ಸುಶೀಲಾ ಉಪಾಧ್ಯಾಯ, ಮಾಪಿಳ್ಳ ಮಲಯಾಳಂ, ಪು. ೧೧೦

೪೦ ಇಚ್ಲಂಗೋಡು ಬಿ. ಎಂ., ತುಳುನಾಡಿನ ಮುಸ್ಲಿಮರು, ಪು. ೨೨

೪೧ ಅದೇ.

೪೨ ಇಚ್ಲಂಗೋಡು ಬಿ. ಎಂ., ತುಳುನಾಡಿನ ಬ್ಯಾರಿಗಳು, ಪು. ೧೧

೪೩ ಅದೇ.

* * * * *

ಅಧ್ಯಾಯ - ನಾಲ್ಕು

ಭಾಷಾ ಕಲಿಕೆ ಮತ್ತು ಭಾಷಾ ಬೋಧನೆ

ಅಧ್ಯಾಯ – ನಾಲ್ಕು

ಭಾಷಾ ಕಲಿಕೆ ಮತ್ತು ಭಾಷಾ ಬೋಧನೆ

ಕಲಿಕೆಯು ಜೀವಿಗಳಲ್ಲಿ ಕಂಡುಬರುವ ಸಹಜ ಹಾಗೂ ಅನಿವಾರ್ಯ ಪ್ರಕ್ರಿಯೆಯಾಗಿದೆ. ಅನೇಕ ಅಭ್ಯಾಸ, ಜ್ಞಾನ ಸಂಪಾದನೆ, ಹೊಸ ವಿಷಯಗಳು ಮತ್ತು ಸಾಮರ್ಥ್ಯಗಳನ್ನು ಮನೋಗತ ಮಾಡಿಕೊಳ್ಳುವುದು, ತನ್ನ ಪರಿಸರಕ್ಕೆ ಹೊಂದಿಕೊಂಡು ಅನುಭವಗಳಿಸಿಕೊಳ್ಳುವಿಕೆಯನ್ನು ಕಲಿಕೆ ಎನ್ನುವರು. ಹೀಗೆ ಕಲಿಕೆಯ ಕುರಿತಾಗಿ ಸಂಕ್ಷಿಪ್ತ ವಿವರಣೆ ನೀಡಬಹುದಾದರೂ ನಿರ್ದಿಷ್ಟ ಅರ್ಥ ಕೊಡುವ ಮಟ್ಟಿಗೆ ಸಾಧ್ಯವಾಗಿಲ್ಲ. ಕಲಿಕೆಯ ಕುರಿತಾಗಿ ಇಂದಿಗೂ ಅನೇಕ ಸಂಶೋಧನೆಗಳು ಜಗತ್ತಿನಾದ್ಯಂತ ನಡೆಯುತ್ತಿವೆ. ಕಲಿಕೆ ಶೈಕ್ಷಣಿಕ ಮನೋವಿಜ್ಞಾನದಲ್ಲಿ ಬಹಳ ಮುಖ್ಯ ವಿಷಯವಾಗಿದ್ದು, ಕಲಿಕೆಯ ಬಗೆಗೆ ಈ ಕೆಳಕಂಡ ಕೆಲವು ವಿವರಣೆಗಳನ್ನು ಗಮನಿಸಬಹುದಾಗಿದೆ.

ಹಿಲ್‌ಗಾರ್ಡ್‌ರವರು 'ಕಲಿಕೆಯು ಕಾರ್ಯರೀತಿಯ ಬದಲಾವಣೆಯಿಂದ ಬಂದಂತಹ ತೀರ್ಮಾನ' ಎಂದಿದ್ದಾರೆ.[೧] ಥಾರ್ನ್‌ಡೈಕ್‌ರವರು 'ಪ್ರಚೋದನೆ ಹಾಗೂ ಪ್ರತಿಕ್ರಿಯೆಗಳ ಸಂಬಂಧ ಕಲಿಕೆ' ಎಂದು ಅಭಿಪ್ರಾಯಪಡುತ್ತಾರೆ.. [೨] ಗೇಟ್ಸ್‌ರವರು ಕಲಿಕೆ ಎಂಬುದು ಅನುಭವದ ಮೂಲಕ ವರ್ತನೆಯಲ್ಲಾಗುವ ಬದಲಾವಣೆ ಎಂದಿದ್ದಾರೆ. [೩] ಗಾರ್ಡನ್ ಮರ್ಡಿಯವರು 'ಸನ್ನಿವೇಶದ ಅವಶ್ಯಕತೆಗನುಗುಣವಾಗಿ ಬದಲಾಗುವ ವರ್ತನೆಯ ಎಲ್ಲಾ ಅಂಶಗಳು ಕಲಿಕೆ' ಎಂದು ವಿಶ್ಲೇಷಿಸಿದ್ದಾರೆ.[೪] ಹೀಗೆ ಕಲಿಕೆಯ ಬಗೆಗೆ ನಾವು ಸಾಕಷ್ಟು ಭಿನ್ನಾರ್ಥ ಕೊಡುವ ಅಭಿಪ್ರಾಯಗಳನ್ನು ಗುರುತಿಸಲು ಸಾಧ್ಯವಿದೆ.

ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಕಲಿಯುವಿಕೆ ಕೂಡ ಒಂದು. ಶಿಕ್ಷಕರು ಹಾಗೂ ಪಾಲಕರು ಮಕ್ಕಳಿಗೆ ಸೂಕ್ತವಾದ ಕಲಿಕೆಯ ವಾತಾವರಣವನ್ನು ನಿರ್ಮಿಸಬೇಕಾದ ಅನಿವಾರ್ಯತೆಯಿದೆ. ಶಿಕ್ಷಣ ರಂಗದಲ್ಲಿ ಕಲಿಯುವಿಕೆಗೆ ಒಂದು ಮಹತ್ವವಾದ ಸ್ಥಾನವಿದೆ. ಕೇವಲ ಓದು–ಬರಹ ಕಲಿಯುವುದು ಮಾತ್ರ ಕಲಿಕೆಯಲ್ಲ. ಇದು ಕಲಿಕೆಯ ಸಂಕುಚಿತವಾದ ಅರ್ಥವಷ್ಟೆ ಆಗಿದೆ. ಅನುಭವಗಳ ಮೂಲಕ ವ್ಯಕ್ತಿಯ ವರ್ತನೆಯಲ್ಲಾಗುವ ಬದಲಾವಣೆಯೂ ಕಲಿಕೆ. ಕಲಿಕೆ ನಡೆಯುವ ಎಂಬುದು ಕೇವಲ ಶಾಲೆಯಲ್ಲಿ ಮಾತ್ರ ಚಟುವಟಿಕೆಯಲ್ಲ; ಮಗುವು ಹುಟ್ಟಿನಿಂದ ಸಾಯುವವರೆಗೆ ಈ ಮಾರ್ಪಾಡು ಎಲ್ಲ ಕಾಲಗಳಲ್ಲಿಯು ನಡೆಯುತ್ತಿರುತ್ತದೆ. ಕಲಿಕೆ ಎನ್ನುವುದು ನರ ಮಂಡಲದಲ್ಲಿ ಆಗುವ ಬದಲಾವಣೆ ಅಗಿದೆ ಆದ್ದರಿಂದ ಈ ಬದಲಾವಣೆಯು ನರ ಮಂಡಲಕ್ಕೂ ಸಂಬಂಧಪಟ್ಟಿದ್ದಾಗಿದೆ. ಪ್ರತಿಯೊಂದು ಮಗು ಸಹಜ ಪ್ರವೃತ್ತಿಗಳೊಡನೆ ಜನಿಸುತ್ತದೆ. ಅವುಗಳನ್ನು ಸುಧಾರಿಸಿ ಸಂಪನ್ನಗೊಳಿಸುವುದು ಅವುಗಳಲ್ಲಿ ಮಾರ್ಪಾಡು ಉಂಟುಮಾಡುವುದು ಅವಶ್ಯ. ಪ್ರತಿಯೊಬ್ಬ ಮನುಷ್ಯನ ಜೀವನದಲ್ಲಿ ಕಲಿಕೆಯ ಸನ್ನಿವೇಶಗಳು ಸಾಮಾನ್ಯ ಹಾಗೂ ಸ್ವಾಭಾವಿಕ. ಪ್ರತಿಯೊಂದು ಹಂತದಲ್ಲಿ ಮನುಷ್ಯರು ಏನಾದರೂ ಒಂದು ವಿಚಾರವನ್ನು ಕಲಿಯುತ್ತಲೆ ಇರುತ್ತಾರೆ. ವ್ಯಕ್ತಿಯ ಬದುಕಿನಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ

ಕಲಿಕೆಯ ಪ್ರಕ್ರಿಯೆಯು ನಡೆಯುತ್ತಲೆ ಇರುತ್ತದೆ. ಒಟ್ಟಿನಲ್ಲಿ ವ್ಯಕ್ತಿಯು ಹುಟ್ಟಿನಿಂದ ಸಾಯುವವರೆಗೆ ನಿರಂತರವಾಗಿ ಹೊಸಹೊಸ ಅನುಭವಗಳನ್ನು ಗಳಿಸುತ್ತಾ ಹೋಗುತ್ತಾನೆ. ಇದರಿಂದ ಅವನ ವರ್ತನೆಗಳಲ್ಲಿ ಉಂಟಾದ ಪರಿವರ್ತನೆಯೆ 'ಕಲಿಕೆ'ಯಾಗಿದೆ. ಇಂತಹ ಕಲಿಕೆಯು ಸಿದ್ಧತೆ, ಅಭ್ಯಾಸ ಹಾಗೂ ಪರಿಣಾಮ ಎಂಬ ಮೂರು ನಿಯಮಗಳ ಮೂಲಕ ಸಾಗಬೇಕು; ಆಗ ಮಾತ್ರ ಉತ್ತಮ ಕಲಿಕೆಯನ್ನು ರೂಢಿಸಿಕೊಳ್ಳಲು ಸಾಧ್ಯ[೫] ಎಂದು ಥಾರ್ನಡೈಕ್ ಹೇಳಿದ್ದಾರೆ.

ಕಲಿಕೆ ಎಂಬುದು ಕ್ರಿಯಾತ್ಮಕವಾದ, ತಕ್ಕಮಟ್ಟಿಗೆ ಶಾಶ್ವತವೆನ್ನಬಹುದಾದ ವರ್ತನೆಯ ಪರಿವರ್ತನೆಗಳನ್ನು ಉಂಟುಮಾಡುವ ಸೃಜನಾತ್ಮಕ ಪ್ರಕ್ರಿಯೆ. ಭಾಷಾ ಕಲಿಕೆ ಹಾಗೂ ಬಳಕೆ ನಾಡಿನ ಶೈಕ್ಷಣಿಕ, ಸಾಂಸ್ಕೃತಿಕ, ಸಾಹಿತ್ಯಕ, ಐತಿಹಾಸಿಕ ಹಾಗೂ ಸಾಂಪ್ರದಾಯಕ ಬದುಕಿನ ನಿಚ್ಚ ಪ್ರತೀಕಗಳು. ಅದು ಸಹಜವಾಗಿ ಆ ನಾಡಿನ, ಸಮಾಜದ ನಲ್ತನದ ಸಮಗ್ರತೆಯನ್ನು ಬೆಂಬಲಿಸುವುದಲ್ಲದೆ ಸಂಪತ್ಭರಿತವಾಗಿ ಬೆಳೆದು ಮುಂದುವರೆಯುವುದು. ಅದೇ ಆ ಸಮಾಜದ ಪೂರ್ಣತೆಯ ಕುರುಹು.[೬] ಕಲಿಕೆ ಎಂಬುದು ಔಪಚಾರಿಕ ಹಾಗೂ ಅನೌಪಚಾರಿಕ ಸನ್ನಿವೇಶಗಳಲ್ಲಿ ಅಂದರೆ ಶಾಲೆಯ ಒಳಗಡೆ ಹಾಗೂ ಹೊರಗಡೆ ಎರಡೂ ಕಡೆ ಸಾಧ್ಯ. ತರಗತಿ ವಾಸ್ತವ ಹಾಗೂ ಹೊರ ಪ್ರಪಂಚದ ನಡುವೆ ಸಂಪರ್ಕ ಸೇತು ಏರ್ಪಟ್ಟಾಗ ನಿಜವಾದ ಅರ್ಥಪೂರ್ಣ ಕಲಿಕೆ ಸಾಧ್ಯ.

ಪ್ರಸ್ತುತ ಅಧ್ಯಯನವು ಕಲಿಕಾ ಸಮಸ್ಯೆಗಳನ್ನೇ ಕೇಂದ್ರವಾಗಿಟ್ಟುಕೊಂಡು ನಡೆದಿರುವುದರಿಂದ ಭಾಷಾ ಕೌಶಲಗಳಾದ ಆಲಿಸುವಿಕೆ, ಮಾತನಾಡುವಿಕೆ, ಓದುವಿಕೆ ಮತ್ತು ಬರೆಯುವಿಕೆಯ ಕುರಿತಾಗಿ ಮುಂದಿನ ಅಧ್ಯಯಾಯಗಳಲ್ಲಿ ಚರ್ಚೆ ಮಾಡಲಾಗಿದ್ದು, ಪ್ರಸ್ತುತ ಅಧ್ಯಾಯದಲ್ಲಿ ಬೋಧನೆ, ಬೋಧನಾ ವಿಧಾನಗಳು, ಶಿಕ್ಷಣ ಮಾಧ್ಯಮದ ಕುರಿತ ಚಿಂತನೆಗಳ ಬಗೆಗೆ ಚರ್ಚೆ ಮಾಡಲಾಗಿದೆ.

ಬೋಧನೆ

ಪ್ರಸ್ತುತ ಅಧ್ಯಯನವು ಕಲಿಕಾ ಕೇಂದ್ರಿತವಾಗಿದೆ. ಆದರೂ ಕಲಿಕೆಯ ಪ್ರಕ್ರಿಯೆಯಲ್ಲಿ ಬೋಧನೆಯು ಪ್ರಮುಖ ಪಾತ್ರ ವಹಿಸುವುದರಿಂದ ಇಲ್ಲಿ ಬೋಧನೆ ಮತ್ತು ಕರ್ನಾಟಕದಲ್ಲಿ ಪ್ರಾಥಮಿಕ ಶಾಲಾ ಮಕ್ಕಳ ಕಲಿಕಾ ಗುಣಮಟ್ಟವನ್ನು ಹೆಚ್ಚಿಸಲು ಜಾರಿಗೊಂಡಿರುವ ಮುಖ್ಯವಾದ ಯೋಜನೆಗಳನ್ನು ವಿವರಣಾತ್ಮಕವಾಗಿ ನೋಡಲಾಗಿದೆ.

ಬೋಧನೆಯು ಒಂದು ಕಲೆ, ಬೋಧನೆ ಉದ್ದೇಶಪೂರ್ವಕ ಹಾಗೂ ಪ್ರಜ್ಞಾಪೂರ್ವಕವಾದ ಕ್ರಿಯೆಯಾಗಿರುತ್ತದೆ. ಮನಸ್ಸಿಗೆ ತೋಚುವ ವಿಚಾರ ಹೇಳುವುದು ಬೋಧನೆಯಾಗುವುದಿಲ್ಲ. ಬೋಧನೆ ಒಂದು ಮನೊವೈಜ್ಞಾನಿಕ ಕ್ರಿಯೆಯಾಗಿರುವುದರಿಂದ ಇರುವ ವಿಷಯವನ್ನು ವಿವರಿಸುವುದರ ಬದಲು ಅರ್ಥವಾಗುವ ಹಾಗೆ ಮಕ್ಕಳ ಹಂತಕ್ಕಿಳಿದು, ಪರಿಣಾಮಕಾರಿ ಹಾಗೂ ಶಾಶ್ವತ ಕಲಿಕೆಯನ್ನುಂಟು ಮಾಡುವುದು ಬೋಧನೆಯಾಗಿದೆ. ಬೋಧನೆಯು ಶಿಕ್ಷಣದ ಅವಿಭಾಜ್ಯ ಅಂಗ, ಶಿಕ್ಷಣದ ನೈಜ ಸ್ವರೂಪ ಮತ್ತು ಗುಣಾತ್ಮಕತೆಯು ಬೋಧನೆಯಲ್ಲಿ ಅಡಕವಾಗಿದೆ. ಮಕ್ಕಳು ಕಲಿಯುವಂತೆ ಸಹಾಯಮಾಡುವ ಕ್ರಿಯೆ ಬೋಧನೆ. ಪ್ರಾಥಮಿಕ ಶಿಕ್ಷಣವು ಮಗುವಿಗೆ ಉತ್ತಮ ಶಿಕ್ಷಣದ ಬುನಾದಿಯನ್ನು ಹಾಕುತ್ತದೆ. ಉತ್ತಮ ಬೋಧನೆಯಿಂದ ಶಿಕ್ಷಣದ ಗುಣಮಟ್ಟ ಹೆಚ್ಚುತ್ತದೆ. ಹೀಗೆ ಬೋಧನೆಯ ಕುರಿತಾಗಿ ಸಾಕಷ್ಟು ಅಭಿಪ್ರಾಯಗಳಿರುವುದನ್ನು ಗಮನಿಸಬಹುದು.

ವಿದ್ಯಾರ್ಥಿಗಳನ್ನು ಕಲಿಯುವಂತೆ ಪ್ರೇರೇಪಿಸುವುದೆ ಬೋಧನೆಯಾಗಿರುತ್ತದೆ. ಒಬ್ಬ ಶಿಕ್ಷಕನ ಬೋಧನೆಯು ಎಷ್ಟು ಪರಿಣಾಮಕಾರಿಯಾಗಿದೆ ಎಂಬುದು ಬೋಧಿಸಿದ ವಿಷಯವನ್ನು ವಿದ್ಯಾರ್ಥಿಗಳು ಎಷ್ಟು ಚೆನ್ನಾಗಿ ಕಲಿತಿದ್ದಾರೆ ಎಂಬುದರ ಮೇಲೆ ನಿರ್ಧರಿತವಾಗುತ್ತದೆ. ಹೀಗೆ ಒಬ್ಬ ಶಿಕ್ಷಕನ ಬೋಧನೆ ಎಷ್ಟು ಪರಿಣಾಮಕಾರಿಯಾಗಿದೆ ಎಂಬುವುದನ್ನು ವಿದ್ಯಾರ್ಥಿಗಳೆ ನಿರ್ಧರಿಸುತ್ತಾರೆ. ಹಾಗಾಗಿ ಕ್ರಮವರಿತು ಬೋಧನೆ ಮಾಡಿದಾಗ ಮಾತ್ರ ಕಲಿಕೆ ಪರಿಣಾಮಕಾರಿಯಾಗುತ್ತದೆ.

ಬೋಧನೆ ಹಾಗೂ ಕಲಿಕೆಯ ವಿಧಾನಗಳು

ಬೋಧನೆ ಕಲಿಕೆ ಹಾಗೂ ಪಠ್ಯಕ್ರಮಗಳು ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಮಹತ್ವದ ಸ್ಥಾನವನ್ನು ಪಡೆದಿವೆ. ಶಿಕ್ಷಣವು ಬೋಧನೆ ಹಾಗೂ ಕಲಿಕೆಯನ್ನು ಅವಲಂಬಿಸಿರುವುದರಿಂದ ಇವುಗಳ ಸುಧಾರಣೆಯನ್ನು ಮಾಡಲು ರಾಷ್ಟ್ರ, ರಾಜ್ಯ ಸರ್ಕಾರಗಳು ಹಲವಾರು ಯೋಜನೆ ಕಾರ್ಯಕ್ರಮಗಳನ್ನು ರೂಪಿಸಿ ಅವುಗಳನ್ನು ಜಾರಿಗೆ ತರುತ್ತವೆ. ಬೋಧನೆ ಹಾಗೂ ಕಲಿಕೆಯನ್ನು ಪರಿಣಾಮಕಾರಿಯಾಗಿಸಲು ಹಿಂದಿನಿಂದ ಇಂದಿನವರೆಗೂ ಪ್ರಯತ್ನಗಳು ನಡೆಯುತ್ತಲೆ ಬಂದಿದೆ. ಅದರಿಂದ ಬೋಧನೆ ಹಾಗೂ ಕಲಿಕೆಯಲ್ಲಿ ಕಾಲದಿಂದ ಕಾಲಕ್ಕೆ ಹಲವಾರು ಬದಲಾವಣೆಗಳನ್ನು ಕಾಣಲಾಗಿದೆ. ಅಲ್ಲದೆ ಬೋಧನೆ ಹಾಗೂ ಕಲಿಕೆಗೆ ಹೊಸಹೊಸ ವಿಧಾನಗಳನ್ನು ಅನುಸರಿಲಾಗುತ್ತದೆ. ಅಂತಹ ಕೆಲ ಹೊಸ ವಿಧಾನಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಹೇಳಲಾಗಿದೆ.

ರ.ಗ.ಸ.ದ.ಅ. ವಿಧಾನ

ಭಾಷಾ ಕಲಿಕೆಯಲ್ಲಿ ಹೊಸತನ ತರಬೇಕು ಎಂಬ ದೃಷಿಯಿಂದ ರ.ಗ.ಸ.ದ.ಅ. ಅಕ್ಷರಗಳ ಮೂಲಕ ಪದರಚನೆ ಮಾಡಲು ಅನುಕೂಲವಾಗುವಂತೆ ಸಾಮರ್ಥ್ಯಾಧಾರಿತ ರೀತಿಯಲ್ಲಿ ಭಾಷಾ ಪಠ್ಯವಸ್ತುವನ್ನು ಬದಲಾಯಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಶಿಕ್ಷಕರಿಗೆ ತರಬೇತಿ ಕೊಡಲಾಗಿದೆ. ತರಬೇತಿ ಪಡೆದುಕೊಂಡ ಶಿಕ್ಷಕರು ಬೋಧನೆ ಮಾಡುತ್ತಾರೆ. ತಕ್ಕಮಟ್ಟಿಗೆ ಮಕ್ಕಳ ಕಲಿಕೆಯಲ್ಲಿ ಬದಲಾವಣೆಗಳನ್ನು ತಿಳಿದುಕೊಂಡರು ಸಾಮಾನ್ಯವಾಗಿ ಬಹುತೇಕ ಶಿಕ್ಷಕರು ಮಕ್ಕಳ ಮಾನಸಿಕ ಸಾಮರ್ಥ್ಯವನ್ನು ಅರಿತುಕೊಳ್ಳದೆ ಮತ್ತೆ ಸಾಂಪ್ರದಾಯಿಕ ವಿಧಾನಗಳ ಮೂಲಕ ಬೋಧನೆ ಮಾಡುತ್ತಿರುವುದನ್ನು ನಾವು ಕಾಣಬಹುದಾಗಿದೆ.[೭]

ಈ ವಿಧಾನವು ಕಂಠಪಾಠ ಅಥವಾ ಬಾಯಿಪಾಠ ಮಾಡುವ ವಿದ್ಯಾರ್ಥಿಗಳ ಯಾಂತ್ರಿಕ ಕಲಿಕೆಯನ್ನು ನಿಯತ್ರಿಸಲು ಸಾಧ್ಯವಾದರು ಮಕ್ಕಳಲ್ಲಿ ವರ್ಣಮಾಲೆಯಲ್ಲಿನ ಎಲ್ಲ ಅಕ್ಷರಗಳ ಪರಿಕಲ್ಪನೆ ಇಲ್ಲದಂತಾಗುತ್ತದೆ. ಅಲ್ಲದೆ ಈ ವಿಧಾನದಲ್ಲಿ ಬಳಸಿದ ಪದಗಳ ರಚನೆಯು ಆಯಾ ಸ್ಥಳೀಯ ಪರಿಸರಕ್ಕೆ ತಕ್ಕಂತೆ ಇಲ್ಲದಿರುವುದರಿಂದ ಮಕ್ಕಳು ಆ ಪದಗಳ ಪರಿಕಲ್ಪನೆ/ ಅರ್ಥವನ್ನು ತಿಳಿಯದೆ ಕಲಿಕೆ ವಿಫಲವಾಗುತ್ತದೆ.

ಸಾಮರ್ಥ್ಯಾಧಾರಿತ ಬೋಧನೆ

ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ಬುದ್ಧಿಮಟ್ಟಕ್ಕೆ ಮತ್ತು ಸಾಮರ್ಥಕ್ಕೆ ತಕ್ಕಂತೆ ಬೋಧನ ಕಾರ್ಯ ನಡೆಯಬೇಕು. ಬೋಧನಾ ಚಟುವಟಿಕೆಗಳ ಮೂಲಕ ನೇರವಾಗಿ ಸಾಮರ್ಥ್ಯವನ್ನು ವೃದ್ಧಿಸಬಹುದು.

ಬೋಧನೆ ಆನಂದದಾಯಕವಾಗಿರಬೇಕು. ಬೋಧನೆ ಮಕ್ಕಳಿಗೆ ಕುತೂಹಲ ಕೆರಳಿಸುವಂತಿರಬೇಕು. ಮಗುವು ಲವಲವಿಕೆಯಿಂದ, ಉತ್ಸಾಹದಿಂದ ಭಾಗವಹಿಸಬೇಕಾದರೆ ಮಗುವಿನ ಸಾಮರ್ಥ್ಯಾಧಾರಿತ ಬೋಧನೆ ನಡೆಯಬೇಕು. ಆಗ ಮಗುವಿನಲ್ಲಿ ಸ್ವತಂತ್ರವಾಗಿ ಆಲಸ್ಯಕ್ಕೊಳಗಾಗದೆ, ಬೇಸರವಿಲ್ಲದೆ ಕಲಿಕೆಯು ಪರಿಣಾಮಕಾರಿಯಾಗಿ ನಡೆಯಬೇಕು ಎಂಬ ಉದ್ದೇಶದಿಂದ ಸರ್ಕಾರ ೧೯೮೬ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕಲಿಕೆಯ ಕನಿಷ್ಠ ಮಟ್ಟಗಳನ್ನು ಮೊದಲು ಜಾರಿಗೆ ತರಲು ಪ್ರಸ್ತಾಪಿಸಲಾಯಿತು. ಪ್ರಾಥಮಿಕ ತರಗತಿಯ ಪ್ರತಿ ವಿಷಯಗಳಲ್ಲಿಯೂ ಅತಿ ಅವಶ್ಯಕವಾಗಿ ಗಳಿಸಬೇಕಾದ ಸಾಮರ್ಥ್ಯವನ್ನು ಮಗುವು ಗಳಿಸುವಂತೆ ಬೋಧಿಸುವುದೆ 'ಸಾಮರ್ಥ್ಯಾಧಾರಿತ ಬೋಧನೆ'[೮] ಎನಿಸುತ್ತದೆ.

ರಾಷ್ಟ್ರಮಟ್ಟದಲ್ಲಿ ಪ್ರತಿಯೊಂದು ವಿಷಯದಲ್ಲಿ ನಿರ್ದಿಷ್ಟ ಕ್ಷೇತ್ರಗಳನ್ನು ಗುರುತಿಸಿ ಪ್ರತಿಯೊಂದು ಕ್ಷೇತ್ರಗಳಲ್ಲಿಯು ಆಯಾ ವರ್ಗದಲ್ಲಿ ಗಳಿಸಬೇಕಾದ ಸಾಮರ್ಥ್ಯಗಳನ್ನು ನಿರ್ದಿಷ್ಟಪಡಿಸಲಾಗಿದೆ. ಉದಾಹರಣೆಗೆ ಭಾಷಾ ಕ್ಷೇತ್ರಗಳಲ್ಲಿ ಪ್ರತಿಯೊಂದು ತರಗತಿಗೆ ಅನುಗುಣವಾಗಿ ನಾಲ್ಕು ಕೌಶಲದಲ್ಲಿ ಪ್ರತಿಯೊಂದು ಮಗು ಪಡೆಯಬಹುವುದಾದ ಸಾಮರ್ಥ್ಯಗಳನ್ನು ಗುರುತಿಸಿ ಆಯಾ ತರಗತಿಯಲ್ಲಿ ಅವುಗಳ ಬಗ್ಗೆ ಪ್ರಭುತ್ವ ಪಡೆಯಬೇಕಾಗುತ್ತದೆ. ಸಾಮರ್ಥ್ಯಗಳಿಗೆ ಅನುಗುಣವಾಗಿ ಬೋಧನೆ ಮಾಡಲು ಶಿಕ್ಷಕ ಈ ಬೋಧನಾ ವಿಧಾನಗಳನ್ನು ಮೊದಲು ಅರಿತಿರಬೇಕು. ಈ ಸಾಮರ್ಥ್ಯಾಧಾರಿತ ಬೋಧನೆಯು ಆರು ಹಂತಗಳನ್ನು ಒಳಗೊಂಡಿದೆ. ಅವುಗಳನ್ನು ಸಮರ್ಪಕವಾಗಿ ಮಾಡಿದಾಗ ಮಾತ್ರ ಕಲಿಕೆ ಪರಿಣಾಮಕಾರಿಯಾಗುತ್ತದೆ ಇಂತಹ ಪರಿಣಾಮಕಾರಿ ಕಲಿಕೆಯನ್ನುಂಟುಮಾಡುವ ಸಾಮರ್ಥ್ಯಾಧಾರಿತ ಬೋಧನೆಯ ಹಂತಗಳು ಈ ಕೆಳಗಿನಂತಿವೆ.

೧. ಪೂರ್ವ ಸಿದ್ಧತಾ ಚಟುವಟಿಕೆ

೨. ಕಲಿಕಾ ಪೂರಕ ಚಟುವಟಿಕೆ

೩. ಕಲಿಕಾಂಶ ಚಟುವಟಿಕೆ

೪. ಅಭ್ಯಾಸ ಚಟುವಟಿಕೆ

೫. ಬಳಕೆಯ ಹಂತ

೬. ಮೌಲ್ಯಮಾಪನ ಚಟುವಟಿಕೆ[೯]

ಈ ಬೋಧನೆಯು ಒದರಿಂದ ನಾಲ್ಕನೆಯ ತರಗತಿಯವರೆಗೆ ಆರು ಹಂತಗಳಲ್ಲಿ ನಡೆಯುತ್ತಿದ್ದರೆ, ಐದರಿಂದ ಎಂಟನೆಯ ತರಗತಿಯವರೆಗೆ ಅಂದರೆ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಾಲ್ಕು ಹಂತಗಳಲ್ಲಿ ನಡೆಯುತ್ತದೆ. ಈ ಸಾಮರ್ಥ್ಯಾಧಾರಿತ ಬೋಧನ ವಿಧಾನವು ಉತ್ತಮ ಬೋಧನಾ ವಿಧಾನವಾಗಿದ್ದು, ಕೆಲವು ಶಿಕ್ಷಕರು ಇದರ ಸಮರ್ಪಕ ಬಳಕೆ ಮಾಡಿಕೊಳ್ಳುತ್ತಿಲ್ಲ. ಕಾರಣ ಸೌಲಭ್ಯಗಳ ಕೊರತೆ, ಸಮಯದ ಅಭಾವ, ಆಸಕ್ತಿ ಇಲ್ಲದಿರುವುದು ಹೀಗಾಗಿ ಇದು ಶಾಲೆಗಳಲ್ಲಿ ಸಮರ್ಪಕವಾಗಿ ಬಳಕೆಯಾಗಿಲ್ಲದಿರುವುದು ವಿಷಾದನೀಯವಾಗಿದೆ.

ಶಿಕ್ಷಕರು ಮೊದಲು ಪಾಠಕ್ಕೆ ಸಂಬಂಧಿಸಿದಂತೆ ಪೂರ್ವ ಯೋಜನೆ ಮಾಡಿಕೊಳ್ಳದಿರುವುದು, ತರಗತಿಯ ಪಾಠಗಳಿಗೆ ಸಂಬಂಧಿಸಿದಂತೆ ತಮ್ಮನ್ನು ತೊಡಗಿಸಿಕೊಳ್ಳದಿರುವಿಕೆ, ವಿದ್ಯಾರ್ಥಿಗಳ

ಸಾಮರ್ಥ್ಯಗಳನ್ನು ಅರಿಯುವಲ್ಲಿ ವಿಫಲವಾಗಿರುವುದು. ಈ ಬೋಧನೆಯಲ್ಲಿ ಎಲ್ಲಾ ಮಕ್ಕಳು ಸಮರ್ಪಕವಾಗಿ ಭಾಗವಹಿಸುತ್ತಿಲ್ಲ, ಏಕೆಂದರೆ ಶಾಲೆಗಳಲ್ಲಿನ ಸೌಲಭ್ಯಗಳ ಕೊರತೆ, ಸರ್ಕಾರವು ಯೋಜನೆಯನ್ನು ರೂಪಿಸುವಲ್ಲಿ ಹಲವಾರು ಲೋಪದೋಷಗಳಿರುವುದನ್ನು ಒಳಗೊಂಡಿದೆ. ಅದರಲ್ಲಿ ಮುಖ್ಯವಾಗಿ ಈ ಸಾಮರ್ಥ್ಯಧಾರಿತ ಬೋಧನೆ ಕಡಿಮೆ ಸಂಖ್ಯೆ ಮಕ್ಕಳಿರುವ ತರಗತಿಗೆ ಹೆಚ್ಚು ಸೂಕ್ತ. ಆದರೆ ತರಗತಿಯ ಮಕ್ಕಳ ಸಂಖ್ಯೆ ಹೆಚ್ಚಾಗಿದ್ದರೆ ಎಲ್ಲಾ ಮಕ್ಕಳ ಸಾಮರ್ಥ್ಯಕ್ಕೆ ಅನುಗುಣವಾಗಿ ಬೋಧಿಸಲು ಕಷ್ಟವಾಗುತ್ತದೆ.

ಓದುವೆ ನಾನು

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಆಶ್ರಯದಲ್ಲಿ ಶಿಕ್ಷಣದ ಗುಣಮಟ್ಟ ಸುಧಾರಣೆ ಒಂದು ಪ್ರಮುಖ ಉದ್ದೇಶವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಗುಣಾತ್ಮಕ ಬದಲಾವಣೆಗೆ ಹಲವು ಪ್ರಯತ್ನಗಳು ನಡೆದಿವೆ ಹಾಗೂ ನಡೆಯುತ್ತಿವೆ. ಆದರೂ ಮಕ್ಕಳ ಕಲಿಕೆಯು ನಿರಿಕ್ಷೀತ ಮಟ್ಟ ತಲುಪುತ್ತಿಲ್ಲ ಎನ್ನುವುದು ಸತ್ಯ. ಇತ್ತೀಚಿನ ವರದಿಗಳು ಕೂಡಾ ಈ ವಿಷಯವನ್ನು ದೃಢಪಡಿಸಿವೆ. ಪ್ರಾಥಮಿಕ ಶಾಲಾ ಹಂತದಲ್ಲಿ ಭಾಷೆಯನ್ನು ಸುಲಲಿತವಾಗಿ ಆಲಿಸುವುದು, ಮಾತನಾಡುವುದು, ಓದುವುದು ಮತ್ತು ಬರೆಯುವುದು ಇವು ವಿದ್ಯಾರ್ಥಿಗಳು ಮೂಲಭೂತವಾಗಿ ಗಳಿಸಬೇಕಾಗಿರುವ ಸಾಮರ್ಥ್ಯಗಳಾಗಿವೆ.[೧೦]

'ಓದುವೆ ನಾನು' ಕಲಿಕಾ ಸಾಮಾಗ್ರಿಗಳನ್ನು ಅಕ್ಷರ ಪ್ರತಿಷ್ಠಾನದ ಸಹಯೋಗದೊಂದಿಗೆ ಸರ್ವ ಶಿಕ್ಷಣ ಅಭಿಯಾನವು ತಯಾರಿಸಿ ಆಯ್ದ ೧೧ ಜಿಲ್ಲೆಗಳ ಪ್ರತಿ ಶಾಲೆಯ ಆಯ್ದ ಮಕ್ಕಳಿಗೆ ನೀಡಲಾಗುತ್ತದೆ. ಹಲವಾರು ಭಾಷಾತಜ್ಞರು, ಶಿಕ್ಷಣತಜ್ಞರು, ಮತ್ತು ಸಂಪನ್ಮೂಲ ವ್ಯಕ್ತಿಗಳು ತಂದ ಈ ವಿನ್ಯಾಸ ರಚನೆ, ವಿಷಯ-ವಸ್ತುವಿನ ಆಯ್ಕೆಯನ್ನು ತೀರ್ಮಾನಿಸಲು ಸಹಕಾರಿಯಾಗಿದೆ. ಇದರಲ್ಲಿ ಒಟ್ಟು ೬೦ ಕಾರ್ಡುಗಳಿವೆ. ಇವುಗಳನ್ನು ಮಕ್ಕಳ ಕಲಿಕಾ ಸಾಮರ್ಥ್ಯಗಳ ಆಧಾರದ ಹಲವಾರು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ.[೧೧]

ಓದುವಿಕೆಯಲ್ಲಿ ಹಿಂದುಳಿದಿರುವ ವಿದ್ಯಾರ್ಥಿಗಳ ಓದುವ ಸಾಮರ್ಥ್ಯವನ್ನು ವೃದ್ಧಿಸಲು ಅನುವುವಾಗುವಂತೆ ಚಿತ್ರಗಳ ಕಾರ್ಡುಗಳು, ಸರಳ ಪದಗಳ ಕಾರ್ಡುಗಳು, ಗುಣಿತಾಕ್ಷರಯುಕ್ತ ಪದಗಳ ಕಾರ್ಡುಗಳು, ಒತ್ತಕ್ಷರಸಹಿತ ಪದಗಳು, ಪದಗುಚ್ಚಗಳು, ಪ್ರಾಸಬದ್ದವಾಗಿರುವ ಕವನಗಳು ಹಾಗೂ ಕಥೆಗಳನ್ನು ಒಳಗೊಂಡಂತೆ ಕಾರ್ಡುಗಳನ್ನು ರಚಿಸಲಾಗಿದೆ. ಇಲಾಖೆಯ ಈ ಪ್ರಯತ್ನ ಮಕ್ಕಳು ಓದುವ ಸಾಮರ್ಥ್ಯವನ್ನು ಸುಧಾರಿಸುವುದಾಗಿದೆ. ಆದರೆ ಈ ಕಾರ್ಡುಗಳು ಪರ್ಯಾಯ ಪಠ್ಯಪುಸ್ತಕಗಳಲ್ಲ.

ಓದುವೆ ವೇಗವರ್ಧನಾ

ಶಾಲಾ ಪಠ್ಯವಸ್ತುವಿನಲ್ಲಿ ಮಕ್ಕಳ ಓದುವ ಕೌಶಲ್ಯವನ್ನು ವೃದ್ಧಿಸಲು ಹಲವಾರು ಚಟುವಟಿಕೆಗಳಿವೆ ಇವುಗಳಿಗೆ ಪೂರಕವಾಗಿ ಓದುವುದನ್ನು ಮತ್ತಷ್ಟು ಅಬಿವೃದ್ಧಿಪಡಿಸಲು ಹಲವಾರು ಪ್ರಯೋಗಗಳನ್ನು ಶಿಕ್ಷಕರು ಅಲ್ಲಲ್ಲಿ ಕೈಗೊಂಡಿದ್ದಾರೆ. ಆದರೆ ವ್ಯವಸ್ಥಿತವಾದ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಿರುವ ಕ್ರಮಗಳಲ್ಲಿ ಅಕ್ಷರ ಪ್ರತಿಷ್ಠಾನದ 'ಓದುವೆ ವೇಗವರ್ಧನಾ' ಕಾರ್ಯಕ್ರಮ ಉಲ್ಲೇಖನೀಯ ಈ ಕಾರ್ಯಕ್ರಮಗಳನ್ನು ೨೦೦೪-೦೫ರ ಸಾಲಿನ ಬೆಂಗಳೂರು ನಗರ ಜಿಲ್ಲೆಯ ೧೧೬ ಶಾಲೆಗಳಲ್ಲಿ ಕೈಗೊಳ್ಳಲಾಯಿತು.[೧೨] ಇಲ್ಲಿ ದೊರೆತ ಫಲಿತಾಂಶಗಳು ಉತ್ತೇಜನಕಾರಿಯಾದ

ಕಾರಣ ೨೦೦೬–೦೬ರಲ್ಲಿ ಈ ಕಾರ್ಯಕ್ರಮಗಳನ್ನು ಸ್ವಲ್ಪ ಮಟ್ಟಿಗೆ ವ್ಯಾಪಕಗೊಳಿಸಿ ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಸರ್ವಶಿಕ್ಷಣ ಅಭಿಯಾನ ಸಹಯೋಗದಿಂದ ಅನುಷ್ಠಾನಗೊಳಿಸಲಾಯಿತು. ಈ ಕಾರ್ಯಕ್ರಮದಿಂದ ಸುಮಾರು ೯೬,೦೦೦ ಮಕ್ಕಳು ಸರಾಗವಾಗಿ ಓದುತ್ತಾರೆ ಎನ್ನುವುದನ್ನು ಅಕ್ಷರ ಪ್ರತಿಷ್ಠಾನ ಕೈಗೊಂಡ ಅಧ್ಯಯನ ತಿಳಿಸುತ್ತದೆ. ಇಲ್ಲಿ ಧನಾತ್ಮಕ ಪರಿಣಾಮಗಳನ್ನು ಗಮನಿಸಿ ೨೦೦೭–೦೮ರಲ್ಲಿ ಸರ್ವ ಶಿಕ್ಷಣ ಅಭಿಯಾನದ ವಾರ್ಷಿಕ ಯೋಜನೆಯಲಿ, ಡಿ.ಎಸ್.ಇ.ಆರ್.ಟಿ. ಹಂತದಲ್ಲಿ ಹಾಗೂ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ವ್ಯಾಪಕ ಚರ್ಚೆಗಳು ನಡೆದಿವೆ. ಇವುಗಳ ಆಧಾರದ ಮೇಲೆ ಹಲವು ನುರಿತ ಶಿಕ್ಷಕರು ಮತ್ತು ತಜ್ಞರನ್ನೊಳಗೊಂಡ ಸಮಿತಿ ಓದುವ ಕಾರ್ಡುಗಳನ್ನು ಸಿದ್ಧಪಡಿಸಿವೆ. ಈ ಕಾರ್ಡುಗಳ ಮುಖ್ಯ ಉದ್ದೇಶ ಮಕ್ಕಳ ಓದುವ ಕೌಶಲವನ್ನು ವೃದ್ಧಿಸುವುದು ಹಾಗೂ ಓದುವ ಹವ್ಯಾಸ ಬೆಳೆಸುವುದು.

ಕಾರ್ಡುಗಳ ಸ್ವರೂಪ

ಓದುವ ಕಾರ್ಯಕ್ರಮಕ್ಕೆ ಒಂದು ಅಕರ್ಷಕ ಹೆಸರನ್ನು ನೀಡಬೇಕೆಂಬ ದೃಷಿಯಿಂದ 'ಓದುವೆ ನಾನು' ಎಂಬ ಹೆಸರಿನಿಂದ ಈ ಕಾರ್ಯಕ್ರಮವನ್ನು ಗುರುತಿಸಲಾಯಿತು. ಒಟ್ಟು ೬೦ ಕಾರ್ಡುಗಳಲ್ಲಿ ೧ ರಿಂದ ೮ನೆಯ ಕಾರ್ಡಿನವರಗೆ ಚಿತ್ರವುಳ್ಳ ಕಾರ್ಡುಗಳು; ಇವುಗಳು ಪ್ರಾಣಿ, ಪಕ್ಷಿ, ಗೃಹ ಬಳಕೆಯ ವಸ್ತುಗಳು, ಗಿಡ, ಮರಗಳು, ವಾಹನಗಳ ಚಿತ್ರಗಳನ್ನು ಒಳಗೊಂಡಿವೆ.. ೧೦ ರಿಂದ ೧೫ ಪದಸಹಿತ ಚಿತ್ರಗಳುಳ್ಳ ಕಾರ್ಡುಗಳು ಪ್ರಾಣಿ, ಗಿಡ, ಮರ, ಚಿತ್ರಗಳೊಂದಿಗೆ ಚಿತ್ರದ ಹೆಸರನ್ನು ಸಹ ಒಳಗೊಂಡಿವೆ. ೧೬ ರಿಂದ ೨೫ ಕಾರ್ಡುಗಳು ಸರಳ ಪದಗಳನ್ನು ಹೊಂದಿದ್ದು, ಕಲಿಕಾ ವಾಣಿಯನ್ನು ಅಧಾರಿಸಿ ಸಾಮಾನ್ಯವಾಗಿ ಬಳಕೆಯಲ್ಲಿರುವ ಪದಗಳನ್ನು ರಚಿಸಲಾಗಿದೆ. ೨೬ನೆಯ ಕಾರ್ಡು ಗುಣಿತಾಕ್ಷರಗಳಿಂದ ಹಾಗೂ ಹೆಚ್ಚು ಬಳಕೆಯಲ್ಲಿರುವ ಪದಗಳಿಂದ ಕೂಡಿದೆ. ೨೮ನೆಯ ಕಾರ್ಡು ಸರಳವಾದ ಪದಗುಚ್ಛಗಳಿಂದ ರಚಿತವಾಗಿದೆ. ೨೯ರಿಂದ ೬೦ನೆಯ ಕಾರ್ಡುಗಳು ಕಥೆ, ಕವನಗಳನ್ನೊಳಗೊಂಡ ಕಾರ್ಡುಗಳಾಗಿವೆ.[೧೩] ಕಥೆಗಳನ್ನು ಸರಳವಾದ ವಾಕ್ಯಗಳಲ್ಲಿ ವಿವರಿಸಲು ಪ್ರಯತ್ನಿಸಲಾಗಿದೆ. ಕಾರ್ಡುಗಳ ಸಂಖ್ಯೆ ಹೆಚ್ಚುತ್ತಾ ಹೋದಂತೆ ಭಾಷೆ ಮತ್ತು ಕಥೆಯ ಹಂದರ ವಿಸ್ತೃತವಾಗಿರುವುದನ್ನು ಗಮನಿಸಬಹುದು. ಜತೆಗೆ ಅಲಲ್ಲಿ ಕವನಗಳನ್ನು ಜೋಡಿಸಿದೆ. ಕಥೆಗಳ ವಸ್ತು ಪ್ರಚಲಿತದಲ್ಲಿರುವ ಪಂಚತಂತ್ರ ಕಥೆಗಳು, ಈಸೋಪನ ಕಥೆಗಳು, ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆಗಳನ್ನು ಒಳಗೊಂಡಿದೆ.

ಓದುವ ಕಾರ್ಡುಗಳು ೬೦ ಇದ್ದರೂ ಪ್ರತಿ ವಿದ್ಯಾರ್ಥಿಗೆ ಲಭ್ಯವಾಗುವ ಕಾರ್ಡುಗಳು ಕೇವಲ ೫೦ ಮಾತ್ರ. ಹೇಗೆಂದರೆ ನಿಯಮಾನುಸಾರ ಅಕ್ಷರಗಳು ಗುರುತಿಸಬಲ್ಲ ಆದರೆ ಸರಿಯಾಗಿ ಓದಲು ಬಾರದ L ಮತ್ತು U ಹಂತದ ಮಕ್ಕಳಿಗೆ ೧೧ರಿಂದ ೬೦ರವರೆಗಿನ ಕಾರ್ಡುಗಳನ್ನು ನೀಡಬೇಕು. ಹಾಗೂ ಇವುಗಳ ಸಂರಕ್ಷಣೆಗೆ ಒಂದು ಕೈಚೀಲವನ್ನು ನೀಡಲಾಗುತ್ತದೆ. ಈ ಪದಗಳ ಬಳಕೆಗೆ ಶಿಕ್ಷಕರಿಗೆ ತರಬೇತಿ ನೀಡಿ ಮಕ್ಕಳನ್ನು ಹೇಗೆ ಆಯ್ಕೆ ಮಾಡಿಕೊಳ್ಳಬೇಕು ಯಾವ ಮಕ್ಕಳಗೆ ಯಾವ ಕಾರ್ಡುಗಳನ್ನು ಕೊಡಬೇಕು, ಹೇಗೆ ಓದಿಸಬೇಕು ಎಂಬುವುದರ ಬಗ್ಗೆ ಮಾಹಿತಿ ನೀಡಲಾಗುತ್ತದೆ. ಅಲ್ಲದೆ ಮಕ್ಕಳ ಆಯ್ಕೆಗೆ ವರ್ಷದ ಆರಂಭದಲ್ಲೇ ಆರಂಭಿಕ ಮೌಲ್ಯಮಾಪನ ಮಾಡಿ ಮಕ್ಕಳ ಸಾಧನೆ ತಿಳಿಯಲಾಗುತ್ತದೆ. ವರ್ಷದ ಕೊನೆಗೆ ಮತ್ತೊಮ್ಮೆ ಅಂತಿಮ ಮೌಲ್ಯಮಾಪನ ಮಾಡಿ ಅವರ ಕಲಿಕೆಯಲ್ಲಿನ ವೃದ್ಧಿಯನ್ನು ಅಳೆಯಲಾಗುತ್ತದೆ. ಮಕ್ಕಳ ಮೌಲ್ಯಮಾಪನವನ್ನು ಮಾಡಲು ಮಕ್ಕಳು ಅಕ್ಷರ ಹಂತದಲ್ಲಿದ್ದರೆ.'L'ಎಂದು,

ಸಾಮಾನ್ಯ/ಕನಿಷ್ಠ ಹಂತದಲ್ಲಿದ್ದರೆ. 'W'ಎಂದು ವಾಕ್ಯದ ಹಂತದಲ್ಲಿದ್ದರೆ.'P' ಎಂದು ವಿಂಗಡಿಸಲಾಗಿದೆ. ಈ ಕಾರ್ಯಕ್ರಮಕ್ಕಾಗಿ ಶಾಲೆಯಲ್ಲಿ ವೇಳಾಪಟ್ಟಿಯನ್ನು ನೀಡಲಾಗಿದ್ದು ಪ್ರತಿ ದಿನ ೧ ರಿಂದ ೨ ಅವಧಿಗಳ ಕಾಲ ಕಾರ್ಯವನ್ನು ನಿರ್ವಹಿಸಲಾಗುತ್ತದೆ. ೨ ಶಾಲಾ ಅವಧಿಗಳ ಕೊನೆಗೆ ಸಾಫಲ್ಯ ಪರೀಕ್ಷೆ ಮಾಡಲಾಗುತ್ತದೆ.

ಓದುವೆ ನಾನು ಕಾರ್ಯಕ್ರಮವು ಸರ್ಕಾರದ ಮಹತ್ವಪೂರ್ಣ ಯೋಜನೆಯಲ್ಲಿ ಒಂದಾಗಿದೆ. ಈ ವಿಧಾನವು ಮಕ್ಕಳಿಗೆ ಉಪಯುಕ್ತವಾಗಿದ್ದರೂ ಸಹ ಶಿಕ್ಷಕರು ಈ ಜವಾಬ್ದಾರಿಯಿಂದ ನುಸುಳಿಕೊಳ್ಳುವಂತಾಗಿದೆ. ಏಕಕಾಲಕ್ಕೆ ಎಲ್ಲ ಕಾರ್ಡುಗಳನ್ನು ಕೊಡುವುದರಿಂದ ಎಲ್ಲಾ ಕಾರ್ಡುಗಳ ಕಲಿಕೆ ಸಮರ್ಪಕವಾಗಿಲ್ಲದಿರುವುದು, ಎಲ್ಲಾ ಪೋಷಕರು ಮಕ್ಕಳ ಕಲಿಕೆ ಪ್ರೋತ್ಸಾಹ ನೀಡದಿರುವುದು, ಇದರಿಂದ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಶಿಕ್ಷಕರು ಜವಾಬ್ದಾರಿಯುತ ಬೋಧನೆ ಮಾಡದಿದ್ದರೆ. ಈ ಕಾರ್ಡುಗಳಿಂದ ಉಪಯೋಗವಾಗದು. ಸರ್ಕಾರವು ಈ ಕಾರ್ಡುಗಳನ್ನು ಜಾರಿಗೆ ತಂದಿರುವುದರಿಂದ ಅತ್ತ ಪಠ್ಯಪುಸ್ತಕದ ಕಲಿಕೆಯು ಇತ್ತ ಕಾರ್ಡುಗಳ ಕಲಿಕೆಯೂ ಯಶಸ್ವಿಯಾಗದೆ ಕಲಿಕೆಯು ಕುಂಠಿತವಾಗಿದೆ.

ಪರಿಹಾರ ಬೋಧನೆ

ಮಕ್ಕಳಲ್ಲಿ ಕಂಡುಬರುವ ಕಲಿಕಾ ತೊಂದರೆಗಳನ್ನು ಗುರುತಿಸಲು ಮತ್ತು ತೊಂದರೆಗಳನ್ನು ನಿವಾರಿಸಲು ಪ್ರಾಥಮಿಕ ಶಾಲೆಗಳಲ್ಲಿ ಜಾರಿಗೆ ತಂದಿರುವ ವಿಶೇಷವಾದ ಹಾಗೂ ಪರಿಣಾಮಕಾರಿ ವಿಧಾನಗಳಲ್ಲಿ ಪರಿಹಾರ ಬೋಧನೆ ಒಂದಾಗಿದೆ. ಇದನ್ನು ದೋಷ ಪರಿಶೋಧನ ಪರೀಕ್ಷೆ. ನ್ಯೂನತಾ ಪರೀಕ್ಷೆ ಹಾಗೂ ನೈಧಾನಿಕ ಪರೀಕ್ಷೆ ಎಂದೂ ಕರೆಯುಲಾಗುತ್ತದೆ. ಕಲಿಕೆಯಲ್ಲಿ ವಿದ್ಯಾರ್ಥಿಗಳು ಏಕರೂಪದ ಸಾಧನೆಯನ್ನು ತೋರಲು ಸಾಧ್ಯವಿಲ್ಲ. ಇದಕ್ಕೆ ಕಾರಣ ವ್ಯಕ್ತಿ ಭಿನ್ನತೆ. ತಾವು ಕಲಿಯುವ ಹಲವಾರು ವಿಷಯಗಳಲ್ಲಿ ವಿದ್ಯಾರ್ಥಿಗಳು ಕೆಲವು ದೌರ್ಬಲ್ಯಗಳನ್ನು ಎದುರುಸುತ್ತಿರುತ್ತಾರೆ. ಈ ದೌರ್ಬಲ್ಯಗಳು ಒಂದು ನಿರ್ದಿಷ್ಟ ವಿಷಯದಲ್ಲಿರಬಹುದು ಅಥವಾ ಎಲ್ಲಾ ವಿಷಯಗಳಲ್ಲಿರಬಹುದು ಇಂತಹ ಹಿಂದುಳಿಯುವಿಕೆಯಲ್ಲಿ ವೈಯಕ್ತಿಕ ನ್ಯೂನತೆ, ಗುಂಪಿನ ನ್ಯೂನತೆ ಮತ್ತು ತರಗತಿಯ ನ್ಯೂನತೆಗಳು ಪ್ರಧಾನವಾಗಿರುತ್ತವೆ.

ಸರಕಾರವು ಜಾರಿಗೆ ತಂದಿರುವ ಈ ಯೋಜನೆ ಉತ್ತಮವಾಗಿದ್ದರೂ ಯೋಜನೆಯು ಪರಿಹಾರವಾಗದ ಬೊಧನೆಯಾಗಿದೆ. ಇದು ಕೇವಲ ದಾಖಲೆಗಳಿಗೆ ಮಾತ್ರ ಸೀಮಿತವಾಗಿದೆಯೇ ವಿನಃ ಕಾರ್ಯರೂಪಕ್ಕೆ ಬರುತ್ತಿಲ್ಲ. ಹಿಂದುಳಿದ ವಿದ್ಯಾರ್ಥಿಗಳಿಗೆ ಹೆಚ್ಚು ಪ್ರಾಧಾನ್ಯತೆ ನೀಡಿದರೆ ಪ್ರತಿಭಾವಂತ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟದಲ್ಲಿ ತೊಂದರೆಯಾಗುತ್ತದೆ. ಶಾಲಾ ಅವಧಿಗಿಂತ ಹೆಚ್ಚಿನ ಅವಧಿಯಲ್ಲಿ ಕಲಿಸಲು ನಿರಾಸಕ್ತಿ ತೋರುವುದು; ಈ ಯೋಜನೆಯು ಸಮರ್ಪಕವಾಗಿ ಕಾರ್ಯರೂಪಕ್ಕೆ ಬರಲು ಯಾವುದೇ ತರಬೇತಿಯನ್ನು ನೀಡದಿರುವುದು ಇದರ ವಿಫಲತೆಗೆ ಕಾರಣವಾಗಿದೆ. ಬೋಧನೆಯ ಮಧ್ಯದಲ್ಲಿ ಮಕ್ಕಳನ್ನು ಪರೀಕ್ಷಿಸುತ್ತಾ ಅವರ ತೊಂದರೆಗಳನ್ನು ನಿವಾರಿಸಲು ಪರಿಹಾರ ಬೋಧನೆ ಉತ್ತಮ ವಿಧಾನವಾಗಿದೆ. ಇದರಿಂದ ವಿಷಯದ ಬಗ್ಗೆ ಆಸಕ್ತಿ, ಜ್ಞಾನ ಮತ್ತು ಮಕ್ಕಳಲ್ಲಿ ಆತ್ಮವಿಶ್ವಾಸ ಬೆಳೆಸಲು ಸಹಕಾರಿಯಾಗಿದೆ.

ಭಾಷಾ ಬೋಧನೆ/ ಕಲಿಕೆಯಲ್ಲಿ ಪರಿಹಾರ ಬೋಧನೆಯ ಮಹತ್ವ

ಪ್ರಾಥಮಿಕ ಶಾಲಾ ಮಕ್ಕಳಿಗೆ ಭಾಷೆಯನ್ನು ಕಲಿಸುವಾಗ ಭಾಷಾ ಶಿಕ್ಷಕನು ನೈದಾನಿಕ ಪರೀಕ್ಷೆಯನ್ನು ನಡೆಸಬೇಕಾಗುತ್ತದೆ. ಏಕೆಂದರೆ ಮಕ್ಕಳ ಭಾಷಾ ಸಾಮರ್ಥ್ಯ ಹಾಗೂ ಭಾಷಾ ನ್ಯೂನತೆಯನ್ನು ಕಂಡುಹಿಡಿದು ಪರಿಹಾರ ಬೋಧನೆಯನ್ನು ಮಾಡಿ ಮಕ್ಕಳಲ್ಲಿನ ತಪ್ಪುಗಳನ್ನು ನಿವಾರಿಸಲು ಸಹಾಯಕವಾಗಿದೆ. ಮಗು ಧ್ವನಿ, ಪದ, ವಾಕ್ಯಗಳನ್ನು ಓದುವಾಗ ಮಾಡುವ ತಪ್ಪುಗಳನ್ನು ಶಿಕ್ಷಕ ಗುರುತಿಸಿ ಕ್ಷಣದಲ್ಲಿಯೇ ಅವುಗಳನ್ನು ತಿದ್ದಿಕೊಳ್ಳುವಂತೆ ಪರಿಹಾರ ಬೋಧನೆಯನ್ನು ಪ್ರಾಥಮಿಕ ಶಾಲಾ ಹಂತದಲ್ಲಿ ನೀಡಿದಾಗ ಎಲ್ಲಾ ಮಕ್ಕಳಲ್ಲಿ ಕಲಿಕೆ ಕನಿಷ್ಟ ಹಂತಗಳನ್ನು ಮುಟ್ಟಬಹುದಾಗಿದೆ.

ನೈಧಾನಿಕತೆಯ ಅರ್ಥ

ಯಾವುದೇ ಒಂದು ನಿರ್ದಿಷ್ಟ ಕ್ಷೇತ್ರದಲ್ಲಿ ವಿಧ್ಯಾರ್ಥಿಯ ಕಲಿಕೆಯ ದೌರ್ಬಲ್ಯಗಳನ್ನು ನಿರ್ದಿಷ್ಟವಾಗಿ, ನಿಖರವಾಗಿ ಮತ್ತು ವೈಜ್ಞಾನಿಕವಾಗಿ ಪತ್ತೆ ಹಚ್ಚುವುದರ ಮೂಲಕ ಅವರ ತಪ್ಪುಗಳನ್ನು ಕಂಡುಹಿಡಿಯಲು ನಡೆಸುವ ಪರೀಕ್ಷೆಗಳೆ 'ನೈಧಾನಿಕ ಪರೀಕ್ಷೆ'ಗಳು ಅಥವಾ ಲೋಪದೋಷ ನಿರ್ಣಾಯಕ ಪರೀಕ್ಷೆಗಳು ಎನಿಸಿಕೊಳ್ಳುತ್ತವೆ. ಹೆನ್ರಿ ಮನ್‌ರವರ ಪ್ರಕಾರ 'ಮಕ್ಕಳ ಕಲಿಕೆಯ ವಿಶೇಷ ದೌರ್ಬಲ್ಯಗಳನ್ನು ಅಥವಾ ತಪ್ಪುಗಳನ್ನು ವೈಜ್ಞಾನಿಕವಾಗಿ ಗುರುತಿಸಲು ನೆರವಾಗುವ ಪರೀಕ್ಷೆಗಳೇ ನೈಧಾನಿಕ ಪರೀಕ್ಷೆಗಳು'[೧೪]

ಒಟ್ಟಿನಲ್ಲಿ ಕಲಿಕೆಯಲ್ಲಿ ವಿಧ್ಯಾರ್ಥಿಗಳ ನಿರ್ದಿಷ್ಟ ನ್ಯೂನತೆಗಳನ್ನು ಕಂಡುಹಿಡಿಯುವುದು ಈ ಪರೀಕ್ಷೆಗಳ ಉದ್ದೇಶವಾಗಿದೆ. ವಿಧ್ಯಾರ್ಥಿ ಯಾವ ಪರೀಕ್ಷೆಯಲ್ಲಿ, ಯಾವ ಘಟಕವನ್ನು, ಎಷ್ಟರ ಮಟ್ಟಿಗೆ ತಿಳಿದಿದ್ದಾನೆ ಎಂಬುದನ್ನು ಈ ಪರೀಕ್ಷೆಗಳು ತಿಳಿಸುತ್ತವೆ.

ನೈಧಾನಿಕತೆಯನ್ನು ಗುರುತಿಸುವ ವಿಧಾನ

ನೈಧಾನಿಕ ಪರೀಕ್ಷೆಗಳು ಕೇವಲ ಭೋಧಿಸಿದ ಪಾಠಕ್ಕೆ ಮಾತ್ರ ಸಂಬಂಧಿಸಿರುತ್ತದೆ. ಶಿಕ್ಷಕನು ಒಂದು ಪಾಠವನ್ನು ಪೂರ್ಣವಾಗಿ ಬೋಧಿಸಿದ ನಂತರ ಈ ಪರೀಕ್ಷೆಯನ್ನು ನಡೆಸಬೇಕು. ಆ ಪಾಠದ ಬೋಧನಾಂಶಗಳ ಆಧಾರದ ಮೇಲೆ ವಸ್ತುನಿಷ್ಠ ಪ್ರಶ್ನೆಗಳನ್ನೊಂಡ ಸಾಧಾರಣ ಪರೀಕ್ಷೆಗಳನ್ನು ನಡೆಸಿ, ವಿಧ್ಯಾರ್ಥಿಗಳ ತಪ್ಪುಗಳಿಗೆ ಕಾರಣಗಳನ್ನು ಕಂಡುಹಿಡಿಯಬೇಕು. ಇದಕ್ಕಾಗಿ ತಪ್ಪು ವಿಶ್ಲೇಷಣೆ ಪಟ್ಟಿಯನ್ನು ಉಪಯೋಗಿಸಬೇಕು. ಇಂತಹ ದುರ್ಬಲ ಕ್ಷೇತ್ರವನ್ನಾಧರಿಸಿ ಪರಿಹಾರ ಬೋಧನೆ ಕೈಗೊಳ್ಳಬೇಕು. ಮಕ್ಕಳಿಗೆ ಸಾಕಷ್ಟು ಗದ್ಯಪಾಠವನ್ನು ಕೊಟ್ಟು ಅಭ್ಯಾಸ ಮೂಡಿಸುವುದರಿಂದ ದೋಷಗಳನ್ನು ನಿವಾರಿಸಬಹುದು.

ವಿಧ್ಯಾರ್ಥಿಗಳ ನ್ಯೂನತೆಯನ್ನು ಗಮನಿಸಿ ಶಿಕ್ಷಕನು ಕೆಳಕಂಡ ಕ್ರಮಗಳನ್ನು ಅನುಸರಿಸಬೇಕು

೧. ತರಗತಿಯಲ್ಲಿ ಕಲಿಕೆಯಲ್ಲಿ ಮುಂದಿರುವ ಮಕ್ಕಳಿಗೆ ಸಾರ್ವತ್ರಿಕವಾಗಿ ಪರೀಕ್ಷೆಗಳನ್ನು ಕೈಗೊಳ್ಳಬೇಕು.

೨. ಕಲಿಕೆಯಲ್ಲಿ ತೊಂದರೆ ಇರುವ ವಿಧ್ಯಾರ್ಥಿಗಳು ಯಾರು ಎಂಬುದನ್ನು ಗುರುತಿಸಬೇಕು.

3. ಭಾಷೆ, ಗಣಿತ, ವಿಜ್ಞಾನ, ಓದು ಬರಹ, ವ್ಯಾಕರಣ, ಲೆಕ್ಕ ಮುಂತಾದ ಯಾವ ನಿರ್ದಿಷ್ಟ ಕ್ಷೇತ್ರದಲ್ಲಿ ಯಾವ ದೌರ್ಬಲ್ಯವಿದೆ ಎಂಬುದನ್ನು ಖಚಿತ ಪಡಿಸಿಕೊಳ್ಳಬೇಕು.

೪. ತೊಂದರೆಗಳಿಗೆ ಸೂಕ್ತ ಕಾರಣಗಳನ್ನು ವೈಜ್ಞಾನಿಕವಾಗಿ ಹುಡುಕಬೇಕು.

೫. ತಿದ್ದಿದ ತಪ್ಪುಗಳು ಪದೇಪದೇ ಸಂಭವಿಸಿದಂತೆ ಎಚ್ಚರವಹಿಸಿ ನಿರ್ದಿಷ್ಟ ಚಟುವಟಿಕೆಗಳನ್ನು ಹಾಕಿಕೊಳ್ಳಬೇಕು.

೬. ವಿಧ್ಯಾರ್ಥಿಯ ತಪ್ಪುಗಳನ್ನು ಸರಿಪಡಿಸುವಲ್ಲಿ ಸೂಕ್ತ, ಸುಧಾರಣ ಕ್ರಮಗಳನ್ನು ಕೈಗೊಳ್ಳಬೇಕು.

೭. ಅಗತ್ಯವಿದ್ದಲ್ಲಿ ಶಿಕ್ಷಣ ತಜ್ಞರ, ಪೋಷಕರ ಸಲಹೆ ಮತ್ತು ಮಾರ್ಗದರ್ಶನ ಪಡೆಯಬೇಕು.

ವಿಶೇಷವಾಗಿ ಪ್ರಾಥಮಿಕ ಶಾಲಾ ಹಂತದಲ್ಲಿ ಓದು, ಬರಹ, ಕಾಗುಣಿತ, ಮಗ್ಗಿ, ಲೆಕ್ಕ, ಉಚ್ಚಾರಣಾ ದೋಷ, ಪದಪ್ರಯೋಗ, ವಾಕ್ಯಪ್ರಯೋಗ, ಶಬ್ದಗಳ ಜೋಡಣೆ, ಅಲ್ಪಪ್ರಾಣ, ಮಹಾಪ್ರಾಣ, ವ್ಯಾಕರಣ ದೋಷಗಳು ಮುಂತಾಗಿ ಹಲವಾರು ನ್ಯೂನತೆಗಳು ಸಂಭವಿಸುತ್ತವೆ. ಆದ್ದರಿಂದ ಕಲಿಕೆಯನ್ನು ಪರಿಣಾಮಕರಿಯಾಗಿ ಕಲಿಸಬೇಕಾದರೆ ನಿಯಮಿತವಾಗಿ ಪರೀಕ್ಷೆ ನಡೆಸುವುದು ಅಗತ್ಯವೆನಿಸಿದೆ.

ನೈಧಾನಿಕತೆ ಪರೀಕ್ಷೆಯ ಹಂತಗಳು

ಶಿಕ್ಷಣ ಪ್ರಕ್ರಿಯೆಯಲ್ಲಿ ನೈಧಾನಿಕ ಪರೀಕ್ಷೆ ಹಾಗೂ ಪರಿಹಾರ ಬೋಧನೆಗಳು ಸಮಗ್ರವಾದ ಕಾರ್ಯಗಳಾಗಿವೆ. ಈ ಕಾರ್ಯವು ಕೆಳಕಂಡ ಹಂತಗಳಲ್ಲಿ ನೆರವೇರುತ್ತದೆ.

1. ತಪ್ಪುಗಳನ್ನು ಮಾಡಿರುವವರನ್ನು ಗುರುತಿಸುವುದು.
2. ತಪ್ಪುಗಳು ಎಲ್ಲಿ ನಡೆದಿವೆ ಎಂದು ಗುರುತಿಸುವುದು.
3. ತುಪ್ಪುಗಳಿಗೆ ಕಾರಣಗಳನ್ನು ಕಂಡುಹಿಡಿಯುವುದು.
4. ಪರಿಹಾರ ಕ್ರಮಗಳನ್ನು ಕೈಗೊಳ್ಳುವುದು.
5. ತಡೆಗಟ್ಟುವ ವಿಧಾನ

ಚೈತನ್ಯ

ಶಿಕ್ಷಕರ ಗುಣ್ಣಮಟ್ಟ ಹೆಚ್ಚಿಸುವಲ್ಲಿ ಚೈತನ್ಯ ಬೋಧನಾ ಪದ್ಧತಿಯನ್ನು ಸರ್ಕಾರ ಜಾರಿಗೆ ತಂದಿದೆ. ಚೈತನ್ಯದ ಚಳುವಳಿ ಯಶ್‌ಪಾಲ್ ಶರ್ಮಾರವರ 'ಹೊರೆ ರಹಿತ ಕಲಿಕೆಯ' ಮುಂದೆ ಸಾಗಿದ ಭಾಗ ಚೈತನ್ಯ. ಭಾವನಾತ್ಮಕ ಇರುವಿಕೆಯನ್ನು ಅಳವಡಿಸಿ ಚಟುವಟಿಕೆಗಳ ಮುಖಾಂತರ ಕಲಿಕೆಯನ್ನು ಸ್ಥಿರಗೊಳಿಸುತ್ತದೆ. ಚೈತನ್ಯ ಎಂದರೆ ಕೇವಲ ಹಾಡು, ಕುಣಿತಕ್ಕೆ ಸೀಮಿತವಾಗಿರದ ಕಾರ್ಯಕ್ರಮವಾಗದೆ ಮಗುವಿನ ವ್ಯಕ್ತಿತ್ವ ರೂಪುಗೊಳ್ಳುವ ಕ್ರಿಯೆಯಾಗಿದೆ. ಮಗುವಿನಿಂದ ತಯಾರಾಗುವ ಕ್ರಿಯೆ ಆಗಿದೆ ಶೈಕ್ಷಣಿಕ ಸಿದ್ಧಾಂತಗಳಿಗೆ ಅಂಟಿಕೊಳ್ಳದೆ ನಮ್ಮ ಸಮಸ್ಯೆಗೆ ನಮ್ಮದೇ ಅನುಭವಗಳಿಂದ ಪರಿಹಾರ ನೀಡುವ ಕ್ರಿಯೆಯಾಗಿದೆ. ವೈಜ್ಞಾನಿಕ ರೂಢಿಗಳನ್ನು ಬಳಸಿ ಕಂಡುಹಿಡಿಯುವುದು ಇದರ ಆಶಯ. ಮಗುವಿಗೆ ಕಲಿಕೆಯ ಸನ್ನಿವೇಶ ವಾಹಿನಿಯನ್ನಾಗಿಸುವುದೇ ಇದರ ಸದಾಶಯ. ಸಾಂಪ್ರದಾಯಿಕ ಪದ್ಧತಿಗಳನ್ನು 'ಸ್ಮರಣೆ' ವಲಯಕ್ಕೆ ಸೀಮಿತಗೊಳಿಸಲ್ಪಟ್ಟಿರೆ. ಚೈತನ್ಯ ವಿಧಾನವು 'ಅರ್ಥೈಸುವಿಕೆ' ಕೌಶಲ್ಯ ಹಾಗೂ 'ಮೌಲ್ಯಗಳ ತಯಾರಿಕೆಗೆ' ಹೆಚ್ಚಿನ ಮಹತ್ವ ನೀಡುತ್ತದೆ. ಇಲ್ಲಿ ಪ್ರತಿಯೊಬ್ಬರೂ ಪಾಲ್ಗೊಳ್ಳಬೇಕಾಗಿದೆ. ಹಾಗೂ ಮೌಲ್ಯಗಳ ತಯಾರಿಕೆಗೆ ಹೆಚ್ಚಿನ ವಹಿಸುತ್ತದೆ ಇಲ್ಲಿ ಪ್ರತಿಯೊಬ್ಬರು ಪಾಲ್ಗೊಳ್ಳಬೇಕಾಗಿದೆ. 'ಚೈತನ್ಯ' ಚಟುವಟಿಕೆ ಕಲಿಕಾರ್ಥಿಗಳನ್ನು ಸಂತಸದಿಂದ ಸಾಗಿಸುತ್ತದೆ. ಕಲಿಕೆಯನ್ನು ಭಾವನಾತ್ಮಕ ವಿಕಾಸಕ್ಕೆ ಹೊಂದಿಸುವುದು. ಸಾಮಾಜಿಕ ಕೌಶಲಗಳ ಕಲಿಕೆಗೆ ಹೆಚ್ಚಿನ ಮಹತ್ವ

ಕೊಡುವುದು, ಅಂತಿಮವಾಗಿ ವಿದ್ಯಾರ್ಥಿಗಳಲ್ಲಿ ಲವಲವಿಕೆ ಹಾಗೂ ಜೀವನೋತ್ಸಾಹಗಳನ್ನು ತುಂಬುವುದು ಈ ಕಲಿಕೆಯ ಉದ್ದೇಶ. 'ಚೈತನ್ಯ' ಸಾಮಾನ್ಯ ಪರೀಕ್ಷೆಯನ್ನು ಒಳಗೊಂಡಿರುತ್ತದೆ. ಅಸಾಮಾನ್ಯ ಅಭಿಪ್ರಾಯ ಬಲ್ಲ ದೈತ್ಯ ಮಗುವಿನ ಸ್ವಾಭಾವಿಕ ಲಕ್ಷಣಗಳಾದ ಕುತೂಹಲ, ರಚನೆ, ಸಾಂಘಿಕತೆ ಮುಖಾಂತರ ಕಲಿಕೆಯನ್ನು ಹೊರಹಾಕುವುದಾರ ಮುಖಾಂತರ ಆಸಕ್ತಿಯನ್ನು ಪ್ರಬಲವಾಗಿ ಉಂಟುಮಾಡುವಿಕೆ ಮತ್ತು ಬಳಸುವಿಕೆ ತನ್ಮೂಲಕ ಗರಿಷ್ಠ ಕಲಿಕೆಯನ್ನು ಖಚಿತ ಪಡಿಸುವಿಕೆ ಇದರ ಸವಾಲುಗಳು.

'ಚೈತನ್ಯ' ಈಗಾಗಲೇ ಪ್ರಾಥಮಿಕ ಹಾಗೂ ಮಾಧ್ಯಮಿಕ ಹಂತದಲ್ಲಿ ಪ್ರಬಲ ಸಾಧನವಾಗಿ ಬೆಳೆದಿದೆ. ಅಂತೆಯೇ 'ಚೈತನ್ಯ' ಬೋಧನೋಪಕರಣಗಳ ತಯಾರಿಕೆಗೆ ಇರುವ ಯೋಜನೆಯಾಗಿದೆ. 'ಚೈತನ್ಯ ಚಿಗುರು' ಎಂಬ ಹೆಸರಿನಿಂದ ಇದು ಪ್ರೌಢಶಾಲಾ ವಿಭಾಗದಲ್ಲೂ ಅಳವಡಿಕೆಯಾಗಿದೆ. ಪ್ರಾಥಮಿಕ ಶಾಲಾ ಶಿಕ್ಷಕರ ಮೆಚ್ಚುಗೆಗೆ ಪಾತ್ರವಾದ ಈ ವಿಧಾನ ಸಹಕಾರಿ ಕಲಿಕೆ, ಅನ್ವೇಷಣ ಕಲಿಕೆ, ಆಟದ ಮುಖಾಂತರ ಪಾಠ, ಯೋಜನಾ ಪದ್ಧತಿಯ ಅಳವಡಿಕೆ, ಕ್ಷೇತ್ರ ಪರ್ಯಟನೆ, ವಸ್ತು ಪ್ರದರ್ಶನ ಏರ್ಪಡಿಸುವಿಕೆ ಚೈತನ್ಯದ ಜೀವಾಳ. ಅಲ್ಲದೆ ಮೌಲ್ಯ ಶಿಕ್ಷಣ, ಲಿಂಗ ಸಮಾನತೆ ಮತ್ತು ಸಮನ್ವಯ ಶಿಕ್ಷಣ ಹೀಗೆ ಬೋಧನೆಯ ಹಲವು ಮೆಟ್ಟಿಲುಗಳ ವಿಕಾಸಕ್ಕೆ ಚೈತನ್ಯ ಒತ್ತು ನೀಡುತ್ತದೆ.

ಚೈತನ್ಯ ತರಬೇತಿಯ ಉದ್ದೇಶಗಳು

೧. ಚೈತನ್ಯಧಾರಿತ ಶಿಕ್ಷಕರ ಕೈಪಿಡಿಯು ಬಳಸುವಿಕೆಯ ಆಯಾಮಗಳನ್ನು ಗುರುತಿಸುವುದು ಹಾಗೂ ತನ್ನದಾಗಿಸುವುದು.

೨. ಚೈತನ್ಯದ ಕಲಿಕಾ ಹಂತಗಳ ಮುಖಾಂತರ ಒಳ್ಳೆಯ ಹಾಗೂ ಪ್ರಭಾವಕಾರಿ ಸಂವಹನ ತಂತ್ರಗಳನ್ನು ಬೆಳೆಸಿಕೊಳ್ಳುವುದು

೩. ಪರಿಣಾಮಕಾರಿಯಾದ ಸಂವಹನ ಕಾಪಾಡಿಕೊಳ್ಳಲು ಅಗತ್ಯT.L.Mಗಳನ್ನು ಗುರುತಿಸುವುದು.

೪.ವೈಜ್ಞಾನಿಕ ಮನೋಭಾವ, ಚಲನಶೀಲತೆ, ಕುತೂಹಲ, ಗಮನಿಸುವಿಕೆ ಹೀಗೆ ಅನೇಕ ಅವಶ್ಯಕ ರಂಗದಲ್ಲಿ ಕಾಳಜಿವಹಿಸಲು ವಿಶೇಷ ಕಾರ್ಯಕ್ರಮಗಳನ್ನು ತಯಾರಿಸಿ ಬಳಸುವುದು.

೫. ಈ ತರಬೇತಿಯು ವಿವಿಧ ಹೊಣೆಗಳನ್ನು ಹೇಗೆ ಜಯಿಸಬೇಕೆಂಬ ಕ್ರಮಗಳ ಬಗ್ಗೆ ತಿಳಿಸುತ್ತದೆ.

ಹೀಗೆ ಚೈತನ್ಯ –೧ ರ ಉದ್ದೇಶವನ್ನು ಆಧಾರವಾಗಿಟ್ಟುಕೊಂಡು ಹಿರಿಯ ಪ್ರಾಥಮಿಕ ತರಗತಿಗಳಲ್ಲಿ ಕಲಿಕೆಯ ಗುಣಮಟ್ಟವನ್ನು ಸುಧಾರಿಸಲು ಮತ್ತು ಶಿಕ್ಷಕರ ಬೋಧನೆಯನ್ನು ಸುಧಾರಿಸಲು ಚೈತನ್ಯ–೨ನ್ನು ರೂಪಿಸಲಾಗಿದೆ.

ನಲಿ–ಕಲಿ

ಪುಸ್ತಕ ರಹಿತ ಬೋಧನೆಯು ಶಿಕ್ಷಣ ರಂಗದಲ್ಲಿ ಒಂದು ವಿನೂತನ ಕಾರ್ಯಕ್ರಮ. ಈ ಕಾರ್ಯಕ್ರಮ ಪ್ರಪ್ರಥಮವಾಗಿ ಆಂದ್ರಪ್ರದೇಶದ ಮದನಪಲ್ಲಿಯ 'ಋಷಿ ವ್ಯಾಲಿ' ಎಂಬ ಗ್ರಾಮದಲ್ಲಿ ಪ್ರಾರಂಭವಾಯಿತು. ಖಾಸಗಿ ಶಿಕ್ಷಣ ಸಂಸ್ಥೆಯೊಂದು ತನ್ನ ಶಾಲೆಗಳಲ್ಲಿ ಕಲಿಕೆಯನ್ನು ಬಿಗಿಗೊಳಿಸುವಲ್ಲಿ ಯಶಸ್ವಿಯಾಯಿತು. ಈ ಯೋಜನೆ ಬೋಧನೆಯನ್ನು ಪರಿಣಾಮಕಾರಿಯಾಗಿಸುವಲ್ಲಿ ಮತ್ತು ಕಲಿಕೆಯನ್ನು ಬಿಗಿಗೊಳಿಸುವಲ್ಲಿ ಯಶಸ್ವಿಯಾಯಿತು. ಈ ವಿಷಯವನ್ನು ಅರಿತು ಕರ್ನಾಟಕದ ಡಿ.ಎಸ್.ಇ.ಆರ್.ಟಿ. ಶಿಕ್ಷಣಾಧಿಕಾರಿಗಳೊಂದಿಗೆ ಆಂದ್ರಪ್ರದೇಶದ ಋಷಿವ್ಯಾಲಿಗೆ ಸಂದರ್ಶನ ನೀಡಿ ಪುಸ್ತಕ ರಹಿತ ಬೋಧನೆಯ ಕುರಿತು ಆಳವಾದ ಅಧ್ಯಯನ ನಡೆಸಿತು.

೧೯೯೫ರಲ್ಲಿ ಪುಸ್ತಕ ರಹಿತ ಬೋಧನೆ ಕುರಿತು ರೂಪುರೇಷೆಗಳನ್ನು ಸಿದ್ಧಗೊಳಿಸಿತು. ಈ ರೂಪುರೇಷೆಗಳನ್ನು ಮೈಸೂರು ಜಿಲ್ಲೆಯ ಅತ್ಯಂತ ಹಿಂದುಳಿದ ತಾಲೂಕಾದ ಹೆಗ್ಗಡದೇವನಕೋಟೆಯಲ್ಲಿ ಜಾರಿಗೆ ತರಲು ನಿರ್ಧರಿಸಿತು. ಈ ಯೋಜನೆ ಕಾರ್ಯರೂಪಕ್ಕೆ ತರುವ ಮೊದಲು ಅನುಭವಿ ಮತ್ತು ಆಸಕ್ತಿಯಿಂದ ಕೂಡಿದ ಶಿಕ್ಷಕರ ತಂಡದಲ್ಲಿ ಪರಿಷ್ಕರಣೆಗೆ ಒಳಗಾಯಿತು. ಅಲ್ಲಿ ಸದರಿ ಯೋಜನೆಯು ಶಿಕ್ಷಕರ ಕೈಯಲ್ಲಿ ವೈಜ್ಞಾನಿಕ ಮತ್ತು ಮಾನಸಿಕ ತಳಹದಿಯ ಮೇಲೆ ನಿರ್ದಿಷ್ಟ ರೂಪ ಹೊಂದಿತು.

ಈ ಮೇಲಿನ ಪದ್ಧತಿಯಲ್ಲಿ ಮಕ್ಕಳ ಬಳಿ ಪುಸ್ತಕ ಇರಬೇಕೆಂದಿಲ್ಲ. ಬದಲಾಗಿ ಶಿಕ್ಷಕರಿಗೆ ಬೋಧನೆಯ ಸಂದರ್ಭ ಪಠ್ಯಕ್ರಮ ಇರುತ್ತದೆ. ಪಠ್ಯಕ್ರಮವನ್ನು ತರಗತಿಯ ಕೋಣೆಯಲ್ಲಿ ಹಲವಾರು ತಂತ್ರಗಳನ್ನು ಬಳಸಿ ಕಲಿಸಲಾಗುತ್ತದೆ. ಈ ಪಠ್ಯಪುಸ್ತಕ ರಹಿತ ಬೋಧನೆಯು ನಲಿ–ಕಲಿ ಎಂಬ ಹೆಸರಿನಡಿಯಲ್ಲಿ ರೂಪಿತವಾಗಿದ್ದರೂ ಈ ಹಿಂದೆ ಜಾರಿಯಲ್ಲಿದ್ದ ಕಲಿ–ನಲಿ ಯೋಜನೆಗೆ ಹತ್ತಿರವಾದ ಸಂಬಂಧ ಹೊಂದಿದೆ. ನಲಿ–ಕಲಿ ಯೋಜನೆಯ ಮುಖ್ಯ ಉದ್ದೇಶಗಳು; ಶಿಶು ಕೇಂದ್ರಿತ ಬೋಧನೆ, ಸ್ವಕಲಿಕೆ, ಸಂತಸದ ಕಲಿಕೆ ಮತ್ತು ಪಠ್ಯಪುಸ್ತಕ ರಹಿತ ಬೋಧನೆಯಾಗಿದೆ. ಇವು ಮಕ್ಕಳ ಕಲಿಕೆಯು ವಿವಿಧ ಚಟುವಟಿಕೆಯ ಮೂಲಕ ನಡೆಯುವುದರಿಂದಲೆ ಮಗುವಿನ ಕಲಿಕೆ ಬಲಗೊಳ್ಳುತ್ತಾ ಸಾಗುತ್ತದೆ. ಈ ಹೊಸ ಪದ್ಧತಿಯ ಬೋಧನೆಯಲ್ಲಿ ಭಾಷೆ, ಗಣಿತ ಮತ್ತು ಪರಿಸರ ಅಧ್ಯಯನ ವಿಷಯಗಳು ಬೊಧಿಸಲ್ಪಡುವವು. ಶಾಲಾ ಸಮಯದ ಮಧ್ಯಾಹ್ನದ ಅವಧಿಯಲ್ಲಿ ಪರಿಸರ ಅಧ್ಯಯನ ಮಾತ್ರ ಬೋಧಿಸಲ್ಪಡುವುದು.

"ಪ್ರತಿಯೊಂದು ವಿಷಯಕ್ಕೆ ತರಗತಿಗೆ ಒಂದು ಏಣಿ ಇರುತ್ತದೆ. ಈ ಏಣಿಯನ್ನು ಹತ್ತಲು ಮಗುವು ನಿರ್ದಿಷವಾದ ಮೆಟ್ಟಿಲುಗಳನ್ನು ಹತ್ತುತ್ತಾ ಒಂದೊಂದು ಹಂತವನ್ನು ಪೂರೈಸುತ್ತದೆ. ಒಂದು ಶೈಕ್ಷಣಿಕ ವರ್ಷ ಮುಗಿಯುವರೆಗೂ ಪ್ರತಿಭಾವಂತ ಮಗು ಒಂದು ಏಣಿಯನ್ನು ಪೂರ್ಣಗೊಳಿಸಿದರೆ ೨ನೆಯ ತರಗತಿಯ ಸಾಮರ್ಥ್ಯಗಳನ್ನು ಹೊಂದಿದ ಮಗುವಿಗೆ ೨ನಯ ಏಣಿಯನ್ನು ನೀಡಲಾಗುತ್ತದೆ ಭಾಷೆಯ ಪ್ರತಿ ಹಂತದಲ್ಲಿ ಈ ವಿನೂತ ಪದ್ಧತಿಯಲ್ಲಿ ಕನ್ನಡ ವರ್ಣಮಾಲೆ ಅರ್ಥಪೂರ್ಣವಾದ ೧೦ ಹಂತದಲ್ಲಿ ವಿಭಜಿಸಲ್ಪಡುತ್ತದೆ.

ಉದಾಹರಣೆ: ಮಗು ರ,ಗ,ಸ,ದ, ಆ ಇದು ಕನ್ನಡ ವರ್ಣಮಾಲೆಯಲ್ಲಿ ಬರುವ ೫ ಅಕ್ಷರಗಳಿಂದಲೇ ಹೆಚ್ಚು ಅಂದರೆ ೨೦ರಿಂದ ೨೫ ಶಬ್ಧಗಳನ್ನು ರಚಿಸಲು ಕಲಿಯುತ್ತದೆ ಹಾಗೂ ಈ ವಿಧಗಳಿಂದ ರಚಿತವಾದ ಪದ್ಯಗಳನ್ನು ಕಲಿಯುತ್ತದೆ ಸ್ವಲ್ಪ ಸಮಯದಲ್ಲಿ ಮಗುವಿನಲ್ಲಿ ಕಲಿಕೆಯ ಸಾಮರ್ಥ್ಯ ಬೆಳೆಯುತ್ತದೆ.[೧೫]

ಸಾಮರ್ಥ್ಯಗಳನ್ನು ಕಲಿಯುವ ಮಗುವಿನ ಕಲಿಕೆಗೆ ಪ್ರೇರಣೆ ನೀಡಲು ಶಿಕ್ಷಕ ಹಲವಾರು ಚಟುವಟಿಕೆಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳಬೇಕಾಗುತ್ತದೆ.

ಮಗು ಈ ಮೇಲಿನ ಚಟುವಟಿಕೆಗಳಲ್ಲಿ ತೊಡಗಿದಾಗ ಅದಕ್ಕೆ ಈ ಶಿಕ್ಷಣ ಪದ್ಧತಿಯು ಶಿಕ್ಷೆಯಾಗದೇ ಸಂತೋಷದ ಆಟವಾಗುತ್ತದೆ ಅದು ತನಗೆ ಅರಿವಿಲ್ಲದೆ ಪ್ರತಿ ಹಂತದ ಕೊನೆಗೆ ತನ್ನನ್ನು ತಾನು ಪರೀಕ್ಷೆಗೆ ಒಡ್ಡಿಕೊಳ್ಳುತ್ತದೆ. ಆ ಹಂತದ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡಿರುವಾಗ ಮಗು ೩ನೇ ಹಂತದ ಚಟುವಟಿಕೆಯಲ್ಲಿ ಕಲಿಯಲು ಸಾಧ್ಯವಾಗುತ್ತದೆ. ಇಲ್ಲಿ ಮಗುವಿಗೆ ಪರೀಕ್ಷೆಯ ಅರಿವಿರದೆ ಇರುವುದರಿಂದ ಪರೀಕ್ಷೆಯ ಭಯವಿರುವುದಿಲ್ಲ. ಹೀಗೆ ನಿರಂತರ ಮೌಲ್ಯಮಾಪನ ನಡೆಯುತ್ತಾ ಕ್ರಮವಾಗಿ ಎಲ್ಲಾ ಹಂತಗಳ ಕಲಿಕೆ ಪೂರ್ಣಗೊಂಡು ಯಶಸ್ವಿಗೊಳ್ಳತ್ತದೆ. ಭಾಷೆಯಲ್ಲಿ ಪ್ರತಿ ೩ ಹಂತಗಳಲ್ಲಿ ಅಂದರೆ ೫೧, ೬೫, ೧೫೦ನೇ ಮೆಟ್ಟಿಲುಗಳಲ್ಲಿ ಪರೀಕ್ಷೆಯ ರೂಪದಲ್ಲಿ ಮೌಲ್ಯಮಾಪನ ನಡೆಯುತ್ತದೆ.[೧೬]

ಮೇಲ್ಕಂಡ ಎಲ್ಲಾ ಅಂಶಗಳ ಅಧ್ಯಯನ ಅಭಿಪ್ರಾಯಗಳನ್ನು ಪರಾಮರ್ಶಿಸಿ ಇಂದಿನ ಸಾಮಾಜಿಕ ಹಾಗೂ ಶೈಕ್ಷಣಿಕ ಸನ್ನಿವೇಶಗಳನ್ನು ಸೂಕ್ತವಾಗಿ ಅವಲೋಕಿಸಿ ಪಠ್ಯಪುಸ್ತಕ ರಹಿತವಾದ ಪದ್ಧತಿಯು ಸಮಂಜಸ ಎಂಬುದು ಇಂದಿನ ಶಿಕ್ಷಕರ ಮನೋಭಾವ. ಸಾಮರ್ಥ್ಯ ಹಾಗೂ ಕ್ಷಮತೆಯನ್ನು ಲಕ್ಷ್ಯದಲ್ಲಿ ಇಟ್ಟುಕೊಂಡು ಸಾರ್ವಜನಿಕರ ಅಭಿಪ್ರಾಯದ ಹಿನ್ನೆಲೆಯಲ್ಲಿ ಈ ಪದ್ಧತಿಯು ಗಮನಾರ್ಹ ಪಾತ್ರವಹಿಸುತ್ತದೆ. ನಲಿ–ಕಲಿ ಬೋಧನಾ ಪದ್ಧತಿಯು ಸಮರ್ಪಕತೆಯನ್ನು ಕಂಡ ನಂತರ ಸಾರ್ವತ್ರಿಕರಣದ ಬಗ್ಗೆ ಪರಾಮರ್ಶಿಸಿ ಕ್ರಮ ಕೈಗೊಳ್ಳಬೇಕಾದ ಅವಶ್ಯಕತೆ ಇದೆ.

ಸರ್ಕಾರವು ಜಾರಿಗೆ ತಂದಿರುವ ಈ ನಲಿ–ಕಲಿ ಯೋಜನೆ ಶೈಕ್ಷಣಿಕ ಕ್ಷೇತ್ರದಲ್ಲಿ ಒಂದು ಹೊಸ ಕ್ರಾಂತಿಯನ್ನು ಉಂಟು ಮಾಡಿದ್ದರೂ ಈ ಯೋಜನೆಯಲ್ಲಿ ಕೆಲವು ನ್ಯೂನತೆಗಳು ಇರುವುದನ್ನು ಗಮನಿಸಬಹುದು. ಅವುಗಳಲ್ಲಿ ಮುಖ್ಯವಾಗಿ ಬೇರೆ ರಾಜ್ಯದಲ್ಲಿ ಅಳವಡಿಸಲಾದ ಈ ಯೋಜನೆಯನ್ನು ನಮ್ಮ ರಾಜ್ಯದಲ್ಲಿ ಯಥಾವತ್ತಾಗಿ ಜಾರಿಗೆ ತಂದಿರುವುದು ವಿಷಾದನೀಯ. ಏಕೆಂದರೆ ಆ ರಾಜ್ಯದ ಮಕ್ಕಳ ಬೌದ್ಧಿಕಮಟ್ಟ ಹಾಗೂ ಶೈಕ್ಷಣಿಕ ಪರಿಸರಕ್ಕೂ ನಮ್ಮ ರಾಜ್ಯದಲ್ಲಿನ ಮಕ್ಕಳ ಶೈಕ್ಷಣಿಕ ಮಟ್ಟಕ್ಕೂ ಸಾಕಷ್ಟು ಅಂತರವಿದೆ. ಹಾಗಾಗಿ ಮಕ್ಕಳ ಬೌದ್ಧಿಕ ಮಟ್ಟಕ್ಕೆ ತಕ್ಕಂತೆ ಈ ಯೋಜನೆಯನ್ನು ಮಾರ್ಪಡಿಸಿ ಜಾರಿಗೆ ತಂದರೆ ಹೆಚ್ಚು ಸೂಕ್ತವಾಗುತ್ತದೆ.

ಈ ಯೋಜನೆಯಲ್ಲಿನ ಇನ್ನೊಂದು ದೋಷವೆಂದರೆ ಏಣಿತತ್ವವು ಶಿಕ್ಷಣದಲ್ಲಿ ಗೊಂದಲವನ್ನುಂಟು ಮಾಡಿದೆ. ಏಕೆಂದರೆ ಒಬ್ಬ ವಿಧ್ಯಾರ್ಥಿ ಒಂದು ಏಣಿಯಲ್ಲಿದ್ದರೆ ಮತ್ತೊಬ್ಬ ವಿಧ್ಯಾರ್ಥಿ ೧೦ನೆಯ ಏಣಿಯಲ್ಲಿರುತ್ತಾನೆ. ಇದರಿಂದ ಶಿಕ್ಷಕನು ಎಲ್ಲಾ ಮೆಟ್ಟಿಲುಗಳಲ್ಲಿರುವ ವಿಧ್ಯಾರ್ಥಿಗಳಿಗೆ ಬೋಧನೆ ಮಾಡುವುದು ಕಷ್ಟಸಾಧ್ಯವಾಗುತ್ತದೆ. ಈ ವಿಧಾನದಲ್ಲಿ ಶಿಕ್ಷಕರು ಸದಾ ಚಟುವಟಿಕೆಯಿಂದ ಇದ್ದಾಗ ಮಾತ್ರ ಯಶಸ್ವಿಯಾಗಲು ಸಾಧ್ಯ.

ಬೋಧನೆಯು ವಿಶಿಷ್ಟವಾದ, ವೈವಿದ್ಯಮಯವಾದ, ವೈಜ್ಞಾನಿಕವಾದ ಒಂದು ಕೌಶಲ್ಯ. ಸಮರ್ಥ ಬೋಧಕನು ವಿಧ್ಯಾರ್ಥಿಗಳನ್ನು ವ್ಯವಸ್ಥಿತವಾಗಿ ಕಲಿಯುವಂತೆ ಪ್ರೇರಣೆ ಮಾಡಬೇಕು. ಯಾವುದೇ ವಿಷಯವನ್ನು ಭೋಧಿಸಬೇಕಾದರೆ ಶಿಕ್ಷಕನಿಗೆ ಬೋಧನಾ ವಿಧಾನಗಳ ಅರಿವು ಇರಬೇಕು. ಬೋಧನಾ ವಿಧಾನಗಳನ್ನು ಅನುಸರಿಸಿ ಬೋಧನೆ ಮಾಡಿದಾಗ ಮಾತ್ರ ಕಲಿಕೆ ಪರಿಣಾಮಕಾರಿಯಾಗುತ್ತದೆ. ಬೇರೆ ಬೇರೆ ಪದ್ಧತಿಗಳನ್ನು ಅನುಸರಿಸಬೇಕು. ಶಾಲೆಯಲ್ಲಿ ಶಿಕ್ಷಕನು ವಿಷಯಗಳನ್ನು ಬೋಧಿಸಿದಾಗ ಶ್ರದ್ಧೆ, ಆಸಕ್ತಿ ಹಾಗೂ ಕ್ರಮಬದ್ಧತೆಯಿಂದಿರಬೇಕು. ಆಗ ಶಿಕ್ಷಣ ಪರಿಣಾಮವಾಗುವುದರಲ್ಲಿ ಸಂದೇಹವಿಲ್ಲ.

ಬೋಧನೆ ಒಂದು ಕಲೆಯಾಗಿದ್ದು ಅದನ್ನು ಕರಗತ ಮಾಡಿಕೊಳ್ಳಬೇಕು. ಒಬ್ಬ ಶಿಕ್ಷಕ ಎಲ್ಲಾ ಬೋಧನಾ ವಿಧಾನಗಳನ್ನು ಅರಿತುಕೊಳ್ಳಲು ಅಥವಾ ಬಳಸಲು ಶಕ್ತನಲ್ಲ. ಆದರೆ ಹೆಚ್ಚು ವಿಧಾನಗಳನ್ನು ಅರಿತುಕೊಳ್ಳಲು ಪ್ರಯತ್ನಮಾಡಬೇಕು. ಏಕೆಂದರೆ ಎಲ್ಲಾ ವಿಷಯಗಳನ್ನು ಏಕರೀತಿಯಾಗಿ ಬೋಧಿಸಲು ಸಾಧ್ಯವಿಲ್ಲ. ಅದು ಅಪಾಯಕಾರಿಯೂ ಹೌದು. ಹಾಗಾಗಿ ಮಕ್ಕಳ ವಯಸ್ಸು, ಬುದ್ದಿಶಕ್ತಿ, ಸಾಮರ್ಥ್ಯ ಮುಂತಾದ ಬೋಧಿಸಬೇಕಾಗಿರುವ ವಿಷಯದ ವ್ಯಾಪ್ತಿ ಮುಂತಾದವುಗಳನ್ನು ಗಣನೆಗೆ ತೆಗೆದುಕೊಂಡು ಬೋಧಕರು ಬೋಧನಾ ವಿಧಾನವನ್ನು ಆಯ್ಕೆ ಮಾಡಬೇಕು. ಕಾಲದಿಂದ ಕಾಲಕ್ಕೆ, ಹಂತದಿಂದ ಹಂತಕ್ಕೆ ಹಾಗೂ ಶಾಲೆಯಿಂದ ಶಾಲೆಗೆ ಬೋಧನೆಯು ಬದಲಾವಣೆ ಹೊಂದುತ್ತದೆ. ಆದರೆ ಅದನ್ನು ಹೇಗೆ ಬದಲಾಯಿಸಿಕೊಳ್ಳಬೇಕೆಂಬ ಪರಿಜ್ಞಾನ ಬೋಧಕನಿಗೆ ಇರಬೇಕು. ಬೋಧನಾ ವಿಧಾನಗಳು ಯಶಸ್ವಿ ಶಿಕ್ಷಕನ ಮೇಲೆ ಅವಲಂಭಿತವಾಗಿರುತ್ತವೆ. ಒಂದು ವಿಧಾನವನ್ನು ಒಂದು ತರಗತಿಯಲ್ಲಿ ಉಪಯೋಗಿಸಿದಾಗ ಉಂಟಾಗುವ ಪರಿಣಾಮ ಅದೇ

ವಿಧಾನವನ್ನು ಮತ್ತೊಂದು ತರಗತಿಯಲ್ಲಿ ಉಪಯೊಗಿಸಿದಾಗ ಅಷ್ಟು ಪರಿಣಾಮವಾಗದೆ ಇರಬಹುದು. ಹಾಗಾಗಿ ಈ ಬಗೆಗೆ ಎಚ್ಚರದಿಂದಿರಬೇಕಾಗುತ್ತದೆ.

ಬೋಧನೆ ಎಂದರೆ ಕಲಿಸುವುದು, ಹೇಳಿಕೊಡುವುದು ಎಂಬರ್ಥವನ್ನು ಹೊಂದಿದೆ. ಕಲಿಸುವ ಯತ್ನದಲ್ಲಿ ಉಪಯೋಗಿಸಲ್ಪಡುವ ವಿವಿಧ ಮಾರ್ಗಗಳಿಗೆ ಬೋಧನಾ ವಿಧಾನವೆಂದು ಕರೆಯುವರು. ಪ್ರಾಥಮಿಕ ಮತ್ತು ಪ್ರೌಡ ಹಂತದಲ್ಲಿ ಕನ್ನಡ ಭಾಷೆಯನ್ನು ಬೋಧಿಸಬೇಕಾದರೆ ಹಲವಾರು ಭಾಗಗಳನ್ನಾಗಿ ಮಾಡಿಕೊಂಡು ಬೋಧಿಸಲಾಗುತ್ತದೆ. ಅವುಗಳೆಂದರೆ ಗದ್ಯ, ಪದ್ಯ, ಪ್ರಬಂಧ, ವ್ಯಾಕರಣ, ಪತ್ರಲೇಖನ ಇತ್ಯಾದಿ ಪ್ರತಿಯೊಂದನ್ನು ಬೋಧಿಸಲು ತನ್ನದೇ ಆದ ವಿಶಿಷ್ಟವಾದ ಬೋಧನಾ ಪದ್ಧತಿಗಳಿವೆ. ಇಲ್ಲಿ ಬೋಧನೆಯ ಮೂಲಕ ಹಲವಾರು ಉದ್ದೇಶಗಳನ್ನು ಅಥವಾ ಗುರಿಗಳನ್ನು ಸಾಧಿಸ ಬೇಕಾಗುತ್ತದೆ. ಈ ಸಾಧನೆಗೆ ಉತ್ತಮ ಬೋಧನಾ ವಿಧಾನಗಳು ಅವಶ್ಯವಾಗಿದೆ. ಉದಾ:ಉಪನ್ಯಾಸ ಪದ್ಧತಿಯು ಕಾಲೇಜು ವಿಧ್ಯಾರ್ಥಿಗಳಿಗೆ ಅನುಕೂಲಕರವಾಗಿದೆ. ಅದರೆ ಈ ಪದ್ಧತಿಯನ್ನು ಅನುಸರಿಸಿ .ಪ್ರಾಥಮಿಕ ಶಾಲಾ ಮಕ್ಕಳಿಗೆ ಬೋಧನೆ ಮಾಡುವುದು ಸೂಕ್ತವಲ್ಲ. ಗ್ರಾಮಾಂತರ ಶಾಲೆಗಳು, ಪಟ್ಟಣದ ಶಾಲೆಗಳು, ಬಾಲಕ ಬಾಲಕಿಯರ ಶಾಲೆಗಳು ಹೀಗೆ ಆಯಾ ಶಾಲೆಗಳಿಗೆ ತಕ್ಕಂತೆ ಬೋಧನಾ ವಿಧಾನಗಳನ್ನು ರೂಪಿಸಕೊಳ್ಳಬೇಕು. ಇದರ ಅರಿವು ಪ್ರತೀ ಶಿಕ್ಷಕರಿಗೂ ಇರಬೇಕು. ಕ್ರಮಾಧಾರಿತ ಬೋಧನೆಯಿಂದ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಬೇಕು. ಯಾವ ಶಿಕ್ಷಕನಿಗೆ ಆಗಲಿ ಇಂತದ್ದೇ ಬೋಧನಾ ವಿಧಾನವನ್ನು ಅನುಸರಿಸಿ ಪಾಠ ಮಾಡಬೇಕೆಂದು ನಿರ್ಬಂಧಿಸಬಾರದು. ಶಿಕ್ಷಕನು ಆಯಾ ಶಾಲಾ ವಿಷಯಕ್ಕೆ ತಕ್ಕಂತೆ ಆಯಾ ಸನ್ನಿವೇಶಕ್ಕೆ ತಕ್ಕಂತೆ ಬೋಧನಾ ವಿಧಾನವನ್ನು ಅನುಸರಿಸಲು ಸ್ವತಂತ್ರನಾಗಿಬೇಕು.

ಬೋಧನೆ ಮಾಡುವಾಗ ಯಾವ ಶಿಕ್ಷಕನೇ ಆಗಲಿ ಪಠ್ಯ ವಿಷಯದ ಬಗ್ಗೆ ಎಷ್ಟು ಜ್ಞಾನವನ್ನು ಪಡೆದಿರುವನೋ ಅಷ್ಟೇ ಪರಿಜ್ಞಾನವನ್ನು ಬೋಧನಾ ವಿಧಾನಗಳಲ್ಲಿ ಪಡೆದಿರಬೇಕು. ಇಲ್ಲದಿದ್ದಲ್ಲಿ ಬೋಧನೆ, ಬೋಧನಾ ಉದ್ದೇಶಗಳು ಯಶಸ್ವಿಯಾಗಿರಲಾರವು. ಪಠ್ಯಕ್ರಮ ಉತ್ತಮವಾಗಿರಬಹುದು. ಅದಕ್ಕೆ ತಕ್ಕಂತೆ ಬೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು. ಬೋಧನಾ ವಿಧಾನವು ಜ್ಞಾನ ಮತ್ತು ಕಲಿಕೆಗೆ ಸೇತುವೆ ಇದ್ದಂತೆ. ಹಲವು ಬಗೆಯ ಬೋಧನಾ ವಿಧಾನಗಳಿದ್ದಾಗಲೂ ಒಬ್ಬ ಶಿಕ್ಷಕನು ಒಂದು ವಿಷಯವನ್ನು ಬೋಧಿಸುವ ವಿಧಾನವು ಅದೇ ವಿಷಯವನ್ನು ಮತ್ತೊಬ್ಬ ಶಿಕ್ಷಕನು ಬೋಧಿಸುವ ವಿಧಾನಕ್ಕಿಂತ ಭಿನ್ನವಾಗಿರುತ್ತದೆ. ಬೇರೆ ಬೇರೆ ಶಿಕ್ಷಕ ಬೇರೆ ಬೇರೆ ವಿಧಾನಗಳನ್ನು ಅಳವಡಿಸಿಕೊಂಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ನೋಡಿದಾಗ ಮಕ್ಕಳು ಭಾಷಾ ಕಲಿಕೆಯಲ್ಲಿ ಹಿಂದುಳಿಯಲು ಕಾರಣಗಳನ್ನು ಅವಲೋಕಿಸಿದಾಗ ಪರಿಣಾಮಕಾರಿ ಬೋಧನೆ ಆಗದಿರುವುದು ಒಂದು ಪ್ರಬಲ ಕಾರಣವಾಗಿದೆ. ಆದ್ದರಿಂದ ಬೋಧಕ ಸ್ವಯಂ ಆಸಕ್ತಿ. ಅಭ್ಯಾಸ ಹಾಗೂ ಬೋಧಾನ ಸೂಕ್ಷ್ಮಗಳನ್ನು ಕರಗತಮಾಡಿಕೊಂಡಾಗ ಮಾತ್ರ ಪರಿಣಾಮಕಾರಿ ಬೋಧಕನಾಗಲು ಸಾಧ್ಯ.

ಬೋಧನಾ ಮಾಧ್ಯಮ ಕುರಿತಾದ ಚಿಂತನೆಗಳು

ಶಿಕ್ಷಣದಲ್ಲಿ ಭಾಷೆಯ ಕಲಿಕೆ, ಅದು ವಹಿಸುವ ಪಾತ್ರ ಮಹತ್ವದ್ದಾಗಿದೆ. ಶಿಕ್ಷಣದ ಪರಿಧಿಗೆ ಬರುವ ಪ್ರತಿ ವಿಷಯವನ್ನು ಯಾವುದಾದರೊಂದು ಭಾಷೆಯ ಮೂಲಕವೇ ಕಲಿಯಬೇಕಾಗುತ್ತದೆ. ಹೀಗಾಗಿ ಶಿಕ್ಷಣದಲ್ಲಿ ಭಾಷೆಯ ಕಲಿಕೆ ಅನಿವಾರ್ಯ. ಇಂತಹ ಶಿಕ್ಷಣ ಮಾಧ್ಯಮ ಕುರಿತು, ಅದರಲ್ಲಿಯೂ ಪ್ರಾಥಮಿಕ ಶಾಲೆಗಳಲ್ಲಿ ಬೋಧನಾ ಮಾಧ್ಯಮ ಯಾವುದಿರಬೇಕು ಎಂಬುದನ್ನು ಕುರಿತಾಗಿ ಚಿಂತನೆ ಇಂದು ನಿನ್ನೆಯದಲ್ಲ. ಅದು ಪ್ರಾಚೀನ ಕಾಲದಿಂದಲೂ ನಡೆಯುತ್ತಾ ಬಂದಿದೆ.

ಬೋಧನಾ ಮಾಧ್ಯಮದ ಕುರಿತು ನಮ್ಮ ಶೈಕ್ಷಣಿಕ ಪರಂಪರೆಯಲ್ಲಿ ಅಂದರೆ ವೇದಗಳ ಕಾಲದ ಬೌದ್ಧಕಾಲದ, ಮುಸ್ಲಿಂ ಕಾಲದ ಶಿಕ್ಷಣದಲ್ಲಿ ಪ್ರಾಥಮಿಕ ಶಾಲೆಯ ಬೋಧನಾ ಮಾಧ್ಯಮ ಯಾವುದಿರಬೇಕು ಎಂಬ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ.

ಸ್ವತಂತ್ರಪೂರ್ವ ಹಾಗೂ ಸ್ವತಂತ್ರನಂತರದಲ್ಲಿ ರಚನೆಯಾದ ಹಲವಾರು ಆಯೋಗಗಳು ಹಾಗೂ ವರದಿಗಳು ಸಹ ಭಾಷಾ ಮಾಧ್ಯಮ ಯಾವುದಿರಬೇಕು ಎಂಬ ಬಗ್ಗೆ ತಮ್ಮ ಶಿಫಾರಸ್ಸುಗಳನ್ನು ಸರ್ಕಾರಕ್ಕೆ ನೀಡಿವೆ, ಇನ್ನು ಆಯಾ ಕಾಲಕ್ಕೆ ತಕ್ಕಂತೆ ಭಾಷಾ ತಜ್ಞರು, ಸಮಾಜ ಶಾಸ್ತ್ರಜ್ಞರು, ಮಾಧ್ಯಮದ ಬಗ್ಗೆ ಅನಿಸಿಕೆ, ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಈ ಎಲ್ಲಾ ಚರ್ಚೆಗಳನ್ನು ಗಮನಿಸಿ, ಭಾರತ ದೇಶವು ತ್ರಿಭಾಷಾ ಸೂತ್ರವನ್ನು ಜಾರಿಗೆ ತಂದು ಅದನ್ನು ಎಲ್ಲಾ ರಾಜ್ಯಗಳು ಪಾಲಿಸುವಂತೆ ನಿಯಮ ರೂಪಿಸಿದೆ.

ಬೋಧನಾ ಮಾಧ್ಯಮ ಕುರಿತು ಇಷ್ಟೆಲ್ಲಾ ಚಿಂತನೆ, ನೀತಿ ನಿಯಮಗಳು ಇದ್ದರು ನಮ್ಮ ಕರ್ನಾಟಕದಲ್ಲಿ ಬೋಧನಾ ಮಾಧ್ಯಮ ಯಾವುದಿರಬೇಕು ಎಂಬ ಸಮಸ್ಯೆ ಬಗೆ ಹರಿಯುವಂತೆ ಕಾಣುತ್ತಿಲ್ಲ, ನಮ್ಮ ಕರ್ನಾಟಕ ಸರ್ಕಾರ, ಸಾಹಿತಿಗಳು, ಕರ್ನಾಟಕ ರಕ್ಷಣ ವೇದಿಕೆ, ಕನ್ನಡ ಪರ ಚಿಂತಕರು ಅಂದಿಗಿಂತ ಇಂದು ಪ್ರಾಥಮಿಕ ಶಾಲೆಗಳಲ್ಲಿ ಬೋಧನಾ ಮಾದ್ಯ ಯಾವುದಿರಬೇಕು ಎಂಬುದರ ಬಗ್ಗೆ ಹೆಚ್ಚಿನ ಪ್ರಮಾಣದಲ್ಲಿ ಚರ್ಚೆಗಳನ್ನು ಗಮನಾರ್ಹವಾಗಿದೆ. ಇಂತಹ ಮಹತ್ವದ ಚಿಂತನೆಗಳನ್ನು ಸಂಕ್ಷಿಪ್ತವಾಗಿ ಈ ಕೆಳಗಿನಂತೆ ಚರ್ಚಿಸಲಾಗಿದೆ.

ವೇದಕಾಲದ ಶಿಕ್ಷಣ

ವೇದಗಳ ಕಾಲದಲ್ಲಿ ಶಿಕ್ಷಣವು ಸಂಸ್ಕೃತ ಭಾಷೆಯಲ್ಲಿ ನಡೆಯುತ್ತಿತ್ತು. ಸಂಸ್ಕೃತವು ಜನರ ಧಾರ್ಮಿಕ ವಿಧಿಗಳಿಗಾಗಿ, ಶಿಕ್ಷಣದ ಭಾಷೆಯಾಗಿತ್ತು. ಜತೆಗೆ ಇದು ಶಿಕ್ಷಣದ ಭಾಷೆ ಹಾಗೂ ವಿಜ್ಞಾನ ಭಾಷೆಯಾಗಿತ್ತು. ಇಲ್ಲಿ ಎರಡು ರೀತಿಯ ಭಾಷೆಗಳು ಬಳಕೆಯಲ್ಲಿದ್ದವು. ದೈವಭಾಷೆ ಹಾಗೂ ಮಾನವ ಭಾಷೆ ಧಾರ್ಮಿಕ ಕಾರ್ಯಗಳಲ್ಲಿ ದೇವ ಭಾಷೆಯನ್ನು ಸಾಮಾನ್ಯ ಸಂಭಾಷಣೆಗಳಲ್ಲಿ ಮಾನವ ಭಾಷೆಯನ್ನು ಉಪಯೋಗಿಸಲಾಗಿತ್ತಿತ್ತು. ಇಲ್ಲಿಯ ಶಿಕ್ಷಣ ಮಾಧ್ಯಮ ಸಂಸ್ಕೃತವಾಗಿತ್ತು.[17]

ಬೌದ್ಧ ಕಾಲದ ಶಿಕ್ಷಣ

ಬೌದ್ಧರ ಕಾಲದ ಶಿಕ್ಷಣದಲ್ಲಿ ಸಾಮಾನ್ಯ ವಿಷಯಗಳನ್ನು ಪ್ರಾಂತೀಯ ಭಾಷೆಯಲ್ಲಿಯೇ (ಪಾಲಿ ಭಾಷೆಯಲ್ಲಿಯೇ) ನೀಡಲಾಗುತ್ತಿತ್ತು. ಹಾಗಾಗಿ 'ಪಾಲಿ ಭಾಷೆ'ಯು ಬೌದ್ಧರ ಕಾಲದಲ್ಲಿ ಶಿಕ್ಷಣ ಮಾಧ್ಯಮವಾಗಿತ್ತು. ಹಾಗೂ ಉನ್ನತ ಶಿಕ್ಷಣದಲ್ಲಿ ಸಂಸ್ಕೃತ ಭಾಷೆಯು ಶಿಕ್ಷಣದ ಮಾಧ್ಯಮವಾಗಿತ್ತು.[18]

ಮುಸ್ಲಿಂ ಕಾಲದ ಶಿಕ್ಷಣ

ಮುಸ್ಲಿಂ ಕಾಲದ ಶಿಕ್ಷಣದಲ್ಲಿ ಶಿಕ್ಷಣ ಮಾಧ್ಯಮವಾಗಿ ಅರೆಬಿಕ್ ಮತ್ತು ಪರ್ಶಿಯನ್ ಭಾಷೆಗಳಿಗೆ ಪ್ರಾಮುಖ್ಯತೆ ಇದ್ದುದರಿಂದ ಪ್ರಾಂತೀಯ ಭಾಷೆಗಳ ಬೆಳೆವಣಿಗೆಗೆ ಅಡ್ಡಿಯುಂಟಾಯಿತು. ಮಕ್ಕಳು ಪ್ರಾರಂಭದಿಂದಲೇ ಪರ್ಶಿಯನ್ ಮತ್ತು ಅರೆಬಿಕ್ ಭಾಷೆಗಳನ್ನು ಕಲಲಿಬೇಕಾಗಿತ್ತು. ಶಿಕ್ಷಣದ ಮಾಧ್ಯಮ ಪರ್ಶಿಯನ್ ಅಗಿತ್ತು. ಅಕ್ಬರ್ ಮತ್ತು ಔರಂಗಜೇಬ್ ನಂತಹ ಅರಸರು ಹಿಂದಿ ಮತ್ತು ಉರ್ದು ಮುಂತಾದ ಮಾತೃಭಾಷೆಗಳಲ್ಲಿಯೇ ಶಿಕ್ಷಣ ದೊರೆಯಬೇಕೆಂದು ಹೇಳಿದರು ಸಹ ಶಿಕ್ಷಣದ ಕ್ಷೇತ್ರದಲ್ಲಿ ಅರಬ್ಬಿ ಮತ್ತು ಪರ್ಶಿಯನ್ ಭಾಷೆಗಳದೇ ಮೇಲುಗೈ ಆಗಿತ್ತು.

ವೇದಕಾಲದ ಶಿಕ್ಷಣ ವ್ಯವಸ್ಥೆ ಕೇವಲ ಉನ್ನತ ಸಮುದಾಯದ ಪಾಲಾಗಿತ್ತು ಸಾಮಾನ್ಯ ಜನರ ಆಡು ಭಾಷೆಗಳ ಯಾವುದೇ ಪ್ರಯೋಜನವಿರಲಿಲ್ಲ ಸಂಸ್ಕೃತ ಭಾಷೆಯಾಡುವವರೇ ಶಿಕ್ಷಣ ಪಡೆಯುವ ಪರಿಸರ ಅಂದು ನಿರ್ಮಾಣವಾಗಿತ್ತು ಹಲವು ರೀತಿಯ ನಿರ್ಬಂಧಗಳಿಂದ ಕೂಡಿದ ಕಲಿಕೆ ತುಂಬ ಕಠಿಣವಾಗಿತ್ತು ಇಲ್ಲಿಯ ಶಿಕ್ಷಣದಲ್ಲಿ ಹಾಗೂ ಜನಸಾಮಾನ್ಯರ ಜೀವನದಲ್ಲಿ ಧಾರ್ಮಿಕ ವಿಷಯಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದ್ದರು. ಇದರಿಂದ ವಿದ್ಯಾರ್ಥಿಗಲಿಗೆ ಇತರೆ ವಿಷಯಗಳಲ್ಲಿ ಆಸಕ್ತಿ ಕಡಿಮೆಯಗಿ ಇವರಲ್ಲಿ ತಾರ್ಕಿಕತೆ, ಸ್ವಂತ ಆಲೋಚನಾ ಶಕ್ತಿ ಬೆಳೆಯಲು ಸಾಧ್ಯತೆಗಳಿಲ್ಲ. ಇದರಂತೆ ಮುಂದೆ ಬಂದ ಬೌದ್ದ ಶಿಕ್ಷಣಾ ಪದ್ದತಿಯು ಬ್ರಾಹ್ಮಣ ಶಿಕ್ಷಣ ಪದ್ದತಿಯ ಒಂದು ಸುಧಾರಿತ ಶಿಕ್ಷಣ ವ್ಯವಸ್ಥೆ ಎಂದು ಹೇಳಬಹುದು ಇಲ್ಲಿ ಸಹ ಪಾಲಿ ಭಾಷೆಯ ಜೊತೆಗೆ ಸಂಸ್ಕೃತ ಭಾಷೆಯು ವ್ಯಾಸಂಗದಲ್ಲಿ ಬಳಕೆಯಲ್ಲಿತ್ತು ಮುಂದೆ ಮದ್ಯಕಾಲೀನ ಸಂದರ್ಭದಲ್ಲಿ ಶಿಕ್ಷಣ ವ್ಯವಸ್ಥೆ ಕೇವಲ ಮುಸ್ಲಿಮರ ಪಾಲಾಗಿ ದೇಶಿಯ ಭಾಷೆಗಳಿಗೆ ಯಾವುದೇ ರೀತಿಯ ಪ್ರಾಧಾನ್ಯತೆ ಇರಲಿಲ್ಲ. ಹಿಂದೂಗಳಿಗೆ ಶಿಕ್ಷಣ ಪಡೆಯುವ ಹಕ್ಕಿರಲ್ಲಿಲ್ಲ. ಇದರಿಂದ ಅನೇಕ ಜನ ಶಿಕ್ಷಣದಿಂದ ವಂಚಿತರಾದರು.

ಒಟ್ಟಿನಲ್ಲಿ ಪ್ರಾಚೀನ ಕಾಲದ ಶಿಕ್ಷಣ ವ್ಯವಸ್ಥೆ ಒಂದು ಸೀಮಿತ ಚೌಕಟ್ಟಿಗೆ ಒಳಪಟ್ಟು ನೀಡುತ್ತಿತ್ತು ಧಾರ್ಮಿಕ ಹಾಗೂ ಆಧ್ಯಾತ್ಮಿಕತೆಯ ಕಡೆ ಹೆಚ್ಚು ಒಲವಿದ್ದು ಈ ಸಂಸ್ಥೆಗಳು ಪ್ರಾದೇಶಿಕ ಭಾಷೆಯನ್ನು ಕಡೆಗಣಿಸಿ ತಮ್ಮದೇ ಆದ ಪ್ರಮುಖ ಭಾಷೆಯಲ್ಲಿ ಶಿಕ್ಷಣ ನೀಡುತ್ತಿದ್ದರಿಂದ ಜನ ಸಾಮಾನ್ಯರು ಸಹಜವಾಗಿಯೇ ಶಿಕ್ಷಣದಿಂದ ದೂರ ಉಳಿಯಿತ್ತಿದ್ದರು.

ಸ್ವಾತಂತ್ರ ಪೂರ್ವದ ಪ್ರಮುಖ ಶಿಕ್ಷಣ ಆಯೋಗಗಳು

ಸ್ವಾತಂತ್ರ ಪೂರ್ವದ ರಚನೆಯಾದ ಆಯೋಗಗಳನ್ನು ಬೋಧನಾ ಮಾದ್ಯಮವಾಗಿ ಯಾವ ಭಾಷೆ ಇರಬೇಕು, ಯಾವ ತರಗತಿಯಿಂದ ಮಾತೃಭಾಷೆಯನ್ನು ಬೋಧಿಸಬೇಕು ಎಂಬುವುದರ ಬಗ್ಗೆ ತಮ್ಮದೇ ಆದ ವಿಚಾರಗಳನ್ನು ಮಂಡಿಸಿದ್ದಾರೆ. ಅವುಗಳಲ್ಲಿ ಕೆಲವು ವಿಚಾರಗಳನ್ನು ಇಲ್ಲಿ ಪ್ರಸಾಪಿಸಲಾಗಿದೆ.

೧೮೩೫ರ ಮೆಕಾಲೆ ವರದಿ

ಮೆಕಾಲೆಯ ಶಿಕ್ಷಣ ಕುರಿತ ವರದಿ ಭಾರತದ ಶಿಕ್ಷಣ ಪದ್ದತಿಯೊಂದಕ್ಕೆ ಶಾಶ್ವತವು ನಿರ್ದಿಷ್ಟವು ಆದಂತಹ ಬುನಾದಿಯನ್ನು ಹಾಕಲು ಸರ್ಕಾರಕ್ಕೆ ಸಹಾಯವಾಯಿತು. ಆದರೆ ಅವರು ಭಾಷಾ ಬೋಧನೆಯ ಬಗ್ಗೆ ಹೇಳುವಾಗ ದೇಶಿ ಭಾಷೆಗಳನ್ನು ಕಡೆಗಣಿಸಿ 'ಇಂಗ್ಲೀಷ್' ಬೋಧನೆ ಮಾಧ್ಯಮವಾಗಿಬೇಕಂದು ಸಮರ್ಥಿಸಿಕೊಂಡಿದ್ದಾರೆ. [೧೯] ಏಕೆಂದರೆ ಭಾರತೀಯ ಭಾಷೆಗಳು ಪೂರ್ಣವಾಗಿ ವಿಕಸನ ಹೊಂದಿಲ್ಲ. ಅರೆಬಿಕ್ ಮತ್ತು ಸಂಸ್ಕೃತ ಭಾಷೆಗಳಿಂತ ಇಂಗ್ಲೀಷ್ ಉನ್ನತವಾಗಿದೆ ಎಂದು ಹೇಳಿದ್ದಾರೆ. ಮೆಕಾಲೆಯವರ 'ಇಂಗ್ಲೀಷ್ ವಾದಗಳು' ಈಕೆಳಗಿನಂತಿವೆ.

ಅ) ಇಂಗ್ಲೀಷ್ ಭಾಷೆಯು ಆಧುನಿಕ ಜ್ಞಾನದ ಬೀಗದ ಕೈ ಇದ್ದಂತೆ ಅದುದರಿಂದ ಅದು ಅರೆಬಿಕ್ ಹಾಗೂ ಸಂಸ್ಕೃತಗಳಿಗಿಂತ ಪ್ರಯೋಜನಕಾರಿಯಾಗಿದೆ.

ಆ) ಅದು ಪಾಶ್ಚಾತ್ಯ ಭಾಷೆಗಳಲ್ಲಿಯೇ ಪ್ರಮುಖವಾದದ್ದು, ಭಾರತದಲ್ಲಿ ಇಂಗ್ಲೀಷ್ ಭಾಷೆಯು ಆಡಳಿತ ವರ್ಗದವರಿಂದ ಮಾತ್ರ ಬಳಸಲ್ಪಡುತ್ತದೆ.

ಇ) ಇಂಗ್ಲೀಷ್ ಭಾಷೆಯು ಭಾರತೀಯರನ್ನು ನಾಗರೀಕರನ್ನಾಗಿ ಮಾಡುವುದು ಅದು ಭಾರತದಲ್ಲಿ ಜ್ಞಾನವನ್ನು ಪುನರ್‌ಜ್ಜೀವನಕ್ಕೆ ತರುತ್ತದೆ.

ಈ) ಭಾರತೀಯರಲ್ಲಿ ಅರ್ಧದಷ್ಟು ಜನ ಇಂಗ್ಲೀಷ್ ಕಲಿಯಬೇಕೆಂದು ಹಂಬಲಿಸುತ್ತಾರೆ ಆದ್ದರಿಂದ ರಾಜರಾಂಮೋಹನ್ ರಾಯರವರಿಗೆ ಬೆಂಬಲ ನೀಡಿದರು.

ಉ) ಮೆಕಾಲೆಯಿಂದ ಅರ್ದಮುಖಿಗೊಳಿಸುವಿಕೆ, ಸೋಸುವಿಕೆ ಸಿದ್ಧಾಂತ ಪ್ರತಿಸ್ಥಾಪಿಸಲ್ಪಟ್ಟಿತು. ಅವರ ಪ್ರಕಾರ ಭಾರತೀಯರು ರಕ್ತ ಮತ್ತು ಬಣ್ಣದಲ್ಲಿ ಇರಬೇಕೆ ವಿನಃ ರುಚಿಗಳು ಅಭಿಪ್ರಾಯಗಳು ನೈತಿಕತೆಯು ಮತ್ತು ಬೌದ್ಧಿಕತೆಯು ಇಂಗ್ಲೀಷ್ ಆಗಬೇಕು. ಅಂದಾಗ ಮಾತ್ರ ಅಧೋಮುಖ ಸೋಸುವಿಕೆ ಸಿದ್ಧಾಂತ ಯಶಸ್ವಿಯಾಗಬಲ್ಲದು.[೨೦]

ವುಡ್ಸ್‌ನ ವರದಿ

೧೮೫೪ರಲ್ಲಿ ರಚನೆಯಾದ ವುಡ್ಸ್ ವರದಿಯು ಅನೇಕ ಮಹತ್ವದ ಶಿಫಾರಸ್ಸುಗಳನ್ನು ಒಳಗೊಂಡಿದೆ. ಇದು ಭಾರತೀಯರ ಪ್ರಚಲಿತ ಶಿಕ್ಷಣದ ಒಂದು ಭದ್ರ ಬುನಾದಿ ಅಥವಾ ಮೈಲುಗಲ್ಲಾಗಿದ್ದರೂ ಭಾಷಾ ಬೋಧನೆಯ ವಿಷಯದಲ್ಲಿ ಅಲ್ಲಿನ ವಿವರಗಳು ಇಂತಿವೆ.

ಅಂದು ಭಾರತೀಯ ಭಾಷೆ ಅಭಿವೃದ್ಧಿಯಾಗಿರಿಲ್ಲಿಲ್ಲ. ಅದರ ಕೊರತೆಯನ್ನು ಗಮನದಲ್ಲಿಟ್ಟು ಆಯೋಗ ಇಂಗ್ಲೀಷ್‌ನ್ನು ಭಾಷಾ ಮಾಧ್ಯಮವಾಗಿ ಮಾಡಲು ಹೇಳಿತು. ಆದರೆ ಇಂಗ್ಲೀಷ್ ಭಾಷೆಯನ್ನು ಶಿಕ್ಷಣದ ಮಾಧ್ಯಮವನ್ನಾಗಿ ಉಪಯೋಗಿಸುವುದು ಗಂಡಾಂತರಕಾರಿಯಾಗುವುದು. ಈ ಕಾರಣಕ್ಕಾಗಿ ಇದಕ್ಕನುಸಾರವಾಗಿ ಸ್ಥಳೀಯ/ ದೇಶಿಯ ಭಾಷೆಗಳನ್ನು ಕೂಡಾ ಯುರೋಪಿಯನ್ನರ ಜ್ಞಾನವನ್ನು ಭಾರತೀಯರಲ್ಲಿ ಒಡಮೂಡಿಸಲು ಇಂಗ್ಲೀಷ್ ಭಾಷೆ ಹಾಗೂ ದೇಶಿಯ ಭಾಷೆಗಳೆರಡು ಬೋಧನಾ ಮಾಧ್ಯಮಗಳೆಂದು ಭಾವಿಸಲಾಯಿತು.[೨೧]

ಸ್ವಾತಂತ್ರ ಪೂರ್ವದ ಶಿಕ್ಷಣ ಆಯೋಗಗಳ ಪ್ರಮುಖ ಉದ್ದೇಶ ದೇಶಿಯ ಭಾಷೆಗಳನ್ನು ಕಡೆಗಣಿಸಿ ಇಂಗ್ಲೀಷ್ ಭಾಷೆಯನ್ನು ಬೋಧನ ಮಾಧ್ಯಮವನ್ನಾಗಿಸಿ ಭಾರತೀಯರಲ್ಲಿ ಯೂರೋಪಿಯನ್ನರ ಜ್ಞಾನವನ್ನು ನೀಡಲಾರಂಭಿಸಿದರು. ಹಲವು ರೀತಿಯಿಂದ ಭಾರತೀಯರನ್ನು ಜಯಿಸಿದ ಬ್ರಿಟೀಷರು ಸಾಂಸ್ಕೃತಿಕ ಕ್ಷೇತ್ರದಲ್ಲಿ ಪಾದಾರ್ಪಣೆ ಮಾಡಿದರು ಅದಕ್ಕಾಗಿ ಶಿಕ್ಷಣವನ್ನು ತಮ್ಮ ಇಚ್ಚೆ ಪರಿವರ್ತನೆಗೆ ಉಪಯೋಗಿಸಿದರು ಭಾರತೀಯ ಭಾಷೆಗಳು ಶಿಕ್ಷಣ ನೀಡುವಲ್ಲಿ ಅಷ್ಟೊಂದು ಅಭಿವೃದ್ಧಿ ಸಾಧಿಸಿಲ್ಲವೆಂದು ತಮ್ಮದೇ ಆದ ಇಂಗ್ಲೀಷ್ ಭಾಷೆಯನ್ನು ಬೋಧನಾ ಮಾಧ್ಯಮವನ್ನಾಗಿ ಜಾರಿಗೆ ತಂದರು ಹೀಗಾಗಿ ಬ್ರಿಟೀಷ್ನ ಶಿಕ್ಷಣವು ಸೃಜನಾತ್ಮಕ ಕ್ರಿಯೆಗಳನ್ನೆಲ್ಲ ಅಲ್ಲಗಳೆಂದು ಭಾರತೀಯರನ್ನು ನಿಷ್ಟೆಯನ್ನಾಗಿ ಮರ್ಆಡುವ ಉದ್ದೇಶವಿಟ್ಟುಕೊಂಡಿದೆ. ಸದಾ ಕಾಲವುಭಾರತವು ಬ್ರಿಟೀಷ್ರ ಸಾಮ್ರಾಜ್ಯದ ಅಡಿಯೊಳಗಿರಬೇಕೆಂಬ ಸಂಕಲ್ಪವು ಸುಲಭವಾಗಿ ಈಡೇರಬೇಕಾಗಿತ್ತು ಇದರಿಂದ ಇಂಗ್ಲೀಷ್ ಸಾಹಿತ್ಯ, ಸಂಸ್ಕೃತಿಗಳನ್ನು ಭಾರತೀಯರಲ್ಲಿ ಬಿಂಬಿಸುವ ಮಹಾದಾಸೆ ಅವರದಾಗಿತ್ತು. ಹೀಗೆ ಆಂಗ್ಲ ಶಿಕ್ಷಣ ಪಡೆದ ಭಾರತೀಯರು ಪ್ರತಿಯೊಂದರಲ್ಲಿಯೂ ಯೂರೋಪಿಯನರನ್ನು ಅನುಸರಿಸಿದರು ಇಂಗ್ಲೀಷ್ ಭಾಷೆ ಪರವಾಗಿದ್ದ ಮೇಕಾಲೆ ಬೋಧನಾ ಮಾಧ್ಯಮವಾಗಿ ಸ್ಥಳೀಯ ಭಾಷೆಯನ್ನು ನಿರಾಕರಿಸಿ ಆಂಗ್ಲ ಭಾಷೆಯನ್ನು ಬೋಧನಾ ಮಾಧ್ಯಮವಾಗಿ ಪರಿಗಣಿಸಿದರು. ನಂತರ ಬಂದ ಹಂಟರ್ ಆಯೋಗವು ಪ್ರಾಥಮಿಕ ಶಿಕ್ಷಣದ ಕಡೆಗೆ ಹೆಚ್ಚು ಒಲವನ್ನು ತೋರಿತು.[೨೨] ಪ್ರಾಥಮಿಕ ಶಿಕ್ಷಣವು ಮಾತೃಬಾಷೆಗಳಲ್ಲಿ ನಡೆಯಬೇಕೆಂದಿತ್ತು ಹೀಗೆ ಮುಂದೆ ಬಂದಂತಹ ಎಲ್ಲಾ ಆಯೋಗಳನ್ನು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದಲ್ಲಿ ಮಾತೃಭಾಷೆಯನ್ನೆ ಮಾಧ್ಯಮವಾಗಿಸಿದರೆ ಇಂಗ್ಲೀಷ್‌ನ್ನು ದ್ವಿತೀಯ ಭಾಷೆಯನ್ನಾಗಿ ಪರಿಗಣಿಸಲಾಯಿತು.

ಭಾರತೀಯ ಶಿಕ್ಷಣ ಆಯೋಗ/ಹಂಟರ್ ಆಯೋಗ

೧೯೮೭ರಲ್ಲಿ ರಚನೆಯಾದ ಭಾರತೀಯ ಶಿಕ್ಷಣ ಆಯೋಗವು ಪ್ರಾಥಮಿಕ ಶಿಕ್ಷಣದತ್ತ ಗಮನಹರಿಸಿತು. ನಿಜವಾಗಿಯು ಪ್ರಾಥಮಿಕ ಶಿಕ್ಷಣವೇ ಆದರ ಪ್ರಮುಖವಾದ ತನಿಖಾ ಕ್ಷೇತ್ರವಾಗಿತ್ತು. ಪುಸ್ತಕ ದಿನಗಳಲ್ಲಿ ಪ್ರಾಥಮಿಕ ಶಿಕ್ಷಣದ ಮಹತ್ವವನ್ನು ಅರಿತು ಆಯೋಗವು ಪ್ರಾಶಿಕ್ಷಣದ ಯೋಜನೆ, ಸಂಘಟನೆ, ಪಠ್ಯಕ್ರಮ, ಶಿಕ್ಷಕರ ತರಬೇತಿ, ಅನುಧಾನ ಸಂಹಿತಿ ಮುಂತಾದ ವಿಷಯಗಳು ಅಲ್ಲದೆ ಪ್ರಾಥಮಿಕ ಶಿಕ್ಷಣವನ್ನು ಯಾವ ಮದ್ಯಮದಲ್ಲಿ ಬೋಧನೆ ಮಾಡಬೇಕು ಎಂಬುವುದರ ಬಗ್ಗೆಯು ಹೇಳಿದೆ. ಇದು 'ಪ್ರಾಥಮಿಕ ಶಿಕ್ಷಣದ ಬೋಧನೆಯು ಮಾತೃಭಾಷೆಯಲ್ಲಿ ನಡೆಯಬೇಕು.. ಎಂದಿದೆ. ಅಲ್ಲದೇ ಇದು ಕೇವಲ ವಿಶ್ವ ವಿದ್ಯಾಲಯ ಶಿಕ್ಷಣಕ್ಕೆ ಏರಬೇಕದ ಏಣಿಯಂತಿರದೆ ಜನ ಸಾಮಾನ್ಯರ ಪ್ರಾಯೋಗಿಕ ಜೀವನಕ್ಕೆ ಹತ್ತಿರವಾಗಿರಬೇಕು ಮತ್ತು ಅವರ ಅವಶ್ಯಕತೆಗಳನ್ನು ಪೂರೈಸುವಂತಿರಬೇಕು.

೧೯೦೪ ಭಾರತ ಸರ್ಕಾರದ ಗೊತ್ತುವಳಿ

ಲಾರ್ಡ್ ಕರ್ಜನ್‌ರವರು ಅತ್ಯಂತ ಮೇಧಾವಿ, ಸಮರ್ಥ, ದಕ್ಷ ಆಡಳಿತಗಾರರು ಮತ್ತು ಶಿಕ್ಷಣ ಪ್ರೇಮಿಯಾಗಿದ್ದರು. ಅವರು ಭಾರತದ ಶಿಕ್ಷಣ ವ್ಯವಸ್ಥೆಯನ್ನು ಸುಧಾರಿಸಲು ಪ್ರಯತ್ನಿಸಿದರು. ಅಲ್ಲದೆ ೧೯೦೨ರಲ್ಲಿ ರ್‍ಯಾಲೆ ನೇತೃತ್ವದಲ್ಲಿ ಶಿಕ್ಷಣ ವ್ಯವಸ್ಥೆಯ ಉತ್ತಮತೆಗಾಗಿ ಒಂದು ಆಯೋಗವನ್ನು ರಚಿಸಿದರು. ಇದು ೧೯೦೪ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಅದರಲ್ಲಿ ಪ್ರಾಥಮಿಕ ಶಿಕ್ಷಣದ ಬೋಧನಾ ಮಾಧ್ಯಮದ ಕುರಿತು ಈ ರೀತಿಯಾಗಿ ಹೇಳಿದೆ. ಅದು 'ಪ್ರಾಥಮಿಕ ಶಿಕ್ಷಣ ಮಗುವಿನ ಮಾತೃಭಾಷೆಯಲ್ಲಿ ನೀಡಬೇಕು' ಎಂದಿದೆ. ಅಂದರೆ ಮಾತೃಭಾಷೆ ಬೋಧನಾ ಮಾಧ್ಯಮವಾಗಿರಬೇಕು ಹಿರಿಯ ಪ್ರಾಥಮಿಕ ಹಂತದವರೆಗೂ ಇಂಗ್ಲೀಷನ್ನು ಒಂದು ಭಾಷೆಯಾಗಿ ಅಭ್ಯಸಿಸಬೇಕು, ಹಿರಿಯ ಮಾಧ್ಯನಿಕ ಹಂತದಲ್ಲಿ ಇಂಗ್ಲೀಷ್ ಬೋಧನಾ ಮಾಧ್ಯಮವಾಗಬೇಕು ಎಂದಿದೆ.[೨೩]

ಕಲ್ಕತ್ತಾ ವಿಶ್ವವಿದ್ಯಾಲಯ ಆಯೋಗ

ಕಲ್ಕತ್ತಾ ವಿಶ್ವವಿದ್ಯಾಯ ಆಯೋಗವು ಬ್ರಿಟಿಷ್ ಕಾಲದ ಭಾರತ ಶಿಕ್ಷಣದ ಇತಿಹಾಸ ಉಚ್ಚ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಒಂದು ಮೈಲುಗಲ್ಲಾಗಿ ನಿಂತಿದೆ. ಈ ಆಯೋಗವು ೧೯೧೭ರಲ್ಲಿ ಲೀಡ್ಸ್ ವಿಶ್ವವಿದ್ಯಾಲಯದ ಉಪಕುಲಪತಿಗಳಾದಂತಹ ಸರ್. ಮೈಕಲ್ ಸ್ಯಾಂಡ್ಲರ್‌ರವರ ಅಧ್ಯಕ್ಷತೆಯಲ್ಲಿ ರಚನೆಯಾಗಿತ್ತು ಇದು 'ಮಾಧ್ಯಮಿಕ ಶಾಲಾ ಹಂತದಲ್ಲಿ ಮಾತೃಭಾಷೆಯು ಶಿಕ್ಷಣದ ಮಾದ್ಯಮವಾಗಿರಬೇಕು' ಎಂದು ಹೇಳಿದೆ.[೨೪]

ಸಾರ್ಜಟ್ ವರದಿ

ಎರಡನೇ ಮಹಾಯುದ್ಧದ ನಂತರ ಇಂಗ್ಲೆಂಡಿನಲ್ಲಾದ ಶೈಕ್ಷಣಿಕ ಸಾಧನೆಗಳ ಮಟ್ಟವನ್ನು ಭಾರತದಲ್ಲಿ ಸಾಧಿಸುವಂತೆ ಮಾಡುವ ಉದ್ದೇಶದಿಂದ ೧೯೪೪ರಲ್ಲಿ ಸಾರ್ಜೆಂಟ್ ವರದಿ ತನ್ನ ಶಿಫಾರಸ್ಸನ್ನು ಸರ್ಕಾರಕ್ಕೆ ಸಲ್ಲಿಸಿತು. ಇದು ಬೋಧನಾ ಮಾಧ್ಯಮದ ಬಗ್ಗೆ ಈ ರೀತಿ ಹೇಳಿದೆ "ಪ್ರಾಥಮಿಕ ಶಿಕ್ಷಣ ಜೊತೆಗೆ ಮಾಧ್ಯಮಿಕ ಶಿಕ್ಷಣವು ವಿದ್ಯಾರ್ಥಿಗಳ ಮಾತೃಭಾಷೆಯಲ್ಲಿ ನಡೆಯಬೇಕು ಇಂಗ್ಲೀಷ್ ಭಾಷೆಯನ್ನು ಕಡ್ಡಾಯವಾಗಿ ದ್ವಿತೀಯ ಭಾಷೆಯಾಗಿ ಬೋಧಿಸಬೇಕು"[೨೫] ಎಂದಿದೆ.

ಸ್ವಾತಂತ್ರ ನಂತರದ ಪ್ರಮುಖ ಆಯೋಗಗಳಲ್ಲಿ ಕಲಿಕೆಯ ಮಾಧ್ಯಮ ಕುರಿತು ಚಿಂತನೆಗಳು

ಸ್ವತಂತ್ರಾನಂತರದ ಭಾರತದಲ್ಲಿ ಶಿಕ್ಷಣ ಮಾಧ್ಯಮದ ಕುರಿತು ಹಲವು ಚಿಂತನೆಗಳು ನಡೆದವು ಅವುಗಳಲ್ಲಿ ಮುಖ್ಯವಾದವು ಈ ಕೆಳಗಿನಂತಿವೆ.

ರಾಧಕೃಷ್ಣನ್ ಆಯೋಗ/ವಿಶ್ವವಿದ್ಯಾಲಯ ಆಯೋಗ

ದೇಶದ ಈಗಿನ ಮತ್ತು ಮುಂದಿನ ಅಗತ್ಯತೆಗಳಿಗೆ ಸೂಕ್ತವಾಗಬಲ್ಲ ಸುಧಾರಣೆಗಳನ್ನು ಸ್ಥಾಪಿಸಲು ಮತ್ತು ವಿಶವಿದ್ಯಾಲಯ ಮಟ್ಟದಲ್ಲಿ ಸಲಹೆಗಳನ್ನು ನೀಡಲು ಕೇಂದ್ರ ಸರ್ಕಾರವು ನವೆಂಬರ್ ೦೪-೧೯೪೮ರಲ್ಲಿ ಡಾ. ಸರ್ವಪಲ್ಲಿ ರಾಧಕೃಷ್ಣನ್ ಅವರ ನೇತೃತ್ವದಲ್ಲಿ ಸಮಿತಿ ರಚಿಸಲಾಯಿತು. ಇದು ಉನ್ನತ ಶಿಕ್ಷಣಕ್ಕೆ ಹಲವಾರು ಶಿಫಾರಸ್ಸುಗಳನ್ನು ನೀಡಿದೆ. ಅಲ್ಲದೇ ಬೋಧನಾ ಮಾಧ್ಯಮ ಕುರಿತು ಮೂರು ಭಾಷೆಯಲ್ಲಿ ಪ್ರಭುತ್ವವಾಗಿರಬೇಕು ಕನ್ನಡ ಪ್ರಾದೇಶಿಕ ಭಾಷೆಯಾಗಿ, ರಾಷ್ಟ್ರೀಯ ಭಾಷೆಯಾಗಿ ಹಿಂದಿ, ವ್ಯವಹಾರಿಕ ಭಾಷೆಯಾಗಿ ಇಂಗ್ಲೀಷ್‌ನ್ನು ಕಲಿಯಬೇಕು.[೨೬] ಎಂದಿದೆ.

ಮಾಧ್ಯಮಿಕ ಶಿಕ್ಷಣ ಆಯೋಗ

೧೯೫೨ ಸೆಪ್ಟೆಂಬರ್ ೨೩ರಂದು ಮಾಧ್ಯಮಿಕ ಶಿಕ್ಷಣ ವ್ಯವಸ್ಥೆಯನ್ನು ಪರಿಶೀಲಿಸಲು ಹಾಗೂ ಅದರ ಪುನರ್ ವ್ಯವಸ್ಥೆ ಹಾಗೂ ಸುಧಾರಣೆಗೆ ಕ್ರಮಗಳನ್ನು ಸಲಹೆ ಮಾಡಲು CABE ಶಿಫಾರಸ್ಸಿನ ಅನ್ವಯ ಭಾರತ ಸರ್ಕಾರ ಆಗಿನ ಮದ್ರಾಸಿನ ವಿಶ್ವವಿದ್ಯಾಲಯ ಉಪಕುಲಪತಿಗಳಾದ ಡಾ. ಲಕ್ಷ್ಮಣ ಸ್ವಾಮಿ ಮೊದಲಿಯಾರ್ ಅವರನ್ನು ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ಈ ಆಯೋಗ ಆಗಿನ ಮಾಧ್ಯಮಿಕ ಶಿಕ್ಷಣದ ಹಲವು ದೋಷಗಳನ್ನು, ಬೋಧನ ಮಾಧ್ಯಮದ ಬಗ್ಗೆ ತನ್ನದೇ ಆದ ಶಿಫಾರಸ್ಸು ನೀಡಿದೆ. ಬೋಧನಾ ಮಾಧ್ಯಮದ ಕುರಿತು ಹೇಳುತ್ತಾ; ಮಾತೃಭಾಷೆ/ ರಾಜ್ಯಭಾಷೆ ಬೋಧನಾ ಮಾಧ್ಯಮವಾಗಿರಬೇಕು ಎಂದು ಹೇಳಿದೆ. ಕಿರಿಯ ಮಾಧ್ಯಮಿಕ ಹಂತದಲ್ಲಿ ಕನಿಷ್ಠ ಎಂದರೆ ಎರಡು ಭಾಷೆಗಳನ್ನು ಕಲಿಸಬೇಕು ಎಂದಿದೆ.[೨೭]

ಭಾರತೀಯ ಶಿಕ್ಷಣ ಆಯೋಗ

ಭಾರತದ ಸರ್ಕಾರದ ಶಿಕ್ಷಣವು ಸಂಪೂರ್ಣ ಹಾಗೂ ಸಮಗ್ರ ಬದಲಾವಣೆಗೆ ೧೪-೦೭-೧೯೬೪ ರಂದು ಶಿಕ್ಷಣ ತಜ್ಞ ಡಿ.ಎಸ್. ಕೊಠಾರಿ ಯವರ ಅಧ್ಯಕ್ಷತೆಯಲ್ಲಿ 'ರಾಷ್ಟ್ರೀಯ ಶಿಕ್ಷಣ ಅಯೋಗ'ವನ್ನು ನೇಮಿಸಿತು. ಇದು ಬೋಧನಾ ಮಾಧ್ಯಮವನ್ನು ಕುರಿತು ಈ ರೀತಿ ಹೇಳಿದೆ 'ಒಂದು ಭಾಷೆಯನ್ನು ಶಿಕ್ಷಣ ಮಧ್ಯಮವಾಗಿ ಮಾಡಬೇಕಾದರೆ ಆ ಭಾಷೆ ಮೂರು ಉದ್ದೇಶಗಳನ್ನು ಪೂರೈಸಬೇಕು. ಅವು,

೧.ಅ ಭಾಷೆಯಿಂದ ವಿದ್ಯಾರ್ಥಿಗಳು ಸುಲಭವಾಗಿ ಜ್ಞಾನವನ್ನು ಪಡೆಯಲು ಸಾಧ್ಯವಾಗಿರಬೇಕು.

೨. ಆ ಭಾಷೆಯಲ್ಲಿ ಸ್ಪಷ್ಟವಾಗಿ, ಖಚಿತವಾಗಿ ಅವರ ಜ್ಞಾನ ಪಡೆಯಲು ಸಾಧ್ಯವಾಗಬೇಕು.

೩.ಆ ಭಾಷೆಯಲ್ಲಿ ನಿರ್ದಿಷ್ಟವಾಗಿ, ಶಕ್ತಿಪೂರ್ಣವಾಗಿ ಆಲೋಚನೆ ಮಾಡಲು ಅವರಿಗೆ ಸಾಧ್ಯವಾಗಬೇಕು.[೨೮]

ರಾಷ್ಟ್ರೀಯ ಶಿಕ್ಷಣ ನೀತಿ

ಭಾರತ ಸರ್ಕಾರವು ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ಮುಖಾಂತರ ರಾಷ್ಟ್ರೀಯ ಶಿಕ್ಷಣ ಅನುಧಾನ ಹಾಗೂ ಪ್ರಶಿಕ್ಷಣ ಪರಿಷತ್ತಿನ ಮೂಲಕ ರೂಪಿಸಿತು. ಅದು ಮಾಜಿ ಪ್ರಧಾನಮಂತ್ರಿ ರಾಜೀವ್ ಗಾಂಧಿ ನೇತೃತ್ವದಲ್ಲಿ ಸಂಸತ್ತಿನಲ್ಲಿ

ಮಂಡಿಸಲ್ಪಟ್ಟಿತು ಹಾಗೂ ಒಪ್ಪಿಗೆಯನ್ನು ಪಡೆಯಿತು. ಇದು ನಾಲ್ಕು ಹಂತಗಳಲ್ಲಿ ತನ್ನ ಕಾರ್ಯಾಚರಣೆಯನ್ನು ಮಾಡಲು ಪ್ರಾರಂಭಿಸಿತು. ಅಲ್ಲದೆ ಭಾಷಾ ಬೋಧನೆ ಕುರಿತು 'ಪ್ರಾದೇಶಿಕ ಭಾಷೆ, ರಾಷ್ಟ್ರೀಯ ಭಾಷೆ, ಅಂತಾರಾಷ್ಟ್ರೀಯ ಭಾಷೆಗಳನ್ನು ಮಗು ಕಲಿಯಬೇಕು ಎಂದು ಹೇಳುತ್ತದೆ.'[೨೯]

ಗೋಕಾಕ್ ವರದಿ

ಈ ಆಯೋಗವು ಪ್ರಾಥಮಿಕ ಮತ್ತು ಪ್ರೌಢಶಾಲಾ ಹಂತದಲ್ಲಿ ಕನ್ನಡ ಭಾಷೆಯನ್ನು ಯಾರಿಗೆ? ಯಾವ ತರಗತಿಯಿಂದ ಕಲಿಸಬೇಕು? ಎಂಬುವುದರ ಬಗ್ಗೆ ಹಲವಾರು ಚರ್ಚಾಸ್ಪದ ವಿಚಾರಗಳನ್ನು ನೀಡುತ್ತದೆ. ಗೋಕಾಕ್ ಚಳುವಳಿಯ ಸುದೀರ್ಘ ಹೋರಾಟದಿಂದ ಅಂತಾರಾಷ್ಟ್ರೀಯ ಭಾಷೆ ೧೯೮೦ರಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಿ 'ಕನ್ನಡ ಭಾಷೆಯೇ ಪ್ರಥಮ ಭಾಷೆಯಾಗಿರಬೇಕೆಂದು' ಶಿಫಾರಸ್ಸು ಮಾಡಿತು.[೩೦] ಆದರೆ ೧೯೮೧ರಲ್ಲಿ ಸರ್ಕಾರವು ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣದಲ್ಲಿ ಭಾಷಾ ಅಧ್ಯಯನ ಬಗ್ಗೆ ನೀತಿಯನ್ನು ಈ ರೀತಿ ನಿರೂಪಿಸಿದೆ.

೧. ಒಂದರಿಂದ ನಾಲ್ಕನೆಯ ತರಗತಿಯವರೆಗೆ ಮಾತೃಭಾಷೆಯೇ ಶಿಕ್ಷಣ ಮಾಧ್ಯಮವಾಗಿರಬೇಕು.

೨.ಮೂರನೆಯ ತರಗತಿಯಿಂದ ಕನ್ನಡೇತರ ವಿದ್ಯಾರ್ಥಿಗಳಿಗೆ ಅವರ ಮಾತೃಭಾಷೆಯ ಜೊತೆ ಕನ್ನಡವನ್ನೂ ಐಚ್ಚಿಕ ವಿಷಯವಾಗಿ ಕಲಿಸಲಾಗುತ್ತದೆ ಆದರೆ ಕನ್ನಡವು ಪರೀಕ್ಷಾ ವಿಷಯವಾಗಿರುವುದಿಲ್ಲ.

೩. ಮಾತೃಭಾಷೆಯ ಜೊತೆ ಎರಡನೆಯ ಭಾಷೆಯನ್ನು ಐದನೆಯ ತರಗತಿಯಿಂದ ಕಲಿಯುವ ವ್ಯವಸ್ಥೆ ಎಲ್ಲೆಡೆ ಇದೆ. ಅದರಂತೆ ಐದನೆಯ ತರಗತಿಯಿಂದ ಕನ್ನಡ ಮಗುವು ಕನ್ನಡೇತರ ಭಾಷೆಯೊಂದನ್ನು, ಕನ್ನಡೇತರ ಮಗುವು ಕನ್ನಡವನ್ನು ಕಡ್ಡಾಯವಾಗಿ ಕಲಿಯಬೇಕು ಅದು ಪರೀಕ್ಷಾ ವಿಷಯವೂ ಅಗಿರುತ್ತದೆ. ಪ್ರೌಢಶಾಲೆಗಳಲ್ಲಿ ಮೂರು ಭಾಷೆಗಳ ಅಧ್ಯಯನ ಕಡ್ಡಾಯ. ೧೨೫ ಅಂಕಗಳ ಏಕೈಕ ಪ್ರಥಮ ಭಾಷೆ ಕನ್ನಡ. ೧೦೦ ಅಂಕಗಳ ಇನ್ನೆರಡು ಭಾಷೆಗಳು. ಈ ಮೂರು ಭಾಷೆಗಳಲ್ಲೂ ತೇರ್ಗಡೆಯಾಗಬೇಕು ಈ ಮೂರು ಭಾಷೆಗಳಲ್ಲೂ ತೇರ್ಗಡೆಯಾಗಬೇಕು ಎಂದಿದೆ.[೩೧]

ಭಾಷಾ ಸೂತ್ರ ೧೯-೦೬-೧೯೮೯ರ ಸರ್ಕಾರಿ ಆಜ್ಞೆ ಪ್ರಕಾರ

ಪ್ರಾಥಮಿಕ ಶಾಲೆಗಳಲ್ಲಿ

೧. "ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಎಂದರೆ ಒಂದರಿದ ನಾಲ್ಕನೆಯ ತರಗತಿಯವರೆಗೆ ಮಾತೃಭಾಷೆ ಕಡ್ಡಾಯ. ಕನ್ನಡೇತರರಿಗೆ ಮೂರು ಹಾಗೂ ನಾಲ್ಕನೆಯ ತರಗತಿಯಲ್ಲಿ ಕನ್ನಡ ಕಲಿಸುವ ಅವಕಾಶ ಕಲ್ಪಿಸಲಾಗಿದೆ. ಕಲಿಕೆ ಹಾಗೂ ಪರೀಕ್ಷೆ ಸ್ಫೂರ್ತಿ ಸ್ವ-ಇಚ್ಚೆಗನುಗುಣವಾಗಿದೆ.

೨. ಐದನೆಯ ತರಗತಿಯಿಂದ ಏಳನೆಯ ತರಗತಿಯ ವರೆಗೆ ಕನ್ನಡೇತರ ವಿದ್ಯಾರ್ಥಿಗಳಿಗೆ ಕನ್ನಡ ಕಡ್ಡಾಯ. ಕನ್ನಡ ವಿದ್ಯಾರ್ಥಿಗಳಿಗೆ ಮತ್ತೊಂದು ಭಾಷೆ ಕಡ್ಡಾಯ.

೩. ಮೊದಲ ಎರಡು ಭಾಷೆಗಳಲ್ಲದೆ ಮೂರನೆಯ ಭಾಷೆ. ಈ ಭಾಷೆಯ ತರಗತಿಗಳಿಗೆ ಹಾಜರಾತಿ ಕಡ್ಡಾಯವಾದರೂ ಪರೀಕ್ಷೆಯಲ್ಲಿ ಉತ್ತೀರ್ಣತೆ ಅವಶ್ಯಕವಲ್ಲ.[೩೨]

ಪ್ರೌಢ ಶಾಲೆಗಳಲ್ಲಿ

ಎಂಟರಿಂದ ಹತ್ತನೆಯ ತರಗತಿವರೆಗೆ ಎಲ್ಲ ವಿದ್ಯಾರ್ಥಿಗಳು ಎರಡು ಮೂರು ಭಾಷೆಗಳ ಅಭ್ಯಾಸ ಹಾಗೂ ತೇರ್ಗಡೆ ಕಡ್ಡಾಯ. ೧೨೫ ಅಂಕಗಳಿಗೆ ಮೊದಲನೇ ಭಾಷೆ ೧೦೦ ಅಂಕಗಳಿಗೆ ಉಳಿದ ಭಾಷೆಯಾಗಿರಬೇಕು ಎಂಬ ಶಿಫಾರಸ್ಸನ್ನು ಮಾಡಿದೆ.[೩೩]

ಬೋಧನಾ ಮಾಧ್ಯಮ ಕುರಿತು ಶಿಕ್ಷಣತಜ್ಞರು ಹಾಗೂ ಭಾಷಾವಿಜ್ಞಾನಿಗಳ ಚಿಂತನೆಗಳು

ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯೇ ಬೋಧನಾ ಮಾಧ್ಯಮವಾಗಬೇಕೆಂದು ಪ್ರಾಚೀನ ಕಾಲದಿಂದಲೂ ಚರ್ಚೆ ನಡೆಯುತ್ತವೆ ಅಲ್ಲದೆ ಹಲವಾರು ಭಾಷಾ ವಿಜ್ಞಾನಿಗಳು ಶಿಕ್ಷಣ ತಜ್ಞರು ಸಮಾಜ ಶಾಸ್ತ್ರಜ್ಞರು ಕಲಿಕೆಯ ಮಾಧ್ಯಮದ ಬಗ್ಗೆ ತನ್ನದೇ ಆದ ವಿಚಾರಗಳನ್ನು ಹೇಳುತ್ತಾ ಬಂದಿದ್ದಾರೆ ಅವರು ಮಾತೃಭಾಷೆ ಎಂದರೆ ಯಾವುದು? ಅದನ್ನು ಯಾವ ಹಂತದಲ್ಲಿ ಯಾವ ಹಂತದವರೆಗೆ ಕಲಿಸಬೇಕು? ಅದರ ಪಯೋಜನಗಳನ್ನು ಕುರಿತು ಚರ್ಚೆ ನಡೆಸುತ್ತಾ ಬಂದಿದ್ದಾರೆ ಅವುಗಳಲ್ಲಿ ಮುಖ್ಯವಾದ ಕೆಲವು ಚಿಂತನೆಗಳ ಬಗ್ಗೆ ತಿಳಿಯುವುದು ಸೂಕ್ತವಾಗಿದೆ.

ಒಂದು ಸಮಾಜದ ಬಹು ಸಂಖ್ಯಾತರಾಡುವ ಭಾಷೆಯೇ ಆ ಸಮಾಜದ ಮಾತೃಭಾಷೆ. ಆ ಭಾಷೆಯು ಅಲ್ಲಿನ ಜನರನ್ನು ಸಾಮಾಜಿಕವಾಗಿ ಭಾವನಾತ್ಮಕವಾಗಿ ಸಾಂಸ್ಕೃತಿಕವಾಗಿ ಒಗ್ಗೂಡಿಸುತ್ತದೆ. ಆ ಜನಾಂಗದ ಜೀವವಾಹಿನಿಯಾಗಿ ಎಲ್ಲಾ ಜನರನ್ನೂ ಸಂಪರ್ಕಿಸಲಾಗುತ್ತದೆ. ಆ ಸಮಾಜದ ಸಾಮಾಜಿಕ, ಶೈಕ್ಷಣಿಕ ಮತ್ತು ಆಡಳಿತ ಕ್ಷೇತ್ರಗಳಲ್ಲಿ ಭಾಷೆಯು ಮಹತ್ವದ ಪಾತ್ರ ವಹಿಸುತ್ತದೆ. ಅದುದರಿಂದ ಒಂದು ಸಮಾಜದ ಬಹುಸಂಖ್ಯಾತರ ಆಡುಭಾಷೆಯು ಆ ಸಮಾಜದ ಮಾತೃಭಾಷೆಯಾಗಿರುತ್ತದೆ. ಸರ್ವಜನರ ಸಮಸ್ತ ಕ್ಷೇತ್ರಗಳಲ್ಲೂ ಆ ಭಾಷೆಗೆ ಪ್ರಥಮ ಸ್ಥಾನ ಲಭ್ಯವಾಗುತ್ತದೆ. ಜಿ.ಎಸ್ ಶಿವರುದ್ರಪ್ಪನವರು ಅಭಿಪ್ರಾಯಪಡುವಂತೆ 'ಯಾವುದೇ ಭಾಷೆ ಒಂದು ಪ್ರದೇಶದಲ್ಲಿ ಪ್ರಥಮ ಭಾಷೆಯಾಗಬೇಕಾದರೆ, ಅದು ಅಲ್ಲಿನ ಬಹು ಸಂಖ್ಯಾತರ ಮಾತೃಭಾಷೆಯಾಗಿರಬೇಕು'[೩೪] ಅಲ್ಲಿನ ಜನರ ಎಲ್ಲಾ ಹಂತದಲ್ಲಿ ವ್ಯವಹಾರಕ್ಕೆ ಭಾಷೆ ಸಲ್ಲುವಂತಿರಬೇಕು. ಅಂದರೆ ಒಂದು ಪ್ರದೇಶದ ಜನ ಸಾಮಾನ್ಯರೆಲ್ಲರ ಜನ ಜೀವನದಲ್ಲಿ ಹಾಸುಹೊಕ್ಕಾಗಿರುವ ಭಾಷೆಯೇ ಅಲ್ಲಿನ ಮಾತೃಭಾಷೆ. ಈ ಭಾಷೆಗೆ ಪ್ರಥಮ ಆದ್ಯತೆ ದೊರೆಯಾಗಬೇಕು. ಜನಸಾಮಾನ್ಯರು ಸಾಮಾನ್ಯ ವ್ಯಹಾರಗಳಿಂದ ದಾರ್ಶನಿಕರ ತಾತ್ವಿಕ ವಿಚಾರಗಳಿಂದ ವಿರ್ಮಶೆಗಳು ಕೂಡ ಪ್ರದೇಶದ ಮಾತೃಭಾಷೆಯಲ್ಲಿಯೇ ಜೀವ ತುಂಬಿಕೊಳ್ಳಬೇಕು. ಈ ರೀತಿ ಒಂದು ಪ್ರದೇಶದ ಬಹುಸಂಖ್ಯಾತರ ಮಾತೃಭಾಷೆಯಲ್ಲಿಯ ಪ್ರಥಮ ಪ್ರಾಶಸ್ತ್ಯದಿಂದ ಬಳಕೆಯಾಗುವುದರಿಂದ ಕೇವಲ ಆ ಭಾಷೆಗಷ್ಟೆ ಲಾಭವಲ್ಲ; ಭಾಷೆಯ ಮೂಲಕ ಆ ಪ್ರದೇಶದ ಸರ್ವಾಂಗೀಣ ಅಭಿವೃದ್ಧಿ, ವಿಕಾಸಕ್ಕೆ ಸಹಾಯವಾಗಬೇಕು. ಈ ರೀತಿ ಒಂದು ಪ್ರದೇಶದ ಮಾತೃಭಾಷೆ ಅಲ್ಲನ ಜನರ ಜೀವನದ ಪರಸ್ಪರ ಪೂರಕವಾಗಿ ಅಭಿವೃದ್ಧಿಯಾಗುತ್ತದೆ. ಈ ನಿಟ್ಟಿನಲ್ಲಿ ಮಾತೃಭಾಷೆಯೇ ಶಿಕ್ಷಣದ ಬೋಧನಾ ಮಾಧ್ಯಮವಾಗಬೇಕು ಎಂದು ತಜ್ಞರು ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ.[೩೫]

ಶಿಕ್ಷಣ ಮಾಧ್ಯಮವಾಗಿ ಮಾತೃಭಾಷೆ

ಭಾರತದಲ್ಲಿ ಭಾಷಾ ಸಮಸ್ಯೆ ಶಿಕ್ಷಣ ಮಾಧ್ಯಮದ ಸಮಸ್ಯೆಗಳು ಸರ್ವವ್ಯಾಪ್ತಿಯಾಗಿವೆ. ಸ್ವಾತಂತ್ರ ಬಂದು ಏಳು ದಶಕಗಳಾಗುತ್ತಾ ಬಂದಿದ್ದರೂ ರಾಷ್ಟ್ರಭಾಷೆಯಾವುದು, ಆಡಳಿತ ಭಾಷೆ ಯಾವುದು ಶಿಕ್ಷಣದ ಭಾಷೆ ಯಾವುದಿರಬೇಕು, ಯಾವ ತರಗತಿಯಿಂದ ಯಾವ ತರಗತಿಯ ತನಕ ಮಾತೃಭಾಷೆಯನ್ನು ಕಲಿಸಬೇಕು ಎಂಬ ಬಗ್ಗೆ ಖಚಿತ ತೀರ್ಮಾನಗಳು ಮನಃಪೂರ್ವಕವಾಗಿ ಆಚರಣೆಗಳು ಇನ್ನೂ ಬಾರದೆ ಇರುವುದು ವಿಶಾದಕರ. ಶಿಕ್ಷಣ ಕ್ಷೇತ್ರದಲ್ಲಿಯೂ ಭಾಷಾ ಸಮಸ್ಯೆ ತುಂಬಾ ಸೂಕ್ಷ್ಮವಾಗಿದೆ. ಇದು ಗಂಭೀರ ಸಮಸ್ಯೆಯಾಗಿದೆ ದೇಶದಾಂತ್ಯ ಪ್ರಾದೇಶಿಕ ಭಾಷೆಗಳು ತಮ್ಮ ವರ್ಚಸ್ಸನ್ನು ಕಳೆದುಕೊಳ್ಳುತ್ತಿದ್ದರೂ ಇಂಗ್ಲೀಷ್ ವ್ಯಾಮೋಹವನ್ನು ನಾವು ಬಿಡುತ್ತಿಲ್ಲ. ವಿಶ್ವದ ಎಲ್ಲ ಶಿಕ್ಷಣ ತಜ್ಞರು ವಿಚಾರವಂತರು ಮಾತೃಭಾಷೆಯಲ್ಲಿಯೇ ಶಿಕ್ಷಣ ನೀಡಬೇಕೆಂದು ಅನುಮೋದಿಸಿದ್ದಾರೆ.

ಮಾತೃಭಾಷೆಗಳಲ್ಲಿ ಶಿಕ್ಷಣ ನೀಡಲು ಭಾರತೀಯರು ಇನ್ನೂ ಮನಸ್ಸು ಮಾಡುತ್ತಿಲ್ಲ ಲಾರ್ಡ್ ಮೆಕಾಲೆಯ ಇಂಗ್ಲೀಷ್ ಶಿಕ್ಷಣ ನೀತಿಯೊಂದಿಗೆ ಭಾರತದಲ್ಲಿ ಭಾಷೆಯ ಅಧ್ಯಯನ ಭಾಷಾ ಮಾಧ್ಯಮದ ಸಮಸ್ಯೆ ಪ್ರಾರಂಭವಾಯಿತು. ಮೆಕಾಲೆ ಹೇಳಿಕೊಂಡಿರುರುವಂತೆ ಬಣ್ಣ ಮತ್ತು ರಕ್ತದಲ್ಲಿ ಭಾರತೀಯರಾಗಿದ್ದರು ರುಚಿ, ಅಭಿಪ್ರಾಯ, ಬುದ್ಧಿಯಲ್ಲಿ ಇಂಗ್ಲೀಷ್ ಮಾದರಿಯ ಜನರನ್ನು ರೂಪಿಸುವುದೇ ಅವರ ಗುರಿಯಾಗಿತ್ತು. ಈ ಕಾರಣದಿಂದ ಇಂಗ್ಲೀಷ್ ಮಾಧ್ಯಮದ ಶಿಕ್ಷಣವನ್ನು ಜಾರಿಗೆ ತರಲಾಯಿತು. ಭಾರತೀಯರಿಗೆ ಇಂಗ್ಲೀಷ್ ಭಾಷೆಯ ಸಾಹಿತ್ಯ ವಿಜ್ಞಾನಜ್ಞಾನವನ್ನು ದೊರಕಿಸಿಕೊಡವುದಕ್ಕಾಗಿಯೇ ಬೊಕ್ಕಸದ ಹಣವನ್ನೆಲ್ಲಾ ಖರ್ಚು ಮಾಡಿದರೂ ತಪ್ಪಲ್ಲ ಎಂದು ಬೆಂಟಿಕ್‌ನ ಸರ್ಕಾರ ತೀರ್ಮಾನಿಸಿದರೂ, ಕರ್ನಾಟಕದಲ್ಲಿ ಕನ್ನಡ ಭಾಷೆಯ ಮೂಲಕ ಶಿಕ್ಷಣ ಪೂರೈಸಿದ ಇಂಗ್ಲೀಷ್ ಅಧಿಕಾರಿಗಳು ಇದ್ದರು ಎಂಬುದನ್ನು ನಾವು ಮರೆಯುವಂತಿಲ್ಲ. ಇಂಗ್ಲೀಷ್ ಮಾಧ್ಯಮದ ಶಿಕ್ಷಣವು ಗೊಂದಲವನ್ನುಂಟುಮಾಡಿದೆ. ಇಂದು ಶಿಕ್ಷಣದ ಗುಣಮಟ್ಟ ಕುಸಿಯಲು ಕಾರಣವಾಗಿದೆ. ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಮತ್ತು ಪ್ರಾಥಮಿಕ ಶಾಲೆಯಲ್ಲಿ ಕನ್ನಡ ಮಾಧ್ಯಮದೊಳಗೆ ಹೇಳಬೆಂಕೆದು ಭಾಷಾ ಚಿಂತಕರು ಈರೀತಿ ತಮ್ಮ ವಿಚಾರಗಳನ್ನು ತಿಳಿಸಿದ್ದಾರೆ.

ರವೀಂದ್ರನಾಥ ಠಾಗೂರ್

ರವೀಂದ್ರನಾಥ ಠಾಗೂರುರವರು ಭಾರತದಲ್ಲಿ ಶಿಕ್ಷಣ ಮಾಧ್ಯಮವನ್ನು ಕುರಿತು ಹೇಳುತ್ತಾ "ಭಾರತವಲ್ಲದೆ ಬೇರಾವ ದೇಶದಲ್ಲೂ ವಿದ್ಯಾರ್ಥಿಯ ಭಾಷೆಗೂ ಶಿಕ್ಷಣದ ಬಾಷೆಗೂ ಈ ಬಗೆಯ ಅಂತರವಿಲ್ಲ. ಎಂದು ಅಭಿಪ್ರಾಯಪಟ್ಟು ಮಾತೃಭಾಷೆಯು ಶಿಕ್ಷಣದ ಮಾಧ್ಯಮವಾಗಬೇಕು ಎಂದು ಹೇಳಿದ್ದಾರೆ. ಪ್ರಾದೇಶಿಕ ಭಾಷೆ ಶಿಕ್ಷಣ ಮಾಧ್ಯಮವಾಗದೆ ಶಿಕ್ಷಣದ ಗುಣಮಟ್ಟ ಸುಧಾರಣೆ ಆಗುವುದಿಲ್ಲ. ಮಕ್ಕಳ ಮನೆಯ ಭಾಷೆಗೂ, ಶಾಲೆಯ ಭಾಷೆಗೂ ಸಮಾಜದ ಭಾಷೆಗೂ ವ್ಯತ್ಯಾಸವಿದ್ದಾಗ ಮಕ್ಕಳ ಸ್ವಾಭಾವಿಕ ಬೆಳವಣಿಗೆ ಕುಂಠಿತವಾಗುತ್ತದೆ. ಈಗಾಗಲೇ ತನ್ನ ಮಾತೃಭಾಷೆಯನ್ನು ಕಲಿತು ಶಾಲೆಗೆ ಬರುವ ಮಗುವಿಗೆ ಆ ಭಾಷೆಯಲ್ಲಿಯೆ ಶಿಕ್ಷಣ ಕೊಡುವುದರಿಂದ ಆ ಮಗುವಿನ ಶಿಕ್ಷಣ ಹೆಚ್ಚು ಅರ್ಥಪೂರ್ಣವಾಗುತ್ತದೆ.[೩೬]

ಮೋಹನದಾಸ ಕರಮಚಂದ್ ಗಾಂಧಿ

ಮಾತೃಭಾಷೆ ಶಿಕ್ಷಣ ಮಾಧ್ಯಮದ ಬಗೆಗೆ ಮಹಾತ್ಮ ಗಾಂಧೀಜಿಯವರ ವಿಚಾರಧಾರೆಗಳು ಮಹತ್ವವಾದವು. ಅವರು ತಮ್ಮ ಶಿಕ್ಷಣದಲ್ಲಿ ಮಾತೃಭಾಷಾ ಕಲಿಕೆಗೆ ಮತ್ತು ಮಾತೃಭಾಷೆಯನ್ನು ಕಟುವಾಗಿ ಟೀಕಿಸಿದರು. ಇದು ಮಗುವಿನ ಸರ್ವಾಂಗೀಣ ಅಭಿವೃದ್ಧಿಗೆ ಅಡ್ಡಿ, ಬರೀ ಅನುಕರಣೆಯುಗುತ್ತದೆ. ಅನುಕರಣಶೀಲ ತಲೆಮಾರನ್ನು ನಿರ್ಮಿಸುವ ಮೂಲಕ ಯಾವುದೇ ನಾಡು ರಾಷ್ಟ್ರವಾಗಲಾರದು. ಇಂಗ್ಲೀಷ್ ಭಾಷೆ ಇಲ್ಲದೆ ನಾವು ಬದುಕಲಾರೆವು ಎಂದು ಭಾವಿಸುವುದು ನಮ್ಮ ಮಾನಸಿಕ ದಾಸ್ಯದ ಪರಿಣಾಮವೇ ಆಗಿದೆ. ಒಂದು ವಿಷಯವಾಗಿ ಇಂಗ್ಲೀಷ್‌ನ್ನು ಕಲಿಸಿ ಆ ಮೂಲಕ ಮಕ್ಕಳಲ್ಲಿ ಇಂಗ್ಲೀಷ್ ಭಾಷೆಯನ್ನು ಕಲಿಸಲು ಮುಂದಾದರೆ ಮಾತ್ರ ಮಕ್ಕಳ ಅಭಿವೃದ್ಧಿ ಸಾಧ್ಯವೆನ್ನೆಬಹುದು ಎಂಬುದು ಅವರ ಅಭಿಪ್ರಾಯವಾಗಿತ್ತು.[೩೭]

ಈಗಾಗಲೇ ನೋಡಿದಂತೆ ಮಾತೃಭಾಷೆಯಿಂದ ಗ್ರಹಣ ಶಕ್ತಿ ತೀವ್ರವಾಗುತ್ತದೆ. ಅಭಿವ್ಯಕ್ತಿ ಶಕ್ತಿ ಪ್ರಖರವಾಗುತ್ತದೆ. ಆತ್ಮವಿಶ್ವಾಸ ಹೆಚ್ಚುತ್ತದೆ. ಆಲೋಚನಾ ಶಕ್ತಿ ಮತ್ತು ಪ್ರತಿಭಾ ಸಾಮರ್ಥ್ಯ

ಅರಳುತ್ತದೆಂದು ಜಗತ್ತಿನ ಎಲ್ಲಾ ಮನೋವಿಜ್ಞಾನಿಗಳು ಅಭಿಪ್ರಾಯಿಸಿದ್ದಾರೆ. ಆದುದರಿಂದ ಶಿಕ್ಷಣ ಪರಿಣಾಮಕಾರಿಯಾಗಲು ಮಾತೃಭಾಷೆ ಅನಿವಾರ್ಯವಾಗಿದೆ.

ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಬೋಧನೆ ಹಾಗೂ ಕಲಿಕೆಯು ಮಹತ್ವಪೂರ್ಣವಾದ ಅಂಶಗಳಾಗಿವೆ. ಇವು ಎರಡು ಪರಸ್ಪರ ಒಂದೇ ಬಂಡಿಯ ಎರಡು ಗಾಲಿಗಳಂತೆ ಕಾರ್ಯನಿರ್ವಹಿಸಬೇಕು. ಇಲ್ಲದಿದ್ದರೆ ಶೈಕ್ಷಣಿಕ ಸ್ಥಿತಿಗತಿಯು ಕುಂಠಿತವಾಗುತ್ತದೆ. ಇಂತಹ ಬೋಧನೆ ಹಾಗೂ ಕಲಿಕೆಗೆ ಹಲವಾರು ಸಮಸ್ಯೆಗಳಿವೆ ಅವುಗಳನ್ನು ಈ ಕೆಳಗಿನಂತೆ ಚರ್ಚಿಸಲಾಗಿದೆ.

ಪಠ್ಯಮೂಲ ಸಮಸ್ಯೆಗಳು

ಮಕ್ಕಳು ಓದುವಾಗ ಮತ್ತು ಬರೆಯುವಾಗ ಮಾಡುವ ಸಮಸ್ಯೆಗಳು/ವ್ಯತ್ಯಾಸಗಳಿಗೆ ಪಠ್ಯಕ್ರಮವು ಕೂಡ ಕಾರಣವಾಗಬಹುದು ಎಂದು ಹೇಳಾಗುತ್ತದೆ. ಪಠ್ಯಕ್ರಮವು ಮನೋವೈಜ್ಞಾನಿಕ ಹಿನ್ನಲೆಯಲ್ಲಿ ರಚನೆಯಾಗಿದ್ದರೂ ಅದರಲ್ಲಿ ಅನೇಕ ದೋಷಗಳಿರುವುದು ಕಂಡುಬರುತ್ತದೆ. ಮುಖ್ಯವಾಗಿ ಪಠ್ಯಕ್ರಮವು ಸ್ಥಳೀಯ ಅಗತ್ಯತೆಗೆ ಅನುಗುಣವಾಗಿ ಇಲ್ಲದಿರುವುದು, ಪಠ್ಯಕ್ರಮದಲ್ಲಿರುವ ದೋಷಗಳು ಹಾಗೂ ಅನಾವಶ್ಯಕ ಅಂಶಗಳನ್ನು ತೆಗೆದುಹಾಕದಿರುವುದು, ಪದೇಪದೇ ಪಠ್ಯ ಬದಾಯಿಸುವುದು, ಪಠ್ಯಕ್ರಮವನ್ನು ರಚಿಸುವಾಗ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳು, ಭಾಷಾ ಶಿಕ್ಷಕರು ಸಮಿತಿಯಲ್ಲಿ ಇಲ್ಲದೇ ಇರುವುದು, ಯಾರೋ ರಚಿಸಿದ ಪಠ್ಯಕ್ರಮವನ್ನು ಯಾರೋ ಬೋಧಿಸುವುದು, ಭಾಷಾ ಚಟುವಟಿಕೆಗಳು ಸಮರ್ಪಕವಾಗಿ ಇಲ್ಲದಿರುವುದು, ಸಾಹಿತ್ಯದ ಎಲ್ಲಾ ಪ್ರಕಾರಗಳಿಗೆ ಅವಕಾಶ ಇಲ್ಲದಿರುವುದು ಸಹ ಪರಿಣಾಮಕಾರಿ ಕಲಿಕೆಗೆ ಅಡ್ಡಿಯುಂಟಾಗುತ್ತದೆ ಎನ್ನಬಹುದು. ಆದ್ದರಿಂದ ಪಠ್ಯಕ್ರಮ ಸ್ಥಳೀಯ ಸಂಪನ್ಮೂಲಗಳಿಗೆ ಅನುಗುಣವಾಗಿ ಸ್ಥಳೀಯರಿಂದ ಭಾಷಾ ಚಟುವಟಿಕೆಗಳು ಗಾಗೂ ಸಾಹಿತ್ಯದ ಪ್ರಕಾರಗಳನ್ನು ಒಳಗೊಂಡ ವ್ಯವಸ್ಥಿತವಾಗಿ ರಚನೆ ಮಾಡಿದಾಗ ತಪ್ಪುಗಳನ್ನು ತಡೆಯಲು ಸಾಧ್ಯವಾಗಬಹುದು.

ಬೋಧನಾ ವಿಧಾನ ಸಮಸ್ಯೆಗಳು

ಮಕ್ಕಳು ಓದುವಾಗ ಬರೆಯುವಾಗ ಮಾಡುವ ವ್ಯತ್ಯಾಸಗಳಿಗೆ ಬೋಧನಾ ಕ್ರಮವು ಒಂದು ಪ್ರಮುಖ ಕಾರಣವಾಗಿದೆ. ನಮ್ಮ ಶಿಕ್ಷಣ ಪದ್ಧತಿಯಲ್ಲಿ ಇಂದಿಗೂ ಸಾಂಪ್ರದಾಯಕ ಬೋಧನಾ ವಿಧಾನಗನ್ನು ಸನುಸರಿಸುತ್ತಿರುವುದು ಶೋಚನೀಯವಾಗಿದೆ. ಶಿಕ್ಷಕರು ಮಕ್ಕಳ ಆಸಕ್ತಿ, ಅಭಿರುಚಿಗೆ ತಕ್ಕಂತೆ ಬೋದಿಸಬೇಕು. ಸರಿಯಾದ ಸಮಯಕ್ಕೆ ಪಾಠವನ್ನು ಬೋಧಿಸದೇ ಇಡೀ ಪಾಠವನ್ನು ವರ್ಷದ ಕೊನೆಯಲ್ಲಿ ಬೋಧಿಸುವುದು, ಬೋಧಿಸುವುದರಲ್ಲಿ ಆಸಕ್ತಿ ಇಲ್ಲದಿರುವುದು, ಮಕ್ಕಳ ಸಾಮರ್ಥ್ಯಕ್ಕೆ ಅನುಗುಣವಾಗಿ ಬೋಧಿಸುವುದು, ಬೋಧನೋಪಕರಣಗಳ ಬಳಕೆ ಮಾಡದೆ ಬೋಧಿಸುವುದು, ವಿಷಯಕ್ಕನುಗುಣವಾಗಿ ಬೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳದೆ ಬೋಧಿಸುವುದು, ಬೋಧನಾ ಸಿದ್ದತೆ ಮಾಡಿಕೊಳ್ಳದಿರುವುದು, ಬೋಧಿಸುವ ವಿಷಯಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳದಿರುವುದು, ಮೌಲ್ಯಮಾಪನ, ಗೃಹಪಾಠ ಕೊಡದಿರುವುದು, ಬೋಧಿಸುವ ಗೃಹಪಾಠವನ್ನು ವೀಕ್ಷಿಸದಿರುವುದು, ಬೋಧಕ ಮಕ್ಕಳ ಕಡೆಗೆ ಗಮನ ಹರಿಸದಿರುವುದು, ಬೋಧಕನ ಉಚ್ಚಾರಣೆ ಬರವಣಿಗೆ ಸರಿಯಿಲ್ಲದಿರುವುದು, ಪಾಠ ಟಿಪ್ಪಣಿ ಮಾಡದೇ ಬೋಧಿಸುವುದು, ಪಾಠದಲ್ಲಿ ಮಕ್ಕಳಿಗೆ ಚಟುವಟಿಕೆ ನೀಡದಿರುವುದು, ಕಪ್ಪುಹಲಗೆಯನ್ನು ಬಳಸದೆ ಬೋಧಿಸುವುದು, ವೈಜ್ಞಾನಿಕ ಉಪಕರಣಗನ್ನು, ವೈಜ್ಞಾನಿಕ ಬೋಧನಾ ವಿಧಾನ ಹಾಗೂ ತಂತ್ರಗಳನ್ನು ಅಳವಡಿಸದೆ ಬೋಧಿಸುವುದರಿಂದ ಮಕ್ಕಳು ಮುಂದಿನ ಅಧ್ಯಾಯದಲ್ಲಿ ತಿಳಿಸಲಾದ ಸಮಸ್ಯೆಗಳನ್ನು/ವ್ಯತ್ಯಾಸ ಮಾಡುತ್ತಾರೆ.[೩೮]

ಹಾಗಾಗಿ ಬೋಧಕ ಬೋಧನೆಯಲ್ಲಿ ನೈಪುಣ್ಯತೆ ಪಡೆದು ವ್ಯವಸ್ಥಿತವಾಗಿ ಕ್ರಮಬದ್ಧವಾಗಿ ಅಲ್ಲದೇ ಮೇಲೆ ತಿಳಿಸಿದ ಅಂಶಗನ್ನು ತಿಳಿದು ಅವುಗಳನ್ನು ಸರಿಪಡಿಸಿಕೊಂಡು ಬೋಧನೆ ಮಾಡಿದರೆ ಸಮಸ್ಯೆಗಳ ಪ್ರಮಾಣ ಕಡಿಮೆ ಮಾಡಬಹುದು. ಪರಿಣಾಮಕಾರಿ ಬೋಧನೆಯಿಂದ ಪರಿಣಾಮಕಾರಿ ಕಲಿಕೆಯನ್ನಂಟು ಮಡು ಸಾಧ್ಯ.

ಪರೀಕ್ಷೆ ಹಾಗೂ ಮೌಲ್ಯಮಾಪನದ ಸಮಸ್ಯೆಗಳು

ಮಗುವಿನ ಕಲಿಕೆಯಲ್ಲಿ ಉಂಟಾಗುವ ಸಮಸ್ಯೆಗಳಿಗೆ ಈ ಪರೀಕ್ಷಾ ವಿಧಾನಗಲು ಕಾರಣವಾಗಿವೆ. ಭಾಷಾ ಬೋಧನೆ ಹಾಗೂ ಕಲಿಕೆಯ ಮೌಲ್ಯಮಾಪನವು ಇತರೆ ವಿಷಯಗಳ ಕಲಿಕೆಯ ಮೌಲ್ಯಮಾನಕ್ಕಿಂತ ಭಿನ್ನವಾಗಿರಬೇಕು. ಮಕ್ಕಳ ಭಾಷಾ ಕಲಿಕಾ ಸರ್ಮಥ್ಯವನ್ನು ಪರೀಕ್ಷಿಸುವಾಗ ಭಾಷಾ ಪ್ರಭುತ್ವದ ಪರೀಕ್ಷೆಗೆ ಹೆಚ್ಚು ಗಮನ ನೀಡಬೇಕು. ಮಕ್ಕಳ ಭಾಷೆಯನ್ನು ಪರೀಕ್ಷೆಮಾಡುವಾಗ ವಿಷಯದ ಪರೀಕ್ಷೆಗಿಂತ ಮಗು ಭಾಷಾ ಬಳಕೆಯಲ್ಲಿ ಅಂದರೆ ಬರೆಯುವಾಗ, ಓದುವಾಗ ಯಾವ ತೆರನಾದ ವ್ಯತ್ಯಾಸ ಮಾಡುತ್ತದೆ ಎಂಬುದನ್ನು ಪರೀಕ್ಷೆ ಮಾಡಬೇಕು. ಈ ರೀತಿಯ ಪರೀಕ್ಷೆ ಮಾಡಲು ವಿವಿಧ ರೀತಿಯ ಭಾಷಾ ಚಟುವಟಿಕೆಗಳನ್ನು ಏರ್ಪಡಿಸಿ ಮಗುವಿನ ತಪ್ಪುಗಳನ್ನು ಗುರುತಿಸಿ ಆ ತಪ್ಪುಗಳು ಆಗದಂತೆ ಶಿಕ್ಷಕ ಕ್ರಮ ಕೈಗೊಳ್ಳಬೇಕು. ಆಗ ಮಾತ್ರ ಮಕ್ಕಳ ಭಾಷಾ ಕಲಿಕೆಯಲ್ಲಿ ಆಗುವ ತಪ್ಪುಗಳನ್ನು ತಡೆಯಲು ಸಾಧ್ಯ. ಸರ್ಕಾರ ಇಂತಹ ಪರೀಕ್ಷಾ ವಿಧಾನಗಳನ್ನು ಜಾರಿಗೆ ತಂದರು ಅವು ಪರಿಣಾಮಕಾರಿಯಾಗಿ ಜಾರಿಯಾಗದೆ ವಿಫಲತೆ ಹೊಂದುತ್ತಿವೆ. ಉದಾಹರಣೆಗೆ ಕ್ರಿಯಾ ಸಂಶೋಧನೆ, ನೈಧಾನಿಕ ಪರೀಕ್ಷೆ, ಕಲಿಕೆಯ ಕನಿಷ್ಠ ಮಟ್ಟಗಳನ್ನು ಪರೀಕ್ಷಿಸುವುದು ಇತ್ಯಾದಿ ಯೋಜನೆಗಳಿದ್ದರೂ ಪರಿಣಾಮಕಾರಿ ಆಸಕ್ತಿಯುತವಾದ ಬೋಧಕರಿಲ್ಲದೆ ಕಡೆಗೆ ಈ ಯೋಜನೆ ವಿಫಲತೆ ಗೊಳ್ಳುತ್ತವೆ. ಇಂದಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಕ್ರಮವನ್ನು ತೆಗೆದುಕೊಂಡು ನೋಡಿದಾಗ ಅಲ್ಲಿರುವ ಪರೀಕ್ಷಾ ಕ್ರಮದಿಂದ ಪಿ.ಯು.ಸಿ ಫಲಿತಾಂಶ ಕಡಿಮೆಯಾಗುತ್ತದೆ. ಏಕೆಂದರೆ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶೇಕಡ ೬೦ರಷ್ಟು ಅಂಶಗಳು ವಸ್ತುನಿಷ್ಠ ವಾಗಿರುವುದರಿಂದ ಮಕ್ಕಳಲ್ಲಿ ಓದುವ ಬರೆಯುವ ಸಾಮರ್ಥ್ಯ ಕಡಿಮೆಯಾಗುತ್ತದೆ. ಇದರಿಂದ ಪಿ.ಯು.ಸಿ ಪರೀಕ್ಷಾ ಮಾದರಿಯಲ್ಲಿ ಬರವಣಿಗೆಗೆ ಹೆಚ್ಚಿನ ಆದ್ಯತೆ ಇರುವುದರಿಂದ ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಅನುತ್ತೀರ್ಣರಾಗುತ್ತಾರೆ ಎಂಬುದನ್ನು ಇಂದಿನ ಫಲಿತಾಂಶ ತಿಳಿಸುತ್ತದೆ. ಇದರಿಂದ ರಾಜ್ಯ ಸರ್ಕಾರ ಪುನಃ ಎಸ್.ಎಸ್.ಎಲ್.ಸಿ ಪರೀಕೆಯ ಮಾದರಿಯಲ್ಲಿ ಮಾರ್ಪಾಡುಮಾಡಲು ಮುಂದಾಗಿದೆ. ಇದನ್ನು ಗಮನಿಸಿದಾಗ ಪ್ರಾಥಮಿಕ ಶಾಲಾ ಮಕ್ಕಳಿಗೆ ಭಾಷಾ ಸಾಮರ್ಥ್ಯವನ್ನು ಉಂಟುಮಾಡುವ ಹಲವಾರು ಭಾಷಾ ಚಟುವಟಿಕೆಗಳನ್ನು ಮಕ್ಕಳಿಗೆ ಕಲಿಸಿದಾಗ ಮಕ್ಕಳ ಓದುಗಾರಿಕೆ ಹಾಗೂ ಬರವಣಿಗೆಯಲ್ಲಿನ ತಪ್ಪುಗಳನ್ನು ತಡೆಗಟ್ಟಲು ಸಾಧ್ಯವಾಗಬಹುದು.[೩೯]

ಮಕ್ಕಳ ಭಾಷಿಕ ಹಾಗೂ ಸಾಮಾಜಿಕ ಹಿನ್ನೆಲೆಯ ಸಮಸ್ಯೆಗಳು

ಮಕ್ಕಳ ಕಲಿಕೆಯಲ್ಲಿ ಉಂಟಾಗುವ ಸಮಸ್ಯೆಗಳಿಗೆ ಮಗುವಿನ ಭಾಷಿಕ ಹಾಗೂ ಸಾಮಾಜಿಕ ಹಿನ್ನೆಲೆಯು ಸಹ ಪ್ರಮುಖ ಕಾರಣವಾಗುತ್ತದೆ. ವಿವಿಧ ಭಾಷಿಕ ಸಮುದಾಯದಿಂದ ಬಂದ ಮಕ್ಕಳು ಕನ್ನಡವನ್ನು ಕಲಿಯುವಾಗ ಮಾತೃಭಾಷೆಯ ಪ್ರಭಾವದಿಂದ ಹಲವಾರು ತಪ್ಪುಗಳನ್ನು ಮಾಡುತ್ತಾರೆ. ಹಾಗೆಯೇ ಮಕ್ಕಳ ಸಾಮಾಜಿಕ ಹಿನ್ನೆಲೆಯು ಸಹ ಕಲಿಕೆಯಲ್ಲಿ ಹಲವು ರೀತಿಯ ಸಮಸ್ಯೆಗಳನ್ನು ಉಂಟು ಮಾಡುತ್ತದೆ. ಅಂದರೆ ವಿವಿಧ ಸಾಮಾಜಿಕ ಹಿನ್ನೆಲೆಯಿಂದ ಬಂದ ಮಕ್ಕಳು ಆ ಸಮಾಜದ ಗ್ರಾಮ್ಯ ಭಾಷೆಯನ್ನು ಬಳಕೆ ಮಾಡುವುದರಿಂದ ಸಮುದಾಯದ ಮಕ್ಕಳು ತಮ್ಮ ಭಾಷೆಯ ಪ್ರಭಾವವನ್ನು ಕನ್ನಡ ಕಲಿಕೆಯಲ್ಲಿ ಬಳಸುವುದರಿಂದ ಅನೇಕ ಸಮಸ್ಯೆಗಳಾಗುತ್ತವೆ.

ಸರ್ಕಾರದ ಧೋರಣೆಗಳು

ಮಗುವಿನ ಓದುಗಾರಿಕೆ ಹಾಗೂ ಬರವಣಿಗೆಯಲ್ಲಿ ಕಂಡುಬರುವ ಸಮಸ್ಯೆಗಳಿಗೆ ಮತ್ತೊಂದು ಪ್ರಮುಖ ಕಾರಣವೆಂದರೆ ಸರ್ಕಾರದ ಧೋರಣೆಗಳು. ಸರ್ಕಾರವು ಜಾರಿಗೆ ತಂದಿರುವ ಹೊಸಹೊಸ ಯೋಜನೆಗಳು ಸರಿಯಾಗಿ ಜಾರಿಯಾಗದೇ ಅವು ವಿಫಲತೆಯನ್ನು ಹೊಂದಿದೆ. ಉದಾ: ಯಾವುದೋ ಒಂದು ಮುಂದುವರೆದ ದೇಶದಲ್ಲಿ, ಯಾವುದೋ ವ್ಯಕ್ತಿಯಿಂದ ಒಂದು ಮೂಲೆಯಲ್ಲಿ ರೂಪುಗೊಂಡ ಯೋಜನೆಯು ಅದು ಅಲ್ಲಿ ಯಶಸ್ವಿಯಾಗಿರಬಹುದು. ಆದರೆ ಅದೇ ಯೋಜನೆ ನಮ್ಮ ದೇಶದ ಎಲ್ಲಾ ರಾಜ್ಯಗಳಲ್ಲಿ ಯಶಸ್ವಿಯಾಗುತ್ತದೆ ಎಂದು ನೀರೀಕ್ಷಿಸುವುದು ಕಷ್ಟ. ಅಲ್ಲದೆ ಅಧಿಕಾರಿಗಳ ಹಾಗೂ ಶಿಕ್ಷಕರ ಧೋರಣೆಯಿಂದ ಉತ್ತಮವಾದ ಯೋಜನೆಯೂ ಸಹ ಸರಿಯಾಗಿ ಫಲಕಾರಿಯಾಗದಿರಬಹುದು.

ಇನ್ನು ಸರ್ಕಾರವು ಶಿಕ್ಷಕರನ್ನು ಹೆಚ್ಚು ಬೋಧಕೇತರ ಕೆಲಸದಲ್ಲಿ ತೊಡಗಿಸಿಕೊಳ್ಳುವುದರಿಂದ ಅಂದರೆ ಚುನಾವಣೆ ಗಣತಿ, ಬಿಸಿಯೂಟ, ಇತರೆ ಹಲವಾರು ಕೆಲಸಗಳ ಜವಾಬ್ದಾರಿಯನ್ನು ಶಿಕ್ಷಕರಿಗೆ ಕೊಟ್ಟಿರುವುದರಿಂದ ಶಿಕ್ಷಕರು ಬೋಧನಾ ಕಾರ್ಯದಲ್ಲಿ ಹೆಚ್ಚು ತೊಡಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಸರ್ಕಾರದ ಅಧಿಕಾರಿಗಳು ದಾಖಲೆಗಳಿಗೆ ಹೆಚ್ಚು ಮನ್ನಣೆ ನೀಡುವುದರಿಂದ ಸರ್ಕಾರದ ಯೋಜನೆಗಳೆಲ್ಲವು ದಾಖಲೆಗಳಲ್ಲಿ ಮಾತ್ರ ಅನುಷ್ಠಾನಗೊಳ್ಳುವ ಸ್ಥಿತಿ ಉಂಟಾಗಿದೆ ಎಂದರೆ ತಪ್ಪಾಗಲಾರದು.

ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಸರ್ಕಾರವು ತನ್ನ ಯೋಜನೆಗಳನ್ನು ರೂಪಿಸುವಾಗ ತನ್ನ ಪ್ರಾದೇಶಿಕತೆಗೆ ಅನುಕೂಲವಾಗುವಂತಹ, ಸಂಪನ್ಮೂಲಗಳು ದೊರೆಯುವಂತಹ, ಯಶಸ್ವಿಯಾಗುವಂತಹ ಯೋಜನೆಗಳನ್ನು ಇಲ್ಲಿಯೇ ಇರುವ ಸಂಪನ್ಮೂಲ ವ್ಯಕ್ತಿಗಳಿಂದ ತಯಾರಿಸಬೇಕು. ಅವುಗಳನ್ನು ಅನುಷ್ಠಾನಗೊಳಿಸುವಲ್ಲಿ ಉಂಟಾಗುವ ಸಮಸ್ಯೆಗಳನ್ನು ಗುರುತಿಸಿ, ಪರಿಹರಿಸಬೇಕು. ಅಲ್ಲದೇ ಶಿಕ್ಷಕರು ಕೆಲಸದ ಹೊರೆಯನ್ನು ಕಡಿಮೆ ಮಾಡಿ ಬೋಧನೆಯಲ್ಲಿ ಅವರನ್ನು ಹೆಚ್ಚು ತೊಡಗುವಂತೆ ಮಾಡಬೇಕು. ಯೋಜನೆ ದಾಖಲೆಗಳಿಂತ ಅದು ನಿಜವಾಗಿ ಕಾರ್ಯರೂಪಕ್ಕೆ ಬರುವಂತೆ ನೋಡಿಕೊಳ್ಳಬೇಕಾಗುತ್ತದೆ.

ಬೋಧನೆ ಹಾಗೂ ಕಲಿಕಾ ಸಾಮಾಗ್ರಿಗಳ ಕೊರತೆ

ಮಕ್ಕಳ ಪರಿಣಾಮಕಾರಿ ಕಲಿಕೆಯನ್ನುಂಟುಮಾಡಲು ಹಾಗೂ ಕಲಿಕಾ ದೋಷಗಳನ್ನು ಕಡಿಮೆ ಮಾಡಲು ಉತ್ತಮವಾದ ಬೋಧನೆ ಹಾಗೂ ಕಲಿಕಾ ಸಾಮಾಗ್ರಿಗಳು ಸಹಕಾರಿಯಾಗಿವೆ. ಹಾಗಾಗಿ ಸರ್ಕಾರ ಭಾಷಾ ಬೋಧನೆ ಹಾಗೂ ಕಲಿಕೆಯಲ್ಲಿ ಪರಿಣಾಮಕಾರಿ ಹಾಗೂ ಗುಣಾತ್ಮಕತೆಯನ್ನು ತರಲು ಉತ್ತಮ ಬೋಧನಾ ಕಲಿಕಾ ಸಾಮಾಗ್ರಿಗಳನ್ನು ತಯಾರಿಸಿ ಶಾಲೆಗಳಿಗೆ ಸರಿಯಾದ ಸಮಯಕ್ಕೆ ಒದಗಿಸುವ ಕಾರ್ಯವನ್ನು ಮಾಡಬೇಕು. ಸರ್ಕಾರ ಒದಗಿಸಿರುವ ಹಲವಾರು ಕಲಿಕಾ ಸಾಮಾಗ್ರಿಗಳನ್ನು ಶಿಕ್ಷಕ ಸಮರ್ಪಕವಾಗಿ ಬಳಸಿಕೊಳ್ಳಬೇಕು. ಅಲ್ಲದೆ ಭಾಷಾ ಪ್ರಯೋಗ ಶಾಲೆಯನ್ನು ವ್ಯವಸ್ಥಿತವಾಗಿ ಶಾಲೆಗಳಿಗೆ ದೊರಕುವಂತೆ, ಅದರ ಗರಿಷ್ಠ ಪ್ರಮಾಣದ ಬಳಕೆಯನ್ನು ಮಕ್ಕಳಿಗೆ ಮಾಡುವಂತೆ ಸಾಧ್ಯವಾದಾಗ ಮಾತ್ರ ಕಲಿಕೆಯ ದೋಷಗಳನ್ನು ಕಡಿಮೆ ಮಾಡಲು ಸಾಧ್ಯವಾಗುವುದು.

ಶಿಕ್ಷಕರ ಧೋರಣೆ

ಮಕ್ಕಳ ಓದುವಿಕೆ ಹಾಗೂ ಬರವಣಿಗೆಯಲ್ಲಿ ಕಂಡು ಬರುವ ದೋಷಗಳಿಗೆ ಪ್ರಮುಖ ಹಾಗೂ ಮಹತ್ವದ ಕಾರಣವೆಂದರೆ ಶಿಕ್ಷಕರ ಧೋರಣೆ. ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಶಿಕ್ಷಕರು ಪ್ರಮುಖವಾದ ಪಾತ್ರವನ್ನು ವಹಿಸಿದ್ದಾರೆ. ಅಷ್ಟೆ ಅಲ್ಲದೇ ಮಗುವಿನ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ

ಜವಾಬ್ದಾರಿ ಪೋಷಕರಿಗಿಂತ ಮಹತ್ವದ್ದಾಗಿದೆ. ಇಂತಹ ಶಿಕ್ಷಕರು ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸಿದಾಗ ಮಾತ್ರ ಮಕ್ಕಳ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ.

ದೇಶದ ಭವಿಷ್ಯವನ್ನು ರೂಪಿಸುವ ಶಕ್ತಿ ಶಿಕ್ಷಕನಿಗಿರುವುದರಿಂದ ಉತ್ತಮ ಆದರ್ಶಯುತವಾದ ಶಿಕ್ಷಕರ ಅವಶ್ಯಕತೆ ಇದೆ. ಆದರೆ ಇಂದಿನ ಶಿಕ್ಷಕರ ಸ್ಥಾನಮಾನ, ಗುಣಮಟ್ಟ ಕುಸಿಯುತ್ತಲಿದೆ ಎಂಬ ಕೂಗು ಬಹಳಷ್ಟು ಕಡೆ ಕೇಳಿಬರುತ್ತದೆ. ಹೀಗಾಗಿ ಶಿಕ್ಷಕರು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಬೇಕಾಗಿರುವುದು ಅಗತ್ಯವಾಗಿದೆ.

ಭಾಷಾ ಶಿಕ್ಷಕರಿಗೆ ಇತರ ಶಿಕ್ಷಕರಿಗಿಂತಲೂ ಹೆಚ್ಚಿನ ಜವಾಬ್ದಾರಿ ಇರುತ್ತದೆ. ಏಕೆಂದರೆ ಮಗು ಮೊದಲು ಭಾಷೆಯನ್ನು ಕಲಿತನಂತರ ಇತರ ವಿಷಯಗಳನ್ನು ಕಲಿಯುವುದರಿಂದ ಭಾಷಾ ಶಿಕ್ಷಕನು ಭಾಷಾ ಪ್ರಭುತ್ವವನ್ನು ಪಡೆದುಕೊಳ್ಳುವುದರ ಜೊತೆಗೆ ಸಾಹಿತ್ಯದ ವಿವಿಧ ಪ್ರಕಾರಗಳ ಬಗ್ಗೆ ಜ್ಞಾನ ಪಡೆದಿರಬೇಕು. ಭಾಷಾ ಚಟುವಟಿಕೆಗಳನ್ನು ಸಮರ್ಪಕವಾಗಿ ಬಲ್ಲವನಾಗಿರಬೇಕು. ಹಾಡುಗಾರಿಕೆ, ಸಂಗೀತ ಜ್ಞಾನ, ಅಭಿನಯ ಕಲೆ ಗೊತ್ತಿರಬೇಕು. ಭಾಷಾ ಕೌಶಲ್ಯಗಳಲ್ಲಿ ಪ್ರಾವೀಣ್ಯತೆ ಪಡೆದಿರಬೇಕು. ಭಾಷಾ ಶಿಕ್ಷಕನು ಉತ್ತಮವಾಗಿ, ಸ್ಪಷ್ಟವಾಗಿ, ನಿರರ್ಗಳವಾಗಿ ಓದುವ ಸಾಮರ್ಥ್ಯವನ್ನು ಪಡೆದುಕೊಂಡಿರಬೇಕು. ಭಾಷಾ ಶಿಕ್ಷಕನ ಬರವಣಿಗೆ ಅಂದವಾಗಿ, ಸ್ಪಷ್ಟವಾಗಿ, ಸ್ಪುಟವಾಗಿ ಎಲ್ಲರಿಗೂ ತಿಳಿಯುವಂತೆ ಇರಬೇಕು. ಏಕೆಂದರೆ ಪ್ರಾಥಮಿಕ ಶಾಲಾ ಮಕ್ಕಳು ಶಿಕ್ಷಕರನ್ನು ಅನುಸರಿಸಿ ಕಲಿಯುವುದರಿಂದ ಶಿಕ್ಷಕ ಎಲ್ಲಾ ವಿಷಯಗಳಲ್ಲಿ ಆದರ್ಶನಾಗಿದ್ದಾಗ ಮಾತ್ರ ಮಕ್ಕಳು ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳುವುದರ ಜೊತೆಗೆ ಓದುವಿಕೆಯ ಹಾಗೂ ಬರೆಯುವಿಕೆಯಲ್ಲಿ ಯಾವ ದೋಷವಿಲ್ಲದೆ ಕಲಿತು ಉತ್ತಮ ಶಿಕ್ಷಣ ಪಡೆಯಲು ಸಾಧ್ಯ. ಹೀಗಾಗಿ ಭಾಷಾ ಶಿಕ್ಷಕನು ಮಕ್ಕಳು ಓದುವಾಗ ಬರೆಯುವಾಗ ಕಂಡು ಬರುವ ದೋಷಗಳನ್ನು ಸರಿ ಪಡಿಸಬೇಕು. ಮಕ್ಕಳಿಗೆ ಶಿಕ್ಷಕ ಎಲ್ಲಾ ರಂಗದಲ್ಲಿಯೂ ಮಾದರಿಯಾಗಿರಬೇಕು.

ಅನ್ಯ ಭಾಷೆಯ ಪ್ರಭಾವ

ಒಂದು ಭಾಷೆಯು ಅನ್ಯ ಭಾಷೆಯ ಪ್ರಭಾವ ಪ್ರೇರಣೆಯಿಂದ ಅಭಿವೃದ್ಧಿ ಹೊಂದುತ್ತದೆ. ಈ ಪ್ರಭಾವವು ಹೇಗಿರಬೇಕು. ಅನ್ಯ ಭಾಷೆಯ ಪ್ರಭಾವ ಹೆಚ್ಚಾದರೆ ಹಲವಾರು ಸಮಸ್ಯೆಗಳು ಕಂಡುಬರುತ್ತವೆ. ಕನ್ನಡ ಭಾಷೆಯ ಮೇಲೆ ಆರಂಭದಿಂದ ಸಂಸ್ಕೃತದ ಪ್ರಭಾವ, ಪ್ರೇರಣೆ ಕಂಡುಬರುತ್ತದೆ. ಇತ್ತೀಚೆಗೆ ಇಂಗ್ಲೀಷ್ ಹಾಗೂ ಇತರೆ ಭಾರತೀಯ ಭಾಷೆಗಳ ಪ್ರಭಾವವು ಕಂಡುಬರುತ್ತದೆ. ಹೀಗಾಗಿ ಅನ್ಯ ಭಾಷೆಯ ಪದಗಳು ನಮ್ಮ ಭಾಷೆಯಲ್ಲಿ ಬಂದಾಗ ಅವುಗಳ ಉಚ್ಚಾರಣೆ ಹಾಗೂ ಬರವಣಿಗೆ ಕಷ್ಟವಾಗುತ್ತದೆ. ಇದರಿಂದ ಮಕ್ಕಳು ಪದಗಳನ್ನು ಓದುವಾಗ ಮತ್ತು ಬರೆಯುವಾಗ ಹಲವು ರೀತಿಯ ಸಮಸ್ಯೆಗಳನ್ನು ಮಾಡುವುದು ಕಂಡುಬರುತ್ತದೆ. ಇದರಿಂದ ಅನ್ಯ ಭಾಷೆಯ ಪ್ರಭಾವವನ್ನು ಆದಷ್ಟು ಕಡಿಮೆ ಮಾಡಿ ನಮ್ಮ ಭಾಷೆಯನ್ನು ಅಭಿವೃದ್ಧಿಯ ಕಡೆಗೆ ಕೊಂಡೊಯ್ಯಬೇಕು. ಹೀಗೆ ಮಾಡಿದಾಗ ಮಕ್ಕಳ ಭಾಷಾ ಕಲಿಕೆಯಲ್ಲಿನ ಸಮಸ್ಯೆಗಳನ್ನು ಕಡಿಮೆ ಮಾಡಬಹುದು.

ಮೂಲಭೂತ ಸೌಲಭ್ಯಗಳ ಕೊರತೆ

ಮಗುವಿನ ಓದುವಿಕೆ ಮತ್ತು ಬರೆಯುವಿಕೆಯಲ್ಲಿ ಉಂಟಾಗುವ ವ್ಯತ್ಯಾಸಗಳಿಗೆ ಮೂಲಭೂ ಸೌಲಭ್ಯಗಳ ಕೊರತೆಯು ಕಾರಣವಾಗಿದೆ. ಶಾಲೆಯ ಪರಿಸರ ಪ್ರಶಾಂತವಾಗದಿಲ್ಲದಿರುವುದು, ಕೊಠಡಿಯಲ್ಲಿ ಸರಿಯಾದ ಬೆಳಕು, ಗಾಳಿಯ ವ್ಯವಸ್ಥೆ ಇಲ್ಲದಿರುವುದು, ಆಸನ ವ್ಯವಸ್ಥೆ ಇಲ್ಲದಿರುವುದು, ಶೌಚಾಯ ಕೊರತೆ, ಕುಡಿಯುವ ನೀರಿನ ವ್ಯವಸ್ಥೆ, ಶಿಕ್ಷಕರ ಕೊರತೆ, ಸಮರ್ಪಕ ಕೊಠಡಿಗಲ ತೊಂದರೆ, ಪಠ್ಯಪುಸ್ತಕ ಇಲ್ಲದಿರುವುದು, ಕಲಿಕಾ ಸಾಮಾಗ್ರಿಗಳಿಲ್ಲದೇ ಇರುವುದು ಇತ್ಯಾದಿ ಮೂಭೂತ ಸೌಲಭ್ಯಗಳ ಕೊರತೆಯಿಂದ ಮಕ್ಕಳು ಸರಿಯಾಗಿ

ಓದುವುದನ್ನು ಬರೆಯುವುದನ್ನು ಮಾಡದೆ ಬರೀ ಸಮಸ್ಯೆಗಳಲ್ಲಿ ಹೆಚ್ಚು ಆಲ ಕಳೆಯುತ್ತವೆ. ಹಾಗಾಗಿ ಈ ಮೂಲಭೂತ ಸೌಲಭ್ಯಗಳ ಕೊರತೆಯನ್ನು ಮೊದಲು ಹೋಗಲಾಡಿಸಿ ಬೋಧನೆಯನ್ನು ಸಮರ್ಪಕವಾಗಿ ಮಾಡಿದಾಗ ಮಕ್ಕಳ ಕಲಿಕೆಯಲಿನ ದೋಷಗಳನ್ನು ಕಡಿಮೆ ಮಾಡಲು ಸಾಧ್ಯವಾಗಬಹುದು.

ಮಗುವಿನ ವೈಯಕ್ತಿಕ ಅಂಶಗಳು

ಓದುವಾಗ ಬರೆಯುವಾಗ ಉಂಟಾಗುವ ಸಮಸ್ಯೆಗಳಿಗೆ ಮಗುವಿನ ವೈಯಕ್ತಿಕ ಅಂಶಗಳು ಕಾರಣವಾಗಿವೆ. ನಗುವಿನ ಕಿಕೆಯ ಮೇಲೆ ಆ ಮಗುವಿನ ವೈಯಕ್ತಿಕ ಅಂಶಗಳು ಪ್ರಭಾವ ಬೀರುತ್ತವೆ ಎಂಬುದನ್ನು ಮನೋವಿಜ್ಞಾನಿಗಳು, ಭಾಷಾ ತಜ್ಞರು ತಿಳಿಸಿದ್ದಾರೆ. ಅಂತಹ ವೈಯಕ್ತಿಕ ಅಂಶಗಳಲ್ಲಿ ಮಗುವಿನ ದೈಹಿಕ ಆರೋಗ್ಯ, ಧ್ವನ್ಯಾಂಗಗಳ ನ್ಯೂನತೆ, ಅಂಗವೈಕಲ್ಯಗಳು, ವಯಸ್ಸು, ಆಸಕ್ತಿ, ಅವಧಾನ, ಆಯಾಸ, ಪ್ರೇರಣೆ, ಸ್ಮೃತಿ, ಪರಿಸರ, ಆಹಾರ ಪಾನೀಯ ಇತ್ಯಾದಿ. ಬೋಧಕನು ಅದರಲ್ಲಿಯೂ ಪ್ರಾಥಮಿಕ ಶಾಲಾ ಶಿಕ್ಷಕನು ಮಗುವಿನ ವೈಯಕ್ತಿಕ ಅಂಶಗಳಲ್ಲಿರುವ ತೊಂದರೆಗಳನ್ನು ಗುರುತಿಸಿ ಅವುಗಿಗೆ ಸರಿಯಾದ ಪರಿಹಾರ ನೀಡಿ ಮಗುವಿಗೆ ಕಲಿಸಿದಾಗ ಮಗು ತನ್ನ ಕಲಿಕೆಯಲ್ಲಿ ಅಭಿವೃದ್ಧಿ ಕಂಡಿಕೊಳ್ಳಲು ಸಾಧ್ಯ.

ಮಗುವಿನ ಸಾಮಾಜಿಕ ಹಾಗೂ ಕೌಟಂಬಿಕ ಪರಿಸರ ಮತ್ತು ಆರ್ಥಿಕ ಸ್ಥಿತಿಗತಿ

ಮಗುವಿನ ಕಲಿಕೆಯಲ್ಲಿ ಕಂಡುಬರುವ ಓದುವ ಮತ್ತು ಬರೆಯುವ ಸಮಸ್ಯೆಗಳಿಗೆ ಮತ್ತೊಂದು ಪ್ರಮುಖ ಕಾರಣವೆಂದರೆ ಆ ಮಗುವಿನ ಕೌಟಂಬಿಕ ಹಾಗೂ ಸಾಮಾಜಿಕ ಪರಿಸರವಾಗಿದೆ. ಉತ್ತಮವಾದ ಕೌಟಂಬಿಕ ಪರಿಸರದಲ್ಲಿ ಬೆಳೆದ ಮಗು ಉತ್ತಮ ಕಲಿಕೆಯನ್ನು ರೂಢಿಸಿಕೊಳ್ಳುತ್ತದೆ.

ಮಗುವಿನ ಭಾಷಾ ಕಲಿಕೆಯ ಮೇಲೆ ಸಾಮಾಜಿಕ ಪರಿಸರವು ಬೀರುವ ಪ್ರಭಾವ ಪ್ರಮುಖ ಅಥವಾಮಹತ್ವವೆನಿಸಿಕೊಂಡರು ಸಹ ಅದರ ಜೊತೆಗೆ ಆರ್ಥಿಕ ಸ್ಥಿತಿಗತಿಯು ಸಹ ಉತ್ತಮವಾಗಿರಬೇಕು ಅಂದರೆ ಮಗುವಿನ ಮೂಲಭೂತ ಕಲಿಕೆ ಬೇಕಾಗುವ ಸೌಲಭ್ಯಗಳನ್ನಾದರೂ ಪೂರೈಸುವಂತಿರಬೇಕು ಅತಿಯಾದ ಆರ್ಥಿಕ ಸ್ಥಿತಿಗತಿಯೂ ಸಹ ಮಗುವುನ ಕಲಿಕೆಗೆ ಪೂರಕವಾಗಬಹುದು. ಆಗಾಗಿ ಆರ್ಥಿಕ ಸ್ಥಿತಿ ಕೆಲವೂ ಸಲ ಪೂರಕವಾದರೆ ಇನ್ನು ಕೆಲವು ಸಂದರ್ಭದಲ್ಲಿ ಮಾರಕವಾಗಬಹುದು.ಅದು ಮಗುವಿನ ಕೌಟುಂಬಿಕ, ಶೈಕ್ಷಣೆಕ, ಸಾಮಾಜಿಕ ಪರಿಸರದ ಮೇಲೆ ಅವಲಂಬಿತವಾಗಿರುತ್ತದೆ.

ಸರ್ಕಾರಿ ಶಾಲೆಯಲ್ಲಿ ಕನ್ನಡ ಕಲಿಯುವ ಇರುವ ಸಮಸ್ಯೆಗಳು:

ಸರ್ಕಾರಿ ಶಾಲೆ ಎಂದ ಕೂಡಲೇ ನಮ್ಮ ಕಲ್ಪನೆಗೆ ಬರುವುದು ಇಲ್ಲಗೆ ಬರುವ ಮಕ್ಕಳು ಆರ್ಥಿಕವಾಗಿ, ಶೈಕ್ಷಣೆಕವಾಗಿ, ಸಾಮಾಜಿಕವಾಗಿ ಹಿಂದೂಳಿದವರಾಗಿರುತ್ತಾರೆ. ಎಂಬುದ ಸಾಮಾನ್ಯವಾದ ಸಂಗತಿ ಇನ್ನೊಂದು ಕಡೆ ಹಲವಾರು ಸೌಲಭ್ಯಗಳ ಕೊರೆತೆ ಅಂದರೆ ಕೊಠಡಿ, ಕಪ್ಪು ಹಲಗೆ, ಶಿಕ್ಷಕರ ಕೊರೆತೆ, ಮೂಲಭೂತ ಸೌಲಭ್ಯಗಳು ಬೋಧನೆ, ಕಲಿಕಾ ಸಾಮಾಗ್ರಿಗಳ ಕೊರೆತೆ ಇತ್ಯಾದಿ ಈ ಎಲ್ಲಾ ಸಮಸ್ಯೆಗಳು ಕಲಿಕೆಯ ಸಾಮಾನ್ಯ ಸಮಸ್ಯೆಗಳಾಗಿವೆ. ಇನ್ನೂ ಈ ಶಾಲೆಯಲ್ಲಿ ಕನ್ನಡ ಭಾಷೆಯನ್ನು ಕಲಿಯಲು ಸಹ ಹಲವಾರು ಸಮಸ್ಯೆಗಳಿವೆ. ಅವುಗಳಲ್ಲಿ ಮುಖ್ಯವಾಗಿ ಕನ್ನಡ ಭಾಷೆಯನ್ನು ಕಲಿಸುವ ಶಿಕ್ಷಕ ಕನ್ನಡ ಭಾಷಿಕನಾಗದಿರುವುದು. ಇಂದು ರಾಜ್ಯದ ಅನೇಕ ಶಾಲೆಗಳಲ್ಲಿ ಅನ್ಯ ಭಾಷೆಯ ಶಿಕ್ಷಕರು ಕನ್ನಡ ಭಾಷಾ ಶಿಕ್ಷರಾಗಿದ್ದು ಅವರು ಕನ್ನಡ ಭಾಷಾ ಕಲಿಕೆಯಲ್ಲಿ ನಿರ್ಲಕ್ಷ್ಯ ಧೋರಣೆ ಸರಿಯಾದ ಹಿಡಿತವಿಲ್ಲದಿರುವುದು, ಅವರ ಮಾತೃಭಾಷೆಯ ದಾಡಿಯಲ್ಲಿಯೇ ಕಲಿಸುವುದು ಇತ್ಯಾದಿ ಕಾರಣದಿಂದ ಕನ್ನಡ ಕಲಿಕೆಯ್ಲಿ ಹಲವಾರು ಕನ್ನಡ ಭಾಷೆಯನ್ನು ಕಲಿಸುವ ರೀತಿ

–ನೀತಿಗಳ ಬಗ್ಗೆ ತಿಳುವಳಿಕೆಯಿಲ್ಲದಿರುವುದು, ಭಾಷೆಯ ಮೇಲೆ ಹಿಡಿತವಿಲ್ಲದಿರುವುದು ಕನ್ನಡ ಭಾಷಾಶಿಕ್ಷಕನ ಉಚ್ಚರಣೆ ಹಾಗೂ ಬರವಣಿಗೆ ಸರಿ ಇಲ್ಲದಿರುವುದು ಇತ್ಯಾದಿ.

ಕಲಿಕೆ ಒಮ್ಮೆಲೆ ಆಗುವಂಥದ್ದಲ್ಲ. ಅದು ನಿಧಾನವಾಗಿ ವಿಕಸಿಸುವ, ಪರಿವರ್ತನೆಗೆ ಒಳಗಾಗುವ ಪ್ರಕ್ರಿಯೆ. ಆದುದರಿಂದ ಕಲಿಕೆಯು ಸರಿಯಾದ ದಾರಿಯಲ್ಲಿ ಹಂತ ಹಂತವಾಗಿ ಸಾಗಬೇಕು. ಮುಖ್ಯವಾಗಿ ಮಕ್ಕಳು ಕಲಿಯಲು ಮಾನಸಿಕವಾಗಿ ಸಿದ್ಧರಿದ್ದಾರೆಯೋ ಇಲ್ಲವೋ ಎಂಬುದನ್ನು ಮನಗಂಡು ಬೋಧಿಸಬೇಕಿದೆ. ಅದರಲ್ಲಿಯೂ ಬಹುಸಂಸ್ಕೃತಿ ಬಹುಭಾಷಿಕತೆಯೆ ಜೀವಾಳವಾಗಿರುವ ದೇಶ ನಮ್ಮದು. ಆದರೆ ನಮ್ಮ ಶಿಕ್ಷಣ ವ್ಯವಸ್ಥೆ ಮಾತ್ರ ಏಕರೂಪಿಯಾದುದು. ಏಕರೂಪಿ ಪಠ್ಯಕ್ರಮ, ಏಕರೂಪಿ ಪಠ್ಯಪುಸ್ತಕ, ಏಕರೂಪಿ ಪರೀಕ್ಷಾ ಪದ್ಧತಿ ಹೀಗೆ ಎಲ್ಲವೂ ಏಕರೂಪಿಯಾಗಿಯೇ ಇದೆ. ಎಲ್ಲ ಮಕ್ಕಳೂ ಒಂದೇ ವೇಗದಲ್ಲಿ ಒಂದೇ ವಿಧದಲ್ಲಿ ಕಲಿಯುವುದಿಲ್ಲ. ಮಕ್ಕಳ ಕಲಿಕೆಯ ಬಗೆಗಳು ವಿಭಿನ್ನವೂ ಅನನ್ಯವೂ ಆಗಿರುತ್ತವೆ. ಹೀಗಿರುವಾಗ ಏಕರೂಪತೆಯು ಪ್ರಯೋಜನಕ್ಕೆ ಬರುವುದಿಲ್ಲ. ಮಕ್ಕಳ ಮಾನಸಿಕ ಮಟ್ಟದಲ್ಲಿ ನಿಂತು ಯೋಚಿಸಿ ಬೋಧಿಸಿದಾಗ ಮಾತ್ರ ಕಲಿಕೆಯು ನಿಗಧಿತ ಗುರಿಯನ್ನು ತಲುಪುತ್ತದೆ.

ಈ ಮೇಲೆ ಚರ್ಚಿಸಲಾಗಿರುವ ಬೋಧನೆ ಹಾಗೂ ಕಲಿಕೆಯಲ್ಲಿನ ಸಮಸ್ಯೆಗಳನ್ನು ಗುರುತಿಸಿ ಅವುಗಳಿಗೆ ಶೀಘ್ರ ಪರಿಹಾರವನ್ನು ಕಂಡುಕೊಂಡುಗ ಮಾತ್ರ ಬೋಧನೆ ಹಾಗೂ ಕಲಿಕೆಯು ಪರಿಣಾಮಕಾರಿಯಾಗಲು ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ದೇಶ ಪ್ರಗತಿಯನ್ನು ಹೊಂದಲು ಸಾಧ್ಯವಾಗಬಹುದು ಜೊತೆಗೆ ಮಕ್ಕಳ ಬಾಷಾ ಕಲಿಕೆಯಲ್ಲಿ ಉಂಟಾಗುವ ಸಮಸ್ಯೆಗಳನ್ನು ನಿವಾರಿಸಲು ಸಾಧ್ಯವಾಗಬಹುದು.

ಅಡಿಟಿಪ್ಪಣಿಗಳು

---

[೧] ಓಬಳೇಶಘಟ್ಟಿ, ಭಾಷೆ ಮತ್ತು ಭಾಷಾ ಕೌಶಲ್ಯಗಳು, ಪು.೧೫
[೨] ಕುಮಾರ್ ಟಿ. ಎಂ. ಪ್ರಾಥಮಿಕ ಶಿಕ್ಷಣ ಒಂದು ಚರ್ಚೆ, ಪು.೨೧
[೩] ಅದೇ, ಪು. ೪
[೪] ಅದೇ.
[೫] ಓಬಳೇಶ್ ಗಟ್ಟಿ,ಕನ್ನಡ ವಿಷಯಾಧಾರಿತ ಬೋಧನಾಪದ್ಧತಿ ಪುಟ ೨೪,೨೫
[೬] ಕನ್ನಡ ಭಾಷಾ ಅಲೇಖ, ಪುಟ ಸಂಖ್ಯೆ– ೬೬
[೭] ಹೊಳೆಯಣ್ಣನವರು, ಕನ್ನಡ ವಿಷಯಾಧಾರಿತ ಬೋಧನಾ ಪದ್ಧತಿ, ಪುಟ.೨೫೨
[೮] ಅದೆ ಪುಟ.೨೫೫
[೯] ಯಾದವಾಡ್ ಎಸ್.ವಿ., ಪ್ರಗತಿಶೀಲ ಭಾರತದಲ್ಲಿ ಶಿಕ್ಷಣ ಪುಟ.೩೪೯
[೧೦] ಅದೆ, ಪುಟ.೩೪೯
[೧೧] ಅದೆ ಪುಟ.೩೪೯
[೧೨] ಯಾದವಾಡ್ ಎಸ್.ವಿ., ಶಿಕ್ಷಣ, ಪುಟ.೨೩೮
[೧೩] ಅದೆ, ಪುಟ.೨೪೧
[೧೪] ಅದೆ ಪುಟ.೨೪೨
[೧೫] ಎಸ್.ವಿ.ಯಾದವಾಡ್,ಪ್ರಗತಿಶೀಲ ಭಾರತದಲ್ಲಿ ಶಿಕ್ಷಣ ಪುಟ.೧೩೭
[೧೬] ಅದೆ ಪುಟ.೧೪೧
[೧೭] ಡಿ.ಎಸ್.ಇ.ಆರ್.ಟಿ, ಶಿಕ್ಷಣದ ಪರಿಕಲ್ಪನಾತ್ಮಕ ಬುನಾದಿಗಳು ಪುಟ.೧೨
[೧೮] ಎಸ್.ವಿ.ಯಾದವಾಡ್,ಪ್ರಗತಿಶೀಲ ಭಾರತದಲ್ಲಿ ಶಿಕ್ಷಣ ಪುಟ.೧೫೩
[೧೯] ಅದೆ ಪುಟ.೧೫೫
[೨೦] ಜಯಣ್ಣ ಸಿ.ವಿ., ,ಶಿಕ್ಷಣದ ಪರಿಕಲ್ಪನಾತ್ಮಕ ಬುನಾದಿಗಳು ಪುಟ.೨೫
[೨೧] ಡಿ.ಎಸ್.ಇ.ಆರ್.ಟಿ,ಶಿಕ್ಷಣದ ಪರಿಕಲ್ಪನಾತ್ಮಕ ಬುನಾದಿಗಳು ಪುಟ.೧೪
[೨೨] ಯಾದವಾಡ್ ಎಸ್.ವಿ.,ಶಿಕ್ಷಣ,ಪುಟ.೧೬೪
[೨೩] ಅದೆ ಪುಟ.೧೬೯

[೨೪] ಅದೆ ಪುಟ.೧೭೧
[೨೫] ಜಯಣ್ಣ ಸಿ.ವಿ., ,ಶಿಕ್ಷಣದ ಪರಿಕಲ್ಪನಾತ್ಮಕ ಬುನಾದಿಗಳು ಪುಟ.೨೫
[೨೬] ಯಾದವಾಡ್ ಎಸ್.ವಿ.,ಪ್ರಗತಿಶೀಲ ಭಾರತದಲ್ಲಿ ಶಿಕ್ಷಣ ಪುಟ.೧೯೬
[೨೭] ಅದೆ, ಪುಟ.೧೯೨
[೨೮] ಜಯಣ್ಣ ಸಿ.ವಿ., ಶಿಕ್ಷಣದ ಪರಿಕಲ್ಪನಾತ್ಮಕ ಬುನಾದಿಗಳು ಪುಟ.೧೫
[೨೯] ಕರ್ನಾಟಕ ಸಾಹಿತ್ಯ ಪರಿಷತ್, ಶಿಕ್ಷಣಾ ಮಾಧ್ಯಮ ಕನ್ನಡಪರ ಆಂದೋನಾ ಮತ್ತು ವರದಿಗಳು,ಪುಟ.೯
[೩೦] ಗೋವಿಂದರಾಜು ಸಿ. ಆರ್., ಗೋಕಾಕ್ ವರದಿ, ಪು.೩೦
[೩೧] ಜಯಣ್ಣ ಸಿ.ವಿ., ಶಿಕ್ಷಣದ ಪರಿಕಲ್ಪನಾತ್ಮಕ ಬುನಾದಿಗಳು ಪುಟ.೨೦೯
[೩೨] ಕನ್ನಡ ಕನ್ನಡಿಗ, ಕರ್ನಾಟಕ, ಪುಟ.೭೨
[೩೩] ಕರ್ನಾಟಕ ಸರ್ಕಾರ, ಓದುವೆ ನಾನು ಶಿಕ್ಷಕರ ಮಾರ್ಗದರ್ಶಿ,ಪುಟ.೬
[೩೪] ಅದೆ, ಪುಟ.೭೨
[೩೫] ಅನಸೂಯ ವಿ.ಪರಗಿ,ಮಾತೃಭಾಷೆ ತತ್ವ ಮತ್ತು ಬೋಧನಾ ಮಾರ್ಗ,ಪುಟ.೪೨,೪೩,೪೪,೪೬
[೩೬] ಟಿ.ಎಂ.ಕುಮಾರ್, ಪ್ರಾಥಮಿಕ ಶಿಕ್ಷಣ ಒಂದು ಚರ್ಚೆ, ಪುಟ.೯೨
[೩೭] ಅದೇ, ಪುಟ.೯೫
[೩೮] ಡಿ.ಎಸ್.ಇ.ಆರ್.ಟಿ,ಕನ್ನಡ ವಿಷಯಾಧಾರಿತ ಬೋಧನಾ ಪದ್ಧತಿ ಪುಟ.೧೭
[೩೯] ಯಾದವಾಡ್ ಎಸ್.ವಿ., ಶಿಕ್ಷಣ, ಪುಟ.೨೦೧

* * * * *

ಅಧ್ಯಾಯ - ಐದು

ದಕ್ಷಿಣ ಕನ್ನಡ ಪರಿಸರದ ಕನ್ನಡ ಓದು ಕಲಿಕೆಯ ಸಮಸ್ಯೆಗಳ ಸ್ವರೂಪ

ಅಧ್ಯಾಯ – ಐದು

ದಕ್ಷಿಣ ಕನ್ನಡ ಪರಿಸರದ ಕನ್ನಡ ಓದು ಕಲಿಕೆಯ ಸಮಸ್ಯೆಗಳ ಸ್ವರೂಪ

ಭಾಷಾ ಕೌಶಲ್ಯಗಳಲ್ಲಿ ಪ್ರಮುಖವಾಗಿ ಮೂರನೇ ಕೌಶಲ್ಯವೆಂದರೆ ಓದುವುದು. ಓದುವುದೆಂದರೆ ಅಭ್ಯಾಸ ಮಾಡುವುದು, ಕಲಿಯುವುದು ಎಂಬ ಅರ್ಥಗಳಿವೆಯಾದರೂ ಇವೆರಡೂ ಕ್ರಿಯೆಗಳು ಓದುವುದರಿಂದ ಮಾತ್ರ ಸಾಧ್ಯ. ಓದುಗಾರಿಕೆ ಅಥವಾ ಓದು ಎಂದರೆ 'ಸಾಂಪ್ರದಾಯಿಕ ಸಂಕೇತಗಳ ರೂಪದಲ್ಲಿ ಬರೆದ ಬರಹವನ್ನು ಬಾಯ್ದರೆಯಾಗಿ/ ಮನಸ್ಸಿನಲ್ಲಿ ಯಾದೃಚ್ಛಿಕವಾಗಿ ಕಣ್ಚಲನೆಯ ಮುಖಾಂತರ ವಿಷಯ ಗ್ರಹಿಕೆ ಮಾಡುವುದು'[1] ಆಗಿದೆ. ಓದು ಮತ್ತು ಬರಹ ಒಂದಕ್ಕೊಂದು ಪೂರಕ ಕ್ರಿಯೆಗಳು. ಬರಹ ಭಾಷೆಯನ್ನು ಸಂಕೇತಗಳ ಮೂಲಕ ಮೂಡಿಸುವ ಕ್ರಿಯೆಯಾದರೆ; ಓದು ಬರಹದಲ್ಲಿ ಮೂಡಿಸಿರುವ ಸಂಕೇತಗಳನ್ನು ಓದಿ ಅರ್ಥಮಾಡಿಕೊಳ್ಳುವ ಕ್ರಿಯೆಯಾಗಿದೆ. ಆದುದರಿಂದಲೇ ಓದು ಮತ್ತು ಬರಹ ಇವೆರಡನ್ನೂ ಅಕ್ಷರಸ್ಥ ವ್ಯಕ್ತಿಯ ಅಭಿವ್ಯಕ್ತಿ ಸಾಧನಗಳೆಂದು ಪರಿಗಣಿಸಲಾಗಿದೆ.[2] ಅಂದರೆ, 'ಕೈಬರಹದ, ಮುದ್ರಿತ ಅಥವಾ ಬೆರಳಚ್ಚು ಮಾಡಿದ ಸಂಕೇತಗಳನ್ನು ಓದಿ ಅದನ್ನು ಅರ್ಥಮಾಡಿಕೊಳ್ಳುವುದು'[3] ಎಂದರ್ಥ

ಬರೆದುದನ್ನು ತಪ್ಪಿಲ್ಲದೆ ಓದುವ ಕಲೆಯನ್ನು ಕಲಿಯುವುದು ಒಂದು ಕೌಶಲ. ಇದು ಮೂಲತಃ ದೃಶ್ಯ ಅಥವಾ ಚಾಕ್ಷುಷ ಕ್ರಿಯೆ; ಕಣ್ಣುಗಳ ನೆರವಿನಿಂದ ಸಂಜ್ಞೆಗಳನ್ನು ಸ್ಪಷ್ಟವಾಗಿ ನೋಡುವ ಸಾಮರ್ಥ್ಯ. ಓದು ಪರಿಭಾವಿಸುವಿಕೆಯ ಪ್ರಕ್ರಿಯೆಯೂ ಹೌದು; ಅಂದರೆ ನಮ್ಮ ಆಲೋಚನ ಕ್ರಿಯೆಯು ಈ ಸಂಜ್ಞೆಗಳನ್ನು ಗ್ರಹಿಸಿ ಅವುಗಳಿಗೆ ಅರ್ಥವನ್ನು ಆರೋಪಿಸುವ ಪ್ರಕ್ರಿಯೆ ಎಂದರ್ಥ. ಓದು ಅನುಭವ ಜನ್ಯ ಕ್ರಿಯೆಯಾಗಿದೆ.[4] ಓದುವಾಗ ಕಣ್ಣು ಒಂದು ದಿಕ್ಕಿನಿಂದ ಇನ್ನೊಂದು ದಿಕ್ಕಿಗೆ ಚಲಿಸುತ್ತದೆ. ಆದರೆ ಈ ಚಲನೆ ಸತತವಲ್ಲ. ಅದು ಅಲ್ಲಲ್ಲಿ ನಿಂತು ಸಾಲುಗಳಲ್ಲಿರುವ ಪದಗಳನ್ನು ಗ್ರಹಿಸಿ ಮುಂದೆ ಸಾಗುವ ಕ್ರಿಯೆ. ಪ್ರತಿಯೊಂದು ನಿಲುಗಡೆಯಲ್ಲಿಯೂ ಕಣ್ಣು ಎರಡರಿಂದ ಮೂರು ಪದಗಳನ್ನು ಗ್ರಹಿಸುತ್ತದೆ. ಮಕ್ಕಳಿಗೆ ಇದು ಸಾಧ್ಯವಾಗದೆ ಇರಬಹುದು. ಅವರಲ್ಲಿ ಓದುಗಾರಿಕೆಯ ಕೌಶಲ ಬೆಳೆದಂತೆ ಇದು ವೃದ್ಧಿಸುತ್ತಾ ಹೋಗುತ್ತದೆ.

ಆಲಿಸುವ ಮತ್ತು ಮಾತನಾಡುವ ಕೌಶಲ್ಯಗಳನ್ನು ಮಕ್ಕಳು ತಮ್ಮ ಸಾಮಾಜಿಕ ವಲಯದೊಂದಿಗೆ ಮಾಡುವ ಸಹಜ ಪ್ರತಿ ವರ್ತನೆಯಿಂದ ಪಡೆದುಕೊಳ್ಳುತ್ತಾರೆ.[5] ಆದರೆ ಓದುವ ಮತ್ತು ಬರೆಯುವ ಸಾಮರ್ಥ್ಯಗಳನ್ನು ಗಳಿಸಲು ಮಗು ಉದ್ದೇಶ ಪೂರ್ವಕ ಕಲಿಯುವ ಚಟುವಟಿಕೆಯಲ್ಲಿ ಪಾಲ್ಗೊಳ್ಳಬೇಕಾದುದು ಅಗತ್ಯವಾಗುತ್ತದೆ. ಬರೆಯುವ ಕೌಶಲ್ಯ ಓದುವ ಕೌಶಲ್ಯಕ್ಕಿಂತ ಸಂಕೀರ್ಣವಾದುದು.

ಓದುವ ಸಾಮರ್ಥ್ಯವು ಯಾವುದೇ ಪಠ್ಯ ವಿಷಯದ ಕಲಿಕೆಯ ಆರಂಭದ ಸೋಪಾನವಾಗಿದೆ. ಓದುವುದನ್ನು ಕಲಿತರೆ ಇನ್ನಾವುದೇ ವಿಷಯದ ಕಲಿಕೆಯಲ್ಲಿ ಪಾಲ್ಗೊಳ್ಳಲು ಮತ್ತು ಉತ್ತಮ ಸಾಧನೆಯನ್ನು ತೋರುವಲ್ಲಿ ಸಂಶಯವಿಲ್ಲ. ಈ ಸಾಮರ್ಥ್ಯವನ್ನು ಗಳಿಸುವಲ್ಲಿ ವಿಫಲವಾದರೆ ಮನಸ್ಸಿನಲ್ಲಿ ತಾನೇನನ್ನು ಕಲಿತಿಲ್ಲವೆಂಬ ಕೀಳಿರಿಮೆ ಬಂದು ಶಾಲೆಯನ್ನು ಅರ್ಧದಲ್ಲಿಯೇ ಬಿಡುವ ಸನ್ನಿವೇಶಗಳು ಹೆಚ್ಚು, ಹಾಗಾಗಿ ಓದುವ ಕೌಶಲ್ಯವನ್ನು ಮಕ್ಕಳಲ್ಲಿ ಬೆಳೆಸುವುದಕ್ಕೆ ಗಮನ ನೀಡುವುದು ಶಾಲೆಗಳ ಪ್ರಥಮ ಆದ್ಯತೆಯಾಗಬೇಕಿದೆ.

ಓದುವಿಕೆಯ ಅರ್ಥ

ಭಾಷಾ ಕೌಶಲ್ಯಗಳಲ್ಲಿ ಓದುವುದು ಪ್ರಮುಖವಾಗಿರುತ್ತದೆ. ಇದನ್ನು ಆಲೋಚನಾ ಕ್ರಿಯೆ ಎಂಬುದಾಗಿಯೂ ಕರೆಯುವರು, ಸಾಮಾನ್ಯವಾಗಿ ಓದುವುದು ಎಂದರೆ ಅಭ್ಯಾಸ ಮಾಡುವುದು ಹಾಗೂ ಕಲಿಯುವುದು ಎಂದರ್ಥ, ಓದುವುದು ಒಂದು ಮಾನಸಿಕ ಹಾಗೂ ಶಾಬ್ದಿಕ ಪ್ರಕ್ರಿಯೆಯಾಗಿರುತ್ತದೆ. ಮುದ್ರಿತ ಪದ, ವಾಕ್ಯಗಳನ್ನು ನೋಡಿ ಗಮನಿಸಿ ಅರ್ಥಮಾಡಿಕೊಳ್ಳವುದು ಅಥವಾ ಲಿಪಿಯನ್ನು ಶಬ್ದರೂಪದಲ್ಲಿ ಅರ್ಥಬದ್ದವಾಗಿ ಹೊರ ಹೊಮ್ಮಿಸುವ ಕ್ರಿಯೆಯನ್ನು ಓದುವಿಕೆ ಎಂದು ಕರೆಯುವರು. ಸಂಕ್ಷಿಪ್ತವಾಗಿ ಹೇಳುವುದಾದರೆ "ಲಿಪಿ ಸಂಕೇತಗಳನ್ನು ಗುರುತಿಸಿ ಅವುಗಳನ್ನು ಧ್ವನಿ ಮತ್ತು ಅರ್ಥದಲ್ಲಿ ಪರಿವರ್ತನೆಗೊಳಿಸುವುದೇ ಓದು"[6] ಎನಿಸುತ್ತದೆ. ಲಿಪಿಗಳು ಯಾಂತ್ರಿಕವಾಗಿ ಕಣ್ಣುಗಳನ್ನು ಪ್ರವೇಶಿಸಿ ಬಾಯಿಯ ಮುಖಾಂತರ ಧ್ವನಿಯಾಗಿ ಅಭಿವ್ಯಕ್ತಿ ಹೊಂದುವುದೇ ಓದುವುದಾಗಿರುತ್ತದೆ. ಓದುವ ಕ್ರಿಯೆಯಲ್ಲಿ ಮಾನಸಿಕ ಸಿದ್ಧತೆ, ಆಸಕ್ತಿ, ಪ್ರಚೋಧನೆ, ಏಕಾಗ್ರತೆ, ಕಲ್ಪನೆ, ಅರ್ಥಗ್ರಹಿಕೆ, ಸ್ಮರಣೆ ಹಾಗೂ ಯೋಚನಾ ಕೌಶಲ್ಯಗಳು ಸಮನ್ವಯಗೊಂಡು ಕಾರ್ಯ ನಿರ್ವಹಿಸುತ್ತವೆ.

ಓದುವಿಕೆಯು ಒಂದು ಸ್ವಿಕೃತಿ ಕ್ರಿಯೆಯಾಗಿರುತ್ತದೆ. ಅಲ್ಲದೆ ಉತ್ಪಾದಕ ಕೌಶಲ್ಯವಾಗಿಯೂ ಕೆಲಸ ಮಾಡುತ್ತದೆ. ಅಧುನಿಕ ಪ್ರಪಂಚದಲ್ಲಿ ಮಾನವ ನೆಮ್ಮದಿಯಿಂದ ಮತ್ತು ಸುಖ ಸಂತೋಷದಿಂದ ಬಾಳಲು ಓದು ಅಗತ್ಯವಾಗಿರುತ್ತದೆ. ಓದು ಬಲ್ಲವನ್ನು ತನ್ನ ಆಶೋತ್ತರಗಳನ್ನು ಸುಲಭವಾಗಿ ಈಡೇರಿಸಿಕೊಳ್ಳಬಲ್ಲನು ಹಾಗೂ ಓದಿನಿಂದ ಜ್ಞಾನಾರ್ಜನೆಯ ಬುನಾದಿ ಅಪೂರ್ಣ ಮಾನವನು ಪೂರ್ಣ ಮಾನವನನ್ನಾಗಿ ಮಾಡುತ್ತದೆ. ಒಟ್ಟಾರೆ ವ್ಯಕ್ತಿ ಮತ್ತು ಸಮಾಜದ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ, ಆಡಲಿತಾತ್ಮಕ, ಭಾವನಾತ್ಮಕ ಉನ್ನತಿಗಾಗಿ ಓದುವುದು ಮಹತ್ವ ಎನಿಸಿದೆ.

ಓದುಗಾರಿಕೆಯು ಭಾಷಾ ಕೌಶಲಗಳಲ್ಲಿ ಪ್ರಮುಖವಾದುದು. ಈ ಕೌಶಲವನ್ನು ಮಗು ಔಪಚಾರಿಕ ಮತ್ತು ಅನೌಪಚಾರಿಕವಾಗಿ ಮತ್ತು ಶೈಕ್ಷಣಿಕವಾಗಿ ಪಡೆಯುತ್ತದೆ. ಓದುವುದು ಒಂದು ಮಾನಸಿಕ ಮತ್ತು ಶಾಬ್ದಿಕ ಕ್ರಿಯೆ. ಓದುವ ಕ್ರಿಯೆ ನಿಯಮಬದ್ಧವಾಗಿರುತ್ತದೆ. ಸಾಮಾನ್ಯಾರ್ಥದಲ್ಲಿ ಲಿಪಿಗಳನ್ನು ಅರ್ಥಬದ್ಧವಾಗಿ, ಶಾಬ್ದಿಕವಾಗಿ ಉಚ್ಚಾರಣೆ ಮಾಡುವುದನ್ನು ಓದುವಿಕೆ ಎನ್ನುತ್ತೇವೆ. ಸೂಕ್ಷ್ಮಾರ್ಥದಲ್ಲಿ ಲಿಪಿಯನ್ನು ಅಥವಾ ಮುದ್ರಿತ ವಿಷಯವನ್ನು ಕಣ್ಣಿನಿಂದ ನೋಡಿ ಅದಕ್ಕೆ ಮನಸ್ಸಿನಲ್ಲಿ ಅರ್ಥ ರೂಪಿಸಿಕೊಂಡು, ಅರ್ಥಕ್ಕನುಗುಣವಾಗಿ

ಧ್ವನಿಯನ್ನು ಸೇರಿಸಿ, ನಿಯಮಿತವಾಗಿ ಉಚ್ಚಾರ ಮಾಡುವುದನ್ನು ಓದುಗಾರಿಕೆ ಎನ್ನುತ್ತೇವೆ. ಸಾಮಾನ್ಯವಾಗಿ ಕೇಳಿಸಿಕೊಳ್ಳುವಿಕೆ ಮತ್ತು ಮಾತುಗಾರಿಕೆಯ ಮೂಲಕ ನಂತರದಲ್ಲಿ ಓದುವ ಪ್ರಕ್ರಿಯೆಗೆ ತೊಡಗಿಸಿಕೊಳ್ಳಲಾಗುತ್ತದೆ. ಆದರೆ ದಕ್ಷಿಣ ಕನ್ನಡ ಪರಿಸರದ ಬಹುತೇಕ ಕನ್ನಡೇತರ ಮನೆಮಾತುಳ್ಳ ಮಕ್ಕಳು ಕನ್ನಡದಲ್ಲಿ ಮಾತನಾಡುವುದು ಮತ್ತು ಕೇಳುವ ಕ್ರಕ್ರಿಯೆಗಳನ್ನು ರೂಢಿಸಿಕೊಳ್ಳುವ ಮೊದಲೇ ನೇರವಾಗಿ ಓದುಗಾರಿಕೆಯನ್ನು ಔಪಚಾರಿಕವಾಗಿ ಕಲಿಯಲಾರಂಭಿಸುತ್ತಾರೆ. ಅಲ್ಲಿ ಸಹಜವಾಗಿಯೇ ಅನೇಕ ಸವಾಲುಗಳನ್ನು ಅವರು ಎದುರಿಸುತ್ತಾರೆ. ಈ ಮೂಲಕ ಕಲಿಕೆಯಲ್ಲಿ ಹಿಂದುಳಿಯುತ್ತಾರೆ. ಪ್ರಸ್ತುತ ಅಧ್ಯಯನದಲ್ಲಿ ಓದುವಿಕೆಯ ಸಮಸ್ಯೆಗಳನ್ನು ಕುರಿತು ಮುಂದೆ ವಿಸ್ತೃತವಾಗಿ ಚರ್ಚಿಸಲಾಗಿದೆ.

ದಕ್ಷಿಣ ಕನ್ನಡ ಪರಿಸರದ ಓದಿನ ಸಮಸ್ಯೆಗಳ ಸ್ವರೂಪ ಎಂಬ ಅಧ್ಯಾಯದಲ್ಲಿ ಬ್ಯಾರಿ ಮನೆ ಮಾತುಳ್ಳ ಮಕ್ಕಳು ಕನ್ನಡ ಓದುವಾಗ ಪದಾದಿ ಪದಮಧ್ಯ ಹಾಗೂ ಪದಾಂತ್ಯ ಪರಿಸರದಲ್ಲಿ ಯಾವ ತರಹದ ವ್ಯತ್ಯಾಸಗಳನ್ನು ಮಾಡುತ್ತಾರೆ ಎಂಬುದನ್ನು ಕುರಿತು ವಿಶ್ಲೇಷಿಸಲಾಗಿದೆ. ಮಕ್ಕಳು ಕನ್ನಡ ಓದುವಾಗ ಮಾಡುವ ವ್ಯತ್ಯಾಸಗಳಿಗೆ ಕಾರಣಗಳು ಹಾಗೂ ಅವುಗಳನ್ನು ಸರಿಪಡಿಸಲು ತೆಗೆದುಕೊಳ್ಳಬಹುದಾದ ಕ್ರಮದ ಬಗ್ಗೆ ಚರ್ಚಿಸಲಾಗಿದೆ.

ಬ್ಯಾರಿ ನುಡಿಯು ಮನೆ ಮಾತಾಗಿರುವ ಮಕ್ಕಳು ಕನ್ನಡವನ್ನು ಓದುವಾಗ ಯಾವ ತರಹದ ಸಮಸ್ಯೆಗಳನ್ನು ಎದುರಿಸುತ್ತಾರೆ ಅಥವಾ ಯಾವ ತರಹದ ವ್ಯತ್ಯಾಸಗಳನ್ನು ಮಾಡುತ್ತಾರೆ ಎಂಬುದನ್ನು ಶೋಧಿಸಲು ಮೊದಲನೆಯದಾಗಿ ೫,೬,೭ನೆಯ ತರಗತಿಯ ಪಠ್ಯ ಪುಸ್ತಕದಲ್ಲಿನ ಅಕಾರಾದಿಯಾಗಿ ಪದಗಳ ಪಟ್ಟಿಯನ್ನು ತಯಾರಿಸಿ, ಅಧ್ಯಯನ ಕೈಗೊಂಡು, ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

ಅಲ್ಲದೆ ಆಯಾ ತರಗತಿಯ ಪಠ್ಯಪುಸ್ತಗಳಲ್ಲಿರುವ ಪಾಠಗಳನ್ನು ಓದಿಸಿ ಧ್ವನಿಮುದ್ರಿತ ಯಂತ್ರದಲ್ಲಿ ಮುದ್ರಣ ಮಾಡಿಸಿಕೊಳ್ಳಲಾಗಿದೆ. ಮಕ್ಕಳಿಗೆ 'ಓದುವೆ ನಾನು' ಕಾರ್ಡುಗಳನ್ನು ಕೊಟ್ಟು ಓದಿಸಿ ಧ್ವನಿಮುದ್ರಿತ ಯಂತ್ರದಲ್ಲಿ ಮುದ್ರಣ ಮಾಡಿಕೊಳ್ಳಲಾಗಿದೆ. ನಂತರ ಮುದ್ರಿತ ಧ್ವನಿಯನ್ನು ಕೇಳಿ ಮಕ್ಕಳು ಯಾವ ತೆರನಾಗಿ ವ್ಯತ್ಯಾಸವನ್ನು ಮಾಡಿ ಓದುತ್ತಾರೆ ಎಂಬುದನ್ನು ತಿಳಿದು ಅದಕ್ಕೆ ಕಾರಣಗಳನ್ನು ಹುಡಕಿ ವಿಶ್ಲೇಷಿಸಲಾಗಿದೆ.

ಸಹಜವಾಗಿ ದ್ವಿಭಾಷಿಕ ಮತ್ತು ಬಹುಭಾಷಿಕ ಪರಿಸರದ ಮಕ್ಕಳಲ್ಲಿ ಓದುವ ಸಮಸ್ಯೆಗಳು ಕಂಡುಬರುವುದು ಸಹಜ; ಏಕೆಂದರೆ ನಮ್ಮ ಯೋಚನೆಗಳು ನಮ್ಮ ತಾಯ್ನುಡಿಯಲ್ಲಿ ನಡೆಯುವುದರಿಂದಾಗಿ ಲಿಖಿತ ಸಂಜ್ಞೆಯನ್ನು ನಾವು ಸಾಮಾನ್ಯವಾಗಿ ಬಳಸುವ ಭಾಷೆಯೊಂದಿಗೆ ಹೋಲಿಸಲು ಯತ್ನಿಸುತ್ತೇವೆ. ಇದು ಆಡುಮಾತು ಮತ್ತು ಬರಹದ ಮಾತಿನ ನಡುವಿನ ಗೊಂದಲದಿಂದಲೂ ಆಗಬಹುದು.

ಜಾನ್ ಡ್ಯೂಯಿಯವರ ಪ್ರಕಾರ ಮಗುವಿನ ಎಂಟನೆಯ ವಯಸ್ಸಿನಲ್ಲಿ ಓದು ಆರಂಭಗೊಳ್ಳಬೇಕು.[೭] ಆದರೆ ಮ್ಯಾಡಂ ಮಾಂಟೆಸೋರಿಯವರ ಅಭಿಪ್ರಾಯದಂತೆ 3–4ನೆ ವಯಸ್ಸಿನಲ್ಲಿಯೇ ಮಕ್ಕಳು ಓದು ಕಲಿಯಬಲ್ಲರು[೮] ಇಂಗ್ಲೆಂಡಿನಲ್ಲಿ ಮಕ್ಕಳಿಗೆ ಆರನೆಯ ವಯಸ್ಸಿಗೆ ಓದು ಕಲಿಸಲಾರಂಭಿಸುತ್ತಾರೆ. ಇಲ್ಲಿ ವಯಸ್ಸನ್ನು ಗಣನೆಗೆ

ತೆಗೆದುಕೊಳ್ಳುವುದಕ್ಕಿಂತಲೂ ಮುಖ್ಯವಾಗಿ ಮಗುವಿನ ಮಾನಸಿಕ- ಬೌದ್ಧಿಕ ವಯಸ್ಸು ಮತ್ತು ಬುದ್ಧಿ ಸೂಚ್ಯಂಕಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಪ್ರಸ್ತುತ ಅಧ್ಯಾಯದಲ್ಲಿ ದಕ್ಷಿಣ ಕನ್ನಡ ಪರಿಸರದಲ್ಲಿರುವ ಬ್ಯಾರಿ ಮನೆಮಾತುಳ್ಳ ಮಕ್ಕಳು ಓದುವಾಗ ಕಂಡುಬರುವ ಪ್ರಮುಖ ಸಮಸ್ಯೆಗಳನ್ನು ಈ ಕೆಳಗಿನಂತೆ ವಿಂಗಡನೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

೫.೧. ಸ್ವರಗಳನ್ನು ಓದುವ ಸಂದರ್ಭ ಉಂಟಾಗುವ ವ್ಯತ್ಯಾಸಗಳು/ ತಪ್ಪುಗಳು

೫.೨ ವ್ಯಂಜಗಳನ್ನು ಓದುವ ಸಂದರ್ಭ ಉಂಟಾಗುವ ವ್ಯತ್ಯಾಸಗಳು/ ತಪ್ಪುಗಳು

೫.೩ ಗುಣಿತಾಕ್ಷರಗಳನ್ನು ಓದುವ ಸಂದರ್ಭ ಉಂಟಾಗುವ ವ್ಯತ್ಯಾಸಗಳು/ ತಪ್ಪುಗಳು

೫.೪ ಒತ್ತಕ್ಷರಗಳನ್ನು ಓದುವ ಸಂದರ್ಭ ಉಂಟಾಗುವ ವ್ಯತ್ಯಾಸಗಳು/ ತಪ್ಪುಗಳು

೫.೧ ಸ್ವರಗಳನ್ನು ಓದುವ ಸಂದರ್ಭ ಉಂಟಾಗುವ ವ್ಯತ್ಯಾಸಗಳು/ ತಪ್ಪುಗಳು

ಮಕ್ಕಳು ಸ್ವರಗಳನ್ನು ಓದುವಾಗ ಪದಾದಿ, ಪದಮಧ್ಯ ಹಾಗೂ ಪದಾಂತ್ಯದಲ್ಲಿ ಹಲವು ತೆರನಾದ ಸಮಸ್ಯೆಗಳನ್ನು ಮಾಡುತ್ತಾರೆ. ಅಂತಹ ಸಮಸ್ಯೆಗಳಲ್ಲಿ ಪ್ರಮುಖವಾಗಿ ದೀರ್ಘಸ್ವರಗಳಿಗೆ ಹ್ರಸ್ವಸ್ವರಗಳನ್ನು ಬಳಕೆ ಮಾಡಿ ಓದುವುದು ಕಂಡುಬರುತ್ತದೆ. ಕೆಲ ಸ್ವರಗಳಿಗೆ ವ್ಯಂಜ್ಯಗಳನ್ನು ಬಳಕೆ ಮಾಡಿ ಓದುವುದು, ಅನುಸ್ವರ, ವಿಸರ್ಗಗಳನ್ನು ಲೋಪ ಮಾಡುವುದು ಹಾಗೂ ಸಂಧ್ಯಕ್ಷರಗಳ ಬಳಕೆಯಲ್ಲಿಯೂ ಹಲವಾರು ಸಮಸ್ಯೆಗಳನ್ನು ಮಾಡುತ್ತವೆ. ಅಂತಹ ಸಮಸ್ಯೆಗಳನ್ನು ಕ್ರಮವಾಗಿ ಈ ಕೆಳಗಿನಮತೆ ಗುರುತಿಸಲಾಗಿದೆ.

- **ದೀರ್ಘ ಸ್ವರಗಳಿಗೆ ಹ್ರಸ್ವಸ್ವರಗಳನ್ನು ಬಳಕೆಮಾಡಿ ಓದುತ್ತಾರೆ.**

ಮಕ್ಕಳು ಪದಾದಿ ಪದಮಧ್ಯ ಹಾಗೂ ಪದಾಂತ್ಯ ಪರಿಸರದಲ್ಲಿ ಬರುವ ದೀರ್ಘ ಸ್ವರಗಳಿಗೆ ಅಧ್ಯಯನ ವ್ಯಾಪ್ತಿಯಲ್ಲಿ ಬರುವ ಹೆಚ್ಚಿನ ಮಕ್ಕಳು ಹ್ರಸ್ವಸ್ವರಗಳನ್ನು ಬಳಕೆ ಮಾಡಿ ಓದುತ್ತಾರೆ. ಅಂತಹ ಕೆಲವು ವ್ಯತ್ಯಾಸಗಳನ್ನು ಈ ಕೆಳನಂತೆ ಗುರುತಿಸಬಹುದು ಉದಾಹರಣೆಗೆ.

- **ಪದಾದಿ ಪರಿಸರ :**

	ಬರಹರೂಪ	**ಮಕ್ಕಳು ಉಚ್ಚರಿಸುವ ರೂಪ**
ಆ>ಅ	ಆಳ	ಅಳ

	ಆತ	ಅತ
	ಆನೆ	ಅನೆ
	ಆಕಾಶ	ಅಗಸ/ ಅಕಸ
	ಅಚಿಚೆ	ಆಚೀಚೆ
	ಆಗಾಗ	ಅಗಗ
	ಆಕಡೆ	ಅಕಡೆ
	ಅವನು	ಆವನು
	ಆಗಮನ	ಅಗಮನ
	ಆರನೆಯ	ಅರನೆಯ
	ಆಪಾದನೆ	ಅಪದನೆ
ಈ>ಇ	ಈಶ	ಇಶ
	ಈಗ	ಇಗ
	ಈಜು	ಇಜು
	ಈಗಲೆ	ಇಗಲೆ
	ಈಚಲ	ಇಚಲ
	ಈಡಾಡು	ಇಡಡು
ಉ>ಊ	ಊಟ	ಉಟ
	ಊರು	ಉರು
	ಊತ	ಉತ
	ಊನ	ಉನ
	ಊಳಿಗ	ಉಳಿಗ
	ಊರಜನ	ಉರಜನ

ಐ>ಎ	ಐಣಿ	ಎನಿ
	ಐತ	ಎತ
	ಐರಿ	ಎರಿ
	ಐಳು	ಎಲು
	ಐನು	ಎನು
	ಐರು	ಎರು
	ಐಕೆ	ಎಕೆ
	ಐರಿಸು	ಎರಿಸು
	ಐಳಿಗೆ	ಎಳಿಗೆ
	ಐಕದಳ	ಎಕದಳ
ಓ>ಒ	ಓಟ	ಒಟ
	ಓಜ	ಒಜ
	ಓಡು	ಒಡು
	ಓಲಗ	ಒಲಗ
	ಓರಣ	ಒರಣ
	ಓರಗೆ	ಒರಗೆ
	ಓದುವುದು	ಒದುವುದು
	ಓತಪ್ರೋತ	ಒತಪ್ರೊತ

	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
ಆ>ಅ	ಒತ್ತಾಯ	ಒತಯ

	ತಪಾಸಣೆ	ತಪಸನೆ
	ಫಲಹಾರ	ಪಲಹರ
	ದೇವಾಲಯ	ದೇವಲಯ
	ಅನುರೂಪ	ಅನುರುಪ
	ಅನುಸಾರ	ಅನುಸರ
ಈ>ಇ	ತೀರ	ತಿರ
	ಚೀಲ	ಚಿಲ
	ಮೀರಾ	ಮಿರ
	ಜೀವ	ಜಿವ
	ನೀರು	ನಿರು
	ಕೀಟ	ಕಿಟ
ಊ>ಉ	ಮೂರು	ಮುರು
	ಕೂಟ	ಕುಟ
	ಗೂಡು	ಗುಡು
	ನಿಗೂಢ	ನಿಗುಡ
	ಸಮೂಹ	ಸಮುಹ
ಏ>ಎ	ಕೇರಿ	ಕೆರಿ
	ಬೇಳೆ	ಬೆಳೆ
	ಕೇಡು	ಕೆಡು
	ತೇರು	ತೆರು
	ಮೇಕೆ	ಮೆಕೆ
	ಸೇಬು	ಸೆಬು

ಓ>ಒ	ಕೋತಿ	ಕೊತಿ
	ಗೋಲಿ	ಗೊಲಿ
	ತೋಟ	ತೊಟ
	ಕೋಗಿಲೆ	ಕೊಗಿಲೆ
	ಯೋಜನೆ	ಯೊಜನೆ
	ಭೋಜನ	ಬೊಜನ

- **ಪದಮಧ್ಯ ಪರಿಸರ ಮತ್ತು ಪದ್ಯಾಂತ ಪರಿಸರ**

	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
ಆ>ಅ	ತುಂಬಾ	ತುಬ
	ಮಾಲಾ	ಮಲ
	ಶಾಲಾ	ಶಲ
	ಜಟಕಾ	ಜಟಕ
ಈ>ಇ	ಫೀ	ಪಿ
	ಸೀತಾ	ಸಿತ
	ಮೀಟು	ಮಿಟು
ಊ>ಉ	ಹಾಗೂ	ಹಾಗು
	ಜಂಬೂ	ಜಬು
	ಎಂದೂ	ಎಂದು
	ಮೂಳೆ	ಮುಳೆ

ಶಾಲೆಗಳಲ್ಲಿ ಓದುವ ಸಂದರ್ಭದಲ್ಲಿ ಬ್ಯಾರಿ ಮನೆಮಾತುಳ್ಳ ಮಕ್ಕಳು ಪದಾದಿ, ಪದಮಧ್ಯ ಹಾಗೂ ಪದಾಂತ್ಯ ಪರಿಸರದಲ್ಲಿ ಬರುವ ದೀರ್ಘ ಸ್ವರಗಳಿಗೆ ಹ್ರಸ್ವಸ್ವರಗಳನ್ನು ಬಳಕೆ ಮಾಡಿ ಓದುವುದು ಕಂಡುಬರುತ್ತದೆ. ಈ ರೀತಿಯಾಗಿ ವ್ಯತ್ಯಾಸ ಮಾಡಿ ಓದಲು ಕಾರಣಗಳೆಂದರೆ,

- ಮಕ್ಕಳ ಆಡುಮಾತಿನಲ್ಲಿ ದೀರ್ಘಸ್ವರಗಳ ಬಳಕೆ ಕಡಿಮೆಯಾಗಿರುವುದು.
- ಸ್ವರಗಳಲ್ಲಿನ ಉಚ್ಚಾರಣೆಯಲ್ಲಿನ ಅಲ್ಪಧ್ವನಿ ಸಾಮತ್ಯೆಯನ್ನು ಗಮನಿಸದಿರುವುದು.
- ಸ್ವರಗಳಲ್ಲಿನ ರೂಪದಲ್ಲಿ ಸಾಮ್ಯತೆ ಇರುವುದು.
- ಶಿಕ್ಷಕನಲ್ಲಿನ ಉಚ್ಚಾರಣ ದೋಷ
- ವಿದ್ಯಾರ್ಥಿಗಳಲ್ಲಿನ ಆಲಿಸುವಿಕೆಯ ದೋಷ
- ಮಕ್ಕಳಿಗೆ ಹ್ರಸ್ವಸ್ವರ ಹಾಗೂ ದೀರ್ಘ ಸ್ವರಗಳ ಬಗ್ಗೆ ಸ್ಪಷ್ಟ ಪರಿಕಲ್ಪನೆ ಮೂಡಿಸದಿರುವುದು.
  ಇತ್ಯಾದಿ ಕಾರಣಗಳಿಂದ ಈ ತೆರನಾದ ವ್ಯತ್ಯಾಸ ಮಾಡಿ ಓದಿರಬಹುದು ಎನ್ನಲಾಗಿದೆ.
- ಪದಾದಿ ಪರಿಸರದಲ್ಲಿ ಹ್ರಸ್ವಸ್ವರ 'ಒ' ಧ್ವನಿಯ ಬದಲು ಹ್ರಸ್ವಸ್ವರ 'ಉ' ಧ್ವನಿಯನ್ನು ಓದುತ್ತಾರೆ. ಈ ರೀತಿಯ ಒಂದು ವ್ಯತ್ಯಾಸವನ್ನು ಉದಾರಹಣೆಗೆ

	ಬರಹರೂಪ	**ಮಕ್ಕಳು ಉಚ್ಚರಿಸುವ ರೂಪ**
ಒ>ಉ	ಮೊಲ	ಮುಲ
	ಮೋಡ	ಮೂಡ
	ನೊಣ	ನುನ
	ಮೊನ್ನೆ	ಮುನ್ನೆ
	ಮೊಸಳೆ	ಮುಸಳೆ
	ಗೊಣಗಿದ	ಗುಣಗಿದ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ಧ್ವನಿಗಳ ವ್ಯತ್ಯಾಸಕ್ಕೆ ಕಾರಣವನ್ನು ಈ ಕೆಳಗಿನಂತೆ ವಿಶ್ಲೇಷಿಬಹುದು. ದಕ್ಷಿಣ ಕನ್ನಡ ಪರಿಸರದ ವ್ಯವಹಾರಿಕ ಕನ್ನಡದಲ್ಲಿ ತುಳು ಭಾಷೆಯ ಪ್ರಭಾವ ಇರುವುದರಿಂದ ಮಕ್ಕಳು ಈ ರೀತಿಯ ವ್ಯತ್ಯಾಸ ಮಾಡಿ ಓದುತ್ತಾರೆ ಎಂದು ಗುರುತಿಸಲಾಗಿದೆ. ಇದೇ ಬಗೆಯ ಸಮಸ್ಯೆಯನ್ನು ಬರಹದ ಸಂದರ್ಭದಲ್ಲಿಯೂ ಗಮನಿಸಬಹುದು.

- **ಸ್ವರಗಳಿಗೆ ಬದಲಾಗಿ ವ್ಯಂಜನಗಳನ್ನು ಬಳಕೆ ಮಾಡಿ ಓದುತ್ತಾರೆ.**

ಪದಾದಿ ಪರಿಸರದಲ್ಲಿ 'ಆ,ಈ,ಋ' ಸ್ವರಗಳಿಗೆ ಬದಲಾಗಿ 'ಹಾ,ಹಿ,ರು' ವ್ಯಂಜನ ಧ್ವನಿಗಳನ್ನು ಬಳಕೆ ಮಾಡಿ ಓದುವುದು ಕಂಡುಬರುತ್ತದೆ.

	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
ಆ>ಹಾ	ಆಳು	ಹಾಳು
	ಆಟ	ಹಾಟ
	ಆತ್ಮ	ಹತ್ಮ
	ಆಲಿಸು	ಹಾಲಿಸು
	ಅಚರಿಸು	ಹಾಚರಿಸು
	ಆಟದ ಮೈದಾನ	ಹಾಟದ ಮೆಯ್‌ದನ
	ಆಲದ ಮರ	ಹಾಲದ ಮರ
ಈ>ಹಿ	ಈಟಿ	ಹಿಟಿ
	ಈಗ	ಹಿಗ
	ಈಶ್ವರ	ಹಿಶ್‌ವರ
	ಈಜು	ಹಿಜು
	ಈಡೇರು	ಹಿಡೇರು
ಋ>ರು	ಋಣ	ರುಣ
	ಋತು	ರುತು
	ಋಜು	ರುಜು
	ಋಜುವಾತು	ರುಜುವಾತ

ಮಕ್ಕಳ ವಲಯದಲ್ಲಿನ ಬಳಕೆಯ ಸಂದರ್ಭದಲ್ಲಿ ಅವರು ಸರಿ ತಪ್ಪುಗಳ ಕಡೆಗೆ ಹೆಚ್ಚು ಗಮನ ಕೊಡದೆ ಇರುವುದರಿಂದ ಮಕ್ಕಳು ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ಕೆಲವು ಸ್ವರಗಳಿಗೆ ವ್ಯಂಜನಗಳನ್ನು ಬಳಕೆ ಮಾಡಿ ಓದುತ್ತಾರೆ. ಈ ತೆರನಾದ ವ್ಯತ್ಯಾಸ ಮಾಡಿ

ಓದುವುದನ್ನು ತಪ್ಪು ಎನ್ನುವುದಕ್ಕಿಂತ ಅದು ಕನ್ನಡ ಭಾಷೆಯ ಸಹಜ ರೂಪವೆನ್ನಬಹುದು. ಏಕೆಂದರೆ ವಿಶೇಷ ವಲಯವಾದ ಶಿಕ್ಷಣ ಕ್ಷೇತ್ರವನ್ನು ಬಿಟ್ಟು ಉಳಿದ ಕಡೆಯಲ್ಲಿ ಇವುಗಳ ಬಳಕೆ ಕಡಿಮೆ. ಕನ್ನಡದ ಜಾಯಮಾನ, ಆಡು ನುಡಿಯ ಪ್ರಭಾವ, ಉಚ್ಚಾರಣೆಯ ರೀತಿ ನೀತಿಯಿಂದಾಗಿ ಅವುಗಳ ವಿಕಲ್ಪ ರೂಪಗಳನ್ನು ಬಳಕೆ ಮಾಡಿ ಓದುವುದು ಕಂಡುಬರುತ್ತದೆ. ಅಲ್ಲದೆ 'ಆ' ಸ್ವರಧ್ವನಿಗೆ ಬದಲಾಗಿ 'ಹಾ' ವ್ಯಂಜನವನ್ನು ಬಳಕೆ ಮಾಡಿ ಓದುವುದಕ್ಕೆ ಕಾರಣ ಈ ಎರಡು ಧ್ವನಿಗಳಲ್ಲಿನ ಉಚ್ಚಾರಣೆಯ ಭಿನ್ನತೆಯನ್ನು ಗಮನಿಸದಿರುವುದು ಆಗಿದೆ. ಇನ್ನು 'ಈ' 'ಋ' ಸ್ವರಗಳ ಬದಲಾಗಿ ವ್ಯಂಜನ ಧ್ವನಿ 'ಹಿ 'ರು'ಗಳನ್ನು ಬಳಕೆ ಮಾಡಿ ಓದುವುದನ್ನು ಗಮನಿಸಿದಾಗ ಈ ಧ್ವನಿಗಳಲ್ಲಿನ ಉಚ್ಚಾರಣಾ ಭಿನ್ನತೆಯನ್ನು ಗಮನಿಸದಿರುವುದು ಹಾಗೂ 'ಈ' 'ಋ' ಗಳ ಬಳಕೆ ಕನ್ನಡದಲ್ಲಿ ಕಡಿಮೆಯಿರುವುದರಿಂದ ಈ ತೆರನಾಗಿ ವ್ಯತ್ಯಾಸ ಮಾಡಿ ಓದಿರಬಹುದು ಎನ್ನಲಾಗಿದೆ.

- **ಅನುಸ್ವರ ಹಾಗೂ ವಿಸರ್ಗಗಳನ್ನು ಲೋಪ ಮಾಡಿ ಓದುತ್ತಾರೆ**

ಪದಮಧ್ಯ ಪರಿಸರದಲ್ಲಿ ಬರುವ ಅನುಸ್ವರ (ಂ) ಹಾಗೂ ವಿಸರ್ಗ (ಃ)ಗಳನ್ನು ಲೋಪಮಾಡಿ ಓದುವುದು ಕಂಡುಬರುತ್ತದೆ. ಉದಾರಹಣೆಗೆ

	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
ಆ>ಹಾ	ಅಂಕ	ಅಕ
	ಅಂಗ	ಅಗ
	ಕಂಪನ	ಕಪನ
	ಮಂಚ	ಮಚ
	ಮಂದ	ಮದ
	ಬಂದ	ಬದ
	ಅಂತ	ಅತ
	ದುಃಖ	ದುಕ
	ಅಂತಃಪುರ	ಅತಪುರ
	ಅಂತಃಕಲಹ	ಅತಕಲಹ
	ಅಂತಃಕರಣ	ಅತಕರಣ

ಪದಮಧ್ಯ ಪರಿಸರದಲ್ಲಿನ ಅನುಸ್ವರ ಮತ್ತು ವಿಸರ್ಗಗಳನ್ನು ಲೋಪ ಮಾಡಿ ಓದುತ್ತಾರೆ. ಈ ರೀತಿಯ ವ್ಯತ್ಯಾಸ ಮಾಡಿ ಓದಲು ಅನುಸ್ವರ ಮತ್ತು ವಿಸರ್ಗಗಳ ಉಚ್ಚಾರಣೆಯ ಬಗ್ಗೆ. ಸ್ಪಷ್ಟವಾಗಿ ತಿಳಿಸದಿರುವುದು, ವಿಸರ್ಗದ ಬಳಕೆ ಕನ್ನಡದಲ್ಲಿ ಇಲ್ಲದಿರುವುದು. ಅನ್ಯ ಭಾಷಾ ಶಬ್ದಗಳ ಬಳಕೆಯಿಂದಾಗಿ ಈ ತೆರನಾಗಿ ವ್ಯತ್ಯಾಸ ಮಾಡಿ ಓದುವ ಸಾಧ್ಯತೆಗಳಿವೆ.

- **ಸಂಧ್ಯಕ್ಷರಗಳನ್ನು ಓದುವ ಸಂದರ್ಭ ಉಂಟಾಗುವ ವ್ಯತ್ಯಾಸಗಳು/ ಸಮಸ್ಯೆಗಳು**

ಸಂಧ್ಯಕ್ಷರಗಳಾದ 'ಐ' 'ಔ'ಗಳನ್ನು ಪದಾದಿ, ಪದಮಧ್ಯ ಹಾಗೂ ಪದಾಂತ್ಯ ಪರಿಸರಲ್ಲಿ 'ಐ' ಹಾಗೂ 'ಔ' ಧ್ವನಿಗಳಿಗೆ ಬದಲಿಗೆ ಕ್ರಮವಾಗಿ 'ಅಯ್' ಹಾಗೂ 'ಅವ್' ಬಳಕೆ ಮಾಡಿ ಓದುವುದು ಕಂಡುಬಂರುತ್ತದೆ. ಉದಾಹರಣೆ.

- **ಪದಾದಿ ಪರಿಸರ**

	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
ಆ>ಹಾ	ಐದು	ಅಯದು
	ಐಲು	ಅಯಲು
	ಐಡಿ	ಅಯಡಿ
	ಐಸಿರಿ	ಅಯಸಿರಿ
	ಐರಾವತ	ಅಯರವತ
ಔ>ಅವ್	ಔತಣ	ಆವತಣ
	ಔಡಲ	ಅವಡಲ
	ಔಷಧ	ಅವಶದ
	ಔಪಚಾರಿಕ	ಅವಪಚಾರಿಕ

- **ಪದಮಧ್ಯ ಪರಿಸರ**

	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಕೈದಿ	ಕಯದಿ
ಐ>ಯಿ	ಪೈಸೆ	ಪಯಿಸೆ
	ಪೈಲು	ಪಯಿಲು
	ಮೈದಾನ	ಮಯಿದಾನ
	ರೈಲು	ರಯಿಲು
ಔ>ಅವ್	ಮೈಲು	ಮಯಿಲು
	ಕೌತುಕ	ಕವತುಕ
	ಗೌಡ	ಗೌವಡ
	ಕೌಶಲ	ಕವಸಲ
	ಪೌರುಷ	ಪವರುಷ
	ಸೌರಭ	ಸವರಬ

• **ಪದ್ಯಾಂತ ಪರಿಸರ**

ಐ>ಅಯ್	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಮೈ	ಮಯ್
	ಪೈ	ಪಯ್
	ಕೈ	ಕಯ್
	ಬೈ	ಬಯ್

ಮೂಲತಃ ಬ್ಯಾರಿ ನುಡಿಯನ್ನು ಗಮನಿಸಿದಾಗ ಅಲ್ಲಿ ನಮಗೆ ಸಂಧ್ಯಕ್ಷರಗಳಾದ 'ಐ' ಮತ್ತು 'ಔ' ಇಲ್ಲದಿರುವುದು ಕಂಡುಬರುತ್ತದೆ. ಈ ಅಕ್ಷರಗಳನ್ನು ಮಕ್ಕಳು ಕನ್ನಡದ

ಸಂದರ್ಭದಲ್ಲಯೇ ಅಂದರೆ ಶಾಲಾ ಪರಿಸರದಲ್ಲಿ ಮಾತ್ರ ಕೇಳುವ, ಓದುವ, ಬರೆಯುವ ಸಾಧ್ಯತೆ ಹೆಚ್ಚು. ಸಂಧ್ಯಕ್ಷರಗಳಾದ 'ಐ' ಹಾಗೂ 'ಔ' ಗಳನ್ನು ಮಕ್ಕಳು ಪದಾದಿ, ಪದಮಧ್ಯ ಮತ್ತು ಪದ್ಯಾಂತ ಪರಿಸರದಲ್ಲಿ ಓದುವಾಗ ಹಲವು ತೆರನಾದ ಸಮಸ್ಯೆಗಳನ್ನು ಮಾಡುತ್ತಾರೆ. ಈ ತೆರನಾಗಿ ವ್ಯತ್ಯಾಸ ಮಾಡಿ ಓದುವುದನ್ನು ಆಡು ನುಡಿಯ ಪ್ರಭಾವ, ಉಚ್ಚಾರಣೆಯ ರೀತಿ ನೀತಿಯಿಂದಾಗಿ ಅವುಗಳ ವಿಕಲ್ಪ ರೂಪಗಳನ್ನು ಬಳಕೆ ಮಾಡಿ ಓದುವುದು ಕಂಡುಬರುತ್ತದೆ. ಅಲ್ಲದೆ ಸಂಧ್ಯಕ್ಷರಗಳ ಉಚ್ಚಾರಣೆ ಹಾಗೂ ಬರಹಕ್ಕೂ ಇರುವ ಭಿನ್ನತೆಯನ್ನು ಗಮನಿಸದೆ ಇರುವುದು, ಮತ್ತು ವಿಶೇಷವಾಗಿ ಮಕ್ಕಳ ಬಳಕೆಯ ವಲಯದ ಕನ್ನಡದಲ್ಲಿ ಸಂಧ್ಯಕ್ಷರಗಳ ಬಳಕೆ ಕಡಿಮೆ ಇರುವುದು / ಇಲ್ಲದಿರುವುದು, ಶಿಕ್ಷಕರ ಉಚ್ಚಾರಣೆಯಲ್ಲಿನ ದೋಷ, ವಿದ್ಯಾರ್ಥಿಗಳ ಆಲಿಸುವಿಕೆಯಲ್ಲಿನ ದೋಷ, ಪರಭಾಷೆಯ ಪ್ರಭಾವ ಇತ್ಯಾದಿ ಕಾರಣಗಳಿಂದ ಈ ತೆರನಾಗಿ ವ್ಯತ್ಯಾಸ ಮಾಡಿ ಓದುವ ಸಾಧ್ಯತೆ ಇದೆ.

೫.೨ ವ್ಯಂಜನಳನ್ನು ಓದುವ ಸಂದರ್ಭ ಉಂಟಾಗುವ ವ್ಯತ್ಯಾಸಗಳು/ ಸಮಸ್ಯೆಗಳು

ಪದಾದಿ ಹಾಗೂ ಪದಮಧ್ಯ ಪರಿಸರದಲ್ಲಿ ವ್ಯಂಜನಗಳನ್ನು ಓದುವಾಗ ಮಹಾಪ್ರಾಣಕ್ಕೆ ಅಲ್ಪಪ್ರಾಣ, ಘೋಷತ್ವಕ್ಕೆ ಅಘೋಷ, ಅಘೋಷತ್ವಕ್ಕೆ ಘೋಷತ್ವ ಧ್ವನಿಗಳ ಬಳಕೆ ಮಾಡುವುದು. ಅನುನಾಸಿಕಗಳು, ಊಷ್ಮ ಧ್ವನಿಗಳು, ಪಾರ್ಶ್ವಿಕ ಧ್ವನಿಗಳ ಬಳಕೆಯಲ್ಲಿ ಹಾಗೂ ಅರ್ಧ ಸ್ವರಗಳ ಬಳಕೆಯಲ್ಲಿ ಹಲವು ರೀತಿಯ ವ್ಯತ್ಯಾಸಗಳನ್ನು ಮಾಡಿ ಓದುವುದು ಕಂಡುಬರುತ್ತದೆ. ಅವುಗಳನ್ನು ಈ ಕೆಳಗಿನಂತೆ ನೋಡಬಹುದು.

- **ಮಹಾಪ್ರಾಣಕ್ಕೆ ಅಲ್ಪಪ್ರಾಣ ಧ್ವನಿಗಳನ್ನು ಬಳಕೆ ಮಾಡಿ ಓದುವುದು.**

ಪದಾದಿ, ಪದಮಧ್ಯ ಹಾಗೂ ಪದಾಂತ್ಯ ಪರಿಸರದಲ್ಲಿ ಮಹಾಪ್ರಾಣಕ್ಕೆ ಬದಲಾಗಿ ಅಲ್ಪಪ್ರಾಣ ಧ್ವನಿಗಳನ್ನು ಬಳಕೆ ಮಾಡಿ ಓದುವುದು ಕಂಡುಬರುತ್ತದೆ. ಈ ತೆರನಾದ ವ್ಯತ್ಯಾಸವನ್ನು ಎಲ್ಲಾ ತರಗತಿಯ ಕೆಲವು ಮಕ್ಕಳಲ್ಲಿ ಕಾಣಬಹುದು. ಉದಾಹರಣೆಗೆ

- **ಪದಾದಿ ಪರಿಸರ**

	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
ಖ>ಕ		
	ಖಂಡ	ಕಂಡ
	ಖಾದಿ	ಕಾದಿ
	ಖಣ	ಕನ

	ಖ್ಯಾತಿ	ಕ್ಯತಿ
	ಖಾರಿ	ಕಾರಿ
	ಖಂಡ	ಕಡ
	ಖಗ	ಕಗ
	ಖನಿಜ	ಕನಿಜ
	ಖಯಾಲಿ	ಕಯಾಲಿ
	ಖುಲಾಸೆ	ಕುಲಾಸೆ
	ಖಚಿತ	ಕಚಿತ
ಘ>ಗ	ಘಟ	ಗಟ
	ಘಾಸಿ	ಗಸಿ
	ಘನ	ಗನ
	ಘಟ್ಟ	ಗಟ್ಟ
	ಘ್ರಾಣ	ಗರಣ
	ಘಂಟೆ	ಗಟೆ
	ಘೋಷಣೆ	ಗೊಸಣೆ
	ಘಾತುಕ	ಗಾತುಕ
	ಘಟಕ	ಗಟಕ
	ಘನತೆ	ಗನತೆ
	ಘೇಂಡಾಮೃಗ	ಗೆಂಡಮೃಗ
	ಘಮಘಮ	ಗಮಗಮ
ಛ>ಚ	ಛಲ	ಚಲ

	ಛಾಪ	ಜಾಪ
	ಛಗ	ಚಗ
	ಛೇದ	ಚೆದ
	ಛಿದ್ರ	ಚಿದ್ʼರ
	ಛಂದಸ್ಸು	ಚಂದಸು
	ಛೇದನ	ಚೆದನ
	ಛೇಡಿಸು	ಚೆಡಿಸು
	ಛತ್ರಪತಿ	ಚತ್ʼರಪತಿ
	ಛಲಗಾರ	ಚಲಗಾರ
	ಛೀಮಾರಿ	ಚಿಮರಿ
	ಛಾಪಾಕಾಗದ	ಚಾಪಕಗದ
ಝ>ಜ	ಝರಿ	ಜರಿ
	ಝಂಡಾ	ಜಂಡಾ
	ಝಳಪು	ಜಳಪು
	ಝೇಂಕಾರ	ಜೆಕಾರ
	ಝಣಝಣ	ಜನಜನ
ಠ>ಟ	ಠಕ್ಕ	ಟಕ್ಕ
	ಠಾಣೆ	ಟಾನೆ
	ಠೆಸ್ಸೆ	ಟೆಸೆ
	ಠೀವಿ	ಓವಿ
	ಠೇವಣೆ	ಟೆವನಿ
	ಠಿಕಾಣಿ	ಟಿಕನ್ಇ

	ಠೇಂಕಾರ	ಟೇಂಕಾರ
ಢ>ಡ	ಢಗೆ	ಡಗೆ
	ಢಾಳ	ಡಳ
	ಢಕ್ಕೆ	ಡಕೆ
	ಢಾಲು	ಡಾಲು
	ಢಣಢಣ	ಡನಡನ
ಥ>ತ	ಥೈಲಿ	ತೈಲಿ
	ಥಳಿಸಿ	ತಳಿಸು
	ಥಳಕು	ತಳಕು
	ಥಳಥಳ	ತಲತಲ
ಧ>ದ	ಧನ	ದನ
	ಧರೆ	ದರೆ
	ಧನ್ಯ	ದನ್ಯ
	ಧಮನಿ	ದಮನಿ
	ಧವಳ	ದವಲ
	ಧನಿಕ	ದನಿಕ
	ಧಮಕ	ದಮಕ
	ಧರಣಿ	ದರನಿ
	ಧಗಧಗ	ದಗದಗ
ಫ>ಪ	ಫಲ	ಪಲ
	ಫಣ	ಪನ
	ಫಣಿ	ಪನಿ

	ಫಡ	ಪಡ
	ಫಲಕ	ಪಲಕ
	ಫಸಲು	ಪಸರು
	ಫಲಹಾರ	ಪಲಹರ
	ಫಲಶ್ರುತಿ	ಪಲಸ್ರುತಿ
ಭ>ಬ	ಭಯ	ಬಯ
	ಭರತ	ಬರತ
	ಭವನ	ಬವನ
	ಭಾವನೆ	ಬಾವಾನೆ
	ಭಜನೆ	ಬಜನೆ
	ಭಾವಿಸು	ಬಾವಿಸು

- **ಪದಮಧ್ಯ ಪರಿಸರ**

	ಬರಹರೂಪ	**ಮಕ್ಕಳು ಉಚ್ಚರಿಸುವ ರೂಪ**
ಖ>ಕ	ದಾಖಲೆ	ದಾಕಲೆ
	ದವಾಖಾನೆ	ದವಕಾನೆ
	ಅಖಂಡ	ಅಕಂಡ
	ಮುಖ	ಮುಕ
ಘ>ಗ	ಲಘು	ಲಗು
	ಮೇಘ	ಮೆಗ
	ಶೀಘ್ರ	ಸೀಗರ
	ಸಂಘಜೀವಿ	ಸಂಗಜೀವಿ

	ಸಂಘಟನೆ	ಸಂಗಟನೆ
ಛ>ಚ	ಮೂರ್ಛೆ	ಮೂರ್ಚೆ
	ವಾಂಛೆ	ವಾಚೆ
ಠ>ಟ	ಕಠೋರ	ಕಟೋರ
	ಪಾಠ	ಪಾಟ
	ಪೀಠಿಕೆ	ಪಿಟಿಕೆ
	ಕಂಠಾಭರಣ	ಕಂಟಬರನ
	ಹಠಮಾರಿ	ಹಟಮಾರಿ
ಥ>ತ	ಕಥನ	ಕತನ
	ರಥ	ರತ
	ಪಥ	ಪತ
ಧ>ದ	ಅಧಿಕಾರ	ಅದಿಕಾರ
	ಅಧಿಕ	ಅದಿಕ
	ಆಧುನಿಕ	ಅದುನಿಕ
	ಅಧಮ	ಅದಮ
	ಅಧಿನಿಯಮ	ಅದಿನಿಯಮ
	ಅಧಿವೇಶನ	ಅದಿವೆಸನ
ಫ>ಪ	ಸಫಲ	ಸಪಲ
	ಪಲಾಫಲ	ಪಲಪಲ
	ಫಳಪಳ	ಪಳಪಳ
	ರೇಫೆ	ರೆಪೆ

ಭ>ಬ	ಅಭಯ	ಅಬಯ
	ವಿಭಾಗ	ವಿಬಾಗ
	ಸಂಭವ	ಸಬವ
	ಅನುಭವ	ಅನುಭವ
	ಅಬಿನಂದನೆ	ಅನಿನಂದನೆ
	ಗಂಭೀರ	ಗಂಬಿರ

ಮಕ್ಕಳು ಮಹಾಪ್ರಾಣಕ್ಕೆ ಬದಲಾಗಿ ಅಲ್ಪಪ್ರಾಣ ಧ್ವನಿಗಳನ್ನು ಬಳಕೆ ಮಾಡಿ ಓದಲು ಕಾರಣಗಳೆಂದರೆ

- ಕೇಶಿರಾಜನೆ ಹೇಳಿರುವ ಪ್ರಕಾರ ಕನ್ನಡದಲ್ಲಿ ಮಹಾಪ್ರಾಣ ಧ್ವನಿಗಳ ಬಳಕೆ ಇಲ್ಲದಿರುವುದು ಅಥವಾ ಕಡಿಮೆ ಇರುವುದು.
- ಆಡು ಮಾತಿನಲ್ಲಿ ಮಹಾಪ್ರಾಣ ಬಳಕೆ ಇಲ್ಲದಿರುವುದು.
- ಮಹಾಪ್ರಾಣ ಮತ್ತು ಅಲ್ಪಪ್ರಾಣ ಧ್ವನಿಗಳ ನಡುವೆ ಇರುವ ಅಲ್ಪಧ್ವನಿ ಸಾಮ್ಯತೆಯನ್ನು ಗಮನಿಸದಿರುವುದು.
- ಕೆಲ ಧ್ವನಿಗಳಲ್ಲಿನ ರೂಪ ಸಾಮ್ಯತೆ
- ಈ ಧ್ವನಿಗಳ ಉಚ್ಚಾರಣೆಯ ಬಗ್ಗೆ ಶಿಕ್ಷಕರು ಮಕ್ಕಳಿಗೆ ಪರಿಕಲ್ಪನೆ ಮೂಡಿಸದಿರುವುದು.
- ಉಚ್ಚಾರಣೆಯ ದೋಷ
- ಆಲಿಸುವಿಕೆಯಲ್ಲಿನ ದೋಷ
- ಅನ್ಯ ಭಾಷೆಯ ಪ್ರಭಾವ ಇತ್ಯಾದಿ ಕಾರಣಗಳಿಂದಾಗಿ ಈ ತೆರನಾದ ವ್ಯತ್ಯಾಸ ಮಾಡಿ ಓದುತ್ತಾರೆ.

- **ಅನುನಾಸಿಕ ಧ್ವನಿಗಳನ್ನು ಓದುವಾಗ ಉಂಟಾಗುವ ವ್ಯತ್ಯಾಸಗಳು/ ಸಮಸ್ಯೆಗಳು**

ಅನುನಾಸಿಕ ಧ್ವನಿಗಳನ್ನು ಮುಖ್ಯವಾಗಿ ಪದಮಧ್ಯದಲ್ಲಿ ಮೂರ್ಧನ್ಯ ಅನುನಾಸಿಕ 'ಣ' ಕಾರಕ್ಕೆ ಬದಲಾಗಿ ದಂತ್ಯ ಅನುನಾಸಿಕ 'ನ' ಧ್ವನಿಗಳನ್ನು ಓದುತ್ತಾರೆ.

ಪದಮಧ್ಯ ಪರಿಸರ

	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
ಣ>ನ	ಹಣ	ಹನ
	ದೋಣಿ	ದೋನಿ
	ಗಣಿ	ಗನಿ
	ಪಟ್ಟಣ	ಪಟನ
	ಗಣತಿ	ಗನತಿ
	ಚರಣ	ಚರನ
	ತಪಾಸಣೆ	ತಪಸನೆ
	ಬಣಬಣ	ಬನಬನ
	ಢಣಢಣ	ಡನಡನ

ಮಕ್ಕಳು ಅನುನಾಸಿಕ ಧ್ವನಿಗಳನ್ನು ವ್ಯತ್ಯಾಸ ಮಾಡಿ ಓದಲು ಕಾರಣಗಳೆಂದರೆ ಮುಖ್ಯವಾಗಿ ಬ್ಯಾರಿ ನುಡಿಯಲ್ಲಿ 'ಣ'ಕಾರ ಇಲ್ಲ. ಆದರೆ ಮೂರ್ದನ್ಯ 'ಟ', 'ಡ'ಗಳ ಹಿಂದೆ ಬರುವ 'ನ'ಕಾರದ ಉಪಧ್ವನಿಯಾಗಿ ಬರುತ್ತದೆ.

- ಅನುನಾಸಿಕ ಧ್ವನಿಗಳ ಉಚ್ಚಾರಣೆಯಲ್ಲಿನ ಧ್ವನಿ ಸಾಮ್ಯತೆಯನ್ನು ಗುರುತಿಸಲು ವಿಫಲರಾಗುವುದು.
- ಅನುಸಾಸಿಕ ಧ್ವನಿಗಳ ಪರಿಕಲ್ಪನೆ ಸ್ಪಷ್ಟವಾಗಿ ಮೂಡಿಸದಿರುವುದು
- ಆಡುನುಡಿ ಮತ್ತು ಶಿಷ್ಟನುಡಿಗಳ ಅಂತರ ಜಾಸ್ತಿ ಇರುವುದು.
- ಮನೆ ಮಾತು – ಶಾಲೆ ಮಾತುಗಳ ನಡುವಿನ ವ್ಯತ್ಯಾಸ.
- ಕೆಲವು ಮಕ್ಕಳಲ್ಲಿ ವೈಯಕ್ತಿಕ ಸಮಸ್ಯೆಯಾಗಿ ನಾಸಿಕ ದೋಷ ಹಾಗೂ ನಾಲಿಗೆ ಹೊರಳದೆ ಇರುವುದು

ಇತ್ಯಾದಿ ಕಾರಣಗಳಿಂದಾಗಿ ಈ ತೆರನಾದ ವ್ಯತ್ಯಾಸ ಮಾಡಿ ಓದುವುದು ಕಂಡುಬಂದಿರುತ್ತದೆ.

- **ಪಾರ್ಶ್ವಿಕ ಧ್ವನಿಗಳಲ್ಲಿನ ವ್ಯತ್ಯಾಸಗಳು**

ಪದಮಧ್ಯ ಪರಿಸರದಲ್ಲಿ ಮೂರ್ಧನ್ಯ ಪಾರ್ಶ್ವಿಕ ವ್ಯಂಜನ 'ಳ' ಧ್ವನಿಗೆ ಬದಲಾಗಿ ದಂತ್ಯ ಪಾರ್ಶ್ವಿಕ ವ್ಯಂಜನ 'ಲ' ಧ್ವನಿಯನ್ನು ಓದುತ್ತಾರೆ. ಈ ತೆರನಾದ ವ್ಯತ್ಯಾಸವನ್ನು ಎಲ್ಲಾ ತರಗತಿಯ ಹೆಚ್ಚಿನ ಮಕ್ಕಳಲ್ಲಿ ಮಕ್ಕಳಲ್ಲಿ ಕಾಣಬಹುದು. ಜೊತೆಗೆ ದಕ್ಷಿಣ ಕನ್ನಡ ಪರಿಸರದ ತುಳು ಮನೆಮಾತುಳ್ಳ ಮಕ್ಕಳೂ ಕೂಡ ಹೆಚ್ಚಿನ ಸಂದರ್ಭಗಳಲ್ಲಿ 'ಳ'ಕಾರದ ಬದಲಿಗೆ 'ಲ'ಕಾರವನ್ನು ಪ್ರಯೋಗಿಸುತ್ತಾರೆ. ಉದಾಹರಣೆಗೆ

- **ಪದಮಧ್ಯ ಪರಿಸರ**

ಉದಾ	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
ಳ>ಲ	ಕಳೆ	ಕಲೆ
	ಮಳೆ	ಮಲೆ
	ತುಳು	ತುಲು
	ನಳ್ಳಿ	ನಲ್ಲಿ
	ಗೋಳು	ಗೊಲು
	ಕಾಳು	ಕಾಲು
	ಅವಳು	ಅವಲು
	ಸುಳಾದಿ	ಸೂಲಾದಿ
	ಕೊಳವೆ	ಕೊಲವಿ
	ಕಟ್ಟಳೆ	ಕಟಲೆ
	ಬೆಳೆಸು	ಬೆಲೆಸು
	ಮರಳು	ಮರಲು
	ಬೆಳ್ಳುಳ್ಳಿ	ಬೆಲ್ಲುಲಿ
	ಬೆಳಗು	ಬೆಲಗು
	ಈರುಳ್ಳಿ	ಈರುಲ್ಲಿ

ಕಂಬಳ	ಕಂಬಲ
ಬಂದಳು/ ಹೋದಳು	ಬಂದಲು/ ಹೋದಲು
ಬಂಡವಾಳ	ಬಂಡವಲ

ಮಕ್ಕಳು ಪಾರ್ಶ್ವಿಕ ಧ್ವನಿಗಳನ್ನು ವ್ಯತ್ಯಾಸ ಮಾಡಿ ಓದಲು ಕಾರಣವೆಂದರೆ ಪಾರ್ಶ್ವಿಕ ಧ್ವನಿಗಳಲ್ಲಿನ ಉಚ್ಚಾರಣೆಯ ಭಿನ್ನತೆಯನ್ನು ಗಮನಿಸದೆ ಈ ತೆರನಾಗಿ ವ್ಯತ್ಯಾಸ ಮಾಡಿ ಓದುವುದು ಕಂಡುಬಂದಿದೆ. ಇದೇರೀತಿಯ ಭಿನ್ನತೆಯನ್ನು ತುಳು ಮನೆಮಾತುಳ್ಳ ಮಕ್ಕಳಲ್ಲಿಯೂ ಹೆಚ್ಚಿನ ಪ್ರಮಾಣದಲ್ಲಿ ಗಮನಿಸಬಹುದು.

- **ಊಷ್ಮ ಧ್ವನಿಗಳಲ್ಲಿನ ವ್ಯತ್ಯಾಸಗಳು**

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ತಾಲವ್ಯ ಅಘೋಷ ಘರ್ಷ ವ್ಯಂಜನ 'ಶ' ಧ್ವನಿ ಹಾಗೂ ಮೂರ್ಧನ್ಯ ಅಘೋಷ ಘರ್ಷ ವ್ಯಂಜನ 'ಷ' ಧ್ವನಿಗಳ ಬದಲಿಗೆ ವರ್ತ್ಸ್ಯ ಅಘೋಷ ಘರ್ಷ ವ್ಯಂಜನ 'ಸ' ಧ್ವನಿಯನ್ನು ಓದುತ್ತಾರೆ. ಈ ತೆರನಾದ ವ್ಯತ್ಯಾಸವನ್ನು

	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
ಶ>ಸ	ಶವ	ಸವ
	ಶರ	ಸರ
	ಶಾಲೆ	ಸಾಲೆ
	ಶಕ್ತಿ	ಸಕ್ತಿ
	ಶಕುನಿ	ಸಕುನಿ
	ಶಪಥ	ಸಪತ
	ಶರೀರ	ಸರಿರ

	ಶಯನ	ಸಯನ
	ಶತಕ	ಸತಕ
	ಶಂಕರ	ಸಂಕರ
	ಶಿಕ್ಷಕ	ಸಿಕ್ಷಕ
	ಬಶೀರ	ಬಸಿರ
	ಶರಣ	ಸರಣ
	ಶಿಶಿಲ	ಸಿಸಿಲ
	ಶಿಬಿರ	ಸಿಬಿರ
	ಶಿವಾಲಯ	ಸಿವಾಲಯ
ಷ>ಸ	ಷರಾ	ಸರಾ
	ಷಷ್ಠಿ	ಸಸ್ಠಿ
	ಷರಾ	ಸರಾ
	ಷರಾಯಿ	ಸರಾಯಿ
	ಷಟ್ಪದಿ	ಸಟ್ಪದಿ

- **ಪದಮಧ್ಯ ಪರಿಸರ**

	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
ಶ>ಸ	ಕಾಶಿ	ಕಾಸಿ
	ಶಿಸು	ಸಿಸು
	ದೇಶಿ	ದೆಸಿ
	ದೇಶ	ದೆಸ

	ವಿಶೇಷ	ವಸೆಸ
	ಮಶಣ	ಮಸನ
	ದಶಮುಖ	ದಸಮುಕ

	ಬರಹದರೂಪ	ಮಕ್ಕಳು ಉಚ್ಚರಿಸುವ ರೂಪ
ಷ>ಸ	ವಿಷಯ	ವಿಸಯ
	ವಿಷಮ	ವಿಸಮ
	ಕಷಾಯ	ಕಸಾಯ
	ಭಾಷೆ	ಬಾಸೆ
	ಔಷಧಿ	ಅವಸದಿ
	ಋಷಿ	ರುಸಿ

ಬ್ಯಾರಿ ನುಡಿಯನ್ನು ಮನೆಮಾತಾಗಿರಿಸಿಕೊಂಡ ಹೆಚ್ಚಿನ ಪ್ರಮಾಣದ ಮಕ್ಕಳು ಈ ವ್ಯಾತ್ಯಾಸವನ್ನು ಮಾಡುತ್ತಾರೆ. ಐದು ಮತ್ತು ಆರನೆಯ ತರಗತಿಯ ಮಕ್ಕಳು ಹೆಚ್ಚಿನ ಪ್ರಮಾಣದಲ್ಲಿ ಈ ತಪ್ಪುಗಳನ್ನು ಮಾಡುತ್ತಾರೆ. ಈ ತೀತಿ ಮಕ್ಕಳು ಊಷ್ಮ ಧ್ವನಿಗಳನ್ನು ವ್ಯತ್ಯಾಸ ಮಾಡಿ ಓದಲು ಕಾರಣಗಳೆಂದರೆ

* ಊಷ್ಮ ಧ್ವನಿಗಳಾದ ಶ, ಷ ಧ್ವನಿಗಳ ಬಳಕೆ ಬ್ಯಾರಿಯ ಆಡುನುಡಿಯಲ್ಲಿ ಇಲ್ಲದಿರುವುದು ಅಥವಾ ಕಡಿಮೆ ಇರುವುದು.
* ಊಷ್ಮ ಧ್ವನಿಗಳ ಉಚ್ಚಾರಣೆಯಲ್ಲಿನ ಅಲ್ಪಧ್ವನಿ ಸಾಮ್ಯತೆಯನ್ನು ಸರಿಯಾಗಿ ಗ್ರಹಿಸದಿರುವುದು.
* ಊಷ್ಮ ಧ್ವನಿಗಳ ಬಗ್ಗೆ ಸ್ಪಷ್ಟವಾದ ಪರಿಕಲ್ಪನೆಯನ್ನು ಮೂಡಿಸದಿರುವುದು.
* ಉಚ್ಚಾರಣೆಯಲ್ಲಿನ ಸಮಸ್ಯೆ
* ಆಲಿಸುವಿಕೆಯಲ್ಲಿ ಶ, ಷ, ಕಾರಗಳಿಗಿಂತ 'ಸ' ಕಾರದ ಬಳಕೆ ಹೆಚ್ಚಾಗಿರುವುದು

* ಪರಭಾಷೆಗಳ ಪ್ರಭಾವ

* ಆಡುಮಾತಿನಲ್ಲಿ ಶ, ಷ, ಕಾರಗಳಿಗಿಂತ 'ಸ' ಕಾರದ ಬಳಕೆ ಹೆಚ್ಚಾಗಿರುವುದು.

* ಬೋಧನಾ ವಿಧಾನಗಳ ವ್ಯತ್ಯಯದಿಂದ ಈ ರೀತಿ ವ್ಯತ್ಯಾಸವಾಗುತ್ತಿರಬಹುದು.

ಇತ್ಯಾದಿ ಕಾರಣದಿಂದಾಗಿ ಈ ತೆರನಾಗಿ ವ್ಯತ್ಯಾಸ ಮಾಡಿ ಓದಬಹುದು ಎನ್ನಲಾಗಿದೆ.

▪ಅರ್ಧ ಸ್ವರಗಳನ್ನು ಓದುವಲ್ಲಿನ ಸಮಸ್ಯೆಗಳು

ಪದಾದಿ ಪರಿಸರದಲ್ಲಿ ಅರ್ಧಸ್ವರ 'ಯ' ಹಾಗೂ 'ವ' ಧ್ವನಿಗಳ ಬದಲಿಗೆ ಸ್ವರಗಳಾದ 'ಎ' ಹಾಗೂ 'ಒ' ಧ್ವನಿಗಳನ್ನು ಬಳಕೆ ಮಾಡಿ ಓದುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಕರ್ನಾಟಕದ ಇತರ ಭಾಗಗಳಲ್ಲಿ ಕಲಕೆಯಲ್ಲಿ ಮತ್ತು ಮಾತಿನಲ್ಲಿ ಸ್ವರಗಳಿಗೆ ಬದಲಾಗಿ ವ್ಯಂಜನಗಳನ್ನು (ಎ>ಯ, ಒ>ವ) ಬಳಕೆ ಮಾಡುವ ರೂಢಿಯಿದೆ ಇದನ್ನು ಧ್ವನಿಜಾರು ಎಂಬುದಾಗಿ ಕರೆಯುತ್ತಾರೆ. ಆದರೆ ದಕ್ಷಿಣ ಕನ್ನಡ ಪರಿಸರದಲ್ಲಿ ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಇದಕ್ಕೆ ವ್ಯತಿರಿಕ್ತವಾದ ಅಂಶವನ್ನು ಗಮನಿಸಿದೆ. ಉದಾಹರಣೆಗೆ

- **ಪದಾದಿ ಪರಿಸರ**

	ಬರಹರೂಪ	**ಮಕ್ಕಳು ಉಚ್ಚರಿಸುವ ರೂಪ**
ಯ>ಎ	ಯಮ	ಎಮ
	ಯಕ್ಷ	ಎಕ್ಷ
	ಯವನ	ಎವನ
	ಯಮತ	ಎಮತ
	ಯಾತನೆ	ಎತನೆ
	ಯತನ	ಎತನ
	ಯಮಕ	ಎಮಕ
ವ>ಒ	ವಧು	ಒದು
	ವರ್ಷ	ಒರುಷ
	ವಂಚನೆ	ಒಂಚನೆ

ವಂದನೆ	ಒಂದನೆ
ವರದಿ	ಒರದಿ

ಕನ್ನಡದ ಅರ್ಧ ಸ್ವರಗಳಲ್ಲಿ ಉಂಟಾಗುವ ವ್ಯತ್ಯಾಸಗಳನ್ನು ಸಮಸ್ಯೆಗಳೆಂದು ಪರಿಗಣಿಸದೆ ಅದು ಕನ್ನಡದ ಸಹಜ ರೂಪವೆಂದೆ ಪರಿಗಣಿಸಬೇಕು. ಹಾಗೂ ವಿಕಲ್ಪದಿಂದ ಈ ತೆರನಾದ ವ್ಯತ್ಯಾಸಕ್ಕೆ ಕಾರಣಗಳೆಂದರೆ

* ಧ್ವನಿಗಳ ಉಚ್ಚಾರಣೆಯಲ್ಲಿನ ಅಲ್ಪಧ್ವನಿ ಸಾಮ್ಯತೆ
* ವ್ಯವಹಾರಿಕ ಕನ್ನಡದ ಪ್ರಭಾವ
* ಅರ್ಧಸ್ವರಗಳ ಬಗ್ಗೆ ಸ್ಪಷ್ಟ ಪರಿಕಲ್ಪನೆ ಇಲ್ಲದಿರುವುದು
* ಆತುರ, ಉತ್ಸಾಹದ ಅತಿರೇಕ ಇತ್ಯಾದಿ ಕಾರಣದಿಂದಾಗಿ ಈ ತೆರನಾದ ವ್ಯತ್ಯಾಸವನ್ನು ಮಾಡಿ ಓದಿರುವುದು ಕಂಡುಬರುತ್ತದೆ.

- **ಹ>ಅ ಬಳಕೆಯಲ್ಲಿನ ಸಮಸ್ಯೆಗಳಿಗೆ ಕಾರಣಗಳು**

ಪದಾದಿ ಪದಮಧ್ಯ ಪರಿಸರದಲ್ಲಿ ವ್ಯಂಜನ 'ಹ' ಧ್ವನಿಗೆ ಬದಲಗಿ ಸ್ವರಧ್ವನಿಯಾದ 'ಅ' ಕಾರಣವನ್ನು ಬಳಕೆ ಮಾಡಿ ಓದುತ್ತಾರೆ. ಉದಾಹರಣೆಗೆ

- **ಪದಾದಿ ಪರಿಸರ**

ಉದಾ	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಹಕ್ಕಿ	ಅಕ್ಕಿ
	ಹತ್ತು	ಅತ್ತು
	ಹಸು	ಅಸು
	ಹದ್ದು	ಅದು
	ಹಳದಿ	ಅಲದಿ
	ಹವಳ	ಅವಲ
	ಹಳೆಯ	ಅಲೆಯ
	ಹಣತೆ	ಅನತೆ
	ಹನುಮಂತ	ಅನುಮಂತ
	ಹಲಸು	ಅಲಸು

- **ಪದಮಧ್ಯ ಪರಿಸರ**

ಉದಾ	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಬಹಳ	ಬಅಳ
	ಕಹಳೆ	ಕಅಲೆ
	ವಿಹಾರ	ವಿಅರ
	ಮಹಾವೀರ	ಮವೀರ
	ಸಹಕಾರ	ಸಅಕಾರ
	ವಿಹಂಗಮ	ವಿಅಗಮ

ಮಕ್ಕಳು ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ವ್ಯಂಜನ 'ಹ' ಧ್ವನಿಗೆ ಬದಲಾಗಿ ಸ್ವರಧ್ವನಿಯಾದ 'ಅ' ಕಾರವನ್ನು ಬಳಕೆ ಮಾಡಿ ಓದುತ್ತಾರೆ ಎಂದು ಮೇಲ್ನೋಟಕ್ಕೆ ಕಂಡುಬಂದರೂ; ಅದು ಅ ಮತ್ತು ಹ ಕಾರಗಳ ನಡುವಿನ ಧ್ವನಿಯಾಗಿರುವುದು ಕಂಡುಬರುತ್ತದೆ. ಕಾರಣವೆಂದರೆ

- ಬರಹ ಹಾಗೂ ಆಡುನುಡಿಗಳಲ್ಲಿ 'ಹ' ಕಾರದ ಬಳಕೆ ಕಡಿಮೆ ಇರುವುದರಿಂದ.
- ಆತುರ ಹಾಗೂ ಉತ್ಸಾಹದ ಅತಿರೇಕದಿಂದ

೫.೩ ಗುಣಿತಾಕ್ಷರಗಳನ್ನು ಓದುವ ಸಂದರ್ಭ ಉಂಟಾಗುವ ವ್ಯತ್ಯಾಸಗಳು/ ಸಮಸ್ಯೆಗಳು

- 'ಾ/ಆ > ್/ಅ'

ಗುಣಿತಾಕ್ಷರಗಳನ್ನು ಓದುವ ಸಂದರ್ಭದಲ್ಲಿ ಮಕ್ಕಳು ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ('ಾ') ದೀರ್ಘವನ್ನು ಬಳಕೆ ಮಾಡದೆ ; ಹೃಸ್ವವನ್ನು ಬಳಕೆಮಾಡಿ ಓದುವುದು ಕಂಡುಬರುತ್ತದೆ. ಈ ತೆರನಾದ ವ್ಯತ್ಯಾಸವನ್ನು ಕೆಲವು ಮಕ್ಕಳಲ್ಲಿ ಮಾತ್ರ ನೋಡಬಹುದು. ಉದಾಹರಣೆಗೆ

ಉದಾ	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಮಾರು	ಮರು
	ಕಾಲು	ಕಲು
	ವಾರ	ವರ
	ಯಾತನೆ	ಯತನೆ
	ಸಹಕಾರ	ಸಹಕರ
	ಮಹಾದಾಸೆ	ಮಹದಾಸೆ
	ಭಾನುವಾರ	ಬನುವಾರ

- ‘ಈ/ೀ > ಇ/ಿ ’

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ (ೀ) ಇಳಿಯನ್ನು ಬಳಕೆ ಮಾಡದೆ ಓದುವುದು ಕಂಡುಬರುತ್ತದೆ. ಉದಾಹರಣೆ.

ಉದಾ	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಚೀಲ	ಚಿಲ
	ಮೀನು	ಮಿನು
	ಕೀಳು	ಕಿಳು
	ದೀನ	ದಿನ
	ತೀರಾ	ತಿರ
	ಸಮೀಪ	ಸಮಿಪ

- ‘ಊ/ೂ>ಉ/ು’

ಪದಾದಿ ಹಾಗೂ ಪದಮಧ್ಯ ಪರಿಸರದಲ್ಲಿ (ೂ) ಕೊಂಬಿನಿಳಿಯನ್ನು ಬಳಕೆ ಮಾಡದೆ ಓದುವುದು ಕಂಡುಬರುತ್ತದೆ. ಉದಾಹರಣೆಗೆ

ಉದಾ	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಕೂಟ	ಕುಟ
	ಗೂಡು	ಗುಡು
	ಮೂರು	ಮುರು
	ಕುತೂಹಲ	ಕುತುಹಲ
	ಚೂರು	ಚುರು
	ದೂರು	ದುರು

- ‘ಋ/ೃ > ರ್/್ರ’

ಪದಾದಿ ಹಾಗೂ ಪದಮಧ್ಯ ಪರಿಸರದಲ್ಲಿ ವಟೃಸುಳಿ (ೃ) ಬದಲಿಗೆ ವ್ಯಂಜನಕ್ಕೆ ಗುಡಿಸಿ ಅಥವಾ ಕೊಂಬು (್ರ, ್ರ) ನೀಡಿ ‘ರ’ ಒತ್ತಕ್ಷರವನ್ನು ಬಳಕೆ ಮಾಡದೆ ಓದುವುದು ಕಂಡುಬರುತ್ತದೆ. ಉದಾಹರಣೆ.

ಉದಾ	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಗೃಹ	ಗ್ರುಹ

ಕೃಷಿ	ಕ್ರುಸಿ
ಕೃಷ್ಣ	ಕ್ರಿಸ್ಣ
ನೃತ್ಯ	ನ್ರತಯ
ಪಿತೃ	ಪಿತ್ರು
ಮಾತೃ	ಮಾತ್ರು
ಪೃಥ್ವಿ	ಪ್ರುತಿವಿ

- 'ಏ/ೇ>ಎ/ೆ'

ಪದಾದಿ ಹಾಗೂ ಪದಮಧ್ಯ ಪರಿಸರದಲ್ಲಿ (ೇ)ವನ್ನು ಬಳಕೆ ಮಾಡದೆ ಓದುವುದು ಕಂಡುಬರುತ್ತದೆ. ಉದಾಹರಣೆ.

ಉದಾ	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಬೇರಿ	ಬೆರಿ
	ಬೇಗ	ಬೆಗ
	ಬೇಳೆ	ಬೆಳೆ
	ಮೇಲೆ	ಮೆಲೆ
	ಉದ್ದೇಶ	ಉದೆಸ
	ಅಪೇಕ್ಷೆ	ಅಪೆಕ್ಷೆ

- 'ಓ/ೋ>ಒ/ೊ'

ಪದಮಧ್ಯ ಪರಿಸರದಲ್ಲಿ ಓತ್ವದೀರ್ಘ (ೋ)ವನ್ನು ಬಳಕೆ ಮಾಡದೆ ಓದುವುದು ಕಂಡುಬರುತ್ತದೆ. ಉದಾಹರಣೆ.

ಉದಾ	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಕೋಗಿಲೆ	ಕೊಗಿಲೆ
	ಭೋಜನ	ಬೊಜನ
	ಕೋಪ	ಕೊಪ
	ನೋಟ	ನೊಟ
	ದೋಸೆ	ದೊಸೆ
	ಪೋಲಿ	ಪೊಲಿ

ಯೋಚನೆ	ಯೊಚನೆ
ತೋರಣ	ತೊರಣ

- 'ಔ/ೌ > ಅವ್'

ಪದಾದಿ ಹಾಗೂ ಪದಮಧ್ಯ ಪರಿಸರದಲ್ಲಿ (ೌ)ವನ್ನು ಬಳಕೆ ಮಾಡದೆ ವ್ಯಂಜನದ ಮುಂದೆ 'ಅವ' ಕಾರವನ್ನು ಬಳಕೆ ಮಾಡಿ ಓದುವುದು ಕಂಡುಬರುತ್ತದೆ. ಉದಾಹರಣೆ.

ಉದಾ	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಮೌಳಿ	ಮವಳಿ
	ಕೌತುಕ	ಕವತುಕ
	ಔತಣ	ಅವತನ
	ಗೌರವ	ಗವರವ
	ನೌಕರ	ನವಕರ

- ಪದಾದಿ ಹಾಗೂ ಪದಮಧ್ಯ ಪರಿಸರದಲ್ಲಿ ಬರುವ ಗುಣಿತಾಕ್ಷರ ಧ್ವನಿ ಖಾ,ಖಿ,ಖೆ, ಖೇ, ಧ್ವನಿ ಬದಲು ಕಾ, ಕಿ, ಕೆ, ಕೇ ಧ್ವನಿಗಳನ್ನು ಬಳಕೆ ಮಾಡದೆ ವ್ಯಂಜನದ ಮುಂದೆ 'ಅವ' ಕಾರವನ್ನು ಬಳಕೆ ಮಾಡಿ ಓದುವುದು ಕಂಡುಬರುತ್ತದೆ. ಉದಾಹರಣೆ

ಉದಾ	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಖಿನ್ನ	ಕಿನ್ನ
	ಖರ್ಚು	ಕರ್ಚು
	ಸುಖಿ	ಸುಕಿ
	ಖೇದ	ಕೆದ
	ಖೈದಿ	ಕಯಿದಿ
	ಖರೀದಿ	ಕರದಿ
	ಖಜಾನೆ	ಕಜನೆ
	ದವಖಾನೆ	ದವಕನೆ
	ಖಡಾಖಂಡಿತ	ಕಡಕಡಿತ

ಪದಾದಿ ಪರಿಸರದಲ್ಲಿ ಬರುವ ಧ್ವನಿ ಖಾ,ಖಿ,ಖೆ, ಖೇ, ಧ್ವನಿ ಬದಲು ಕಾ,ಕಿ, ಕೆ, ಕೇ ಧ್ವನಿಗಳನ್ನು ಬಳಕೆ ಮಾಡದೆ ವ್ಯಂಜನದ ಮುಂದೆ 'ಅವ' ಕಾರವನ್ನು ಬಳಕೆ ಮಾಡಿ ಓದುವುದು ಕಂಡುಬರುತ್ತದೆ. ಉದಾಹರಣೆ

ಉದಾ	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಛೇದ	ಚೆದ
	ಛಾಯೆ	ಚಾಯ
	ಛಂದಸ್ಸು	ಚಂದಸ್ಸು
	ಛೀಮಾರಿ	ಚಿಮರಿ
	ಛೇದಿಸು	ಚೆದಿಸು

- ಪದಾದಿ ಪರಿಸರದಲ್ಲಿ ಢ, ಢೀ, ಢೋ, ಬದಲು ಡ, ಡಿ, ಡೊ ಬಳಕೆ ಮಾಡಿ ಓದುತ್ತಾರೆ. ಈ ತರೆನಾದ ವ್ಯಾತ್ಯಾಸವನ್ನು ಎಲ್ಲಾ ತರಗತಿಯ ಕೆಲವು ಮಕ್ಕಳಲ್ಲಿ ಕಂಡುಬರುತ್ತದೆ.

ಉದಾ	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಢಾಣೆ	ಡಾನೆ
	ಢೀಗು	ಡಿಗು
	ಢಾಳಿಸು	ಡಾಳಿಸು
	ಢೋಂಗಿ	ಡೊಂಗಿ

- ಪದಾದಿ ಪರಿಸರದಲ್ಲಿ ಬರುವ ಮಹಾಪ್ರಾಣಾಕ್ಷರಗಳ ಗುಣಿತಾಕ್ಷರಗಳಾದ ಘಾ, ಘೀ, ಘೋ ಧ್ವನಿ ಬದಲು ಅಲ್ಪಪ್ರಾಣಾಕ್ಷಗಳ ಗುಣಿತಾಕ್ಷರಗಳಾದ ಗಾ, ಗಿ, ಗೊ ಧ್ವನಿಗಳನ್ನು ಓದುವುದು ಕಂಡುಬರುತ್ತದೆ. ಉದಾಹರಣೆ

ಉದಾ	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಘಾಸಿ	ಗಾಸಿ
	ಘೀಳಿಡು	ಗಿಳಿಡು
	ಘೋಷಣೆ	ಗೊಸನೆ
	ಅಘಾತ	ಅಗಾತ
	ಘೋರ್ಷಣೆ	ಗೊರಪಡೆ

- ಪದಮಧ್ಯ ಪರಿಸರದಲ್ಲಿ ಒತ್ತದೀರ್ಘ ಠ, ಠೀ, ಠೇ, ಧ್ವನಿಗಳ ಬದಲಿಗೆ 'ಟ', 'ಟಿ', 'ಟೆ' ಧ್ವನಿಗಳನ್ನು ಓದುತ್ತಾರೆ. ಉದಾಹರಣೆ.

ಉದಾ	**ಬರಹರೂಪ**	**ಮಕ್ಕಳು ಉಚ್ಚರಿಸುವ ರೂಪ**
	ಠೀವಿ	ಟಿವಿ
	ಠಾಣೆ	ಟಾನೆ
	ಠೇವಣಿ	ಟೆವಣಿ
	ಠೇಂಕಾರ	ಟೆಕಾರ
	ಠಿಕಾಣಿ	ಟಿಕಾಣಿ
	ಠಾಕೂರ್	ಟಾಕುರ

- ಪದಾದಿ ಪರಿಸರದಲ್ಲಿ ಬರುವ 'ಹಾ', 'ಹೈ' ಧ್ವನಿ ಬದಲಾಗಿ ಹ್ರಸ್ವಸ್ವರ 'ಅ', 'ಐ', ಧ್ವನಿಗಳನ್ನು ಓದುವುದು ಕಂಡುಬರುತ್ತದೆ.

ಉದಾ	**ಬರಹರೂಪ**	**ಮಕ್ಕಳು ಉಚ್ಚರಿಸುವ ರೂಪ**
	ಹಾಡಿ	ಆಡಿ
	ಹೈದ	ಐದ
	ಹಾಕು	ಆಕು

- ಪದಾದಿ ಪರಿಸರದಲ್ಲಿ ಬರುವ 'ಹಾ', 'ಹೈ' ಧ್ವನಿ ಬದಲಾಗಿ ಹ್ರಸ್ವಸ್ವರ 'ಅ', 'ಐ', ಧ್ವನಿಗಳನ್ನು ಓದುವುದು ಕಂಡುಬರುತ್ತದೆ.

ಉದಾ	**ಬರಹರೂಪ**	**ಮಕ್ಕಳು ಉಚ್ಚರಿಸುವ ರೂಪ**
	ಧಾನ್ಯ	ದಾನ
	ಧಾರಕ	ದಾರಕ
	ಧೀರ	ದಿರ
	ಧೀಮಂತ	ದಿಮಂತ
	ಅಧೀನ	ಅದಿನ
	ಧಮುಕು	ದುಮುಕು
	ಧೋರಣೆ	ದೊರಣೆ
	ಆಧೋಗತಿ	ಅದೊಗತಿ

- ಪದಾದಿ ಪರಿಸರದಲ್ಲಿ ಬರುವ ಫಾ, ಫಿ, ಫೇ ಅಕ್ಷರಗಳನ್ನು ಪಾ,ಪಿ,ಪೆ ಎಂದು ಓದುತ್ತಾರೆ. ಈ ತೆರನಾದ ವ್ಯತ್ಯಾಸವನ್ನು ೫ ಮತ್ತು ೬ನೇ ತರಗತಿಯ ಕೆಲವು ಮಕ್ಕಳಲ್ಲಿ ಮಾಡುತ್ತಾರೆ.

ಉದಾ	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಫಾಶಿ	ಪಾಸಿ
	ಫೇಣಿ	ಪೆನಿ
	ಫೇರಿ	ಪೆರಿ
	ಫಿತೂರಿ	ಪಿತೂರಿ
	ಫಾಲ್ಗುಣ	ಪಾಲಗುಣ

- ಪದಾದಿ ಪರಿಸರದಲ್ಲಿ ಬರುವ ಥಾ, ಥೇ, ಥೈ ಬದಲು ತಾ, ತೆ, ತೈ ಎಂದು ಓದುತ್ತಾರೆ. ಈ ತೆರನಾದ ವ್ಯತ್ಯಾಸವನ್ನು 5 ಮತ್ತು 6ನೇ ತರಗತಿಯ ಕೆಲವು ಮಕ್ಕಳು ಮಾಡುತ್ತಾರೆ.

ಉದಾ	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಥೇಟ್	ತೆಟ್
	ಥೈಲಿ	ತೈಲಿ
	ಥಾಲಿ	ತಾಲಿ
	ಥಾಟು	ತಾಟು

- ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಬರುವ ಭಾ, ಭೀ, ಭೂ, ಭೇ, ಭೋ ಬದಲು ಬಾ, ಬಿ, ಬೂ, ಬೆ, ಬೊ ಎಂದು ಓದುತ್ತಾರೆ.

ಉದಾ	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಭೀಮ	ಬಿಮ
	ಭೇರಿ	ಬೆರಿ
	ಭೋಗ	ಬೊಗ
	ಭಾವನೆ	ಬಾವನೆ
	ನಿರ್ಭೀತಿ	ನಿರಬಿತಿ

ವಿಭಾಗ	ವಿಬಾಗ
ಅಭೇದ	ಅಬೆದ
ಸಹಾನುಭೂತಿ	ಸಹನಬುತಿ
ಉಗಾಭೋಗ	ಉಗಬೊಗ

- ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಬರುವ ಶಾ, ಶಿ, ಶೆ, ಶೊ,ಗಳ ಬದಲು ಗುಣಿತಾಕ್ಷರ ಸಾ, ಸಿ, ಸೊ ಧ್ವನಿಗಳನ್ನು ಓದುತ್ತಾರೆ.

ಉದಾ	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಶಾಲಾ	ಸಾಲಾ
	ಶಾಂತಿ	ಸಾಂತಿ
	ಶಿಕಾರಿ	ಸಿಕಾರಿ
	ಶಿಖರ	ಸಿಕರ
	ಶೀತ	ಸಿತ
	ಶೀತಲ	ಸಿತಲ
	ಶೋಕ	ಸೊಕ
	ಶೂಲ	ಸೂಲ
	ಶೇಕಡ	ಸೆಕಡ

- ಪದಾದಿ ಪರಿಸರದಲ್ಲಿ ಗುಣಿತಾಕ್ಷರ ಷ, ಷಾ, ಷಿ ಧ್ವನಿಗಳ ಬದಲು ಗುಣಿತಾಕ್ಷರ ಸಾ, ಸಿ, ಸೊ ಧ್ವನಿಗಳನ್ನು ಓದುತ್ತಾರೆ.

ಉದಾ	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಷಂಡ	ಸಂಡ
	ಷಟ್ಪದಿ	ಸಟ್ಪದಿ
	ಷಾಮೀಲು	ಸಾಮಿಲು
	ಷಿಕಾರಿ	ಸಿಕಾರಿ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಮಕ್ಕಳು ಗುಣಿತಾಕ್ಷರಗಳನ್ನು ಓದುವಾಗ ಪ್ರಮುಖ ವ್ಯತ್ಯಾಸ ಅಥವಾ ಸಮಸ್ಯೆಗಳಿಗೆ ಕಾರಣಗಳನ್ನು ಈ ಕೆಳಗಿನಂತೆ ಕಲ್ಪಿಸಬಹುದಾಗಿದೆ.

- ಎರಡು ಗುಣಿತಾಕ್ಷರಗಳ ನಡುವೆ ಇರುವ ರಚನೆಯಲ್ಲಿನ ಅಲ್ಪ ವ್ಯತ್ಯಾಸವನ್ನು ಗಮನಿಸದೆ ಇರುವುದು.
- ಬೋಧಕರು ಗುಣಿತಾಕ್ಷರಗಳ ಬಗ್ಗೆ ಸರಿಯಾದ ಪರಿಕಲ್ಪನೆ ಮೂಡಿಸದೆ ಇರುವುದು.
- ಮಕ್ಕಳ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಪರಿಸರ ಸರಿ ಇಲ್ಲದೆ ಇರುವುದು.
- ಪೋಷಕರ ಅನಕ್ಷರತೆ
- ಮಕ್ಕಳು ಕಲಿಕೆಯಲ್ಲಿ ಆಸಕ್ತಿ ತೋರುವಂತೆ ಬೋಧನೆ ಮಾಡದೆ ಇರುವುದು.

ಇತ್ಯಾದಿ ಕಾರಣಗಳಿಂದಾಗಿ ಈ ತೆರನಾಗಿ ವ್ಯತ್ಯಾಸ ಮಾಡಿ ಓದುತ್ತಿದ್ದಾರೆ.

೫.೪ ಒತ್ತಕ್ಷರ / ಸಂಯುಕ್ತಾಕ್ಷರಗಳಲ್ಲಿ ಉಂಟಾಗುವ ಸಮಸ್ಯೆಗಳು

- **ಸಜಾತಿ ಒತ್ತಕ್ಷರಗಳನ್ನು ಓದುವ ಸಂದರ್ಭ ಉಂಟಾಗುವ ವ್ಯತ್ಯಾಸಗಳು/ ಸಮಸ್ಯೆಗಳು**

ಪದಮಧ್ಯ ಪರಿಸರದಲ್ಲಿ ಬರುವ ಸಜಾತಿ ಒತ್ತಕ್ಷರಗಳನ್ನು ಲೋಪ ಮಾಡಿ ಓದುತ್ತಾರೆ. ಈ ತೆರನಾದ ವ್ಯತ್ಯಾಸವು ಎಲ್ಲ ತರಗತಿಯ ಕೆಲವು ಮಕ್ಕಳಲ್ಲಿ ಕಂಡುಬರುತ್ತದೆ.

- **ಕ್ಕ > ಕ**

ಪದಮಧ್ಯ ಪರಿಸರದಲ್ಲಿ 'ಕ್ಕ' ದ್ವಿತ್ವ ಧ್ವನಿ ಬದಲು 'ಕ' ವ್ಯಂಜನ ಧ್ವನಿಯನ್ನು ಓದುತ್ತಾರೆ. ಈ ವ್ಯತ್ಯಾಸವನ್ನು ಎಲ್ಲಾ ತರಗತಿಯ ಕೆಲವು ಮಕ್ಕಳು ಮಾತ್ರ ಮಾಡುತ್ತಾರೆ.

	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
ಉದಾ	ಅಕ್ಕ	ಅಕ
	ಕೊಕ್ಕರೆ	ಕೊಕರೆ
	ಹಕ್ಕಿ	ಅಕಿ
	ಅಕ್ಕಿ	ಅಕಿ
	ಸೊಕ್ಕು	ಸೊಕು

- **ಗ್ಗ > ಗ**

ಪದಮಧ್ಯ ಪರಿಸರದಲ್ಲಿ 'ಗ್ಗ' ದ್ವಿತ್ವ ಧ್ವನಿ ಬದಲು 'ಗ' ಕಂಠ್ಯ ವ್ಯಂಜನ ಧ್ವನಿಯನ್ನು ಓದುತ್ತಾರೆ. ಈ ವ್ಯತ್ಯಾಸವನ್ನು ಎಲ್ಲಾ ತರಗತಿಯ ಕೆಲವು ಮಕ್ಕಳು ಮಾತ್ರ ಮಾಡುತ್ತಾರೆ.

ಉದಾ	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಅಗ್ಗ	ಅಗ
	ಒಗ್ಗಟ್ಟು	ಒಗಟು
	ಹಗ್ಗ	ಅಗ
	ಅಗ್ಗಳ	ಅಗಳ
	ಬಗ್ಗೆ	ಬಗೆ
	ಬಗ್ಗು ಬಡಿ	ಬಗುಬಡಿ
	ತಗ್ಗು	ತಗು

• ಚ್ಚ > ಚ

ಪದಮಧ್ಯ ಪರಿಸರದಲ್ಲಿ 'ಚ್ಚ' ದ್ವಿತ್ವ ಧ್ವನಿ ಬದಲು 'ಚ' ವ್ಯಂಜನ ಧ್ವನಿಯನ್ನು ಓದುತ್ತಾರೆ. ಈ ವ್ಯತ್ಯಾಸವನ್ನು ಎಲ್ಲಾ ತರಗತಿಯ ಕೆಲವು ಮಕ್ಕಳು ಮಾತ್ರ ಮಾಡುತ್ತಾರೆ.

ಉದಾ	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಮೆಚ್ಚು	ಮೆಚು
	ಹೆಚ್ಚು	ಹೆಚು
	ಅಚ್ಚರಿ	ಅಚರಿ
	ನಿಚ್ಚಲ	ನಿಚಲ
	ಸಚ್ಚಿದಾನಂದ	ಸಚಿದಾನಂದ

•

• ಜ್ಜ > ಜ

ಪದಮಧ್ಯ ಪರಿಸರದಲ್ಲಿ 'ಜ್ಜ' ದ್ವಿತ್ವ ಧ್ವನಿ ಬದಲು 'ಜ' ತಾಲವ್ಯ ವ್ಯಂಜನ ಧ್ವನಿಯನ್ನು ಓದುತ್ತಾರೆ. ಈ ವ್ಯತ್ತಾಸವನ್ನು ಎಲ್ಲಾ ತರಗತಿಯ ಕೆಲವು ಮಕ್ಕಳು ಮಾಡುತ್ತಾರೆ.

ಉದಾ	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಅಜ್ಜಿ	ಅಜಿ
	ಗೆಜ್ಜೆ	ಗೆಜೆ
	ಗಜ್ಜರಿ	ಗಜರಿ
	ಅಜ್ಜ	ಅಜ

ಕಜ್ಜಿ	ಕಜಿ
ಲಜ್ಜೆ	ಲಜೆ

- **ದ್ದ > ದ**

ಪದಮಧ್ಯ ಪರಿಸರದಲ್ಲಿ 'ಟ್ಟ' ದ್ವಿತ್ವ ಧ್ವನಿ ಬದಲು 'ಟ' ಮೂರ್ಧನ್ಯ ವ್ಯಂಜನ ಧ್ವನಿಯನ್ನು ಓದುತ್ತಾರೆ. ಈ ವ್ಯತ್ಯಾಸವನ್ನು ಎಲ್ಲಾ ತರಗತಿಯ ಕೆಲವು ಮಕ್ಕಳು ಮಾಡುತ್ತಾರೆ.

ಉದಾ	**ಬರಹರೂಪ**	**ಮಕ್ಕಳು ಉಚ್ಚರಿಸುವ ರೂಪ**
	ದಟ್ಟ	ದಟ
	ಅಟ್ಟ	ಅಟ
	ಕಟ್ಟಿಗೆ	ಕಟಿಗೆ
	ಕಟ್ಟು	ಕಟು
	ತಟ್ಟನೆ	ತಟನೆ
	ಕುಟ್ಟು	ಕುಟು
	ಪಟ್ಟನೆ	ಪಟನೆ

- **ಡ್ಡ > ಡ**

ಪದಮಧ್ಯ ಪರಿಸರದಲ್ಲಿ 'ಡ್ಡ' ದ್ವಿತ್ವ ಧ್ವನಿ ಬದಲು 'ಡ' ಮೂರ್ಧನ್ಯ ವ್ಯಂಜನ ಧ್ವನಿಯನ್ನು ಓದುತ್ತಾರೆ. ಈ ವ್ಯತ್ಯಾಸವನ್ನು ಎಲ್ಲಾ ತರಗತಿಯ ಕೆಲವು ಮಕ್ಕಳು ಮಾಡುತ್ತಾರೆ.

ಉದಾ	**ಬರಹರೂಪ**	**ಮಕ್ಕಳು ಉಚ್ಚರಿಸುವ ರೂಪ**
	ಅಡ್ಡ	ಅಡ
	ಕಡ್ಡಿ	ಕಡಿ
	ಲಡ್ಡು	ಲಡು
	ಗೊಡ್ಡಿ	ಗೊಡಿ
	ದುಡ್ಡು	ದುಡು
	ಗಿಡ್ಡ	ಗಿಡ
	ಬಿಡ್ಡ	ಬಿಡ

- **ಣ್ಣ > ನ್ನ**

ಪದಮಧ್ಯ ಪರಿಸರದಲ್ಲಿ 'ಣ್ಣ' ದ್ವಿತ್ವ ಧ್ವನಿ ಬದಲು 'ನ್ನ' ದಂತ್ಯ ವ್ಯಂಜನ ಧ್ವನಿಯನ್ನು ಓದುತ್ತಾರೆ. ಈ ವ್ಯತ್ಯಾಸವನ್ನು ಎಲ್ಲಾ ತರಗತಿಯ ಕೆಲವು ಮಕ್ಕಳು ಮಾಡುತ್ತಾರೆ.

ಉದಾ	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಕಣ್ಣು	ಕನ್ನು
	ಅಣ್ಣ	ಅನ್ನ
	ತಣ್ಣಗೆ	ತನ್ನಗೆ
	ತಣ್ಣಗಾಗು	ತನ್ನಗಾಗು
	ಬಣ್ಣ	ಬನ್ನ
	ಹಣ್ಣು	ಅನ್ನು

• **ತ್ತ > ತ**

ಪದಮಧ್ಯ ಪರಿಸರದಲ್ಲಿ 'ತ್ತ' ದ್ವಿತ್ವ ಧ್ವನಿ ಬದಲು 'ತ' ದಂತ್ಯ ವ್ಯಂಜನ ಧ್ವನಿಯನ್ನು ಓದುತ್ತಾರೆ. ಈ ವ್ಯತ್ಯಾಸವನ್ನು ಎಲ್ಲಾ ತರಗತಿಯ ಕೆಲವು ಮಕ್ಕಳು ಮಾಡುತ್ತಾರೆ.

ಉದಾ	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಕತ್ತೆ	ಕತೆ
	ಅತ್ತಿಗೆ	ಅತಿಗೆ
	ಹತ್ತು	ಅತು
	ಗುತ್ತಿಗೆ	ಗುತಿಗೆ
	ಕತ್ತರಿ	ಕತರಿ
	ಸುತ್ತಿಗೆ	ಸುತಿಗೆ

• **ದ್ದ > ದ**

ಪದಮಧ್ಯ ಪರಿಸರದಲ್ಲಿ 'ದ್ದ' ದ್ವಿತ್ವ ಧ್ವನಿ ಬದಲು 'ದ' ದಂತ್ಯ ವ್ಯಂಜನ ಧ್ವನಿಯನ್ನು ಓದುತ್ತಾರೆ. ಈ ವ್ಯತ್ಯಾಸವನ್ನು ಎಲ್ಲಾ ತರಗತಿಯ ಕೆಲವು ಮಕ್ಕಳು ಮಾಡುತ್ತಾರೆ.

ಉದಾ	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಗದ್ದೆ	ಗದೆ
	ಉದ್ದ	ಉದ
	ಇದ್ದಲಿ	ಇದಲಿ
	ಪೆದ್ದ	ಪೆದ
	ಗುದ್ದಲಿ	ಗುದಲಿ

	ಮದ್ದು	ಮದು

- **ನ್ನ > ನ**

ಪದಮಧ್ಯ ಪರಿಸರದಲ್ಲಿ 'ನ್ನ' ದ್ವಿತ್ವ ಧ್ವನಿ ಬದಲು 'ನ' ದಂತ್ಯ ವ್ಯಂಜನ ಧ್ವನಿಯನ್ನು ಓದುತ್ತಾರೆ. ಈ ವ್ಯತ್ಯಾಸವನ್ನು ಎಲ್ಲಾ ತರಗತಿಯ ಕೆಲವು ಮಕ್ಕಳು ಮಾಡುತ್ತಾರೆ.

	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
ಉದಾ	ತನ್ನ	ತನ
	ಅನ್ನ	ಅನ
	ಚೆನ್ನಾಗಿ	ಚೆನಾಗಿ
	ಸನ್ನದು	ಸನದು
	ಸನ್ನಿಧಿ	ಸನಿದಿ

- **ಪ್ಪ > ಪ**

ಪದಮಧ್ಯ ಪರಿಸರದಲ್ಲಿ 'ಪ್ಪ' ದ್ವಿತ್ವ ಧ್ವನಿ ಬದಲು 'ಪ' ಉಭಯೋಷ್ಠ್ಯ ವ್ಯಂಜನ ಧ್ವನಿಯನ್ನು ಓದುತ್ತಾರೆ. ಈ ವ್ಯತ್ಯಾಸವನ್ನು ಎಲ್ಲಾ ತರಗತಿಯ ಕೆಲವು ಮಕ್ಕಳು ಮಾಡುತ್ತಾರೆ.

	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಅಪ್ಪಟ	ಅಪಟ
ಉದಾ	ದಪ್ಪ	ದಪ
	ಚಪ್ಪಲಿ	ಚಪಲಿ
	ಅಪ್ಪಣೆ	ಅಪನೆ
	ಉಪ್ಪು	ಉಪು
	ಕಪ್ಪು	ಕಪು
	ಹಪ್ಪಳ	ಅಪಲ

- **ಬ್ಬ > ಬ**

ಪದಮಧ್ಯ ಪರಿಸರದಲ್ಲಿ 'ಬ್ಬ' ದ್ವಿತ್ವ ಧ್ವನಿ ಬದಲು 'ಬ' ಉಭಯೋಷ್ಠ್ಯ ವ್ಯಂಜನ ಧ್ವನಿಯನ್ನು ಓದುತ್ತಾರೆ. ಈ ವ್ಯತ್ಯಾಸವನ್ನು ಎಲ್ಲಾ ತರಗತಿಯ ಕೆಲವು ಮಕ್ಕಳು ಮಾಡುತ್ತಾರೆ.

ಉದಾ	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಹಬ್ಬ	ಹಬ
	ಗುಬ್ಬಿ	ಗುಬಿ
	ಗೊಬ್ಬರ	ಗೊಬರ
	ತಬ್ಬಲಿ	ತಬಲಿ
	ಕಬ್ಬು	ಕಬು
	ಒಬ್ಬು	ಒಬ

- ವ್ವ > ವ

ಪದಮಧ್ಯ ಪರಿಸರದಲ್ಲಿ 'ವ್ವ' ದ್ವಿತ್ವ ಧ್ವನಿ ಬದಲು 'ವ' ವ್ಯಂಜನ ಧ್ವನಿಯನ್ನು ಓದುತ್ತಾರೆ. ಈ ವ್ಯತ್ಯಾಸವನ್ನು ಎಲ್ಲಾ ತರಗತಿಯ ಕೆಲವು ಮಕ್ಕಳು ಮಾಡುತ್ತಾರೆ.

ಉದಾ	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಅವ್ವ	ಅವ
	ದೆವ್ವ	ದೆವ
	ಕವ್ವ	ಕವ
	ಓಬವ್ವ	ಒಬವ

- ಲ್ಲ > ಲ

ಪದಮಧ್ಯ ಪರಿಸರದಲ್ಲಿ 'ಲ್ಲ' ದ್ವಿತ್ವ ಧ್ವನಿ ಬದಲು 'ಲ' ವ್ಯಂಜನ ಧ್ವನಿಯನ್ನು ಓದುತ್ತಾರೆ. ಈ ವ್ಯತ್ಯಾಸವನ್ನು ಎಲ್ಲಾ ತರಗತಿಯ ಕೆಲವು ಮಕ್ಕಳು ಮಾಡುತ್ತಾರೆ.

ಉದಾ	ಬರಹರೂಪ	ಮಕ್ಕಳು ಉಚ್ಚರಿಸುವ ರೂಪ
	ಬೆಲ್ಲ	ಬೆಲ
	ಗೆಲ್ಲು	ಗೆಲು
	ಕಲ್ಲು	ಕಲು
	ಇಲ್ಲ	ಇಲ್ಲ
	ಹಲ್ಲಿ	ಹಲಿ
	ಪಲ್ಲವಿ	ಪಲವಿ

ನಲ್ಲಿ	ನಲಿ

- **ವಿಜಾತಿ ಒತ್ತಕ್ಷರಗಳನ್ನು ಓದುವ ಸಂದರ್ಭ ಉಂಟಾಗುವ ವ್ಯತ್ಯಾಸಗಳು/ ಸಮಸ್ಯೆಗಳು**
- **ಪೂರ್ಣ ಪ್ರಮಾಣದಲ್ಲಿ ಓದುವ ವಿಜಾತಿ ಒತ್ತಕ್ಷರಗಳು**

ವಿಜಾತಿ ಒತ್ತಕ್ಷರಗಳು ಪದಮಧ್ಯದಲ್ಲಿ ಬಂದಾಗ ಅಂತಹ ಒತ್ತಕ್ಷರವನ್ನು ಶಿಥಿಲಗೊಳಿಸಿ ಪೂರ್ಣ ಪ್ರಮಾಣದಲ್ಲಿ ಓದುವುದು ಕಂಡುಬರುತ್ತದೆ. ಈ ತೆರನಾದ ವ್ಯತ್ಯಾಸವು ಎಲ್ಲಾ ತರಗತಿಯ ಮಕ್ಕಳಲ್ಲಿ ಕಂಡುಬರುತ್ತದೆ. ಅಂತಹ ಕೆಲ ಉದಾಹರಣೆಗಳನ್ನು ಈ ಕೆಳಗಿನಂತೆ ನೋಡಬಹುದು.

ಉದಾ	**ಬರಹರೂಪ**	**ಮಕ್ಕಳು ಉಚ್ಚರಿಸುವ ರೂಪ**
	ಲಗ್ನ	ಲಗನ
	ಮಗ್ನ	ಮಗನ
	ಖಡ್ಗ	ಕಡುಗ
	ಭಕ್ತ	ಬಕುತ
	ರಕ್ತ	ರಕುತ
	ಜನ್ಮ	ಜನುಮ
	ಆತ್ಮ	ಅತಮ
	ಪರ್ವ	ಪರುವ
	ಗರ್ವ	ಗರುವ
	ಪತ್ರ	ಪತರ
	ಮಿತ್ರ	ಮಿತರ

- **ಮಹಾಪ್ರಾಣ ಒತ್ತಕ್ಷರದ ಬದಲು ಅಲ್ಪಪ್ರಾಣ ಒತ್ತಕ್ಷರ ಬಳಕೆ ಮಾಡುವ ವಿಜಾತಿ ಒತ್ತಕ್ಷರಗಳು.**

ಪದಾದಿ ಹಾಗೂ ಪದಮಧ್ಯ ಪರಿಸರದಲ್ಲಿ ಬರುವ ವಿಜಾತಿ ಮಹಾಪ್ರಾಣ ಒತ್ತಕ್ಷರದ ಬದಲಿಗೆ ಅಲ್ಪಪ್ರಾಣ ಒತ್ತಕ್ಷರ ಬಳಕೆ ಮಾಡಿ ಓದುತ್ತಾರೆ. ಈ ತೆರನಾದ ವ್ಯತ್ಯಾಸವನ್ನು ಎಲ್ಲಾ ತರಗತಿಯ ಕೆಲವು ಮಕ್ಕಳು ಮಾತ್ರ ಮಾಡುತ್ತಾರೆ.

ಉದಾ	**ಬರಹರೂಪ**	**ಮಕ್ಕಳು ಉಚ್ಚರಿಸುವ ರೂಪ**

ಸ್ಥಳ	ಸ್ತಳ
ಷಷ್ಠಿ	ಸಸ್ಟಿ
ದೃಷ್ಠಿ	ದ್ರುಸ್ಟಿ

- **ಲೋಪಮಾಡಿ ಓದುವ ವಿಜಾತಿ ಒತ್ತಕ್ಷರಗಳು**

ಪದಾದಿ, ಪದಮಧ್ಯ ಹಾಗೂ ಪದಾಂತ್ಯದಲ್ಲಿ ಬರುವ ವಿಜಾತಿ ಒತ್ತಕ್ಷರಗಳನ್ನು ಲೋಪಮಾಡಿ ಓದುತ್ತಾರೆ, ಈ ತೆರನಾದ ವ್ಯತ್ಯಾಸವನ್ನು ಎಲ್ಲಾ ತರಗತಿಯ ಕೆಲವು ಮಕ್ಕಳು ಮಾಡುತ್ತಾರೆ.

ಉದಾ	**ಬರಹರೂಪ**	**ಮಕ್ಕಳು ಉಚ್ಚರಿಸುವ ರೂಪ**
	ಗಯ್ಯಲ್	ಗಯಲ್
	ಅಯ್ಯಾ	ಅಯ
	ಶ್ರವಣ	ಸವಣ
	ಧ್ರುವ	ದುವ
	ಶ್ರಮ	ಶಮ
	ಶ್ಲೋಕ	ಸೊಕ
	ಶ್ಲೇಷ	ಸೇಸ
	ಪ್ಲೇಗು	ಪೆಗು
	ನ್ಯಾಯ	ನಾಯ
	ಮುಖ್ಯ	ಮುಖ
	ಧ್ವಜ	ದಜ
	ಸಂಗ್ರಹ	ಸಗರಹ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಮಕ್ಕಳು ಒತ್ತಕ್ಷರ ಓದುವಾಗ ಮಾಡುವ ಪ್ರಮುಖ ವ್ಯತ್ಯಾಸ ಅಥವಾ ಸಮಸ್ಯೆಗಳನ್ನು ಗಮನಿಸಿದಾಗ ಬ್ಯಾರಿ ನುಡಿಯಲ್ಲಿರುವ ಬ್ಯಾರಿ ಭಾಷೆಯದ್ದೇ ಆದ ಪದಗಳು ಸಜಾತಿ ದ್ವಿತ್ವಗಳಾಗಿವೆ. ಇಲ್ಲಿ ವಿಜಾತಿ ದ್ವಿತ್ವಗಳಾಗಿರುವವುಗಳೆಲ್ಲವೂ ಸ್ವೀಕರಣ ಪದಗಳಾಗಿವೆ. ಅದೇರೀತಿ ಕೆಳಕಂಡ ಅಂಶಗಳೂ ಕಾರಣವಾಗುತ್ತವೆ.

- ಒತ್ತಕ್ಷರಗಳ ಬಗ್ಗೆ ಸ್ಪಷ್ಟವಾಗಿ ಮನವರಿಕೆಯಾಗದಿರುವುದು.
- ಮೂಲಾಕ್ಷರ ಹಾಗೂ ಒತ್ತಕ್ಷರಗಳ ಬಗ್ಗೆ ಸ್ಪಷ್ಟ ಪರಿಕಲ್ಪನೆ ಮಕ್ಕಳಿಗೆ ಸರಿಯಾಗಿ ಮೂಡಿಸದಿರುವುದು.

- ಬೋಧಕರು ಮಕ್ಕಳಿಗೆ ಒತ್ತಕ್ಷರಗಳನ್ನು ಸರಿಯಾಗಿ ಕಲಿಸದಿರುವುದು.
- ಸಜಾತಿ, ವಿಜಾತಿ ಹಾಗೂ ವಿಭಿನ್ನ ಒತ್ತಕ್ಷರಗಳ ಪರಿಕಲ್ಪನೆ ಹಾಗೂ ಬಳಕೆ ಬಗ್ಗೆ ಮಕ್ಕಳು ತಿಳಿಯದಿರುವುದು.
- ಮಕ್ಕಳಿಗೆ ಇರುವ ಅನಾರೋಗ್ಯ, ಅನಾಸಕ್ತಿ, ದೈಹಿಕ ಶ್ರಮದಿಂದಾಗಿ.

ಇಂದಿನ ಪ್ರಪಂಚದಲ್ಲಿ ಓದುವಿಕೆಗೆ ಹೆಚ್ಚು ಮಹತ್ವವಿದೆ. ಇಂತಹ ಓದನ್ನು ಮಕ್ಕಳು ಕಲಿಯುವಾಗ ಹಲವಾರು ಉಚ್ಚಾರ ತಪ್ಪುಗಳನ್ನು ಮಾಡುತ್ತಾರೆ. ಇದಕ್ಕೆ ಕಾರಣ ಕಲಿಯುವ, ಕಲಿಸುವ ಕ್ರಿಯೆಗಳು ಸಮಪರ್ಕವಾಗಿಲ್ಲದಿರುವುದು, ತರಬೇತಿಯ ಕೊರತೆ, ಅಭ್ಯಾಸ ಚಟುವಟಿಕೆಗಳನ್ನು ನೀಡದಿರುವುದರಿಂದ ಬರಹದಲ್ಲಿ ಖಚಿತತೆ ಮತ್ತು ನಿಖರತೆ ಇಲ್ಲದಿರುವುದು, ತಪ್ಪುರೂಪಗಳನ್ನು ಬಳಸುವುದು, ತಪ್ಪುಗಳನ್ನು ತಿದ್ದದಿರುವುದು, ಆಡುನುಡಿ–ಗ್ರಾಂಥಿಕ ನುಡಿಗಳ ನಡುವಿನ ಅಂತರ ಮೊದಲಾದವುಗಳೇ ಆಗಿವೆ. ಶಿಕ್ಷಕರು ಮಕ್ಕಳ ಉಚ್ಚಾರ ತಪ್ಪುಗಳನ್ನು ಗುರುತಿಸಬೇಕು. ಕಾರಣಗಳನ್ನು ಹುಡುಕಿ, ಪರಿಹಾರಕ್ಕೆ ಅಭ್ಯಾಸಗಳನ್ನು ಮಾಡಿಸಬೇಕು. ಶಿಕ್ಷಕನು ಚಿಂತನಶೀಲನಾದಾಗ ಇದು ಸಾಧ್ಯವಾಗುತ್ತವೆ. ಓದಿನ ತಪ್ಪುಗಳನ್ನು ಸಮಾಧಾನದಿಂದ, ಪ್ರೀತಿಯಿಂದ ಹಂತ ಹಂತವಾಗಿ ತಿದ್ದಬೇಕು. ಮಕ್ಕಳು, ಓದುವಾಗ, ಸ್ಪಷ್ಟವಾದ ಉಚ್ಚಾರ, ಸ್ವರಭಾರ ಹಿತಮಿತ ವೇಗ, ಲೇಖನ ಚಿಹ್ನೆಗಳಿಗೆ ಅನುಸಾರವಾಗಿ ಓದುವುದು, ಸಹಜ ಹಾಗೂ ದೋಷರಹಿತವಾದ ಓದನ್ನು ಗಮನಿಸಿ ಬಳಸಲು ಉತ್ತೇಜಿಸಬೇಕು. ಸಮಸ್ಯೆಗಳನ್ನು ಧ್ವನಿಶಾಸ್ತ್ರ–ವ್ಯಾಕರಣ ಶಾಸ್ತ್ರಗಳ ನೆರವಿನಿಂದ ಪರಿಹರಿಸಬೇಕು. ಕೆಲವು ಮಕ್ಕಳು ಹುಟ್ಟಿನಿಂದಲೇ ವ್ಯತ್ಯಾಸಗಳನ್ನು ಹೊಂದಿದ್ದಾರೆ. ಮತ್ತೆ ಕೆಲವರು ಬಹಳ ವೇಗವಾಗಿ, ಕೆಲವು ಗೊಣಗುಟ್ಟುವಂತೆ, ಇನ್ನು ಕೆಲವರು ಹೊಂದಿಸಿಕೊಂಡು ಓದುತ್ತಾರೆ. ಹಾಗಾಗಿ ಮಕ್ಕಳು ಉಪಾಧ್ಯಾಯರನ್ನು ಅನುಸರಿಸುವಂತೆ, ಶಿಕ್ಷಕರು ಓದುವ ಮಾದರಿಯಾಗಿರಬೇಕು. ಮಕ್ಕಳು ಏನನ್ನು ತಪ್ಪಾಗಿ ಓದುತ್ತಾರೆಂಬುದನ್ನು ಗಮನಿಸಿ ಸಕಾಲಿಕವಾದ, ಸೂಕ್ತವಾದ, ಅಭ್ಯಾಸ ಚಟುವಟಿಕೆಗಳನ್ನು ನೀಡಿದರೆ ಓದಿನ ತಪ್ಪುಗಳನ್ನು ತಿದ್ದಬಹುದು.[೯]

ಒಟ್ಟಿನಲ್ಲಿ ಮಕ್ಕಳ ಓದಿನಲ್ಲಿ ಕಂಡುಬರುವ ಪ್ರಮುಖ ತಪ್ಪುಗಳನ್ನು ನೋಡಿದಾಗ, ಕನ್ನಡ ವರ್ಣಮಾಲೆಯ ಎಲ್ಲ ಅಕ್ಷರಗಳನ್ನು ಪರಿಚಯಿಸುತ್ತಲೆ ಅಕ್ಷರದ ಉಚ್ಚಾರ ರೀತಿ ಧ್ವನಿಯನ್ನು ಸ್ಪಷ್ಟವಾಗಿ ತಿಳಿಸಬೇಕು. ಅಲ್ಪಪ್ರಾಣ, ಮಹಾಪ್ರಾಣ, ಒತ್ತಕ್ಷರ, ಸಂಯುಕ್ತಾಕ್ಷರ, ಹ್ರಸ್ವ–ದೀರ್ಘಗಳ ಉಚ್ಚಾರಕ್ರಮವನ್ನು ತಿಳಿಸಬೇಕು. ಬಹಳ ಮುಖ್ಯವಾಗಿ ಅನ್ಯಭಾಷಿಕ ಮಕ್ಕಳಿಗೆ ಕನ್ನಡ ಕಲಿಸುವ ಸಂದರ್ಭ ಅವರ ಮನೆಮಾತಿನ ವರ್ಣಮಾಲೆಯನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

ಸ, ಶ, ಷ ಮತ್ತು ಅ, ಹ ಮೊದಲಾದ ಅಕ್ಷರಗಳನ್ನು ಸ್ಪಷ್ಟವಾಗಿ ಮಾದರಿಯಾಗಿ ಶಿಕ್ಷಕರು ಪದೇ ಪದೇ ಉಚ್ಚರಿಸಿ ಮಕ್ಕಳಿಗೆ ಮನದಟ್ಟು ಮಾಡಿಸಬೇಕು. ಅದನ್ನು ಮಕ್ಕಳು ಅನುಸರಿಬೇಕು. ಯಾವ ಅಕ್ಷರದ ಉಚ್ಚಾರಣೆ ದೋಷಯುಕ್ತವಾಗಿರುತ್ತದೆಯೋ, ಯಾವ

ಉಚ್ಚಾರ ಕಷ್ಟವಾಗುತ್ತದೆಯೋ ಅಂತಹ ಅಕ್ಷರದ ನಾಲಿಗೆ ಸುರುಳಿಗಳನ್ನು ಕೊಡಬೇಕು. ಉದಾ: 'ಷ' ಕಾರ ಉಚ್ಚಾರ ಬಾರದ ಮಗುವಿಗೆ 'ಕಲುಷಿತವಲ್ಲದ ಕಷಾಯವು ವಿಷವೆಂದರೆನಿಸಿದರೂ, ವಿಷಮಶೀತ ಜ್ವರಕ್ಕೆ ಪೀಯೂಷವಾಗಿದೆ.' ಎಂಬ ಸುರಳೀಯನ್ನು ಉಚ್ಚರಿಸುವ ಅಭ್ಯಾಸ ಮಾಡಿಸಬೇಕು. 'ಹುರುಳಿ ಚೀಲ ಉರುಳಿ ಹೋಯಿತು' 'ಹಕ್ಕಿಗೆ ಅಕ್ಕಿಯ ಆಸೆ', ' ಅಲ್ಲಿ ಆ ಹಲ್ಲಿ ಬಂದಿತು', 'ಅಣ್ಣನಿಗೆ ಅನ್ನವೆಂದರೆ ಇಷ್ಟ', 'ಸುರರರಾಸು', 'ಕೆಂಪು ಕುಂಕುಮ ಕಪ್ಪು ಕುಂಕುಮ', 'ತರೀಕೆರೆ ಏರಿ ಮೇಲೆ ಮೂರು ಕರಿ ಕುರಿಮರಿ', 'ಸಂಪಂಗಪ್ಪನ ಮಗ ಮರಿಸಂಪಗಪ್ಪ' ಮೊದಲಾದ ಸುರುಳಿಗಳನ್ನು ವ್ಯತ್ಯಾಸಕ್ಕೆ ತಕ್ಕಂತೆ ಮಕ್ಕಳಿಂದ ಉಚ್ಚರಿಸಬೇಕು. ಮಾಡುವ ಉಚ್ಚಾರಣೆಯಲ್ಲಿನ ವ್ಯತ್ಯಾಸಗಳನ್ನು ತಿದ್ದುವುದು ನಿಧಾನವಾಗಿ ಸಾಗಬೇಕು. ಆತುರು–ಒತ್ತಾಯ ಸಲ್ಲದು. ಗಟ್ಟಿ ಧ್ವನಿಯಲ್ಲಿ ಸರಿಯಾಗಿ ಓದಲು ಕಲಿಸಬೇಕು. ಓದುತ್ತಾ ಆಲಿಸುವುದನ್ನು ಅಭ್ಯಾಸ ಮಾಡಿಸಬೇಕು. ಶಾರೀರಿಕ ಹಾಗೂ ಧ್ವನ್ಯಂಗಗಳಿಗೆ ತೊಂದರೆ ಇದ್ದಾಗ ಅದನ್ನು ವೈದ್ಯರಿಗೆ ತೋರಿಸಿ ಚಿಕಿತ್ಸೆ ನೀಡಬೇಕು. ಓದುವ ಕೌಶಲ್ಯವನ್ನು ಚೆನ್ನಾಗಿ ಮಾಡಿಸಿ, ಓದುವ ಸಲುವಾಗಿ ಪುಸ್ತಕಗಳನ್ನು ಒದಗಿಸಬೇಕು. ಸ್ವಾತಂತ್ರ್ಯವಾಗಿ ಪಠ್ಯೇತರ ಪುಸ್ತಕಗಳನ್ನು ಓದಲು ಅವಕಾಶ ನೀಡಬೇಕು. ಉತ್ತಮ ಪರಿಸರದಲ್ಲಿ ಉತ್ತಮವಾದ ಮಾತುಗಳನ್ನು ಆಲಿಸಲು ಅವಕಾಶ ಕಲ್ಪಿಸುವುದು, ಪರಭಾಷಾ ಪದಗಳನ್ನು ಸರಿಯಾಗಿ ಪರಿಚಯಿಸಿ, ಉಚ್ಚಾರ ಕ್ರಮ ತಿಳಿಸಿ ಕನಡದೊಡನೆ ಬಳಸುವುದನ್ನು ಕಲಿಸಬೇಕು.

ಒಟ್ಟಿನಲ್ಲಿ ಮಕ್ಕಳ ಓದಿನಲ್ಲಿ ಕಂಡುಬರುವ ಪ್ರಮುಖ ತಪ್ಪುಗಳನ್ನು ನೋಡಿದಾಗ, ಕನ್ನಡ ವರ್ಣಮಾಲೆಯ ಎಲ್ಲ ಅಕ್ಷರಗಳನ್ನು ಪರಿಚಯಿಸುತ್ತಲೆ ಅಕ್ಷರದ ಉಚ್ಚಾರ ರೀತಿ ಧ್ವನಿಯನ್ನು ಸ್ಪಷ್ಟವಾಗಿ ತಿಳಿಸಬೇಕು. ಅಲ್ಪಪ್ರಾಣ, ಮಹಾಪ್ರಾಣ, ಒತ್ತಕ್ಷರ, ಸಂಯುಕ್ತಾಕ್ಷರ, ಹ್ರಸ್ವ–ದೀರ್ಘಗಳ ಉಚ್ಚಾರಕ್ರಮವನ್ನು ತಿಳಿಸಬೇಕು. ಬಹಳ ಮುಖ್ಯವಾಗಿ ಅನ್ಯಭಾಷಿಕ ಮಕ್ಕಳಿಗೆ ಕನ್ನಡ ಕಲಿಸುವ ಸಂದರ್ಭ ಅವರ ಮನೆಮಾತಿನ ವರ್ಣಮಾಲೆಯನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

ಟಿಪ್ಪಣಿಗಳು

---

[೧] ಓಬಳೇಶ ಘಟ್ಟಿ, ಭಾಷೆ ಮತ್ತು ಭಾಷಾ ಕೌಶಲ್ಯಗಳು, ಪು.೧೨೮

[೨] ನಾರಾಯಣ ಕೆ. ವಿ. ಮತ್ತು ಇತರರು, ಭಾಷೆ ವಿಶ್ವಕೋಶ, ಪು.೨೦೦

[೩] ಅದೇ.

[೪] ಮಹಾಭಲೇಶ್ವರ ರಾವ್, ಪ್ರೌಢಶಾಲೆಗಳಲ್ಲಿ ಕನ್ನಡ ಬೋಧನೆ, ಪು.೧೭೮

[೫] ಭೀಮಣ್ಣ ಮೇಟಿ, ಕನ್ನಡ ಕಲಿಕೆಯ ಸಮಸ್ಯೆಗಳು ಒಂದು ಅಧ್ಯಯನ, ಪು.೧೪

[೬] ಓಬಳೇಶ ಘಟ್ಟಿ, ಭಾಷೆ ಮತ್ತು ಭಾಷಾ ಕೌಶಲ್ಯಗಳು, ಪು.೧೩೧

[7] ಮಹಾಭಲೇಶ್ವರ ರಾವ್, ಪ್ರೌಢಶಾಲೆಗಳಲ್ಲಿ ಕನ್ನಡ ಬೋಧನೆ, ಪು.೧೮೦

[೮] ಅದೇ.

[೯] ಭೀಮಣ್ಣ ಮೇಟಿ, ಕನ್ನಡ ಕಲಿಕೆಯ ಸಮಸ್ಯೆಗಳು ಒಂದು ಅಧ್ಯಯನ, ಪು.೧೨೦

* * * * *

ಅಧ್ಯಾಯ - ಆರು

ದಕ್ಷಿಣ ಕನ್ನಡ ಪರಿಸರದ ಕನ್ನಡ ಬರವಣಿಗೆ ಕಲಿಕೆಯ ಸಮಸ್ಯೆಗಳ ಸ್ವರೂಪ

ಅಧ್ಯಾಯ – ಆರು

ದಕ್ಷಿಣ ಕನ್ನಡ ಪರಿಸರದ ಕನ್ನಡ ಬರವಣಿಗೆ ಕಲಿಕೆಯ ಸಮಸ್ಯೆಗಳ ಸ್ವರೂಪ

ಬರಹವು ಕೂಡ ಮಾತನಾಡುವಿಕೆಯಂತೆ ಉತ್ಪಾದನ ಕೌಶಲ. ಅಂದರೆ ಮಾತನಾಡುವ ಕ್ರಿಯೆ ಹೇಗೋ ಹಾಗೆಯೇ ಬರಹಕ್ಕೆ ಪೂರ್ವಾಲೋಚನೆ, ಮಾನಸಿಕ ಸಿದ್ಧತೆ ಅಗತ್ಯ.[೧] ಮಾತನಾಡುವಿಕೆಯಲ್ಲಿ ಆಲೋಚನೆಗಳನ್ನು ಮಾತಿನ ರೂಪದಲ್ಲಿ ಅಭಿವ್ಯಕ್ತಿಸುತ್ತೇವೆ. ಆದರೆ ಬರಹದಲ್ಲಿ ಲಿಪಿ ಸಂಕೇತಗಳ ಮೂಲಕ ವ್ಯಕ್ತಪಡಿಸುತ್ತೇವೆ. ಓದಿದ ಅಂಶ ನಮಗೆ ಅರ್ಥವಾಗುವುದು ಹೇಗೆ ಎಂಬ ಪ್ರಶ್ನೆ ಹೇಗೆ ಸಂಧಿಗ್ಧವೋ ಹಾಗೆ ಬರಹವು ಕೂಡ. ಏಕೆಂದರೆ ಬರಹದ ಹಿಂದಿನ ಮಾನಸಿಕ ಚಿಂತನೆ ಹೇಗಾಗುತ್ತದೆ., ಯಾವ ಯಾವ ಹಂತಗಳನ್ನು ದಾಟಿ ವಿಷಯದ ಕಲ್ಪನೆ ಪೂರ್ಣವಾಗುತ್ತದೆ ಎಂಬ ಪ್ರಶ್ನೆಯನ್ನು ಇಟ್ಟುಕೊಂಡು ಇಂದಿಗೂ ಸಂಶೋಧನೆಗಳು ನಡೆಯುತ್ತಿವೆ.

ಭಾಷಾ ಕೌಶಲ್ಯಗಳಲ್ಲಿ ಆಲಿಸುವುದು, ಮಾತನಾಡುವುದು, ಓದುವುದು ಎಷ್ಟು ಮುಖ್ಯವೋ ಬರವಣಿಗೆಯೂ ಅಷ್ಟೇ ಮುಖ್ಯ. ಬರವಣಿಗೆ ಎಂದರೆ, ತಿಳಿದಿದ್ದನ್ನು ಅಥವಾ ಇನ್ನೊಬ್ಬರು ಹೇಳಿದ್ದನ್ನು ಗೊತ್ತಾದ ಲಿಪಿಯನ್ನು ಬಳಸಿಕೊಂಡು ಬೆರಳುಗಳ ಮೂಲಕ ವ್ಯಕ್ತಪಡಿಸುವಂತದ್ದು.[೨] ಬರವಣಿಗೆಯಲ್ಲಿ ಒಂದು ಗೊತ್ತಾದ ಲಿಪಿ ಸಂಕೇತ ಮಾತ್ರ ಸಿದ್ಧವಾಗುವಂತದ್ದು. ಬಾಯಿಯಲ್ಲಿ ಅಕ್ಷರಗಳು ಉಚ್ಚಾರಣೆಯಾದಾಗ ಅದು ಓದಾದರೆ, ಕೈಯ ಸ್ನಾಯುಗಳ ಬಲದಿಂದ ಅಕ್ಷರಗಳು ಮೂಡುವುದನ್ನು ಬರವಣಿಗೆ ಎಂದು ಕರೆಯುತ್ತೇವೆ.

ಬರಹಕ್ಕೆ ತನ್ನದೇ ಆದ ಚೌಕಟ್ಟು, ರೀತಿ ನಿಯಮಗಳಿರುತ್ತವೆ. ಈ ನಿಯಮಗಳೊಂದಿಗೆ ಒಂದು ಗೊತ್ತಾದ ವಿಷಯವನ್ನು ಅರ್ಥಪೂರ್ಣವಾಗಿ ಜೋಡಿಸುವ ಉದ್ದೇಶ ಹೊಂದಿರುತ್ತದೆ. ಪ್ರತಿಯೊಂದು ಪದ ವಾಕ್ಯವೂ ಅಗತ್ಯವಾದ ಕಾಗುಣಿತವನ್ನು ಅಳವಡಿಸಿಕೊಳ್ಳುತ್ತಾ ಹೋಗಿ ದೀರ್ಘ, ಗುಣಿಸಿ, ಕೊಂಬು, ಇಳಿ, ಒತ್ತು, ಲೇಖನ ಚಿಹ್ನೆಗಳು ಮೊದಲಾದವುಗಳನ್ನು ಕ್ರಮಬದ್ಧವಾಗಿ ಜೋಡಿಸಿ ಬರೆದಾಗ ಬರವಣಿಗೆ ಕೌಶಲ ಸಿದ್ಧಿಸಿದೆ ಎಂದರ್ಥ. 'ಬರವಣಿಗೆ ಕೌಶಲ್ಯವು ಬೌದ್ಧಿಕ ಅಭ್ಯಾಸದ ನಾಲ್ಕು ಜೋಡಿ ಸಂಗತಿಗಳಾದ ವಿಶ್ಲೇಷಣೆ–ಸಂಶ್ಲೇಷಣೆ, ಪ್ರತಿಷ್ಠಾಪನೆ–ವ್ಯವಕಲನ, ವಸ್ತುವಿಷಯ–ಅರ್ಥಾನ್ವಯ, ಮತ್ತು ವ್ಯಾಖ್ಯಾನ ಗುಣಲಕ್ಷಣಗಳನ್ನು ಒಳಗೊಂಡಿರುತ್ತದೆ. ಎಂದು ಹರ್ಟ್ ಲೆವಿತ್ ಅಭಿಪ್ರಾಯಿಸುತ್ತಾರೆ.[೩] 'ಬರವಣಿಗೆಯು ಆಲೋಚನಾ ಪ್ರಕ್ರಿಯೆಯಾಗಿದ್ದು ಹಿಂದಿನ ಅಭ್ಯಾಸಗಳ ಅವಶ್ಯಕತೆಗಳನ್ನು ಪೂರೈಸಲು ಚಾಕ್ಷುಷ ರೂಪದ ವಿಶಿಷ್ಟ ಪದವಿನ್ಯಾಸ ರೂಪಿಸುವುದೇ ಬರವಣಿಗೆ ಕೌಶಲ್ಯ.'[೪] ಎಂಬುದು ಎಂ. ಮಾರ್ಟಲೋ ಅವರ ಅಭಿಪ್ರಾಯ.

ಶಾಲೆಯಲ್ಲಿ ಭಾಷಾ ಕಲಿಕೆಯ ಮತ್ತೊಂದು ಮುಖ್ಯವಾದ ಭಾಗ ಬರವಣಿಗೆ. ಬರೆಯಲು ಕಲಿಯುವಾಗ ದೇಹದ ಹಲವಾರು ಅಂಗಾಂಗಗಳ ಚಟುವಟಿಕೆಗಳನ್ನು ಗೊತ್ತಾದ ರೀತಿಯಲ್ಲಿ ಸಂಯೋಜಿಸಿ ಹೊಂದಿಸಬೇಕಾಗುತ್ತದೆ. ಕೈಬೆರಳುಗಳು, ಕಣ್ಣುಗಳು ಮತ್ತು ಆಯಾ ಅಂಗಗಳಿಗೆ ಸಂಬಂಧಿಸಿದ ನರಗಳು ಇವೆಲ್ಲವೂ ಈ ಕ್ರಿಯೆಯಲ್ಲಿ ಒಂದಕ್ಕೊಂದು ಪೂರಕವಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ.[5] ಬರವಣಿಗೆಯು ಭಾಷಾ ಕೌಶಲ್ಯಗಳಲ್ಲಿ ನಾಲ್ಕುನೆಯದಾಗಿದ್ದು. ಭಾಷೆಯಲ್ಲಿ ಆಲಿಸುವುದು, ಮಾತಾನಾಡುವುದು, ನೋಡಿ ಗುರುತಿಸುವ ಸಾಮಾರ್ಥ್ಯವನ್ನಾಧಾರಿಸಿ ಓದುವುದನ್ನು ಕಲಿಯುವುದು ಎಷ್ಟು ಮಹತ್ವವೋ, ಹಾಗೆಯೆ ಬರವಣಿಗೆಯನ್ನು ಕಲಿಯುವುದು ಅಷ್ಟೇ ಮಹತ್ವವೆನಿಸುತ್ತದೆ. ಏಕೆಂದರೆ ಬರವಣಿಗೆಯು ಒಂದು ಸಂಪರ್ಕ ಸಾಧನವಾಗಿದೆ. ಪ್ರಾಚೀನ ಕಾಲದಿಂದಲೂ ವ್ಯವಹಾರದಲ್ಲಿ ಮಾತಿಗೆ ಹೆಚ್ಚು ಮಹತ್ವವಿದ್ದು. ಕಾಲನಂತರದಲ್ಲಿ ಮಾತಿನ ಮಹತ್ವ ಕಡಿಮೆಯಾಗಿ ಬರವಣಿಗೆಯು ಹೆಚ್ಚಿನ ಮಹತ್ವವನ್ನು ಪಡೆದಿದೆ. ಅಲ್ಲದೆ ಇಂದು ಎಲ್ಲಾ ಕ್ಷೇತ್ರಗಳ ವ್ಯವಹಾರದಲ್ಲಿ ಲಿಖಿತ ದಾಖಲಾತಿ ಅವಶ್ಯವಾಗಿವೆ. ಇಂತಹ ಬರವಣಿಗೆಯನ್ನು ಮಕ್ಕಳಿಗೆ ಕಲಿಸುವಾಗ ಸ್ಪಷ್ಟವಾಗಿ ತಪ್ಪಿಲ್ಲದಂತೆ ಹಾಗೂ ಅಂದವಾಗಿ ಬರೆಯುವಂತೆ ಮಾಡುವುದು ಶಿಕ್ಷಕರ ಕರ್ತವ್ಯವಾಗಿದೆ.

ಬರಹ ನಾಗರೀಕತೆಯ ಪ್ರತಿಬಿಂಬವಾದ್ದರಿಂದ ಭಾಷಾ ಕೌಶಲ್ಯಗಳಲ್ಲಿ ಬರವಣಿಗೆಗೆ ಹೆಚ್ಚು ಮಹತ್ವವಿದೆ. ಉತ್ತಮವಾಗಿ ಬರೆಯುವ ವ್ಯಕ್ತಿಗೆ ನಾಡಿನಲ್ಲಿ ಗೌರವವಿದೆ. ಬರೆದ ಬರಹ ದುಂಡಾಗಿ, ಅಂದವಾಗಿ, ಕಣ್ಣನ್ನು ಆಕರ್ಷಿಸುವಂತೆ, ಮನಸ್ಸು ಒಪ್ಪುವಂತಿದ್ದರೆ ಅಂತಹ ಬರಹವನ್ನು ಎಲ್ಲಾರು ಒಪ್ಪುತ್ತಾರೆ. ಶಿಕ್ಷಕರು ಮಕ್ಕಳಿಗೆ ಇಂತಹ ಬರಹವನ್ನು ಕಲಿಸುವ ಕಡೆಗೆ ಹೆಚ್ಚು ಗಮನಹರಿಸಬೇಕು. ಏಕೆಂದರೆ ಬರಹವು ಮಕ್ಕಳಲ್ಲಿ ಹೆಚ್ಚು ಜ್ಞಾಪಕ ಶಕ್ತಿಯನ್ನು ವೃದ್ಧಿಸುತ್ತದೆ. ಅಲ್ಲದೆ ಮನಸ್ಥೈರ್ಯ, ವಿವೇಚನಾ ಕ್ರಮ, ಜಾಗುರೂಕತೆ, ತಾಳ್ಮೆಯನ್ನು ಪೋಷಿಸುತ್ತದೆ. ಅನೇಕ ವಿದ್ಯಮಾನಗಳನ್ನು, ವಿಚಾರಗಳನ್ನು ಮುಂದಿನ ಜನಾಂಗಕ್ಕೆ ವರ್ಗಾಯಸಿಲು ಬರವಣಿಗೆಯೊಂದೆ ಸಾಧನ.

ಬರವಣಿಗೆಯು ಓದುವುದಕ್ಕಿಂತಲು ಕಠಿಣವಾಗಿದ್ದು, ಬರವಣಿಗೆಯ ಸಮಯದಲ್ಲಿ ಕಣ್ಣು, ಮನಸ್ಸು, ಸ್ನಾಯುಗಳು ಸಾಂಗೋಪಾಂಗವಾಗಿ ಪಾಲ್ಗೊಂಡರೆ ಮಾತ್ರ ಬರವಣಿಗೆ ಉತ್ತಮವಾಗುತ್ತದೆ. ಇಲ್ಲದಿದ್ದರೆ ಬರವಣಿಗೆಯು ಉತ್ತಮವಾಗಲಾರದು. ಬರೆಯುವುದೆಂದರೆ ನಾವು ಆಡುವ ಭಾಷೆಯ ಧ್ವನಿ ಸಂಕೇತಗಳೀಗೆ ಮೂರ್ಥರೂಪ ಕೊಡುವುದಾಗಿ. 'ಬರವಣಿಗೆ ಎಂದರೆ ನಮಗೆ ತಿಳಿದಿದ್ದನ್ನು ಹಾಗೂ ಇನ್ನೊಬ್ಬರು ಹೇಳಿದ್ದನ್ನು ಗೊತ್ತಾದ ಲಿಪಿಯನ್ನು ಬಳಸಿಕೊಂಡು ಬೆರಳುಗಳ ಮೂಲಕ ವ್ಯಕ್ತಪಡಿಸುವುದಾಗಿದೆ.' ಬಾಯಿಂದ ಅಕ್ಷರಗಳು ಉಚ್ಚಾರಣೆಯಾದರೆ ಅದು ಓದುವುದಾಗುತ್ತದೆ, ಕೈಸ್ನಾಯುಗಳ ಬಲದಿಂದ ಅಕ್ಷರಗಳು ಉಚ್ಚಾರಣೆಯಾದುದ್ದನ್ನು ಬರವಣಿಗೆ ಎನ್ನುವರು.[6] ಈಗ ಹಿಂದೆ ಇದ್ದ ಬರವಣಿಗೆ ಸಾಧನಗಳೂ (ಕಡ್ಡಿ, ಬಳಪ, ಸೀಸದಕಡ್ಡಿ, ನವಿಲು ಗರಿ, ಲೇಖನಿ, ಪೆನ್ನು ಇತ್ಯಾದಿ) ಹಾಗೂ ರೀತಿ ನೀತಿಗಳಲ್ಲಿ ಸಾಕಷ್ಟು ವ್ಯತ್ಯಾಸಗಳು ಕಂಡುಬಂದಿವೆ. ಉದಾ: ಟೈಪಿಂಗ್ ಮೆಶಿನ್, ಮೊಬೈಲ್, ಟ್ಯಾಬ್, ಗಣಕಯಂತ್ರದಲ್ಲಿನ ಕೈ ಬರಹ ಮಾದರಿಗಳು.

ಪ್ರಸ್ತುತ ಅಧ್ಯಾಯದಲ್ಲಿ ದಕ್ಷಿಣ ಕನ್ನಡ ಪರಿಸರದಲ್ಲಿನ ಬ್ಯಾರಿ ಮನೆಮಾತಾಗಿರುವ ಮಕ್ಕಳು ಕನ್ನಡವನ್ನು ಬರೆಯುವಾಗ ಪದಾದಿ, ಪದಮಧ್ಯ, ಪದಾಂತ್ಯ ಪರಿಸರದಲ್ಲಿ ಯಾವ

ತರಹದ ಸಮಸ್ಯೆಗಳನ್ನು ಹಾಗೂ ವ್ಯತ್ಯಾಸಗಳನ್ನು ಮಾಡುತ್ತಾರೆ ಎಂಬುದನ್ನು ಕುರಿತು ವಿಶ್ಲೇಷಿಸಲಾಗಿದೆ. ಬ್ಯಾರಿ ಮನೆಮಾತುಳ್ಳ ಮಕ್ಕಳು ಕನ್ನಡವನ್ನು ಬರೆಯುವಾಗ ಕಂಡು ಬರುವ ಸಮಸ್ಯೆಗಳು ಅಥವಾ ವ್ಯತ್ಯಾಸಗಳಿಗೆ ಕಾರಣಗಳು ಮತ್ತು ಅವುಗಳನ್ನು ಸರಿಪಡಿಸುವ ಕುರಿತು ತೆಗೆದುಕೊಳ್ಳಬಹುದಾದ ಕ್ರಮದ ಬಗ್ಗೆ ಹೇಳಲಾಗಿದೆ.

ಬ್ಯಾರಿ ಮನೆಮಾತಾಗಿರುವ ಮಕ್ಕಳು ಬರೆಯುವಾಗ ಯಾವ ತರಹದ ಸಮಸ್ಯೆಗಳನ್ನು ಎದುರಿಸುತ್ತಾರೆ. ಅಥವಾ ವ್ಯತ್ಯಾಸಗಳನ್ನು ಮಾಡುತ್ತಾರೆ ಎಂಬುದನ್ನು ಕಂಡು ಹಿಡಿಯಲು ಮೊದಲನೆಯದಾಗಿ ಐದು, ಆರು ಮತ್ತು ಏಳನೆ ತರಗತಿಯ ಪಠ್ಯಪುಸ್ತಗಳಿಂದ ಅಕಾರಾದಿಯಾಗಿ ರಚಿಸಿದ ಪದಗಳ ಪಟ್ಟಿಯಲ್ಲಿನ ಪದಗಳನ್ನು ಹಾಗೂ ಅದರ ಪಠ್ಯಪುಸ್ತಕಗಳಲ್ಲಿನ ಪಾಠಗಳನ್ನು ಉಕ್ತಲೇಕನ ಮಾದರಿಯಲ್ಲಿ ಬರೆಯಿಸಲಾಗಿದೆ. ನಂತರ ಸರ್ವಶಿಕ್ಷಣ ಅಭಿಯಾನದ ಅಡಿಯಲ್ಲಿ ಜಾರಿಯಾಗಿರುವ **"ಬರೆಯುವೆ ನಾನು"** ಕಾರ್ಡ್‌ಗಳನ್ನು ಹೇಳಿ ಬರೆಯಿಸಲಾಗಿದೆ. ಮತ್ತು ಓದು ಕರ್ನಾಟಕ ಪುಸ್ತಕಗಳನ್ನು ಇಟ್ಟುಕೊಂಡು ಪರೀಕ್ಷಿಸಲಾಗಿದೆ. ಅಲ್ಲದೆ ಎರಡನೆಯದಾಗಿ ಮಕ್ಕಳು ಆಯಾ ತರಗತಿಯ ವಾರ್ಷಿಕ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ತೆಗೆದುಕೊಂಡು ಅವರು ಬರೆದ ಪದ ಮತ್ತು ವಾಕ್ಯಗಳನ್ನು ಪರಿಶೀಲಿಸಲಾಗಿದೆ. ಹೀಗೆ ಬರಹ ರೂಪದ ಪದಗಳಿಗೆ ಮಕ್ಕಳು ಯಾವ ರೀತಿಯಾಗಿ ವ್ಯತ್ಯಾಸ ಮಾಡಿದ್ದಾರೆ ಎಂಬುದನ್ನು ತಿಳಿಸಿ, ಅದಕ್ಕೆ ಕಾರಣಗಳನ್ನು ಹುಡುಕಿ ವಿಶ್ಲೇಷಿಸಲಾಗಿದೆ. ಮಕ್ಕಳ ಬರವಣಿಗೆಯಲ್ಲಿ ಕಂಡುಬರುವ ಪ್ರಮುಖ ಸಮಸ್ಯೆಗಳನ್ನು ಈ ಕಳಗಿನಂತೆ ವಿಂಗಡನೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

೬.೧ ಸ್ವರಗಳನ್ನು ಬರೆಯುವ ಸಂದರ್ಭ ಉಂಟಾಗುವ ವ್ಯತ್ಯಾಸಗಳು/ ಸಮಸ್ಯೆಗಳು.

೬.೨ ವ್ಯಂಜನಗಳನ್ನು ಬರೆಯುವ ಉಂಟಾಗುವ ವ್ಯತ್ಯಾಸಗಳು/ ಸಮಸ್ಯೆಗಳು.

೬.೩ ಗುಣಿತಾಕ್ಷರಗಳನ್ನು ಬರೆಯುವ ಉಂಟಾಗುವ ವ್ಯತ್ಯಾಸಗಳು/ ಸಮಸ್ಯೆಗಳು.

೬.೪ ಒತ್ತಕ್ಷರಗಳನ್ನು ಬರೆಯುವ ಉಂಟಾಗುವ ವ್ಯತ್ಯಾಸಗಳು/ ಸಮಸ್ಯೆಗಳು.

೬.೧ ಸ್ವರಗಳನ್ನು ಬರೆಯುವ ಸಂದರ್ಭ ಉಂಟಾಗುವ ವ್ಯತ್ಯಾಸಗಳು/ ಸಮಸ್ಯೆಗಳು.

ದಕ್ಷಿಣ ಕನ್ನಡ ಪರಿಸರದ ಬ್ಯಾರಿ ಮನೆಮಾತುಳ್ಳ ಮಕ್ಕಳು ಸ್ವರಗಳನ್ನು ಬರೆಯುವಾಗ ಪದಾದಿ, ಪದಮಧ್ಯ ಹಾಗೂ ಪದಾಂತ್ಯದಲ್ಲಿ ಹಲವು ತೆರನಾದ ಸಮಸ್ಯೆಗಳನ್ನು ಮಾಡುತ್ತಾರೆ. ಅಂತಹ ಸಮಸ್ಯೆಗಳನ್ನು ಪ್ರಮುಖವಾಗಿ ದೀರ್ಘಸ್ವರಗಳಿಗೆ ಹ್ರಸ್ವಸ್ವರಗಳನ್ನು ಬಳಕೆ ಮಾಡಿ ಬರೆಯುವುದು ಕಂಡುಬರುತ್ತದೆ. ಕೆಲ ಸ್ವರಗಳಿಗೆ ವ್ಯಂಜನಗಳನ್ನು ಬಳಕೆ ಮಾಡಿ ಬರೆಯುವುದು, ಅನುಸ್ವರ ಹಾಗೂ ವಿಸರ್ಗಗಳನ್ನು ಲೋಪಮಾಡುವುದು ಹಾಗೂ

ಸಂಧ್ಯಕ್ಷರಗಳ ಬಳಕೆಯಲ್ಲಿಯೂ ಹಲವಾರು ಸಮಸ್ಯೆಗಳನ್ನು ಮಾಡುತ್ತಾರೆ. ಅಂತಹ ಸಮಸ್ಯೆಗಳನ್ನು ಕ್ರಮವಾಗಿ ಈ ಕೆಳಗಿನಂತೆ ಗುರುತಿಸಲಾಗಿದೆ.

- **ದೀರ್ಘ ಸ್ವರಗಳಿಗೆ ಹ್ರಸ್ವಸ್ವರಗಳನ್ನು ಬಳಕೆಮಾಡಿ ಬರೆಯುತ್ತಾರೆ.**

ಇಲ್ಲಿನ ಮಕ್ಕಳು ಪದಾದಿ ಪದಮಧ್ಯ ಹಾಗೂ ಪದಾಂತ್ಯ ಪರಿಸರದಲ್ಲಿ ಬರುವ ದೀರ್ಘ ಸ್ವರಗಳಿಗೆ ಹ್ರಸ್ವಸ್ವರಗಳನ್ನು ಬಳಕೆ ಮಾಡಿ ಬರೆಯುತ್ತಾರೆ. ಅಂತಹ ಕೆಲವು ವ್ಯತ್ಯಾಸಗಳನ್ನು ಈ ಕೆಳಗಿನಂತೆ ಗುರುತಿಸಬಹುದು, ಉದಾಹರಣೆಗೆ

- **ಪದಾದಿ ಪರಿಸರ:**

	ಬರಹರೂಪ	**ಮಕ್ಕಳು ಬರೆಯುವ ರೂಪ**
	ಆಗ	ಅಗ
ಆ>ಅ	ಆಳ	ಅಳ
	ಆಲಯ	ಅಲಯ
	ಆಗಸ	ಅಗಸ
	ಆವರಣ	ಅವರಣ
	ಆಗಮನ	ಅಗಮನ
	ಈಶ	ಇಶ
ಈ>ಇ	ಈಗ	ಇಗ
	ಈಜು	ಇಜು
	ಈಚಲ	ಇಚಲ
	ಊರು	ಉರು
ಊ>ಉ	ಊನ	ಉನ
	ಊತ	ಉತ
	ಊಟ	ಉಟ
	ಏಣಿ	ಎಣಿ
ಏ>ಎ	ಏಳು	ಎಳು
	ಏನು	ಎನು
	ಏಡಿ	ಎಡಿ
	ಏಕೆ	ಎಕೆ
	ಏಕದಂತ	ಎಕದಂತ
	ಓದು	ಒದು
ಓ>ಒ	ಓಟ	ಒಟ

ಓಡು	ಒಡು
ಓಲೆ	ಒಲೆ
ಓಲಗ	ಒಲಗ
ಓರಣ	ಒರಣ
ಓದುವುದು	ಒದುವುದು

• **ಪದಮಧ್ಯ ಪರಿಸರ**

	ಬರಹರೂಪ	ಮಕ್ಕಳು ಬರೆಯುವ ರೂಪ
ಆ>ಅ	ಒತ್ತಾಯ	ಒತ್ತಯ
	ತಪಾಸಣೆ	ತಪಸನೆ
	ಫಲಹಾರ	ಫಲಹರ
	ಅನುರೂಪ	ಅನುರಪ
	ಅನುಸಾರ	ಅನುಸರ
ಈ>ಇ	ತೀರ್ಥ	ತಿರ್ಥ
	ಚೀಲ	ಚಿಲ
	ಮೀನು	ಮಿನು
	ಜೀವ	ಈವ
	ವೀರುಶೆಟ್ಟಿ	ವಿರುಶೆಟ್ಟಿ
	ಕೀಟ	ಕಿಟ
ಊ>ಉ	ಸಮೂಹ	ಸಮುಹ
	ನೂರು	ನುರು
	ಕೂದಲು	ಕುದಲು
	ಗೂಡು	ಗುಡು
	ಊಟ	ಉಟ
ಏ>ಎ	ಬೇಲಿ	ಬೆಲಿ
	ಬೇಸರ	ಬೆಸರ
	ಕೇಸರಿ	ಕೆಸರಿ
	ತೇಗ	ತೆಗ
	ಮೇರು	ಮೆರು
	ಸೇಡು	ಸೆಡು

ಓ>ಒ	ಕೋಲಾಟ	ಕೊಲಟ
	ಗೋಡೆ	ಗೊಡೆ
	ತೋಟ	ತೊಟ
	ಓಟ	ಟೊಟ
	ಟೋದಿಸು	ಒದಿಸು

• **ಪದಾಂತ್ಯ ಪರಿಸರ**

	ಬರಹರೂಪ	ಮಕ್ಕಳು ಬರೆಯುವ ರೂಪ
ಆ>ಅ	ತುಂಬಾ	ತುಬ
	ಮಾಲಾ	ಮಲ
	ಶಾಲಾ	ಶಲ
	ಜಟಕಾ	ಜಟಕ
ಈ>ಇ	ಫೀ	ಪಿ
	ಕರೀ	ಕರಿ
	ಮೀ	ಮಿ
ಊ>ಉ	ಹಾಗೂ	ಹಾಗು
	ಜಂಬೂ	ಜಬು
	ಎಂದೂ	ಎಂದು
	ಹಿಂದೂ	ಹಿಂದು

ಮಕ್ಕಳು ಪದಾದಿ, ಪದಮಧ್ಯ ಹಾಗೂ ಪದಾಂತ್ಯ ಪರಿಸರದಲ್ಲಿ ಬರುವ ದೀರ್ಘ ಸ್ವರಗಳಿಗೆ ಹ್ರಸ್ವಸ್ವರಗಳನ್ನು ಬಳಕೆ ಮಾಡಿ ಬರೆಯುವುದು ಕಂಡುಬರುತ್ತದೆ. ಈ ತೆರನಾದ ವ್ಯತ್ಯಾಸಕ್ಕೆ ಕಾರಣಗಳೆಂದರೆ:-

* ಸಾಮಾನ್ಯವಾಗಿ ಮಕ್ಕಳು ಮಾತನಾಡುವ ಸಂದರ್ಭದಲ್ಲಿ ದೀರ್ಘಸ್ವರಗಳ ಬಳಕೆ ಕಡಿಮೆಯಾಗಿರುವುದು.
* ಸ್ವರಗಳ ಉಚ್ಚಾರಣೆಯಲ್ಲಿನ ಅಲ್ಪಧ್ವನಿ ಸಾಮ್ಯತೆಯನ್ನು ಗಮನಿಸದಿರುವುದು.
* ಸ್ವರಗಳಲ್ಲಿನ ರೂಪ ಸಾಮ್ಯತೆ.
* ಶಿಕ್ಷಕರಲ್ಲಿನ ಉಚ್ಚಾರಣ ವ್ಯತ್ಯಾಸ
* ವಿದ್ಯಾರ್ಥಿಗಳಲ್ಲಿನ ಆಲಿಸುವಿಕೆಯ ವ್ಯತ್ಯಾಸ

*ಮಕ್ಕಳಿಗೆ ಹ್ರಸ್ವಸ್ವರ ಹಾಗೂ ದೀರ್ಘ ಸ್ವರಗಳ ಬಗ್ಗೆ ಸ್ಪಷ್ಟ ಪರಿಕಲ್ಪನೆ ಮೂಡಿಸದಿರುವುದು.

- ಪದಾದಿ ಪರಿಸರದಲ್ಲಿ ಹ್ರಸ್ವಸ್ವರ 'ಒ' ಧ್ವನಿಯ ಬದಲು ವ್ಯಂಜನಾಕ್ಷರ 'ವ'ಗುಣಿತಾಕ್ಷರಗಳನ್ನು ಬರೆಯುತ್ತಾರೆ. ಉದಾರಣೆಗೆ

	ಬರಹರೂಪ	ಮಕ್ಕಳು ಬರೆಯುವ ರೂಪ
ಒ>ವ	ಒಡೆಯ	ವಡೆಯ
	ಒಡವೆ	ವಡವೆ
	ಒನಕೆ	ವನಕೆ
	ಒಪ್ಪಿಸು	ವಪ್ಪಿಸು
	ಒಗ್ಗರಣೆ	ವಗ್ಗರಣೆ
	ಓಲೆ	ವಾಲೆ
	ಓಲಗ	ವಾಲಗ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ಧ್ವನಿಗಳ ವ್ಯತ್ಯಾಸಕ್ಕೆ ಕಾರಣವನ್ನು ಈ ಕೆಳಗಿನಂತೆ ವಿಶ್ಲೇಷಿಸಬಹುದು. ದಕ್ಷಿಣ ಕನ್ನಡ ಪರಿಸರದ ವ್ಯವಹಾರಿಕ ಕನ್ನಡದಲ್ಲಿ ತುಳು ಭಾಷೆಯ ಪ್ರಭಾವ ಇರುವುದರಿಂದ ಮಕ್ಕಳು ಈ ರೀತಿಯ ವ್ಯತ್ಯಾಸ ಮಾಡಿ ಬರೆಯುತ್ತಾರೆ ಎನ್ನಲಾಗಿದೆ.

ಅದೇ ರೀತಿಯಲ್ಲಿ ಪದಾದಿ ಪರಿಸರದಲ್ಲಿ ಹ್ರಸ್ವಸ್ವರ 'ಒ' ಧ್ವನಿಯ ಬದಲು ಹ್ರಸ್ವಸ್ವರ 'ಉ' ಧ್ವನಿಯನ್ನು ಕೂಡ ಬರೆಯುತ್ತಾರೆ. ಉದಾರಣೆಗೆ

	ಬರಹರೂಪ	ಮಕ್ಕಳು ಬರೆಯುವ ರೂಪ
ಒ>ಉ	ಮೊನ್ನೆ	ಮುನ್ನೆ
	ಒಣಗಿತು	ಉನಗಿತು
	ಕೊಂಬು	ಕುಂಬು
	ಒಂಬತ್ತು	ಉಂಬತ್ತು
	ಕೊಳ	ಕುಳ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ಧ್ವನಿಗಳ ವ್ಯತ್ಯಾಸಕ್ಕೆ ಕಾರಣವನ್ನು ಈ ಕೆಳಗಿನಂತೆ ವಿಶ್ಲೇಷಿಸಬಹುದು. ದಕ್ಷಿಣ ಕನ್ನಡ ಪರಿಸರದ ವ್ಯವಹಾರಿಕ ಕನ್ನಡದಲ್ಲಿ ತುಳು ಭಾಷೆಯ ಪ್ರಭಾವ ಇರುವುದರಿಂದ ಮಕ್ಕಳು ಈ ರೀತಿಯ ವ್ಯತ್ಯಾಸ ಮಾಡಿ ಬರೆಯುವ ಸಾಧ್ಯತೆ ಇದೆ. ಮಾತನಾಡುವ ಸಂದರ್ಭಗಳಲ್ಲಿಯೂ ಇದೇ ರೀತಿಯಲ್ಲಿ ಉಚ್ಚರಿಸುವುದನ್ನು ಈ ಪರಿಸರದಲ್ಲಿ ಮಾತಿನ ಸಂದರ್ಭದಲ್ಲಿ ಗಮನಿಸಬಹುದು.

- **ಸ್ವರಗಳಿಗೆ ಬದಲಾಗಿ ವ್ಯಂಜನಗಳನ್ನು ಬಳಕೆ ಮಾಡಿ ಬರೆಯುತ್ತಾರೆ.**

ಮಕ್ಕಳು ಬರವಣಿಗೆಯ ಸಂದರ್ಭದಲ್ಲಿ ಪದಾದಿ ಪರಿಸರದಲ್ಲಿ 'ಈ, ಋ' ಸ್ವರಗಳಿಗೆ ಬದಲಾಗಿ 'ಹಿ, ರು,' ವ್ಯಂಜನ ಧ್ವನಿಗಳನ್ನು ಬಳಕೆ ಮಾಡಿ ಬರೆಯುವುದು ಕಂಡುಬರುತ್ತದೆ. ಈ ತೆರನಾದ ವ್ಯತ್ಯಾಸವನ್ನು ತರಗತಿಯ ಮಕ್ಕಳಲ್ಲಿ ಕಾಣಬಹುದು. ಉದಾಹರಣೆಗೆ

	ಬರಹರೂಪ	ಮಕ್ಕಳು ಬರೆಯುವ ರೂಪ
ಈ>ಹಿ	ಈಶ	ಹಿಶ
	ಈಗ	ಹಿಗ
	ಈಶ್ವರ	ಇಶ್ವರ
	ಈಜು	ಹಿಜು
	ಈಡೇರು	ಹಿಡೇರು
ಋ>ರು	ಋಣ	ರುನ
	ಋತು	ರುತು
	ಋಜು	ರುಜು
	ಋಗ್ವೇದ	ರುಗ್ವೇದ

ಮಕ್ಕಳು ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ಕೆಲವು ಸ್ವರಗಳಿಗೆ ವ್ಯಂಜನಗಳನ್ನು ಬಳಕೆ ಮಾಡಿ ಬರೆಯುತ್ತಾರೆ. ಈ ತೆರನಾದ ವ್ಯತ್ಯಾಸ ಮಾಡಿ ಬರೆಯುವುದನ್ನು ತಪ್ಪು ಎನ್ನುವುದಕ್ಕಿಂತ ಅದು ಕನ್ನಡ ಭಾಷೆಯ ಸಹಜ ರೂಪವೆನ್ನಬಹುದು. ಏಕೆಂದರೆ ವಿಶೇಷ ವಲಯವಾದ ಶಿಕ್ಷಣ ಕ್ಷೇತ್ರವನ್ನು ಬಿಟ್ಟು ಉಳಿದ ಕಡೆಯಲ್ಲಿ ಇವುಗಳ ಬಳಕೆ ಕಡಿಮೆ, ಕನ್ನಡದ ಜಾಯಮಾನ, ಅದಕ್ಕಿಂತಲೂ ಪ್ರಮುಖವಾಗಿ ಆಡು ನುಡಿಯ ಪ್ರಭಾವ, ಉಚ್ಚಾರಣೆಯ ರೀತಿ ನೀತಿಯಿಂದಾಗಿ ಅವುಗಳ ವಿಕಲ್ಪ ರೂಪಗಳನ್ನು ಬಳಕೆ ಮಾಡಿ ಬರೆಯುವುದು ಕಂಡುಬರುತ್ತದೆ. ಅಲ್ಲದೆ 'ಋ' ಸ್ವರಧ್ವನಿಗೆ ಬದಲಾಗಿ 'ರು' ವ್ಯಂಜನವನ್ನು ಬಳಕೆ ಮಾಡಿ ಬರೆಯುವುದಕ್ಕೆ ಕಾರಣ ಈ ಎರಡು ಧ್ವನಿಗಳಲ್ಲಿನ ಉಚ್ಚಾರಣೆಯ ಭಿನ್ನತೆಯನ್ನು

ಗಮನಿಸದಿರುವುದು ಹಾಗೂ ಅತಿ ವ್ಯಾಪ್ತಿಯಿಂದ ಈ ತೆರನಾಗಿ ವ್ಯತ್ಯಾಸ ಮಾಡಿ ಬರೆದಿರಬಹುದು ಎನ್ನಲಾಗಿದೆ.

ಇನ್ನು 'ಈ', 'ಋ' ಸ್ವರಗಳ ಬದಲಾಗಿ ವ್ಯಂಜನ ಧ್ವನಿ 'ಹಿ', 'ರು'ಗಳನ್ನು ಬಳಕೆ ಮಾಡಿ ಬರೆಯುವುದನ್ನು ಗಮನಿಸಿದಾಗ ಈ ಧ್ವನಿಗಳಲ್ಲಿನ ಉಚ್ಚಾರಣಾ ಭಿನ್ನತೆಯನ್ನು ಗಮನಿಸದಿರುವುದು ಹಾಗೂ 'ಈ', 'ಋ'ಗಳ ಬಳಕೆ ಕನ್ನಡದಲ್ಲಿ ಕಡಿಮೆಯಿರುವುದರಿಂದ ಈ ತೆರನಾಗಿ ವ್ಯತ್ಯಾಸ ಮಾಡಿ ಬರೆದಿರಬಹುದು ಎನ್ನಲಾಗಿದೆ.

•ಅನುಸ್ವರ ಹಾಗೂ ವಿಸರ್ಗಗಳನ್ನು ಲೋಪ ಮಾಡಿ ಬರೆಯುತ್ತಾರೆ.

ಪದಮಧ್ಯ ಪರಿಸರದಲ್ಲಿ ಬರುವ ಅನುಸ್ವರ (0) ಹಾಗೂ ವಿಸರ್ಗ (ಃ)ಗಳನ್ನು ಲೋಪಮಾಡಿ ಬರೆಯುವುದು ಕಂಡುಬರುತ್ತದೆ. ಉದಾಹರಣೆಗೆ

	ಬರಹರೂಪ	ಮಕ್ಕಳು ಬರೆಯುವ ರೂಪ
ಉದಾ	ಅಂಟು	ಅಟು
	ಅಂಗಳ	ಅಗಲ
	ಗುಂಪು	ಗುಪು
	ಚಂದ	ಚದ
	ಮಂದ	ಮದ
	ಬಂದ	ಬದ
	ಅಂತ	ಅತ
	ದುಃಖ	ದುಕ
	ಅಂತಃಪುರ	ಅತಪುರ
	ಅಂತಃಕಲಹ	ಅತಕಲಹ
	ಅಂತಃಕರಣ	ಅತಕರನ

ಪದಮಧ್ಯ ಪರಿಸರದಲ್ಲಿನ ಅನುಸ್ವರ ಮತ್ತು ವಿಸರ್ಗಗಳನ್ನು ಲೋಪ ಮಾಡಿ ಬರೆಯುತ್ತಾರೆ. ಈ ತೆರನಾದ ವ್ಯತ್ಯಾಸ ಮಾಡಿ ಬರೆಯಲು ಮುಖ್ಯವಾದ ಕಾರಣವೆಂದರೆ; ಈ ಮಕ್ಕಳ ಮನೆಮಾತಾದ ಬ್ಯಾರಿ ಭಾಷೆಯಲ್ಲಿ ಈ ಅನುಸ್ವರ ಮತ್ತು ವಿಸರ್ಗಗಳು ಇಲ್ಲದಿರುವುದು.[7] ಜೊತೆಗೆ ವ್ಯಂಜನದ ಪ್ರತಿ ವರ್ಗದಲ್ಲಿ ಬರುವ ಅನುನಾಸಿಕಗಳು ಅನುಸ್ವರದ ಕಾರ್ಯವನ್ನು ನಿರ್ವಹಿಸುವುದನ್ನು ಗಮನಿಸಬಹುದು. ಅನುಸ್ವರ ಮತ್ತು ವಿಸರ್ಗಗಳ ಉಚ್ಚಾರಣೆಯ ಬಗ್ಗೆ ಸ್ಪಷ್ಟವಾಗಿ ತಿಳಿಸದಿರುವುದು, ವಿಸರ್ಗದ ಬಳಕೆ ಕನ್ನಡದ ಆಡುಮಾತಿನಲ್ಲಿ ಇಲ್ಲದಿರುವುದು, ಅನ್ಯ ಭಾಷಾ ಶಬ್ದಗಳ ಬಳಕೆಯಿಂದಾಗಿ ಈ ತೆರನಾಗಿ ವ್ಯಾತ್ಯಾಸ ಮಾಡಿ ಬರೆದಿರಬಹುದು ಎನ್ನಲಾಗಿದೆ.

- **ಸಂಧ್ಯಕ್ಷರಗಳನ್ನು ಬರೆಯುವಾಗ ಉಂಟಾಗುವ ಸಮಸ್ಯೆಗಳು**

ಸಂಧ್ಯಕ್ಷರಗಳಾದ 'ಐ', 'ಔ'ಗಳನ್ನು ಪದಾದಿ, ಪದಮಧ್ಯ ಹಾಗೂ ಪದಾಂತ್ಯ ಪರಿಸರದಲ್ಲಿ 'ಐ' ಹಾಗೂ 'ಔ' ಧ್ವನಿಗಳಿಗೆ ಬದಲಿಗೆ ಕ್ರಮವಾಗಿ 'ಅಯ್' ಹಾಗೂ 'ಅವ್' ಬಳಕೆ ಮಾಡಿ ಬರೆಯುವುದು ಕಂಡುಬರುತ್ತದೆ. ಉದಾಹರಣೆಗೆ.

- **ಪದಾದಿ ಪರಿಸರ**

	ಬರಹರೂಪ	ಮಕ್ಕಳು ಬರೆಯುವ ರೂಪ
ಐ>ಅಯ್	ಐಸಿರಿ	ಅಯಸಿರಿ
	ರೈತ	ರಇತ
	ಐಡಿ	ಅಯಡಿ
	ಐದನೆ	ಅಯದನೆ
	ಐರಾವತ	ಅಯರವತ
ಔ>ಅವ್	ಔತಣ	ಅವತನ
	ಔಡಲ	ಅವಡಲ
	ಔಷಧ	ಅವಶದ
	ಔಪಚಾರಿಕ	ಅವಪಚಾರಿಕ

- **ಪದಾದಿ ಪರಿಸರ**

	ಬರಹರೂಪ	ಮಕ್ಕಳು ಬರೆಯುವ ರೂಪ

ಐ>ಬಿ	ಕೈದಿ	ಕಯಿದಿ
	ಪೈಸೆ	ಪಯಿಸೆ
	ಪೈಲು	ಪಯಿಲು
	ಮೈದಾನ	ಮಯಿದಾನ
	ರೈಲು	ರಯಿಲು
	ಮೈಲು	ಮಯಿಲು
ಔ>ಅವ್	ಕೌತುಕ	ಕವತುಕ
	ಗೌಡ	ಗಾವಡ
	ಕೌಶಲ	ಕವಸಲ
	ಪೌರುಷ	ಪವರುಷ
	ಸೌರಭ	ಸವರಬ
ಫ>ಪ	ಸಫಲ	ಸಪಲ
	ಪಲಾಫಲ	ಪಲಪಲ
	ಫಳಫಳ	ಪಳಪಳ
	ರೇಫೆ	ರೆಪೆ
ಭ>ಬ	ಅಭಯ	ಅಬಯ
	ವಿಭಾಗ	ವಿಬಾಗ
	ಸಂಭವ	ಸಬವ
	ಅನುಭವ	ಅನುಬವ
	ಅಭಿನಂದನೆ	ಅಬಿನಂದನೆ
	ಗಂಭೀರ	ಗಂಬಿರ

- **ಪದಾಂತ್ಯ ಪರಿಸರ**

	ಬರಹರೂಪ	ಮಕ್ಕಳು ಬರೆಯುವ ರೂಪ
ಐ>ಅಯ್	ಮೈ	ಮಯ್
	ಪೈ	ಪಯ್
	ಕೈ	ಕಯ್
	ಬೈ	ಬಯ್

ಸಂಧ್ಯಕ್ಷರಗಳಾದ 'ಐ' ಹಾಗೂ 'ಔ' ಗಳನ್ನು ಮಕ್ಕಳು ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ಬರೆಯುವಾಗ ಹಲವು ತೆರನಾದ ಸಮಸ್ಯೆಗಳನ್ನು ಮಾಡುತ್ತಾರೆ. ಈ ತೆರನಾಗಿ ವ್ಯತ್ಯಾಸ ಮಾಡಿ ಬರೆಯುವುದನ್ನು ತಪ್ಪು ಎನ್ನುವುದಕ್ಕಿಂತ ಅದು ಕನ್ನಡ ಭಾಷೆಯ ಸಹಜ ರೂಪವೆನ್ನಬಹುದು. ಏಕೆಂದರೆ ವಿಶೇಷ ವಲಯವಾದ ಶಿಕ್ಷಣ ಕ್ಷೇತ್ರವನ್ನು ಬಿಟ್ಟು ಉಳಿದ ಕಡೆಯಲ್ಲಿ ಇವುಗಳ ಬಳಕೆ ಕಡಿಮೆ. ಕನ್ನಡದ ಜಾಯಮಾನ, ಆಡು ನುಡಿಯ ಪ್ರಭಾವ, ಉಚ್ಚಾರಣೆಯ ರೀತಿ ನೀತಿಯಿಂದಾಗಿ ಅವುಗಳ ವಿಕಲ್ಪ ರೂಪಗಳನ್ನು ಬಳಕೆ ಮಾಡಿ ಬರೆಯುವುದು ಕಂಡುಬರುತ್ತದೆ. ಅಲ್ಲದೆ ಸಂಧ್ಯಕ್ಷರಗಳ ಉಚ್ಚಾರಣೆ ಹಾಗು ಬರಹಕ್ಕೂ ಇರುವ ಭಿನ್ನತೆಯನ್ನು ಗಮನಿಸದೆ ಇರುವುದು, ಕನ್ನಡದಲ್ಲಿ ಸಂಧ್ಯಕ್ಷರಗಳ ಬಳಕೆ ಕಡಿಮೆ ಇರುವುದು, ಶಿಕ್ಷಕರ ಉಚ್ಚಾರಣೆಯಲ್ಲಿನ ವ್ಯತ್ಯಾಸ, ವಿದ್ಯಾರ್ಥಿಗಳ ಆಲಿಸುವಿಕೆಯಲ್ಲಿನ ವ್ಯತ್ಯಾಸ, ಪರಭಾಷೆಯ ಪ್ರಾಭಾವ ಇತ್ಯಾದಿ ಕಾರಣಗಳಿಂದ ಈ ತೆರನಾಗಿ ವ್ಯತ್ಯಾಸ ಮಾಡಿ ಬರೆದಿರಬಹುದು ಎಂದು ಕಲ್ಪಿಸಬಹುದು.

೬.೨ ವ್ಯಂಜನಗಳನ್ನು ಬರೆಯುವ ಉಂಟಾಗುವ ವ್ಯತ್ಯಾಸಗಳು/ ಸಮಸ್ಯೆಗಳು.

ಪದಾದಿ ಹಾಗೂ ಪದಮಧ್ಯ ಪರಿಸರದಲ್ಲಿ ವ್ಯಂಜನಗಳನ್ನು ಬರೆಯುವಾಗ ಮಹಾಪ್ರಾಣಕ್ಕೆ ಅಲ್ಪಪ್ರಾಣ, ಘೋಷತ್ವಕ್ಕೆ ಅಘೋಷತ್ವಕ್ಕೆ ಘೋಷತ್ವ ಧ್ವನಿಗಳ ಬಳಕೆ ಮಾಡುವುದು, ಅನುನಾಸಿಕಗಳು, ಊಷ್ಮ ಧ್ವನಿಗಳು, ಪಾರ್ಶ್ವಿಕ ಧ್ವನಿಗಳ ಬಳಕೆಯಲ್ಲಿ ಹಾಗೂ ಅರ್ಧ ಸ್ವರಗಳ ಬಳಕೆಯಲ್ಲಿ ಹಲವು ರೀತಿಯ ವ್ಯತ್ಯಾಸಗಳನ್ನು ಮಾಡಿ ಬರೆಯುವುದು ಕಂಡುಬರುತ್ತದೆ. ಅವುಗಳನ್ನು ಈ ಕೆಳಗಿನಂತೆ ನೋಡಬಹುದು.

- **ಮಹಾಪ್ರಾಣಕ್ಕೆ ಅಲ್ಪಪ್ರಾಣ ಧ್ವನಿಗಳನ್ನು ಬಳಕೆ ಮಾಡಿ ಬರೆಯುವುದು**

ಮಹಾಪ್ರಾಣಸಹಿತವಾದ ಸಂಸ್ಕೃತ ಶಬ್ದಗಳನ್ನು ಹೊಸದಾಗಿ ಸ್ವೀಕರಿಸುವಾಗ ಅವುಗಳನ್ನು ಅಲ್ಪಪ್ರಾಣಸಹಿತಗಳಾಗಿ ಮಾಡಿ ಬಳಸುವ ಪರಿಪಾಠವನ್ನು ಕನ್ನಡದ ಸಂದರ್ಭದಲ್ಲಿಯೂ ಗಮನಿಸಬಹುದು.[8] ಇಲ್ಲಿ ಪದಾದಿ, ಪದಮಧ್ಯ ಹಾಗೂ ಪದಾಂತ್ಯ ಪರಿಸರದಲ್ಲಿ ಮಹಾಪ್ರಾಣಕ್ಕೆ ಬದಲಾಗಿ ಅಲ್ಪಪ್ರಾಣ ಧ್ವನಿಗಳನ್ನು ಬಳಕೆ ಮಾಡಿ ಬರೆಯುವುದು ಕಂಡುಬರುತ್ತದೆ. ಉದಾಹರಣೆಗೆ

- **ಪದಾದಿ ಪರಿಸರ**

	ಬರಹರೂಪ	ಮಕ್ಕಳು ಬರೆಯುವ ರೂಪ
ಖ>ಕ	ಖಡ್ಗ	ಕಡ್ಗ
	ಖಾಸಗಿ	ಕಾಸಗಿ

	ಖರ್ಚು	ಕರ್ಚು
	ಖುಷಿ	ಕುಷಿ
	ಖನಿಜ	ಕನಿಜ
ಘ>ಗ	ಘಟನೆ	ಗಟನೆ
	ಘಟಕ	ಗಟಕ
	ಘನತೆ	ಗನತೆ
	ಘಟ್ಟ	ಗಟ್ಟ
	ಘಂಟೆ	ಗಟೆ
	ಘಮಘಮ	ಗಮಗಮ
	ಘೇಂಡಾಮೃಗ	ಗೇಂಡಾಮೃಗ
ಛ>ಚ	ಛಂದಸ್ಸು	ಚಂದಸ್ಸು
	ಛತ್ರಪತಿ	ಚತ್ರಪತಿ
	ಛದ್ಮವೇಶ	ಚದ್ಮವೇಶ
	ಛೇದಿಸು	ಚೇದಿಸು
	ಛೀಮಾರಿ	ಚೀಮಾರಿ
	ಛಾಯಾಗ್ರಾಹಕ	ಚಯಗ್ರಹಕ
ಝ>ಜ	ಝರಿ	ಜರಿ
	ಝಣಝಣ	ಜನಜನ
	ಝಂಡ	ಜಂಡಾ
	ಝೇಂಕಾರ	ಜೆಕಾರ
ಠ>ಟ	ಠೇವಣಿ	ಟೆವನಿ

	ಠಸ್ಸೆ	ಟಸ್ಸೆ
	ಠೀವಿ	ಟಿವಿ
	ಠೇಂಕಾರ	ಟೇಂಕಾರ
	ಠಾಣೆ	ಟಾನೆ

	ಬರಹರೂಪ	ಮಕ್ಕಳು ಬರೆಯುವ ರೂಪ
ಢ>ಡ	ಢಗೆ	ಡಗೆ
	ಢಾಲು	ಡಾಲು
	ಢಣಢಣ	ಡನಡನ
	ಢಕ್ಕೆ	ಡಕೆ
ಥ>ತ	ಥಳಕು	ತಳಕು
	ಥಳಥಳ	ತಲತಲ
	ಥಳಿಸಿ	ತಳಿಸು
ಧ>ದ	ಧನ	ದನ
	ಧನಂಜಯ	ದನಂಜಯ
	ಧನ್ಯ	ದನ್ಯ
	ಧರೆ	ದರೆ
	ಧರ್ಮ	ದರಮ
	ಧಾಟಿ	ದಾಟಿ

	ಧರಣಿ	ದರನಿ
	ಧಣಿ	ದನಿ
	ಧಾತ್ರಿ	ದಾತಿರಿ
	ಧಾತು	ದಾತು
ಫ>ಪ	ಫಜೀತಿ	ಪಜಿತಿ
	ಫಕೀರ	ಪಕಿರ
	ಫಲ	ಪಲ
	ಫಣ	ಪನ
	ಫಲಕ	ಪಲಕ
	ಫಣಿ	ಪನಿ
	ಫಸಲು	ಪಸಲು
	ಫಲಹಾರ	ಪಲಹರ
ಭ>ಬ	ಭೋಜನ	ಬೋಜನ
	ಭೇದಿಸು	ಬೆದಿಸು
	ಭಯ	ಬಯ
	ಭರತ	ಬರತ
	ಭವನ	ಬವನ
	ಭಾವನೆ	ಬವನೆ
	ಭೂಪಟ	ಬುಪಟ
	ಭಜನೆ	ಬಜನೆ
	ಭಾವಿಸು	ಬಾವಿಸು

* **ಪದಮಧ್ಯ ಪರಿಸರ**

	ಬರಹರೂಪ	ಮಕ್ಕಳು ಬರೆಯುವ ರೂಪ
ಖ>ಕ	ದಾಖಲೆ	ದಾಕಲೆ
	ದವಖಾನೆ	ದವಕಾನೆ
	ಅಖಂಡ	ಅಕಂಡ
	ಮುಖ	ಮುಕ
ಘ>ಗ	ಲಘು	ಲಗು
	ಮೇಘ	ಮೆಗ
	ಶೀಘ್ರ	ಸೀಗರ
	ಸಂಘಜೀವಿ	ಸಂಗಜೀವಿ
	ಸಂಘಟನೆ	ಸಂಗಟನೆ
ಛ>ಚ	ಮೂರ್ಛೆ	ಮೂರ್ಚೆ
	ಊಂಛಾ	ಊಚ
ಠ>ಟ	ಕಠೋರ	ಕಟೋರ
	ಪಾಠ	ಪಾಟ
	ಪೀಠಿಕೆ	ಪಿಟಿಕೆ
	ಕಂಠಾಭರಣ	ಕಂಟಬರನ
	ಹಠಮಾರಿ	ಹಟಮಾರಿ

ಥ>ತ	ಕಥನ	ಕತನ
	ರಥ	ರತ
	ಪಥ	ಪತ
	ಸಾರಥಿ	ಸರತಿ
	ಅಥಣಿ	ಅತನಿ
ಧ>ದ	ಅಧಿಕಾರ	ಅದಿಕಾರ
	ಅಧಿಕ	ಅದಿಕ
	ಆಧುನಿಕ	ಅದುನಿಕ
	ಅಧಮ	ಅದಮ
	ಅಧಿನಿಯಮ	ಅದಿನಿಯಮ
	ಅಧಿವೇಶನ	ಅದಿವೆಸನ
ಫ>ಪ	ಕಫ	ಕಪ
	ಸಫಲ	ಸಪಲ
	ಫಲಾಫಲ	ಪಲಪಲ
	ಫಳಫಳ	ಪಳಪಳ
	ರೇಫೆ	ರೆಪೆ
ಭ>ಬ	ಅಭಯ	ಅಬಯ
	ವಿಭಾಗ	ವಿಬಾಗ
	ಸಂಭವ	ಸಬವ

ಅನುಭವ	ಅನುಬವ
ಅಭಿನಂದನೆ	ಅಬಿನಂದನೆ
ಗಂಭೀರ	ಗಂಬಿರ

ಮಕ್ಕಳು ಮಹಾಪ್ರಾಣಕ್ಕೆ ಬದಲಾಗಿ ಅಲ್ಪಪ್ರಾಣ ಧ್ವನಿಗಳನ್ನು ಬಳಕೆ ಮಾಡಿ ಬರೆಯಲು ಕಾರಣಗಳೆಂದರೆ.

ಮಹಾಪ್ರಾಣಸಹಿತವಾದ ಶಬ್ದಗಳನ್ನು ಉಚ್ಚರಿಸುವಾಗ ಕನ್ನಡದ ಸಂದರ್ಭದಲ್ಲಿಯೂ ನೇಕ ಬಾರಿ ಅವುಗಳನ್ನು ಅಲ್ಪಪ್ರಾಣಸಹಿತಗಳನ್ನಾಗಿ ಮಾಡಿ ಉಚ್ಚರಿಸುವುದರಿಂದ ಈ ರೀತಿ ವ್ಯತ್ಯಾಸವಾಗುತ್ತದೆ ಅದರಲ್ಲಿಯೂ ಮುಖ್ಯವಾಗಿ

ಬ್ಯಾರಿ ವರ್ಣಮಾಲೆಯನ್ನು ಗಮನಿಸಿದಾಗ ಅದರಲ್ಲಿ ಮಹಾಪ್ರಾಣ ಅಕ್ಷರಗಳು ಇಲ್ಲದಿರುವುದು ಕಂಡುಬರುತ್ತದೆ. ಅದರಿಂದಾಗಿಯೇ ಇವರ ಆಡು ಮಾತಿನಲ್ಲಿ ಮಹಾಪ್ರಾಣ ಧ್ವನಿಗಳ ಬಳಕೆ ತೀರಾ ಕಡಿಮೆ

ಮತ್ತು ಕನ್ನಡದ ಸಂದರ್ಭದಲ್ಲಿ ಧ್ವನಿ ಸಾಮ್ಯತೆಯನ್ನು ಗಮನಿಸದಿರುವುದು.

ಕೆಲ ಧ್ವನಿಗಳಲ್ಲಿನ ರೂಪ ಸಾಮ್ಯತೆ

ಈ ಧ್ವನಿಗಳ ಉಚ್ಚಾರಣೆಯ ಬಗ್ಗೆ ಶಿಕ್ಷಕರು ಮಕ್ಕಳಿಗೆ ಸರಿಯಾದ ಪರಿಕಲ್ಪನೆ ಮೂಡಿಸದಿರುವುದು.

ಉಚ್ಚಾರಣೆಯಲ್ಲಿನ ವ್ಯತ್ಯಾಸ

ಆಲಿಸುವಿಕೆಯ ಸಂದರ್ಭ ಗಮನಹರಿಸದಿರುವುದು.

ನಅನ್ಯ ಭಾಷೆಯ ಪ್ರಭಾವ ಇತ್ಯಾದಿ ಕಾರಣದಿಂದಾಗಿ ಈ ತೆರನಾದ ವ್ಯತ್ಯಾಸ ಮಾಡಿ ಬರೆಯುತ್ತಾರೆ.

- **ಅನುನಾಸಿಕ ಧ್ವನಿಗಳನ್ನು ವ್ಯತ್ಯಾಸ ಮಾಡಿ ಬರೆಯುತ್ತಾರೆ.**

ಅನುನಾಸಿಕ ಧ್ವನಿಗಳನ್ನು ಮುಖ್ಯವಾಗಿ ಪದಮಧ್ಯ ಹಾಗೂ ಪದಾಂತ್ಯದಲ್ಲಿ ಮೂರ್ಧನ್ಯ ಅನುನಾಸಿಕ 'ಣ' ಕಾರಕ್ಕೆ ಬದಲಾಗಿ ದಂತ್ಯ ಅನುನಾಸಿಕ 'ನ' ಧ್ವನಿಯನ್ನು ಬರೆಯುತ್ತಾರೆ. ಉದಾಹರಣೆ.

ಪದಮಧ್ಯ ಹಾಗೂ ಪದಾಂತ್ಯ ಪರಿಸರ

	ಬರಹರೂಪ	ಮಕ್ಕಳು ಬರೆಯುವ ರೂಪ
ಣ>ನ	ಗಣ	ಗನ
	ಢಣಢಣ	ಡನಡನ
	ಗಣಿ	ಗನಿ
	ಚರಣ	ಚರನ
	ತಪಾಸಣೆ	ತಪಸನೆ
	ಗೋಣಿ	ಗೊನಿ
	ಫಣಿ	ಪನಿ

ಮಕ್ಕಳು ಅನುನಾಸಿಕ ಧ್ವನಿಗಳನ್ನು ವ್ಯತ್ಯಾಸ ಮಾಡಿ ಬರೆಯಲು ಕಾರಣಗಳೆಂದರೆ

ಮುಖ್ಯವಾಗಿ 'ಣ'ಕಾರ ಬ್ಯಾರಿನುಡಿಯಲ್ಲಿ ಇಲ್ಲ. ಆದರೆ ಮೂರ್ದನ್ಯ 'ಟ', 'ಡ'ಗಳ ಹಿಂದೆ ಬರುವ 'ನ'ಕಾರದ ಉಪಧ್ವನಿಯಾಗಿ ಬರುತ್ತದೆ.

- ಅನುನಾಸಿಕ ಧ್ವನಿಗಳ ಉಚ್ಚಾರಣೆಯಲ್ಲಿನ ಧ್ವನಿ ಸಾಮ್ಯತೆ.
- ಅನುನಾಸಿಕ ಧ್ವನಿಗಳ ಪರಿಕಲ್ಪನೆ ಸ್ಪಷ್ಟವಾಗಿ ಮೂಡಿಸದಿರುವುದು.
- ಬರವಣಿಗೆ ಮತ್ತು ಆಡುನುಡಿಯ ನಡುವಿನ ಅಂತರ
- ಮನೆಮಾತು–ಶಾಲೆ ಮಾತುಗಳ ನಡುವಿನ ವ್ಯತ್ಯಾಸ
- ಕೆಲವು ಮಕ್ಕಳಲ್ಲಿ ನಾಸಿಕದ ದೋಷ ಇರುವುದು.
  ಇತ್ಯಾದಿ ಕಾರಣಗಳಿಂದ ಈ ತೆರನಾದ ವ್ಯತ್ಯಾಸ ಮಾಡಿ ಬರೆಯುವುದು ಕಂಡುಬಂದಿದೆ.

*** ಪಾರ್ಶ್ವಿಕ ಧ್ವನಿಗಳಲ್ಲಿನ ವ್ಯತ್ಯಾಸಗಳು**

ಪದಮಧ್ಯ ಹಾಗೂ ಪದಾಂತ್ಯ ಪರಿಸರದಲ್ಲಿ ಮೂರ್ಧನ್ಯ ಪಾರ್ಶ್ವಿಕ ವ್ಯಂಜನ 'ಳ' ಧ್ವನಿಗೆ ಬದಲಾಗಿ ದಂತ್ಯ ಪಾರ್ಶ್ವಿಕ ವ್ಯಂಜನ 'ಲ' ಧ್ವನಿಯನ್ನು ಬರೆಯುತ್ತಾರೆ. ಉದಾಹರಣೆಗೆ

*** ಪದಮಧ್ಯ ಹಾಗೂ ಪದಾಂತ್ಯ ಪರಿಸರ**

ಳ>ಲ	ಬರಹರೂಪ	ಮಕ್ಕಳು ಬರೆಯುವ ರೂಪ
	ಕಾಳಗ	ಕಲಗ

ಆಳ	ಅಲ
ಸುಳ್ಯ	ಸುಲ್ಯ
ಕೊಳಲು	ಕೊಲಲು
ಬಂದಳು	ಬದಲು
ಮಳೆ	ಮಲೆ
ಕಾಳು	ಕಾಲು
ನಳಿನಿ	ನಲಿನಿ
ಕಂಬಳ	ಕಂಬಲ

ಮಕ್ಕಳು ಪಾರ್ಶ್ವಿಕ ಧ್ವನಿಗಳನ್ನು ವ್ಯತ್ಯಾಸ ಮಾಡಿ ಬರೆಯಲು ಕಾರಣವೆಂದರೆ ಬ್ಯಾರಿನುಡಿಯಲ್ಲಿ 'ಳ'ಕಾರ ಇಲ್ಲ ಇದು ಕೂಡ 'ಲ'ಕಾರದ ಉಪಧ್ವನಿಯಾಗಿ ಬಳಕೆಯಾಗುತ್ತದೆ. ಪಾರ್ಶ್ವಿಕ ಧ್ವನಿಗಳಲ್ಲಿನ ಉಚ್ಚಾರಣೆಯ ಭಿನ್ನತೆಯನ್ನು ಗಮನಿಸದೆ ಈ ತೆರನಾಗಿ ವ್ಯತ್ಯಾಸವಾಗಿ ಬರೆಯುವುದು ಕಂಡುಬಂದಿದೆ.

- **ಊಷ್ಮ ಧ್ವನಿಗಳಲ್ಲಿ ವ್ಯತ್ಯಾಸಗಳು**

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ತಾಲವ್ಯ ಅಘೋಷ ಘರ್ಷ ವ್ಯಂಜನ 'ಶ' ಧ್ವನಿ ಹಾಗೂ ಮೂರ್ಧನ್ಯ ಅಘೋಷ ಘರ್ಷ ವ್ಯಂಜನ 'ಷ' ಧ್ವನಿಗಳ ಬದಲಿಗೆ ವರ್ತ್ಸ್ಯ ಅಘೋಷ ಘರ್ಷ ವ್ಯಂಜನ 'ಸ' ಧ್ವನಿಯನ್ನು ಬರೆಯುತ್ತಾರೆ. ಉದಾಹರಣೆಗೆ

- **ಪದಾದಿ ಪರಿಸರ**

ಶ>ಸ	ಬರಹರೂಪ	ಮಕ್ಕಳು ಬರೆಯುವ ರೂಪ
	ಶಪಥ	ಸಪತ
	ಶಯನ	ಸಯನ
	ಶರ	ಸರ
	ಶತಕ	ಸತಕ
	ಶಂಕರ	ಸಂಕರ
	ಶಿಕ್ಷಕ	ಸಿಕ್ಷಕ
	ಶಾಲೆ	ಸಾಲೆ
	ಶರಣ	ಸರಣ
	ಶಕ್ತಿ	ಸಕಿತಿ
	ಶಿಬಿರ	ಸಿಬಿರ
ಷ>ಸ	ಷಟ್ಪದಿ	ಸಟ್ಪದಿ

ಷಂಡ	ಸಂಡ
ಷರಾ	ಸರಾ
ಷರಾಯಿ	ಸರಾಯಿ
ಷಷ್ಠಿ	ಸಸ್ಟಿ

- **ಪದಮಧ್ಯ ಪರಿಸರ**

	ಬರಹರೂಪ	ಮಕ್ಕಳು ಬರೆಯುವ ರೂಪ
ಶ>ಸ	ವಿಶೇಷ	ವಿಸೆಸ
	ದಶಮುಖ	ದಸಮುಕ
	ದೇಶ	ದೆಸ
	ಮಶಣ	ಮಸನ
	ಕಾಶಿ	ಕಸಿ
	ಶಿಸು	ಸಿಸು
	ದೇಶಿ	ದೆಸಿ
ಷ>ಸ	ವಿಷಯ	ವಿಸಯ
	ವಿಷಮ	ವಿಸಮ
	ಕಷಾಯ	ಕಸಾಯ
	ಭಾಷೆ	ಬಾಸೆ
	ಔಷಧಿ	ಅವಸದಿ
	ಋಷಿ	ರುಸಿ

ಮಕ್ಕಳು ಊಷ್ಮ ಧ್ವನಿಗಳನ್ನು ವ್ಯತ್ಯಾಸ ಮಾಡಿ ಬರೆಯಲು ಕಾರಣಗಳೆಂದರೆ ವಾಸ್ತವದಲ್ಲಿ ಬ್ಯಾರಿ ನುಡಿಯಲ್ಲಿ ಊಷ್ಮಧ್ವನಿಗಳು ಇದ್ದರೂ ಕೂಡ ಬಳಕೆಯ ಸಂದರ್ಭದಲ್ಲಿ ಯಾವ ಧ್ವನಿಯನ್ನು ಎಲ್ಲಿ ಬಳಸಬೇಕು ಎಂಬ ಗೊಂದಲದಿಂದ ಈ ರೀತಿ ಬರೆಯುವ ಸಾಧ್ಯತೆಗಳಿವೆ. ಕೆಲವು ಮಕ್ಕಳು ಮಾತ್ರ ಈ ಬಗೆಯ ತಪ್ಪುಗಳನ್ನು ಮಾಡುತ್ತಾರೆ.

ಊಷ್ಮ ಧ್ವನಿಗಳಾದ ಶ,ಷ ಧ್ವನಿಗಳ ಬಳಕೆ ಕನ್ನಡದಲ್ಲಿ ಇಲ್ಲದಿರುವುದು ಅಥವಾ ಕಡಿಮೆ ಇರುವುದು.

ಊಷ್ಮ ಧ್ವನಿಗಳ ಉಚ್ಚಾರಣೆಯಲ್ಲಿನ ಅಲ್ಪಧ್ವನಿ ಸಾಮ್ಯತೆಯನ್ನು ಸರಿಯಾಗಿ ಗ್ರಹಿಸದಿರುವುದು.

ಊಷ್ಮ ಧ್ವನಿಗಳ ಬಗ್ಗೆ ಸ್ಪಷ್ಟವಾದ ಪರಿಕಲ್ಪನೆಯನ್ನು ಮೂಡಿಸದಿರುವುದು.

ಉಚ್ಚಾರಣೆಯಲ್ಲಿನ ವ್ಯತ್ಯಾಸ

ಆಲಿಸುವಿಕೆಯಲ್ಲಿನ ವ್ಯತ್ಯಾಸ

ಅನ್ಯಭಾಷೆ/ ಮನೆಮಾತಿನ ಪ್ರಭಾವ

ಆಡುಮಾತಿನಲ್ಲಿ ಶ, ಷ, ಕಾರಗಳಿಗಿಂತ 'ಸ' ಕಾರದ ಬಳಕೆ ಹೆಚ್ಚಾಗಿರುವುದು

ಇತ್ಯಾದಿ ಕಾರಣದಿಂದಾಗಿ ಈ ತೆರನಾಗಿ ವ್ಯತ್ಯಾಸ ಮಾಡಿ ಬರೆದಿರಬಹುದು ಎಂಬುದನ್ನು ಕಂಡುಕೊಳ್ಳಲಾಗಿದೆ.

- **ಅರ್ಧ ಸ್ವರಗಳನ್ನು ಬರೆಯುವಲ್ಲಿನ ಸಮಸ್ಯೆಗಳು**

ಪದಾದಿ ಪರಿಸರದಲ್ಲಿ ಅರ್ಧಸ್ವರ 'ಯ' ಹಾಗೂ 'ವ' ಧ್ವನಿಗಳ ಬದಲಿಗೆ ಸ್ವರಗಳಾದ 'ಎ' ಹಾಗೂ 'ಒ' ಧ್ವನಿಗಳನ್ನು ಬಳಕೆ ಮಾಡಿ ಬರೆಯುವುದು ಕಂಡುಬರುತ್ತದೆ. ಉದಾಹರಣೆಗೆ.

- **ಪದಾದಿ ಪರಿಸರ**

ಯ>ವ	ಬರಹರೂಪ	ಮಕ್ಕಳು ಬರೆಯುವ ರೂಪ
	ಯಮ	ಎಮ
	ಯವನ	ಎವನ
	ಯಮತ	ಎಮತ
	ಯಾತನೆ	ಎತನೆ
	ಯತನ	ಎತನ
	ಯಮಕ	ಎಮಕ
	ಯಕ್ಷ	ಎಕ್ಷ
	ವಂದನೆ	ಒಂದನೆ
ವ>ಒ	ವಧು	ಒದು
	ವಂಚನೆ	ಒಂಚನೆ
	ವರ್ಷ	ಒರುಷ
	ವರದಿ	ಒರದಿ

ಈ ಧ್ವನಿ ಬದಲಾವಣೆ ಕನ್ನಡ ಮನೆಮಾತುಳ್ಳ ಮಕ್ಕಳಲ್ಲಿ ಸ್ವರಗಳಾದ 'ಎ' ಮತ್ತು 'ಒ' ಧ್ವನಿಗಳಿಗೆ ಬದಲಾಗಿ ಅರ್ಧಸ್ವರಗಳಾದ 'ಯ' ಮತ್ತು 'ವ'ಗಳನ್ನು ಮಾತನಾಡುತ್ತಾರೆ ಮತ್ತು ಬರೆಯುತ್ತಾರೆ. ಈ ಬದಲಾವಣೆಯ ಪ್ರಕ್ರಿಯೆಯನ್ನು 'ಧ್ವನಿಜಾರು' ಎಂದು ಕರೆಯಲಾಗುತ್ತದೆ. ಆದರೆ ಬ್ಯಾರಿ ಮನೆಮಾತುಳ್ಳ ಮಕ್ಕಳಲ್ಲಿ ಈ ಧ್ವನಿಜಾರು ಪ್ರಕ್ರಿಯೆಯು ಇಲ್ಲದಿರುವುದು

ವಿಶೇಷವಾಗಿದೆ. ಇಂತಹ ವಿಶೇಷತೆಯನ್ನು ಅಧ್ಯಯನ ಮಾಡಲು ಬ್ಯಾರಿ ಮನೆಮಾತುಳ್ಳ ಮಕ್ಕಳಿಂದ ಉಕ್ತಲೇಖನ ಬರೆಯಿಸಿ ಪರೀಕ್ಷಿಸಲಾಗಿದೆ. ಅಂತಹ ಸಂದರ್ಭದಲ್ಲೂ ಸ್ವರಗಳನ್ನು ಓದುವ ಮತ್ತು ಬರೆಯುವ ಕೌಶಲವನ್ನು ಹೊಂದಿದ್ದಾರೆ ಎಂಬುದನ್ನು ಸಂಶೋಧನೆಯ ದೃಷ್ಟಿಯಿಂದ ಗಮನಿಸಬಹುದಾಗಿದೆ.

ಕನ್ನಡದ ಅರ್ಧ ಸ್ವರಗಳಲ್ಲಿ ಉಂಟಾಗುವ ವ್ಯತ್ಯಾಸಗಳನ್ನು ಸಮಸ್ಯೆಗಳೆಂದು ಪರಿಗಣಿಸದೆ ಅದು ಕನ್ನಡದ ಸಹಜ ರೂಪವೆಂದೆ ಪರಿಗಣಿಸಬೇಕು. ಹಾಗೂ ವಿಕಲ್ಪದಿಂದ ಈ ತೆರನಾದ ವ್ಯತ್ಯಾಸವನ್ನು ಮಾಡುತ್ತವೆ ಎಂಬುದನ್ನು ನಮ್ಮ ಭಾಷಾವಿಜ್ಞಾನಿಗಳು ಹೇಳಿದ್ದಾರೆ.[೧೦] ಅಲ್ಲದೆ ಅರ್ಧಸ್ವರಗಳಲ್ಲಿನ ವ್ಯತ್ಯಾಸಕ್ಕೆ ಕಾರಣಗಳೆಂದರೆ

* ಧ್ವನಿಗಳ ಉಚ್ಚಾರಣೆಯಲ್ಲಿನ ಅಲ್ಪಧ್ವನಿ ಸಾಮ್ಯತೆ
* ವ್ಯವಹಾರಿಕ ಕನ್ನಡದ ಪ್ರಭಾವ
* ಅರ್ಧಸ್ವರಗಳ ಬಗ್ಗೆ ಸ್ಪಷ್ಟ ಪರಿಕಲ್ಪನೆ ಇಲ್ಲದಿರುವುದು
* ಆತುರ, ಉತ್ಸಾಹದ ಅತಿರೇಕ ಇತ್ಯಾದಿ ಕಾರಣದಿಂದಾಗಿ ಈ ತೆರನಾದ
ವ್ಯತ್ಯಾಸವನ್ನು ಮಾಡಿ ಬರೆದಿರುವುದು ಕಂಡುಬರುತ್ತದೆ.

- **'ಹ'ಕಾರ ಬಳಕೆಯಲ್ಲಿನ ವ್ಯತ್ಯಾಸಗಳು**

ಪದಾದಿ ಪದಮಧ್ಯ ಪರಿಸರದಲ್ಲಿ ವ್ಯಂಜನ 'ಹ' ಧ್ವನಿಗೆ ಬದಲಾಗಿ ಸ್ವರಧ್ವನಿಯಾದ 'ಅ' ಕಾರವನ್ನು ಬಳಕೆ ಮಾಡಿ ಬರೆಯುತ್ತಾರೆ. ಅದೇರೀತಿ ಹೇಕಾರಕ್ಕೆ ಏ, ಹೌಗೆ ಔ, ಹಂಗೆ ಅಂ, ಹೂಗೆ ಉ ಹೀಗೆ ಹಕಾರವು ಲೋಪವಾಗುವುದನ್ನು ಕಾಣಬಹುದು. ಉದಾಹರಣೆಗೆ

- **ಪದಾದಿ ಪರಿಸರ**

ಹ.ಅ	ಬರಹರೂಪ	ಮಕ್ಕಳು ಬರೆಯುವ ರೂಪ
	ಹಾಲು	ಆಲು
	ಹಿಂಡು	ಇಂಡು/ ಇಡು
	ಹಳೆಯ	ಅಲೆಯ
	ಹಕ್ಕಿ	ಅಕ್ಕಿ
	ಹತ್ತು	ಅತ್ತು
	ಹಸು	ಅಸು
	ಹಣತೆ	ಅನತೆ
	ಹೆಗ್ಗಣ	ಎಗ್ಗಣ
	ಹದ್ದು	ಅದು
	ಹುಣಸೆ	ಉಣಸೆ

* **ಪದಮಧ್ಯ ಪರಿಸರ**

ಹ>ಅ	ಬರಹರೂಪ	ಮಕ್ಕಳು ಬರೆಯುವ ರೂಪ
	ಮಹೇಂದ್ರ	ಮಯೇಂದ್ರ
	ಬಹುಮಾನ	ಬವುಮಾನ
	ರಾಹು	ರಾವು
	ಕಹಳೆ	ಕಲೆ
	ವಿಹಾರ	ವಿಅರ
	ವಹಂಗಮ	ವಿಅಗಮ

ಮಕ್ಕಳು ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ವ್ಯಂಜನ 'ಹ' ಧ್ವನಿಗೆ ಬದಲಾಗಿ ಸ್ವರಧ್ವನಿಯಾದ 'ಅ' ಕಾರವನ್ನು ಬಳಕೆ ಮಾಡಿ ಬರೆಯುವುದನ್ನು ಗಮನಿಸಬಹುದು. ಆದರೆ ಇವರು ಮಾತನಾಡುವ ಸಂದರ್ಭದಲ್ಲಿ ಇದು ಸ್ಪಷ್ಟವಾದ 'ಅ'ಕಾರ ಧ್ವನಿ ಎಂದು ಹೇಳಲು ಸಾಧ್ಯವಿಲ್ಲ. ಬದಲಿಗೆ 'ಅ'ಕಾರ ಮತ್ತು 'ಹ'ಕಾರದ ನಡುವಿನ ಒಂದು ಧ್ವನಿ ಎಂಬಂತೆ ಗೋಚರಿಸುತ್ತದೆ. ಇದಕ್ಕೆ ಕನ್ನಡದಲ್ಲಿ ಲಿಪಿ ಸಂಕೇತ ಇಲ್ಲದಿರುವುದರಿಂದ ಈ ರೀತಿ ಬರೆಯುವ ಮತ್ತು ನುಡಿಯುವ ಸಾಧ್ಯತೆ ಇದೆ.

* ಬರಹ ಹಾಗೂ ಆಡುನುಡಿಗಳಲ್ಲಿ 'ಹ' ಕಾರದ ಬಳಕೆ ಕಡಿಮೆ ಇರುವುದರಿಂದ.
* ಆತುರ ಹಾಗೂ ಉತ್ಸಾಹದ ಅತಿರೇಕದಿಂದ
* ಎರಡು ಧ್ವನಿಗಳಲ್ಲಿನ ಅಲ್ಪಧ್ವನಿ ಸಾಮ್ಯತೆಯಿಂದ
* ಕಡಿಮೆ ವ್ಯಾಪ್ತಿಯಿಂದ ಇತ್ಯಾದಿ ಕಾರಣದಿಂದಾಗಿ ಈ ತೆರನಾಗಿ ವ್ಯತ್ಯಾಸ ಮಾಡಿ ಓದಿರಬಹುದು ಎನ್ನಲಾಗಿದೆ.

೬.೩ ಗುಣಿತಾಕ್ಷರಗಳನ್ನು ಬರೆಯುವ ಉಂಟಾಗುವ ವ್ಯತ್ಯಾಸಗಳು/ ಸಮಸ್ಯೆಗಳು.

* 'ಆ/ಾ >ಅ/'"

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ (' ಾ') ತಲಕಟ್ಟಿನ್ನಿಳಿಯನ್ನು ಬಳಕೆ ಮಾಡದೆ ಬರೆದಿರುವುದು ಕಂಡುಬರುತ್ತದೆ. ಈ ತೆರನಾದ ವ್ಯತ್ಯಾಸವನ್ನು ಕಡಿಮೆ ಮಕ್ಕಳಲ್ಲಿ ಮಾತ್ರ ನೋಡಬಹುದು. ಉದಾಹರಣೆಗೆ

ಉದಾ:	ಬರಹರೂಪ	ಮಕ್ಕಳು ಬರೆಯುವ ರೂಪ
	ಮಾರು	ಮರು
	ಕಾಲು	ಕಲು
	ವಾರ	ವರ
	ಮಹಾದಾಸೆ	ಮಅದಸೆ
	ಭಾನುವಾರ	ಬನವಾರ
	ಸಹಕಾರ	ಸಹಕರ
	ಯಾತನೆ	ಯತನೆ

- ‘ಈ/ೀ > ಇ/ಿ ’

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ (‘ೀ’) ಇಳಿಯನ್ನು ಬಳಕೆ ಮಾಡದೆ ಬರೆದಿರುವುದು ಕಂಡುಬರುತ್ತದೆ. ಈ ತೆರನಾದ ವ್ಯತ್ಯಾಸವನ್ನು ಕೆಲವು ಮಕ್ಕಳಲ್ಲಿ ಮಾತ್ರ ನೋಡಬಹುದು. ಉದಾಹರಣೆಗೆ

ಉದಾ:	ಬರಹರೂಪ	ಮಕ್ಕಳು ಬರೆಯುವ ರೂಪ
	ಚೀಲ	ಚಿಲ
	ಮೀನು	ಮಿನು
	ಕೀಳು	ಕಿಳು
	ದೀನ	ದಿನ
	ತೀರಾ	ತಿರ
	ಸಮೀಪ	ಸಮಿಪ

- ‘ ೂ > ು’

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ (‘ೂ’) ಕೊಂಬಿನಿಳಿಯನ್ನು ಬಳಕೆ ಮಾಡದೆ ಬರೆದಿರುವುದು ಕಂಡುಬರುತ್ತದೆ. ಈ ತೆರನಾದ ವ್ಯತ್ಯಾಸವನ್ನು ಕಡಿಮೆ ಮಕ್ಕಳಲ್ಲಿ ಮಾತ್ರ ನೋಡಬಹುದು. ಉದಾಹರಣೆಗೆ

ಉದಾ:	ಬರಹರೂಪ	ಮಕ್ಕಳು ಬರೆಯುವ ರೂಪ
	ಕೂ	ಕುಟ
	ಗೂಡು	ಗುಡು
	ಮೂರು	ಮುರು

ಕುತೂಹಲ	ಕುತುಹಲ
ಚೂರು	ಚುರು
ದೂರ	ದುರ

- ‘ೃ > ್ರ’

ಪದಾದಿ ಮತ್ತು ಪದಾಂತ್ಯ ಪರಿಸರದಲ್ಲಿ ದ್ರಾವಿಡ ಭಾಷೆಯ ಧ್ವನಿಯಲ್ಲದ ಋಕಾರದ (ೃ) ಬದಲಿಗೆ ವ್ಯಂಜನಕ್ಕೆ ಗುಡಿಸಿ ಅಥವಾ ಕೊಂಬು (್ರ) ನೀಡಿ ‘ರ’ ಕಾರದ ಒತ್ತಕ್ಷರವನ್ನು ಬಳಕೆ ಮಾಡಿ ಬರೆಯುವುದು ಕಂಡುಬರುತ್ತದೆ. ಈ ತೆರನಾದ ವ್ಯತ್ಯಾಸವು ಬಹಳಷ್ಟು ಮಕ್ಕಳಲ್ಲಿ ಕಂಡುಬರುತ್ತದೆ. ಉದಾಹರಣೆಗೆ

ಉದಾ:	ಬರಹರೂಪ	ಮಕ್ಕಳು ಬರೆಯುವ ರೂಪ
	ಗೃಹ	ಗ್ರುಹ
	ಕೃಷಿ	ಕ್ರುಸಿ
	ಕೃಷ್ಣ	ಕ್ರಿಷ್ಣ
	ನೃತ್ಯ	ನ್ರತ್ರಯ
	ಪಿತೃ	ಪಿತ್ರು
	ಮಾತೃ	ಮಾತ್ರು
	ಪೃಥ್ವಿ	ಪ್ರುತಿವಿ

- “ೕ >”

ಪದಮಧ್ಯ ಪರಿಸರದಲ್ಲಿ ಐತ್ವದೀರ್ಘ (ೕ)ವನ್ನು ಬಳಕೆ ಮಾಡದೆ ಬರೆಯುವುದು ಕಂಡುಬರುತ್ತದೆ. ಉದಾರಣೆಗೆ

ಉದಾ:	ಬರಹರೂಪ	ಮಕ್ಕಳು ಬರೆಯುವ ರೂಪ
	ಕೇರಿ	ಕೆರಿ
	ಬೇಗ	ಬೆಗ
	ಬೇಳೆ	ಬೆಳೆ
	ಮೇಲೆ	ಮೆಲೆ
	ಉದ್ದೇಶ	ಉದೆಸ
	ಅಪೇಕ್ಷೆ	ಅಪೆಕ್ಷೆ

• ೋ > ೊ

ಪದಮಧ್ಯ ಪರಿಸರದಲ್ಲಿ ಓತ್ವದೀರ್ಘ (ೋ)ವನ್ನು ಬಳಕೆ ಮಾಡದೆ ಬರೆಯುವುದು ಕಂಡುಬರುತ್ತದೆ. ಈ ತೆರನಾದ ವ್ಯತ್ಯಾಸವು ಎಲ್ಲಾ ತರಗತಿಯ ಕೆಲವು ಮಕ್ಕಳಲ್ಲಿ ಮಾತ್ರ ಕಂಡುಬರುತ್ತದೆ.

	ಬರಹರೂಪ	ಮಕ್ಕಳು ಬರೆಯುವ ರೂಪ
ಉದಾ:	ಕೋಗಿಲೆ	ಕೊಗಿಲೆ
	ಭೋಜನ	ಬೊಜನ
	ಕೋಪ	ಕೊಪ
	ನೋಟ	ನೊಟ
	ದೋಸೆ	ದೊಸೆ
	ಪೋಲಿ	ಪೊಲಿ
	ಯೋಚನೆ	ಯೋಚನೆ
	ತೋರಣ	ತೊರಣ

• ಔ/ ೌ > ಅವ್'

ಪದಾದಿ ಪರಿಸರದಲ್ಲಿ ಔತ್ವದೀರ್ಘ (ೌ)ವನ್ನು ಬಳಕೆ ಮಾಡದೆ ಆಯಾ ವ್ಯಂಜನದ ಮುಂದೆ 'ಅವ್' ಕಾರವನ್ನು ಬಳಕೆ ಮಾಡಿ ಬರೆಯುವುದು ಕಂಡುಬರುತ್ತದೆ. ಉದಾಹರಣೆಗೆ.

ಉದಾ:	ಬರಹರೂಪ	ಮಕ್ಕಳು ಬರೆಯುವ ರೂಪ
	ಕೌತುಕ	ಕವತುಕ
	ಔತಣ	ಅವತನ
	ಗೌರವ	ಗವರವ
	ನೌಕರ	ನವಕರ
	ಮೌಳಿ	ಮವಳಿ

• ಪದಾದಿ ಹಾಗೂ ಪದಮಧ್ಯ ಪರಿಸರದಲ್ಲಿ ಬರುವ ಗುಣಿತಾಕ್ಷರ ಧ್ವನಿ ಖಾ, ಖಿ, ಖೇ, ಧ್ವನಿ ಬದಲು ಕಾ, ಕಿ, ಕೆ, ಕೆ ಧ್ವನಿಗಳನ್ನು ಬಳಕೆ ಮಾಡಿ ಬರೆಯುತ್ತಾರೆ. ಉದಾಹರಣೆಗೆ

ಉದಾ:	ಬರಹರೂಪ	ಮಕ್ಕಳು ಬರೆಯುವ ರೂಪ

ಖರೀದಿ	ಕರಿದಿ
ಖಿನ್ನ	ಕಿನ್ನ
ಖರ್ಚು	ಕರ್ಚು
ಖಡಾಖಂಡಿತ	ಕಡಕಡಿತ
ದವಾಖಾನೆ	ದವಕನೆ
ಸುಖಿ	ಸುಕಿ
ಖೇದ	ಕೆದ
ಗೋಖಲೆ	ಗೊಕಲೆ
ಖೈಧಿ	ಕಯಿದಿ
ಖಜಾನೆ	ಕಜನೆ

- ಪದಾದಿ ಪರಿಸರದಲ್ಲಿ ಛಾ, ಛೀ, ಛೇ ಧ್ವನಿಗಳ ಬದಲು ಚಾ,ಚಿ, ಚೆ, ಧ್ವನಿ ಬಳಕೆ ಮಾಡಿ ಬರೆಯುತ್ತಾರೆ. ಈ ತೆರನಾದ ವ್ಯತ್ಯಾಸವನ್ನು ಉದಾಹರಣೆಗೆ

ಉದಾ:	ಬರಹರೂಪ	ಮಕ್ಕಳು ಬರೆಯುವ ರೂಪ
	ಛಾಯೆ	ಚಾಯ
	ಛಂದಸ್ಸು	ಚಂದಸ್ಸು
	ಛೇದ	ಚೆದ
	ಛೀಮಾರಿ	ಚಿಮರಿ
	ಛೇದಿಸು	ಚೆದಿಸು

- ಪದಾದಿ ಪರಿಸರದಲ್ಲಿ ಢ, ಢೀ ಢೋ ಬದಲು ಡ, ಡಿ, ಡೊ ಬಳಕೆ ಮಾಡಿ ಬರೆಯುತ್ತಾರೆ.

ಉದಾ:	ಬರಹರೂಪ	ಮಕ್ಕಳು ಬರೆಯುವ ರೂಪ
	ಢಾಣೆ	ಡಾನೆ
	ಢಾಳಿಸು	ಡಾಳಿಸು
	ಢೀಗು	ಡಿಗು
	ಢೋಂಗು	ಡೊಂಗಿ

- ಪದಾದಿ ಪರಿಸರದಲ್ಲಿ ಗುಣಿತಾಕ್ಷರ ಘಾ, ಘೀ, ಘೋ, ಧ್ವನಿಯಗಳ ಬದಲಿಗೆ ಗಾ, ಗಿ, ಗೊ, ಧ್ವನಿಗಳನ್ನು ಬರೆಯುತ್ತಾರೆ.

ಉದಾ:	ಬರಹರೂಪ	ಮಕ್ಕಳು ಬರೆಯುವ ರೂಪ
	ಘೀಳಿಡು	ಗಿಳಿಡು

ಘಾಸಿ	ಗಾಸಿ
ಘೋಷಣೆ	ಗೊಸನೆ
ಅಘಾತ	ಅಗಾತ
ಘೋರ್ಷಡೆ	ಗೊರಪಡೆ

- ಪದಾದಿ ಪರಿಸರದಲ್ಲಿ ಗುಣಿತಾಕ್ಷರ ಠ, ಠೀ, ಠೇ ಧ್ವನಿಗಳ ಬದಲಿಗೆ 'ಟ', 'ಟಿ', 'ಟೆ', ಧ್ವನಿಗಳನ್ನು ಬರೆಯುತ್ತಾರೆ.

	ಬರಹರೂಪ	ಮಕ್ಕಳು ಬರೆಯುವ ರೂಪ
ಉದಾ:	ಠೀವಿ	ಟಿವಿ
	ಠಾಣೆ	ಟಾನೆ
	ಠೇವಣೆ	ಟೆವಣೆ
	ಠೇಂಕಾರ	ಟೆಕಾರ
	ಠಿಕಾಣಿ	ಟಿಕಾಣಿ
	ಠಾಕೂರ್	ಟಾಕುರ

- ಪದಾದಿ ಪರಿಸರದಲ್ಲಿ ಗುಣಿತಾಕ್ಷರ 'ಹಾ', 'ಹೈ' ಧ್ವನಿಗಳ ಬದಲಿಗೆ ಸ್ವರಧ್ವನಿ 'ಆ' ಧ್ವನಿಯನ್ನು ಬರೆಯುತ್ತಾರೆ.

	ಬರಹರೂಪ	ಮಕ್ಕಳು ಬರೆಯುವ ರೂಪ
ಉದಾ:	ಹಾಡಿ	ಆಡಿ
	ಹೈದ	ಐದ
	ಹಾಕು	ಆಕು

- ಪದಾದಿ ಪರಿಸರದಲ್ಲಿ ಧಾ, ಧೀ, ಧು, ಧೋ ಬದಲು ದಾ, ದಿ, ದು, ದೊ, ಎಂದು ಬರೆಯುತ್ತಾರೆ.

	ಬರಹರೂಪ	ಮಕ್ಕಳು ಬರೆಯುವ ರೂಪ
ಉದಾ:	ಧಾನ್ಯ	ದಾನ

ಧಾರಕ	ದಾರಕ
ಧೀರ	ದಿರ
ಧೀಮಂತ	ದಿಮಂತ
ಅಧೀನ	ಅದಿನ
ಧುಮುಕು	ದುಮುಕು
ಧೋರಣೆ	ದೊರಣೆ
ಅಧೋಗತಿ	ಅದೊಗತಿ

- ಪದಾದಿ ಪರಿಸರದಲ್ಲಿ ಫಾ, ಫಿ, ಫೇ ಬದಲು ಪಾ, ಪಿ, ಪೆ ಎಂದು ಬರೆಯುತ್ತಾರೆ.

	ಬರಹರೂಪ	ಮಕ್ಕಳು ಬರೆಯುವ ರೂಪ
ಉದಾ:	ಫಾಶಿ	ಪಾಸಿ
	ಫಾಲ್ಗುಣ	ಪಾಲಗುಣ
	ಫಿತೂರಿ	ಪಿತೂರಿ
	ಫೇಣಿ	ಪೆನಿ
	ಫೇರಿ	ಪೆರಿ

- ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಗುಣಿತಾಕ್ಷರ ಥಾ, ಥೇ, ಥೈ, ಗಳ ಬದಲು ತಾ, ಎಂದು ಬರೆಯುತ್ತಾರೆ.

	ಬರಹರೂಪ	ಮಕ್ಕಳು ಬರೆಯುವ ರೂಪ
ಉದಾ:	ಥೇಟ್	ತೆಟ್
	ಥೈಲಿ	ತೈಲಿ
	ಥಾಲಿ	ತಾಲಿ
	ಥಾಟು	ತಾಟು

• ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಭಾ, ಭೀ, ಭೂ, ಭೇ, ಭೋ ಧ್ವನಿಗಳ ಬದಲು ಬಾ, ಬಿ, ಬೂ, ಬೆ, ಬೊ ಎಂದು ಬರೆಯುತ್ತಾರೆ.

	ಬರಹರೂಪ	ಮಕ್ಕಳು ಬರೆಯುವ ರೂಪ
ಉದಾ:	ಭಾವನೆ	ಬಾವನೆ
	ವಿಭಾಗ	ವಿಬಾಗ
	ಭೀಮ	ಬಿಮ
	ಬಿರ್ಭೀತಿ	ನಿರಬಿತಿ
	ಸಹಾನುಭೂತಿ	ಸಅನುಬುತಿ
	ಭೇರಿ	ಬೆರಿ
	ಅಭೇದ	ಅಬೆದ
	ಭೋಗ	ಬೊಗ
	ಉಗಭೋಗ	ಉಗಬೊಗ

• ಪದಾದಿ ಪರಿಸರದಲ್ಲಿ ಗುಣಿತಾಕ್ಷರ ಶಾ, ಶಿ, ಶೆ, ಶೊ, ಧ್ವನಿಗಳ ಬದಲು ಗುಣಿತಾಕ್ಷರ ಸಾ, ಸಿ, ಸೆ, ಸೊ ಧ್ವನಿಗಳನ್ನು ಬರೆಯುತ್ತಾರೆ.

	ಬರಹರೂಪ	ಮಕ್ಕಳು ಬರೆಯುವ ರೂಪ
ಉದಾ:	ಶಾಲಾ	ಸಾಲಾ
	ಶಾಂತಿ	ಸಾಂತಿ
	ಶಿಕಾರಿ	ಸಿಕಾರಿ
	ಶಿಖರ	ಸಿಕರ
	ಶೀತ	ಸಿತ
	ಶೀತಲ	ಸಿತಲ

ಶೋಕ	ಸೊಕ
ಶೂಲ	ಸೂಲ
ಶೇಕಡ	ಸೆಕಡ

- ಪದಾದಿ ಪರಿಸರದಲ್ಲಿ ಗುಣಿತಾಕ್ಷರ ಷ, ಷಾ, ಷಿ ಧ್ವನಿಗಳ ಬದಲು ಗುಣಿತಾಕ್ಷರ ಸಾ, ಸಿ, ಧ್ವನಿಗಳನ್ನು ಬರೆಯುತ್ತಾರೆ. ಈ ತೆರನಾದ ವ್ಯತ್ಯಾಸವನ್ನು

	ಬರಹರೂಪ	ಮಕ್ಕಳು ಬರೆಯುವ ರೂಪ
ಉದಾ:	ಷಂಡ	ಸಂಡ
	ಷಟ್ಪದಿ	ಸಟ್ಪದಿ
	ಷಾಮೀಲು	ಸಾಮಿಲು
	ಶಿಕಾರಿ	ಸಿಕಾರಿ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಮಕ್ಕಳು ಗುಣಿತಾಕ್ಷರಗಳನ್ನು ಬರೆಯುವಾಗ ಮಾಡುವ ಪ್ರಮುಖ ವ್ಯತ್ಯಾಸ ಅಥವಾ ಸಮಸ್ಯೆಗಳಿಗೆ ಕಾರಣಗಳನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

- ಎರಡು ಗುಣಿತಾಕ್ಷರಗಳ ನಡುವೆ ಇರುವ ರಚನೆಯಲ್ಲಿನ ಅಲ್ಪ ವ್ಯತ್ಯಾಸವನ್ನು ಗಮನಿಸದೆ ಇರುವುದು.
- ಭೋದಕರು ಗುಣಿತಾಕ್ಷರಗಳ ಬಗ್ಗೆ ಸರಿಯಾದ ಪರಿಲ್ಪನೆ ಮೂಡಿಸದೆ ಇರುವುದು.
- ಮಕ್ಕಳ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಪರಿಸರ ಸರಿ ಇಲ್ಲದೆ ಇರುವುದು.
- ಪೋಷಕರ ಅನಕ್ಷರತೆ.
- ಮಕ್ಕಳು ಕಲಿಕೆಯಲ್ಲಿ ಆಸಕ್ತಿ ತೋರದೆ ಇರುವುದು.

  ಇತ್ಯಾದಿ ಕಾರಣಗಳಿಂದಾಗಿ ಈ ತೆರನಾಗಿ ವ್ಯಾತ್ಯಾಸ ಮಾಡಿ ಬರೆದಿರಬಹುದು ಎನ್ನಲಾಗಿದೆ.

೬.೪ ಒತ್ತಕ್ಷರಗಳನ್ನು ಬರೆಯುವ ಉಂಟಾಗುವ ವ್ಯತ್ಯಾಸಗಳು/ ಸಮಸ್ಯೆಗಳು.

- **ಮೂಲಾಕ್ಷರಗಳನ್ನು ಹೋಲುವ/ ಸಜಾತಿ ಒತ್ತಕ್ಷರಗಳನ್ನು ಬರೆಯುವಾಗ ಉಂಟಾಗುವ ಸಮಸ್ಯೆಗಳು**

ಪದಮಧ್ಯ ಪರಿಸರದಲ್ಲಿ ಬರುವ ಸಜಾತಿ ಒತ್ತಕ್ಷರಗಳನ್ನು ಲೋಪ ಮಾಡಿ ಬರೆಯುತ್ತಾರೆ. ಉದಾಹರಣೆಗೆ

- **ಕ್ಕ > ಕ**

ಪದಮಧ್ಯ ಪರಿಸರದಲ್ಲಿ 'ಕ್ಕ' ಸಂಯುಕ್ತಕ್ಷರ ಧ್ವನಿಯನ್ನು ಬರೆಯುತ್ತಾರೆ.

	ಬರಹರೂಪ	**ಮಕ್ಕಳು ಬರೆಯುವ ರೂಪ**
ಉದಾ:	ಅಕ್ಕ	ಅಕ
	ಕೊಕ್ಕರೆ	ಕೊಕರೆ
	ಹಕ್ಕಿ	ಅಕಿ
	ಅಕ್ಕಿ	ಅಕಿ
	ಸೊಕ್ಕು	ಸೊಕು

- **ಗ್ಗ > ಗ**

ಪದಮಧ್ಯ ಪರಿಸರದಲ್ಲಿ 'ಗ್ಗ' ಸಂಯುಕ್ತಕ್ಷರ ಧ್ವನಿ 'ಗ' ಕಂಠ್ಯ ವ್ಯಂಜನ ಧ್ವನಿಯನ್ನು ಬರೆಯುತ್ತಾರೆ.

	ಬರಹರೂಪ	**ಮಕ್ಕಳು ಬರೆಯುವ ರೂಪ**
ಉದಾ:	ಅಗ್ಗ	ಅಗ
	ಒಗ್ಗಟ್ಟು	ಒಗಟು
	ಹಗ್ಗ	ಅಗ
	ಅಗ್ಗಳ	ಅಗಳ
	ಬಗ್ಗೆ	ಬಗೆ
	ತಗ್ಗು	ತಗು

ಬಗ್ಗು ಬಡಿ	ಬಗುಬಡಿ

• ಚ್ಚ > ಚ

ಪದಮಧ್ಯ ಪರಿಸರದಲ್ಲಿ 'ಚ್ಚ' ದ್ವಿತ್ವ ಧ್ವನಿ 'ಚ' ವ್ಯಂಜನ ಧ್ವನಿಯನ್ನು ಬರೆಯುತ್ತಾರೆ.

	ಬರಹರೂಪ	ಮಕ್ಕಳು ಬರೆಯುವ ರೂಪ
ಉದಾ	ಮೆಚ್ಚು	ಮೆಚು
	ಹೆಚ್ಚು	ಹೆಚು
	ಅಚ್ಚರಿ	ಅಚರಿ
	ನಿಚ್ಚಲ	ನಿಚಲ
	ಸಚ್ಚಿದಾನಂದ	ಸಚಿದಾನಂದ

• ಜ್ಜ > ಜ

ಪದಮಧ್ಯ ಪರಿಸರದಲ್ಲಿ 'ಜ್ಜ' ದ್ವಿತ್ವ ಧ್ವನಿ ಬದಲು 'ಜ' ತಾಲವ್ಯ ವ್ಯಂಜನ ಧ್ವನಿಯನ್ನು ಬರೆಯುತ್ತಾರೆ.

	ಬರಹರೂಪ	ಮಕ್ಕಳು ಬರೆಯುವ ರೂಪ
ಉದಾ	ಅಜ್ಜಿ	ಅಜಿ
	ಗೆಜ್ಜೆ	ಗೆಜೆ
	ಗಜ್ಜರಿ	ಗಜರಿ
	ಅಜ್ಜ	ಅಜ
	ಕಜ್ಜಿ	ಕಜಿ
	ಲಜ್ಜೆ	ಲಜೆ

- ದ್ದ > ದ

ಪದಮಧ್ಯ ಪರಿಸರದಲ್ಲಿ 'ಟ್ಟ' ದ್ವಿತ್ವ ಧ್ವನಿ ಬದಲು 'ಟ' ಮೂರ್ಧನ್ಯ ವ್ಯಂಜನ ಧ್ವನಿಯನ್ನು ಬರೆಯುತ್ತಾರೆ.

	ಬರಹರೂಪ	ಮಕ್ಕಳು ಬರೆಯುವ ರೂಪ
ಉದಾ	ದಟ್ಟ	ದಟ
	ಅಟ್ಟ	ಅಟ
	ಕಟ್ಟಿಗೆ	ಕಟಿಗೆ
	ಕಟ್ಟು	ಕಟು
	ತಟ್ಟನೆ	ತಟನೆ
	ಕುಟ್ಟು	ಕುಟು
	ಪಟ್ಟನೆ	ಪಟನೆ

- ಡ್ಡ > ಡ

ಪದಮಧ್ಯ ಪರಿಸರದಲ್ಲಿ 'ಡ್ಡ' ದ್ವಿತ್ವ ಧ್ವನಿ ಬದಲು 'ಡ' ಮೂರ್ಧನ್ಯ ವ್ಯಂಜನ ಧ್ವನಿಯನ್ನು ಬರೆಯುತ್ತಾರೆ.

	ಬರಹರೂಪ	ಮಕ್ಕಳು ಬರೆಯುವ ರೂಪ
ಉದಾ	ಅಡ್ಡ	ಅಡ
	ಕಡ್ಡಿ	ಕಡಿ
	ಲಡ್ಡು	ಲಡು
	ಗೊಡ್ಡಿ	ಗೊಡಿ
	ದುಡ್ಡು	ದಡು
	ಗಿಡ್ಡ	ಗಿಡ
	ಬಿಡ್ಡ	ಬಿಡ

- ಣ್ಣ > ನ್ನ

ಪದಮಧ್ಯ ಪರಿಸರದಲ್ಲಿ 'ಣ್ಣ' ದ್ವಿತ್ವ ಧ್ವನಿ ಬದಲು 'ನ್ನ' ದಂತ್ಯ ಅನುನಾಸಿಕ ವ್ಯಂಜನ ಧ್ವನಿಯನ್ನು ಬರೆಯುತ್ತಾರೆ.

	ಬರಹರೂಪ	ಮಕ್ಕಳು ಬರೆಯುವ ರೂಪ
ಉದಾ	ಕಣ್ಣು	ಕನ್ನು
	ಅಣ್ಣ	ಅನ್ನ
	ತಣ್ಣಗೆ	ತನ್ನಗೆ
	ತಣ್ಣಗಾಗು	ತನ್ನಗಾಗು
	ಬಣ್ಣ	ಬನ್ನ
	ಹಣ್ಣೂಐ	ಅನ್ನು

- ತ್ತ > ತ

ಪದಮಧ್ಯ ಪರಿಸರದಲ್ಲಿ 'ತ್ತ' ದ್ವಿತ್ವ ಧ್ವನಿ ಬದಲು 'ತ' ದಂತ್ಯ ವ್ಯಂಜನ ಧ್ವನಿಯನ್ನು ಬರೆಯುತ್ತಾರೆ.

	ಬರಹರೂಪ	ಮಕ್ಕಳು ಬರೆಯುವ ರೂಪ
ಉದಾ	ಕತ್ತೆ	ಕತೆ
	ಅತ್ತಿಗೆ	ಅತಿಗೆ
	ಹತ್ತು	ಅತು
	ಗುತ್ತಿಗೆ	ಗುತಿಗೆ
	ಕತ್ತರಿ	ಕತರಿ

	ಸುತ್ತಿಗೆ	ಸುತಿಗೆ

- **ದ್ದ > ದ**

ಪದಮಧ್ಯ ಪರಿಸರದಲ್ಲಿ 'ದ್ದ' ದ್ವಿತ್ವ ಧ್ವನಿ ಬದಲು 'ದ' ದಂತ್ಯ ವ್ಯಂಜನ ಧ್ವನಿಯನ್ನು ಬರೆಯುತ್ತಾರೆ.

	ಬರಹರೂಪ	ಮಕ್ಕಳು ಬರೆಯುವ ರೂಪ
ಉದಾ	ಗದ್ದೆ	ಗದೆ
	ಉದ್ದ	ಉದ
	ಇದ್ದಲಿ	ಇದಲಿ
	ಪೆದ್ದ	ಪೆದ
	ಗುದ್ದಲಿ	ಗುದಲಿ
	ಮದ್ದು	ಮದು

- **ನ್ನ > ನ**

ಪದಮಧ್ಯ ಪರಿಸರದಲ್ಲಿ 'ನ್ನ' ದ್ವಿತ್ವ ಧ್ವನಿ ಬದಲು 'ನ' ದಂತ್ಯ ಅನುನಾಸಿಕ ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಬಹಳಷ್ಟು ಮಕ್ಕಳು ಮಾಡುತ್ತಾರೆ.

	ಬರಹರೂಪ	ಮಕ್ಕಳು ಬರೆಯುವ ರೂಪ
ಉದಾ	ತನ್ನ	ತನ
	ಅನ್ನ	ಅನ
	ಚೆನ್ನಾಗಿ	ಚೆನಾಗಿ
	ಸನ್ನದು	ಸನದು
	ಸನ್ನಿಧಿ	ಸನಿದಿ

- **ಪ್ಪ > ಪ**

ಪದಮಧ್ಯ ಪರಿಸರದಲ್ಲಿ 'ಪ್ಪ' ದ್ವಿತ್ವ ಧ್ವನಿ ಬದಲು 'ಪ' ಉಭಯೋಷ್ಠ್ಯ ವ್ಯಂಜನ ಧ್ವನಿಯನ್ನು ಬರೆಯುತ್ತಾರೆ.

	ಬರಹರೂಪ	ಮಕ್ಕಳು ಬರೆಯುವ ರೂಪ
ಉದಾ	ಅಪ್ಪಟ	ಅಪಟ
	ದಪ್ಪ	ದಪ
	ಚಪ್ಪಲಿ	ಚಪಲಿ
	ಅಪ್ಪಣೆ	ಅಪನೆ
	ಉಪ್ಪು	ಉಪು
	ಕಪ್ಪು	ಕಪು
	ಹಪ್ಪಳ	ಅಪಳ

- **ಬ್ಬ > ಬ**

ಪದಮಧ್ಯ ಪರಿಸರದಲ್ಲಿ 'ಬ್ಬ' ದ್ವಿತ್ವ ಧ್ವನಿ ಬದಲು 'ಬ' ಉಭಯೋಷ್ಠ್ಯ ವ್ಯಂಜನ ಧ್ವನಿಯನ್ನು ಬರೆಯುತ್ತಾರೆ.

	ಬರಹರೂಪ	ಮಕ್ಕಳು ಬರೆಯುವ ರೂಪ
ಉದಾ	ಹಬ್ಬ	ಹಬ
	ಗುಬ್ಬಿ	ಗುಬಿ
	ಗೊಬ್ಬರ	ಗೊಬರ
	ತಬ್ಬಲಿ	ತಬಲಿ
	ಕಬ್ಬು	ಕಬು
	ಒಬ್ಬ	ಒಬ

- ವ್ವ > ವ

ಪದಮಧ್ಯ ಪರಿಸರದಲ್ಲಿ 'ವ್ವ' ದ್ವಿತ್ವ ಧ್ವನಿ ಬದಲು 'ವ' ವ್ಯಂಜನ ಧ್ವನಿಯನ್ನು ಬರೆಯುತ್ತಾರೆ.

	ಬರಹರೂಪ	ಮಕ್ಕಳು ಬರೆಯುವ ರೂಪ
ಉದಾ	ಅವ್ವ	ಅವ
	ದೆವ್ವ	ದೆವ
	ಕವ್ವ	ಕವ
	ಓಬವ್ವ	ಓಬವ್ವ

- ಲ್ಲ > ಲ

ಪದಮಧ್ಯ ಪರಿಸರದಲ್ಲಿ 'ಲ್ಲ' ಸಂಯಕ್ತ ವ್ಯಂಜನದ ಬದಲು 'ಲ' ವ್ಯಂಜನ ಧ್ವನಿಯನ್ನು ಬರೆಯುತ್ತಾರೆ.

	ಬರಹರೂಪ	ಮಕ್ಕಳು ಬರೆಯುವ ರೂಪ
ಉದಾ	ಅಲ್ಲ	ಅಲ
	ಗೆಲ್ಲು	ಗೆಲು
	ಕಲ್ಲು	ಕಲು
	ಇಲ್ಲ	ಇಲ್ಲ
	ಹಲ್ಲಿ	ಅಲ
	ಪಲ್ಲವಿ	ಪಲವಿ
	ನಲ್ಲಿ	ನಲಿ

- **ಮೂಲಾಕ್ಷರಗಳಿಗಿಂತ ಭಿನ್ನವಾದ/ ವಿಜಾತಿ ಒತ್ತಕ್ಷರಗಳನ್ನು ಬರೆಯುವಾಗ ಉಂಟಾಗುವ ಸಮಸ್ಯೆಗಳು**

- **ಪೂರ್ಣ ಪ್ರಮಾಣದಲ್ಲಿ ಬರೆಯುವ ವಿಜಾತಿ ಒತ್ತಕ್ಷರಗಳು**

ವಿಜಾತಿ ಒತ್ತಕ್ಷರಗಳು ಪದಾಂತ್ಯದಲ್ಲಿ ಬಂದಾಗ ಅಂತಹ ಒತ್ತಕ್ಷರವನ್ನು ಶಿಥಿಲಗೊಳಿಸಿ ಪೂರ್ಣ ಪ್ರಮಾಣದಲ್ಲಿ ಬರೆಯುವುದು ಕಂಡುಬರುತ್ತದೆ. ಅಂತಹ ಕೆಲ ಉದಾಹರಣೆಗಳನ್ನು ಈ ಕೆಳಗಿನಂತೆ ನೋಡಬಹುದು.

	ಬರಹರೂಪ	**ಮಕ್ಕಳು ಬರೆಯುವ ರೂಪ**
ಉದಾ	ಲಗ್ನ	ಲಗನ
	ಮಗ್ನ	ಮಗನ
	ಖಡ್ಗ	ಕಡುಗ
	ಭಕ್ತ	ಬಕುತ
	ರಕ್ತ	ರಕುತ
	ಜನ್ಮ	ಜನುಮ
	ಆತ್ಮ	ಅತಮ
	ಪರ್ವ	ಪರುವ
	ಗರ್ವ	ಗರುವ
	ಪತ್ರ	ಪತರ
	ಮಿತ್ರ	ಮಿತರ

- **ಮಹಾಪ್ರಾಣ ಒತ್ತಕ್ಷರದ ಬದಲು ಅಲ್ಪಪ್ರಾಣ ಒತ್ತಕ್ಷರ ಬಳಕೆ ಮಾಡುವ ವಿಜಾತಿ ಒತ್ತಕ್ಷರಗಳು**

ಪದಾದಿ ಹಾಗೂ ಪದಮಧ್ಯ ಪರಿಸರಿದಲ್ಲಿ ಬರುವ ವಿಜಾತಿ ಮಹಾಪ್ರಾಣ ಒತ್ತಕ್ಷರದ ಬದಲಿಗೆ ಅಲ್ಪಪ್ರಾಣ ಒತ್ತಕ್ಷರ ಬಳಕೆ ಮಾಡಿ ಬರೆಯುತ್ತಾರೆ.

ಉದಾ	**ಬರಹರೂಪ**	**ಮಕ್ಕಳು ಬರೆಯುವ ರೂಪ**

	ಸ್ಥಳ	ಸ್ತಳ
	ಷಷ್ಠಿ	ಸಸ್ಟಿ
	ದೃಷ್ಟಿ	ದ್ರುಸ್ಟಿ

- **ಲೋಪಮಾಡಿ ಬರೆಯುವ ವಿಜಾತಿ ಒತ್ತಕ್ಷರಗಳು**

ಪದಾದಿ, ಪದಮಧ್ಯ ಹಾಗೂ ಪದಾಂತ್ಯಾದಲ್ಲಿ ಬರುವ ವಿಜಾತಿ ಒತ್ತಕ್ಷರಗಳನ್ನು ಲೋಪಮಾಡಿ ಬರೆಯುತ್ತಾರೆ.

ಉದಾ	**ಬರಹರೂಪ**	**ಮಕ್ಕಳು ಬರೆಯುವ ರೂಪ**
	ಗಯ್ಯಲ್	ಗಯಲ್
	ಅಯ್ಯಾ	ಅಯ
	ಶ್ರವಣ	ಸವಣ
	ಧ್ರುವ	ದುವ
	ಶ್ರಮ	ಶಮ

ಉದಾ	**ಬರಹರೂಪ**	**ಮಕ್ಕಳು ಬರೆಯುವ ರೂಪ**
	ಶ್ಲೋಕ	ಸೊಕ
	ಶ್ಲೇಷ	ಸೇಸ
	ಪ್ಲೇಗು	ಪೆಗು
	ನ್ಯಾಯ	ನಾಯ
	ಮುಖ್ಯ	ಮುಖ
	ಧ್ವಜ	ದಜ
	ಸಂಗ್ರಹ	ಸಗರಹ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಮಕ್ಕಳು ಒತ್ತಕ್ಷರ ಬರೆಯುವಾಗ ಮಾಡುವ ಪ್ರಮುಖ ವ್ಯತ್ಯಾಸ ಅಥವಾ ಸಮಸ್ಯೆಗಳಿಗೆ ಕಾರಣಗಳನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

* ಒತ್ತಕ್ಷರಗಳ ಬಗ್ಗೆ ಸರಿಯಾಗಿ ಗ್ರಹಿಕೆಯಾಗದಿರುವುದು.
* ಮೂಲಾಕ್ಷರ ಹಾಗೂ ಒತ್ತಕ್ಷರಗಳ ಬಗ್ಗೆ ಸ್ಪಷ್ಟ ಪರಿಕಲ್ಪನೆ ಮಕ್ಕಳಿಗೆ ಸರಿಯಾಗಿ ಮೂಡಿಸದಿರುವುದು.
* ಬೋಧಕರು ಮಕ್ಕಳಿಗೆ ಒತ್ತಕ್ಷರಗಳನ್ನು ಸರಿಯಾಗಿ ಕಲಿಸದಿರುವುದು.
* ಸಜಾತಿ, ವಿಜಾತಿ ಹಾಗೂ ವಿಭಿನ್ನ ಒತ್ತಕ್ಷರಗಳ ಪರಿಕಲ್ಪನೆ ಹಾಗೂ ಬಳಕೆ ಬಗ್ಗೆ ಮಕ್ಕಳು ತಿಳಿಯದಿರುವುದು.
* ಮಕ್ಕಳಿಗೆ ಇರುವ ಅನಾರೋಗ್ಯ, ಅನಾಸಕ್ತಿ, ದೈಹಿಕ ಶ್ರಮದಿಂದಾಗಿ
* ಶಾಲೆ ಮತ್ತು ಮನೆಯಲ್ಲಿ ಮಕ್ಕಳ ಗೃಹಪಾಠವನ್ನು ಸರಿಯಾಗಿ ಗಮನಿಸದೆ ಇರುವುದು ಇತ್ಯಾದಿ ಕಾರಣಗಳಿಂದಾಗಿ ಈ ತೆರನಾದ ವ್ಯತ್ಯಾಸ ಮಾಡಿ ಬರೆದಿರುವ ಸಾಧ್ಯತೆಗಳಿವೆ.

ಗೌರವಾರ್ಥ ಬಹುವಚನ ಪ್ರತ್ಯಯಗಳನ್ನು ಬರೆಯುವ ಸಂದರ್ಭ

ಪ್ರಥಮ ವಿಭಕ್ತಿಯಲ್ಲಿ ಗೌರವಾರ್ಥ ಬಹುವಚನ ಪ್ರತ್ಯಯದೊಂದಿಗೆ ಪುಂ.ಸ್ತ್ರೀ ಅಂಕಿತನಾಮ ಪ್ರತ್ಯಯಗಳನ್ನು ಸೇರಿಸುವ ಸಂದರ್ಭ 'ಅ'ಕಾರಾಂತಗಳಾದರೆ– ರು/ನವರು; ಇ/ಉ/ಎಕಾರಾಂತಗಳಾದರೆ ಸ್ವತಂತ್ರವಾಗಿ ಇಲ್ಲವೆ 'ಯ'ಕಾರದೊಂದಿಗೆ –ಅವರು, ಇಕಾರಾಂತಗಳಿಗೆ ವಿಕಲ್ಪವಾಗಿ 'ಗಳು' ಪ್ರತ್ಯಯಗಳು ಸೇರುವುದೂ ಇದೆ.[11] ಆದರೆ ಮಕ್ಕಳು ಬಹುತೇಕವಾಗಿ ಬರವಣಿಗೆಯ ಸಂದರ್ಭದಲ್ಲಿ 'ರವರು' ಪ್ರತ್ಯಯ ಸೇರಿಸಿ ಬರೆಯುವುದನ್ನು ಗಮನಿಸಬಹುದು. ಉದಾಹರಣೆಗೆ,

ಉದಾ	ಬರಹರೂಪ	ಮಕ್ಕಳು ಬರೆಯುವ ರೂಪ
	ಕುವೆಂಪು ಅವರು	ಕುವೆಂಪುರವರು
	ನೆಹರೂ ಅವರು	ನೆಹರೂರವರು
	ಸೀತಾಪತಿಯವರು	ಸೀತಾಪತಿರವರು
	ಆಚಾರ್ಯರು	ಆಚಾರ್ಯನವರು

ಹೀಗೆ ಶಾಲೆಯಲ್ಲಿನ ಬ್ಯಾರಿ ಮನೆಮಾತುಳ್ಳ ಮಕ್ಕಳು ವಿವಿಧ ಕಾರಣಗಳಿಂದಾಗಿ ಬರವಣಿಗೆಯ ಸಂದರ್ಭದಲ್ಲಿ ನಾನಾ ರೀತಿಯ ವ್ಯತ್ಯಾಸಗಳನ್ನು ಮಾಡುವುದನ್ನು ಗಮನಿಸಬಹುದು.

ಕೊನೆ ಟಿಪ್ಪಣಿಗಳು

---

[೧] ನಾರಾಯಣ ಕೆ. ವಿ. ಮತ್ತು ಇತರರು, ಭಾಷೆ ವಿಶ್ವಕೋಶ, ಪು.೨೦೩
[೨] ಓಬಳೇಶಘಟ್ಟಿ ಆರ್., ಭಾಷೆ ಮತ್ತು ಭಾಷಾ ಕೌಶಲ್ಯಗಳು, ಪು.೧೬೧
[೩] ಹರ್ಟ್ ಲೆವಿತ್, ಪು.೩೨
[೪] ಮಾರ್ಟಲೋ ಎಂ., ಪು.ಸಂ. ೧೬
[೫] ನಾರಾಯಣ ಕೆ. ವಿ. ಮತ್ತು ಇತರರು (ಸಂ.), ಭಾಷೆ ವಿಶ್ವಕೋಶ, ಪು.೨೪೧
[೬] ಓಬಳೇಶಘಟ್ಟಿ ಆರ್., ಭಾಷೆ ಮತ್ತು ಭಾಷಾ ಕೌಶಲ್ಯಗಳು, ಪು.೧೯
[೭] ನಾರಾಯಣ ಕೆ. ವಿ ಮತ್ತು ಇತರರು (ಸಂ), ಕನ್ನಡ ನುಡಿಯ ಆಕರ ಕೋಶ, ಪು.೪೦೬
[೮] ವೆಂಕಟಾಚಲಶಾಸ್ತ್ರಿ ಟಿ. ವಿ. ಮತ್ತು ಲಕ್ಷ್ಮಣರಾವ್ ಜಿ.ಆರ್. (ಸಂ), ಕನ್ನಡ ಬರವಣಿಗೆ ದೋಷಗಳು, ದೌರ್ಬಲ್ಯಗಳು ಪು.೨೩
[೯] ಅದೇ, ಪು.೪೦೭
[೧೦] ಶಂಕರ ಬಟ್ ಡಿ. ಎನ್., ಕನ್ನಡ ಬರಹವನ್ನು ಸರಿಪಡಿಸೋಣ, ಪು.ಸಂ. ೫೨
[೧೧] ವೆಂಕಟಾಚಲಶಾಸ್ತ್ರಿ ಟಿ. ವಿ. ಮತ್ತು ಲಕ್ಷ್ಮಣರಾವ್ ಜಿ.ಆರ್. (ಸಂ), ಕನ್ನಡ ಬರವಣಿಗೆ ದೋಷಗಳು, ದೌರ್ಬಲ್ಯಗಳು ಪು.೪೬

ಅಧ್ಯಾಯ – ಏಳು

ದಕ್ಷಿಣ ಕನ್ನಡ ಪರಿಸರದ ಕನ್ನಡ ವಾಕ್ಯರಚನೆ ಕಲಿಕೆಯ ಸಮಸ್ಯೆಗಳ ಸ್ವರೂಪ

ಅಧ್ಯಾಯ – ಏಳು

ದಕ್ಷಿಣ ಕನ್ನಡ ಪರಿಸರದ ಕನ್ನಡ ವಾಕ್ಯರಚನೆ ಕಲಿಕೆಯ ಸಮಸ್ಯೆಗಳ ಸ್ವರೂಪ

ಈ ಹಿಂದಿನ ಎರಡು ಅಧ್ಯಾಯಗಳಲ್ಲಿ ದಕ್ಷಿಣ ಕನ್ನಡ ಪರಿಸರದ ಬ್ಯಾರಿ ಮನೆಮಾತುಳ್ಳ ಮಕ್ಕಳಿಗೆ ಸಂಬಂಧಿಸಿದಂತೆ ಅವರ ಓದು ಮತ್ತು ಬರಹವನ್ನು ಅನುಲಕ್ಷಿಸಿ ಅವುಗಳ ಸಮಸ್ಯೆಗಳ ಬಗೆಗೆ ಸ್ಥೂಲವಾಗಿ ಚರ್ಚಿಸಲಾಗಿದೆ. ಪ್ರಸ್ತುತ ಅಧ್ಯಾಯದಲ್ಲಿ ಈ ಮಕ್ಕಳ ವಾಕ್ಯರಚನಾ ಶೈಲಿಯ ಬಗೆಗೆ ಚರ್ಚಿಸಲಾಗಿದೆ.

ನಮ್ಮ ದೈನಂದಿನ ಮಾತುಕತೆಗಳೆಲ್ಲವೂ ವಾಕ್ಯಗಳ ಮೂಲಕವೆ ನಡೆಯುತ್ತದೆ ಎಂಬುದು ತಿಳಿದ ಸಂಗತಿ. ಮಾತುಕತೆಯ ಅತಿಚಿಕ್ಕ ಘಟಕ ಎಂದರೆ ಅದು ವಾಕ್ಯ. ಕೆಲವು ಸಂದರ್ಭದಲ್ಲಿ ಸಂಭಾಷಣೆಗಳ ನಡುವೆ ಅಧ್ಯಹಾರಗೊಂಡ ವಾಕ್ಯ ಬಳಕೆಯಾಗುತ್ತದೆ. ವಾಕ್ಯ ಎಂದರೇನು? ಈ ಪ್ರಶ್ನೆಗೆ ನೇರವಾಗಿ ಉತ್ತರಿಸುವುದು ಕಷ್ಟ. ಆದರೆ ವಾಕ್ಯ ರಚನೆಗಳ ಸ್ವರೂಪವನ್ನು ಗಮನಿಸಿದಾಗ ಯಾವುದು ವಾಕ್ಯವಲ್ಲ ಎಂಬುದನ್ನು ಹೇಳಬಹುದು. ವಾಕ್ಯದಲ್ಲಿ ಬಳಕೆಯಾಗುವ ಪದಗಳ ಕೆಲಸದ ಮೇಲೆ ವಿವಿಧ ಪ್ರಕಾರಗಳಾಗಿ ವರ್ಗೀಕರಿಸಬಹುದು.ಸಾಮಾನ್ಯವಾಗಿ ವಾಕ್ಯ ಎಂದರೆ ಪದಗಳ ಸಮೂಹ ಅಥವಾ ಪೂರ್ಣಾರ್ಥ ನೀಡುವ ಪದಗಳ ಸಮೂಹ ಎಂದು ವ್ಯಾಖ್ಯಾನಿಸಲಾಗಿದೆ. ವಾಕ್ಯ ಎಂದರೆ ಸಾಂಪ್ರದಾಯಿಕ ವ್ಯಾಖ್ಯೆಯ ಪ್ರಕಾರ ಪದಗಳ ಸಮೂಹ ವಾಕ್ಯವಲ್ಲ. ಅರ್ಥಪೂರ್ಣವಾದ ಪದಗಳ ಸಮೂಹವನ್ನು ವಾಕ್ಯ ಎಂದು ಕರೆಯಬಹುದಾಗಿದೆ.[೧]

ಒಟ್ಟಿನಲ್ಲಿ ಒಂದು ಗೊತ್ತಾದ ಅರ್ಥವಾಗುವಂತೆ ಒಟ್ಟುಗೂಡುವ ಅಕ್ಷರಗಳ ಗುಂಪು ಪದ[೨]ವಾದರೆ ಅರ್ಥಪೂರ್ಣ ಪದಗಳ ಸಮುಚ್ಚಯವೇ ವಾಕ್ಯವಾಗಿದೆ. ವಾಕ್ಯವು ಭಾಷೆಯ ಅತ್ಯಂತ ದೊಡ್ಡ ಘಟಕವಾಗಿದೆ. ಒಂದು ವಾಕ್ಯರಚನೆಯಲ್ಲಿ ಧ್ವನಿ ಪ್ರಕೃತಿ ಪದ ಸಮಾಸಪದಗಳು ಸೇರಿ ವಾಕ್ಯ ರೂಪೂಗೊಳ್ಳುತ್ತದೆ. ವಾಕ್ಯರಚನೆಯಲ್ಲಿ ಪ್ರಾರಂಭ ಮತ್ತು ಅಂತ್ಯಗೊತ್ತಾಗುತ್ತದೆ. ಅಲ್ಲದೆ. ಪ್ರತಿಯೊಂದು ವಾಕ್ಯವು ತನ್ನದೆ ಆದ ಅರ್ಥವನ್ನು ಒಳಗೊಂಡಿರುತ್ತದೆ. ವಾಕ್ಯದ ಅರ್ಥವನ್ನು ತಿಳಿಯಲು ಎರಡು ವಿಧಾನಗಳಿವೆ. ಒಂದು ಪದದಿಂದ ಪದಕ್ಕೆ ಅರ್ಥ ಗ್ರಹಿಸುತ್ತಾ ವಾಕ್ಯಸ ಅರ್ಥ ತಿಳಿಯುವುದು. ಇನ್ನೊಂದು ವಾಕ್ಯದ ಅರ್ಥವನ್ನು ಗ್ರಹಿಸಿ ಪದಗಳ ಅರ್ಥ ತಿಳಿಯುವುದು. ಒಂದು ವಾಕ್ಯದಲ್ಲಿ

ಪದಗಳಿರುತ್ತವೆ. ಸಣ್ಣ ವಾಕ್ಯವು ಇರುತ್ತದೆ. ಇವುಗಳ ನಡುವೆ ಪದಗುಚ್ಛವಿರುತ್ತದೆ. ಹೀಗೆ ವಾಕ್ಯದಲ್ಲಿ ಪದಗಳಿಗಿರುವ ಸಂಬಂಧವನ್ನು ವಾಕ್ಯಾತ್ಮಕ ಸಂಬಂಧ ಎನ್ನಲಾಗಿದೆ.

ಗುಂಪಿನಲ್ಲಿ ಒಳಗುಂಪುಗಳು ಹೇಗೆ ಇರುತ್ತವೆಯೋ ಹಾಗೆಯೇ ವಾಕ್ಯದಲ್ಲಿ ಹಲವಾರು ಪದಗುಚ್ಛಗಳಿರುತ್ತವೆ. ಆ ಪದಗುಚ್ಛಗಳಿಂದ ವಾಕ್ಯ ರಚನೆಯಾಗುತ್ತದೆ. ವಾಕ್ಯದ ಕೊನೆಯ ಪದವು ವಾಕ್ಯ ರಚನೆಯನ್ನು ನಿಯಂತ್ರಿಸುತ್ತದೆ. ಅಲ್ಲದೆ ವಾಕ್ಯದಲ್ಲಿ ಪದಗುಚ್ಛಗಳು ತಮ್ಮದೇ ಆದ ಒಳಗುಂಪುನ್ನು ಹೊಂದಿರುತ್ತವೆ. ಜೊತೆಗೆ ಪದ ಸಮುಚ್ಚಯವು ತನ್ನದೇ ಆದ ಅರ್ಥವನ್ನು ಹೊಂದಿರುತ್ತದೆ. ಒಂದೇ ಒಂದು ಪದ ಪದಸಮುಚ್ಚಯವಾಗಬಹುದು ಅಥವಾ ಅದಕ್ಕಿಂತ ಹೆಚ್ಚಾಗಿ ಇರಬಹುದು. ಅವುಗಳಿಗೆ ಮಿತಿಯಿಲ್ಲ. ಒಂದಕ್ಕಿಂತ ಹೆಚ್ಚು ಪದಗಳಿದ್ದಾಗ ಕೊನೆಯ ಪದ, ಪದಸಮುಚ್ಚಯದ ಮುಖ್ಯಭಾಗವಾಗಿರುತ್ತದೆ. ಇದು ಪ್ರತಿ ಪದಗುಚ್ಛದ ಪ್ರತಿನಿಧಿಯಾಗಿ ಕೆಲಸ ಮಾಡುತ್ತದೆ.

ಉದಾಹರಣೆಗೆ: ಹಿಂದೆ ಗುಡಿಸಲು ಇದ್ದ ಜಾಗದಲ್ಲಿಯೇ ಈ ಅರಮನೆ ನಿರ್ಮಾಣವಾಗಿದೆ.

ಕನ್ನಡದಲ್ಲಿ ಕರ್ತೃರಹಿತ ಪದ ಅಥವಾ ವಾಕ್ಯ ಇರುತ್ತವೆ. ಅಲ್ಲದೆ ಕರ್ಮಪದವಿಲ್ಲದ ವಾಕ್ಯಗಳು ಇರುತ್ತವೆ ಒಂದು ವಾಕ್ಯದಲ್ಲಿ 'ವಿಷಯ' ಮತ್ತು 'ಕ್ರಿಯೆ' ಎಂಬ ಎರಡು ಅಂಶಗಳು ಇರಲೇಬೇಕು. ಕನ್ನಡದಲ್ಲಿ ಮೂರು ವಿಧದ ವಾಕ್ಯಗಳನ್ನು ನೋಡಬಹುದು.

೧. ನಾಮಪದ ಸಮುಚ್ಚಯ

೨. ಕ್ರಿಯಾಪದ ಸಮುಚ್ಚಯ

೩. ಗುಣಪದ ಸಮುಚ್ಚಯ

ವಾಕ್ಯರಚನೆ ನಿಯಮಗಳು

ಕನ್ನಡದಲ್ಲಿ ನಾಮಪದ ಸಮುಚ್ಚಯ ಮತ್ತು ಕ್ರಿಯಾಪದ ಸಮುಚ್ಚಯಗಳು ವಾಕ್ಯದಲ್ಲಿ ಇರಲೇಬೇಕು. ಒಂದಕ್ಕಿಂತ ಹೆಚ್ಚು ನಾಮಪದಗಳಿರುವ ವಾಕ್ಯರಚನೆಯನ್ನು ಕನ್ನಡದಲ್ಲಿ ಕಾಣಬಹುದು.

ಉದಾ: ಅವನು ಜಾಣ ಹುಡುಗ.

ವಾಕ್ಯಾತ್ಮಕ ಸಂಬಂಧವನ್ನು ಸೂಚಿಸುವುದಕ್ಕೆ ಅಂತರ್‌ಗಾಮಿ(ವಿಭಕ್ತಿ) ಪ್ರತ್ಯಯಗಳು ಸಹಾಯಕವಾಗಿರುತ್ತವೆ. ಜೊತೆಗೆ ವಾಕ್ಯದಲ್ಲಿ ವಿಭಕ್ತಿ ಪ್ರತ್ಯಯಗಳು ಅರ್ಥ ವ್ಯತ್ಯಾಸವನ್ನು ಉಂಟುಮಾಡುತ್ತವೆ. ವಾಕ್ಯದಲ್ಲಿ ಕ್ರಿಯಾಪದವು ಮುಖ್ಯವಾಗಿರುತ್ತದೆ.[3] ಕನ್ನಡ ಕ್ರಿಯಾಪದದಲ್ಲಿ ಮೂರು ಪ್ರಕಾರಗಳಿವೆ.

೧. ಧಾತು

೨. ಆಖ್ಯಾತ ಪ್ರತ್ಯಯ

೩. ಕಾಲ

ಕ್ರಿಯಾಪದದಲ್ಲಿರುವ ಈ ಪ್ರತ್ಯಯಗಳು ಕರ್ತೃವಿನೊಂದಿಗೆ ಸಂಬಂಧ ಹೊಂದಿರುವುದರಿಂದ ಕನ್ನಡದ ವಾಕ್ಯ ರಚನೆಯ ವಿಶೇಷವಾದ ಲಕ್ಷಣವನ್ನು ಹೊಂದಿದೆ. ಶಾಲೆಗಳಲ್ಲಿ ಶಿಕ್ಷಕರು ಮಕ್ಕಳಿಗೆ ವಾಕ್ಯರಚನೆಯ ರೀತಿ ನೀತಿಗಳನ್ನು ತಿಳಿಸಬೇಕು. ಈ ಹಂತದಲ್ಲಿ ಮಕ್ಕಳು ವಾಕ್ಯಗಳನ್ನು ಓದುವಾಗ ಅಸ್ಪಷ್ಟತೆ ಕಂಡುಬರುತ್ತದೆ. ಅಲ್ಲದೆ ವಾಕ್ಯದಲ್ಲಿರುವ ಅಲ್ಪವಿರಾಮ, ಪೂರ್ಣವಿರಾಮ, ಇತ್ಯಾದಿ ಲೇಖನ ಚಿಹ್ನೆಗಳನ್ನು ಗುರುತಿಸದೆ ಓದುವುದು ಕಂಡುಬರುತ್ತದೆ. ಹ್ರಸ್ವ ದೀರ್ಘಸ್ವರ ಹಾಗೂ ಅಲ್ಪವಿರಾಮ, ಮಹಾಪ್ರಾಣ ಅಕ್ಷರಗಳನ್ನು, ಒತ್ತಕ್ಷರಗಳನ್ನು ಲೋಪಗೊಳಿಸಿ ಓದುವುದನ್ನು ಸಹ ಕಾಣಬಹುದು. ಕರ್ತೃ, ಕರ್ಮ ಹಾಗೂ ಕ್ರಿಯಾಪದಗಳನ್ನು ಬಳಸುವಾಗಲೂ ಸಹ ಹಲವು ತೆರನಾದ ವ್ಯತ್ಯಾಸವನ್ನು ಮಾಡುತ್ತವೆ. ಇಂತಹ ಹಲವಾರು ಸಮಸ್ಯೆಗಳನ್ನು ಗುರುತಿಸಿ ಸಾಧ್ಯವಾದ ಕಡೆಯಲ್ಲಿ ಕಾರಣ ತಿಳಿದು ಪರಿಹಾರ ನೀಡಬೇಕು. ಜೊತೆಗೆ ಮಕ್ಕಳಿಗೆ ವ್ಯಾಕರಣಾಂಶಗಳನ್ನು ತಿಳಿಸಿಕೊಡಬೇಕುತ್ತದೆ. ಮಕ್ಕಳಿಗೆ ವಾಕ್ಯದಲ್ಲಿ ಕರ್ತೃ, ಕರ್ಮ, ಕ್ರಿಯೆಪದಗಳನ್ನು ಕ್ರಮಬದ್ದವಾಗಿ ಹೇಗೆ ಬರೆಯಬೇಕು, ಪ್ರತ್ಯಯಗಳನ್ನು ಹೇಗೆ ಬಳಸಬೇಕು. ಎಂಬುವುದನ್ನು ತಿಳಿಸಬೇಕು. ಮಕ್ಕಳಿಗೆ ಸರಳವಾದ ವಾಕ್ಯರಚನೆಯ ಅಭ್ಯಾಸವನ್ನು ಮಾಡಿಸಲು ಶಾಲೆಯಲ್ಲಿ ಭಾಷಾ ಶಿಕ್ಷಕ ವಾಕ್ಯರಚನೆಗಾಗಿ ಹಲವಾರು ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ.

ವಾಕ್ಯರಚನೆಯಲ್ಲಿನ ತಪ್ಪುಗಳು

ಪ್ರಸ್ತುತ ಅಧ್ಯಾಯದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಬ್ಯಾರಿ ಮನೆಮಾತುಳ್ಳ ಮಕ್ಕಳು ವಾಕ್ಯರಚನೆ ಮಾಡುವಲ್ಲಿ ಎದುರಿಸುವ ಸಮಸ್ಯೆಗಳನ್ನು ಕುರಿತು ಚರ್ಚಿಸಲಾಗಿದೆ. ವಾಕ್ಯರಚನೆಯ ಸಮಸ್ಯೆಗಳನ್ನು ಗುರುತಿಸಲು ಮಕ್ಕಳಿಗೆ ವಾಕ್ಯರಣಾಂಶಗಳ ಬಗ್ಗೆ ಹಲವಾರು ಚಟುವಟಿಕೆಗಳನ್ನು ನೀಡಿದೆ. ಜೊತೆಗೆ ಮಕ್ಕಳಿಂದ ಸ್ವಂತವಾಕ್ಯ ರಚನೆ ಮಾಡಿಸಲಾಗಿದೆ. ಪರಿಸರದ ಬಗ್ಗೆ, ಶಾಲೆಯ ಬಗ್ಗೆ, ಹಸುವಿನ ಬಗ್ಗೆ ಇತ್ಯಾದಿ ಅಂಶಗಳನ್ನು ಮಕ್ಕಳನ್ನು ಬರೆಸಲಾಗಿದೆ. ಅಲ್ಲದೆ ಧ್ವನಿಯನ್ನು ಮುದ್ರಣ ಮಾಡಿಕೊಂಡು ಮಕ್ಕಳು ವಾಕ್ಯರಚನೆಯಲ್ಲಿ ಎದುರಿಸುವ ಸಮಸ್ಯೆಗಳನ್ನು ಗುರುತಿಸಲಾಗಿದೆ ಸಾಧ್ಯವಾದ ಕಡೆಯಲ್ಲಿ ಕಾರಣ ತಿಳಿದು ವಿಶ್ಲೇಷಣೆ ಮಾಡಲಾಗಿದೆ. ಮಕ್ಕಳಲ್ಲಿ ಕಂಡುಬರುವ ಹಲವು ವಾಕ್ಯರಚನೆಯ ಸಮಸ್ಯೆಗಳನ್ನು ಈ ಕೆಳಗಿನಂತೆ ವಿಂಗಡಣೆ ಮಾಡಿಕೊಂಡು ಚರ್ಚಿಸಲಾಗಿದೆ:

೧. ಕರ್ತೃ, ಕರ್ಮ, ಕ್ರಿಯಾಪದಗಳನ್ನು ಸರಿಯಾದ ಕ್ರಮದಲ್ಲಿ ಬಳಸದೆ ಇರುವುದು.

೨. ನಾಮಪದ ಮತ್ತು ಕ್ರಿಯಾಪದಗಳಲ್ಲಿ ಮಾಡುವ ವ್ಯತ್ಯಾಸ.

೩. ಒಂದು ಪ್ರತ್ಯಯಕ್ಕೆ ಬೇರೊಂದು ಪ್ರತ್ಯಯ ಬಳಸಿ ವಾಕ್ಯರಚನೆ ಮಾಡುವುದು

- ವಿಭಕ್ತಿ ಪ್ರತ್ಯಯ ಬಳಕೆಯಲ್ಲಿನ ವ್ಯತ್ಯಾಸಗಳ
- ಕಾಲ ಪ್ರತ್ಯಯ ಬಳಕೆಯಲ್ಲಿನ ವ್ಯತ್ಯಾಸಗಳು.
- ವಚನ ಪ್ರತ್ಯಯ ಬಳಕೆಯಲ್ಲಿನ ವ್ಯತ್ಯಾಸಗಳು.
- ಲಿಂಗ ಪ್ರತ್ಯಯ ಬಳಕೆಯಲ್ಲಿನ ವ್ಯತ್ಯಾಸಗಳು

೪. ಸುಲಭ ಪ್ರತ್ಯಯಗಳನ್ನು ಬಳಸುವುದು.

೫. ಆಡು ಮಾತಿನಲ್ಲಿ ಬರೆಯುವುದು.

೧. ಕೃರ್ತ, ಕರ್ಮ, ಕ್ರಿಯಾಪದಗಳನ್ನು ಸರಿಯಾದ ಕ್ರಮದಲ್ಲಿ ಬಳಸದೆ ಇರುವುದು:

ಉತ್ತಮ ವಾಕ್ಯವೆನಿಸಿಕೊಳ್ಳಲು ವಾಕ್ಯದಲ್ಲಿ ಕೃರ್ತ, ಕರ್ಮ, ಕ್ರಿಯಾಪದಗಳು ಸರಿಯಾದ ಕ್ರಮದಲ್ಲಿ ಬಳಕೆಯಾಗಿರಬೇಕು. ಆಗ ಆ ವಾಕ್ಯಕ್ಕೆ ಒಂದು ಅರ್ಥವಿರುತ್ತದೆ. ಇಂತಹ ವಾಕ್ಯವನ್ನು ಬರೆಯುವಾಗ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳು ಕೃರ್ತ, ಕರ್ಮ, ಕ್ರಿಯಾಪದಗಳನ್ನು ಸರಿಯಾದ ಕ್ರಮದಲ್ಲಿ ಬಳಸದೇ ಬರೆಯುತ್ತಾರೆ. ಉದಾಹರಣೆಗೆ ಮಕ್ಕಳಿಗೆ ಹಲವಾರು ವಾಕ್ಯಗಳನ್ನು ನೀಡಿ ಆ ವಾಕ್ಯಗಳನ್ನು ಸರಿಪಡಿಸಿ ಬರೆಯಿರಿ ಎಂದಾಗ ಈ ತೆರನಾದ ವ್ಯತ್ಯಾಸವು ಎಲ್ಲಾ ತರಗತಿಯ ಕೆಲವು ಮಕ್ಕಳಿಲ್ಲಿ ಕಂಡುಬರುತ್ತದೆ.

ಉದಾಹರಣೆ:

ಬರಹ ರೂಪ	ಮಕ್ಕಳು ಬಳಸುವ ರೂಪ
ಹುಡುಗರು ಆಟವನ್ನು ಆಡುತ್ತಾರೆ.	ಆಟ ಆಡುತ್ತಾರೆ ಹುಡುಗರು
ರಾಮನು ಹಣ್ಣನು ತಿಂದನು.	ಹಣ್ಣನು ತಿಂದ ರಾಮ
ಪಂಪನು ವಿಶಿಷ್ಟವಾದ ಕೃತಿಯನ್ನು ಬರೆದನು	ವಿಶಿಷ್ಟವಾದ ಕೃತಿಯನ್ನು ಪಂಪನು ಬರೆದನು.
ಹುಡುಗ ಶಾಲೆಗೆ ಹೋದನು.	ಶಾಲೆಗೆ ಹೋದನು ಹುಡುಗ.

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಮಕ್ಕಳು ಕೃರ್ತ, ಕರ್ಮ ಮತ್ತು ಕ್ರಿಯಪದಗಳನ್ನು ಪಲ್ಲಟಮಾಡಿ ಬರೆದಿರುವುದು ಕಂಡುಬರುತ್ತದೆ. ಈ ರೀತಿ ಮಾಡುವಾಗ ಕೆಲವು ಸಲ ವಾಕ್ಯದ ಅರ್ಥಕ್ಕೆ ಯಾವುದೇ ಕುಂದು ಬರಲಾರದು ಅದರೆ ಕೆಲವು ವೇಳೆ ವಾಕ್ಯದ ಅರ್ಥಕ್ಕೆ ಕುಂದು

ಬರುತ್ತದೆ. ಇದಕ್ಕೆ ಕಾರಣ ಮಕ್ಕಳಿಗೆ ಕರ್ತೃ, ಕರ್ಮ, ಕ್ರಿಯಾಪದಗಳ ಬಗ್ಗೆ ಪರಿಕಲ್ಪನೆ ಇಲ್ಲದಿರುವುದೇ ಆಗಿದೆ ಹಾಗಾಗಿ ಈ ತೆರನಾಗಿ ವ್ಯತ್ಯಾಸ ಮಾಡಿ ಬರೆದಿರಬಹುದು. ಜೊತೆಗೆ ಅವರು ಬರೆಯುವ ಸಂದರ್ಭದಲ್ಲಿ ಮನೆಮಾತಾದ ಬ್ಯಾರಿನುಡಿಯಲ್ಲಿ ಯೋಚನೆ ಮಾಡಿ ಅಕ್ಷರರೂಪಕ್ಕೆ ಇಳಿಸುವ ಸಮಂರ್ಭ ಕನ್ನಡದಲ್ಲಿ ಬರೆಯುವಾಗ ಹೀಗಾಗುವ ಸಾಧ್ಯತೆಗಳಿವೆ.

೨. ನಾಮಪದ ಮತ್ತು ಕ್ರಿಯಾಪದಗಳಲ್ಲಿ ಮಾಡುವ ವ್ಯತ್ಯಾಸ:

ಒಂದು ವಾಕ್ಯದಲ್ಲಿ ನಾಮಪದ ಹಾಗೂ ಕ್ರಿಯಾಪದಗಳೆರಡು ಇರುತ್ತವೆ. ಈ ನಾಮಪದ ಹಾಗೂ ಕ್ರಿಯಾಪದಗಳು ಪರಸ್ಪರ ಸಂಬಂಧವನ್ನು ಹೊಂದಿರುತ್ತವೆ. ಮಕ್ಕಳು ಈ ಸಂಬಂದವನ್ನು ಹೊಂದಿರುತ್ತವೆ. ಮಕ್ಕಳು ಈ ಸಂಬಂಧವನ್ನು ತಿಳಿಯದೆ ನಾಮಪದಕ್ಕೆ ತಕ್ಕಂತೆ ಅಥವಾ ಹೊಂದಿಕೆಯಾಗುವ ಪ್ರತ್ಯಯವನ್ನು ತಿಳಿಯದೆ ನಾಮಪದಕ್ಕೆ ತಕ್ಕಂತೆ ಅಥವಾ ಹೊಂದಿಕೆಯಾಗುವ ಪ್ರತ್ಯಯವನ್ನು ಕ್ರಿಯಾಪದದಲ್ಲಿ ಬಳಸುವುದು ಬಹಳಷ್ಟು ವಿರಳವಾಗಿದೆ.ಈ ತೆರನಾದ ವ್ಯತ್ಯಾಸವು ಎಲ್ಲಾ ತರಗತಿಯ ಕೆಲವು ಮಕ್ಕಳು ಮಾಡುತ್ತಾರೆ.

ಬರಹ ರೂಪ	ಮಕ್ಕಳು ಬಳಸುವ ರೂಪ
ರಘು ಶಾಲೆಗೆ ಹೋಗುತ್ತಾನೆ	ರಗು ಸಾಲೆಗೆ ಹೊಗುತ್ತಾದೆ.
ರಾಧ ಪೆನ್ನಿನಿಂದ ಬರೆದಳು.	ರಾಧ ಪೆನ್ನಿನಿಂದ ಬರೆದವು
ನಾವು ಪ್ರವಾಸ ಮಾಡಿದೆವು.	ನಾವು ಪ್ರವಾಸ ಮಾಡಿದೆ.
ಗಿರಿ ಕಾಶಿಗೆ ಹೋಗಿ ನೆಲಸಿದ	ಗಿರಿ ಕಾಶಿಗೆ ಹೋಗಿ ನೆಲಸಿತು.

ಈ ಮೇಲಿನ ಉದಾಹರಣೆಯನ್ನು ನೋಡಿದಾಗ ಮಕ್ಕಳು ನಾಮಪದಕ್ಕೆ ಸರಿಯಾದ ಕ್ರಿಯಾಪದವನ್ನು ಬಳಸದೆ ಇರುವುದನ್ನು ಗುರುತಿಸಬಹುದು. ಇದ್ದಕ್ಕೆ ಕಾರಣ ಮಕ್ಕಳಿಗೆ ವಾಕ್ಯರಚನೆಯಲ್ಲಿ ನಾಮಪದ ಮತ್ತು ಕ್ರಿಯಾಪದಗಳ ಜೋಡಣೆ ಬಗ್ಗೆ ಪರಿಕಲ್ಪನೆ ಇಲ್ಲದಿರುವುದರಿಂದ ಈ ತೆರನಾಗಿ ವ್ಯತ್ಯಾಸಮಾಡಿ ಬರೆದಿರಬಹುದು.

೩. ಒಂದು ಪ್ರತ್ಯಯಕ್ಕೆ ಬೇರೊಂದು ಪ್ರತ್ಯಯ ಬಳಸಿ ವಾಕ್ಯರಚನೆ ಮಾಡುತ್ತಾರೆ.

ಮಕ್ಕಳು ವಾಕ್ಯರಚನೆ ಮಾಡುವಾಗ ಒಂದು ಪ್ರತ್ಯಯಕ್ಕೆ ಬೇರೊಂದು ಪ್ರತ್ಯಯ ಬಳಸಿ ವಾಕ್ಯರಚನೆ ಮಾಡುತ್ತಾರೆ. ಈ ರೀತಿಯ ವ್ಯತ್ಯಾಸವನ್ನು ಎಲ್ಲಾ ತರಗತಿಯ ಮಕ್ಕಳಲ್ಲಿ ಕಾಣಬಹುದು.

ಬರಹ ರೂಪ	ಮಕ್ಕಳು ಬಳಸುವ ರೂಪ
ಹಸು ಹಾಲನ್ನು ಕೊಡುತ್ತದೆ.	ಹಸು ಹಾಲನ್ನು ಕೊಡುತೆ
ಜೋಳ, ರಾಗಿ, ಭತ್ತ ಬೆಳೆಯುತ್ತವೆ.	ಜೋಳ,ರಾಗಿ,ಭತ್ತ ಬೆಳೆದವು
ನಾನು ಬೆಳಿಗ್ಗೆ ಆರುಗಂಟೆಗೆ ಏಳುತ್ತೇನೆ.	ನಾನು ಬೆಳಿಗ್ಗೆ ಆರುಗಂಟೆಗೆ ಏಳುತ್ತೇವೆ.
ಚಂದ್ರ ಹಾಡನ್ನು ಹೇಳಿದ.	ಚಂದ್ರ ಹಾಡು ಹೇಳಿದ.

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಮಕ್ಕಳು ಒಂದು ಪ್ರತ್ಯಯಕ್ಕೆ ಇನ್ನೊಂದು ಪ್ರತ್ಯಯ ಹಚ್ಚುವುದು ಕಂಡುಬರುತ್ತದೆ. ಕಾರಣ ಮಕ್ಕಳಿಗೆ ಪ್ರತ್ಯಯಗಳ ಬಗ್ಗೆ ತಿಳುವಳಿಕೆ ಇಲ್ಲದಿರುವುದರಿಂದ ಈ ತೆರನಾಗಿ ವ್ಯತ್ಯಾಸ ಮಾಡಿರಬಹುದು.

- **ವಿಭಕ್ತಿ ಪ್ರತ್ಯಯಗಳ ಬಳಕೆಯಲ್ಲಿನ ವ್ಯತ್ಯಾಸಗಳು**

ಮಕ್ಕಳು ಮಾತನಾಡುವಾಗ ಹಾಗೂ ವ್ಯಾಕರಚನೆ ಮಾಡುವಾಗ ವಿಭಕ್ತಿ ಪ್ರತ್ಯಯಗಳನ್ನು ಒಮ್ಮೊಮ್ಮೆ ಪಲ್ಲಟಗೊಳಿಸಿ ಬರೆಯುವುದು ಕಂಡುಬರುತ್ತದೆ. ಈ ತೆರೆನಾದ ವ್ಯತ್ಯಾಸವು ಎಲ್ಲಾ ತರಗತಿಯ ಮಕ್ಕಳಲ್ಲಿ ಕಂಡುಬರುತ್ತದೆ.

ಪ್ರಥಮ ವಿಭಕ್ತಿಗೆ ದ್ವಿತೀಯಾ ಅಥವಾ ಲೋಪಮಾಡಿ ಮಾಡುವುದು.

ಮಕ್ಕಳು ಓದುವಾಗ ಹಾಗೂ ಬರೆಯುವಾಗ ಪ್ರಥಮ ವಿಭಕ್ತಿ ಪ್ರತ್ಯಯವನ್ನು ಲೋಪ ಮಾಡುವುದು, ಇಲ್ಲದೆ ಪ್ರಥಮ ವಿಭಕ್ತಿ ಪ್ರತ್ಯಯಕ್ಕೆ ಬದಲಾಗಿ ದ್ವಿತೀಯ ವಿಭಕ್ತಿ ಪ್ರತ್ಯಯವನ್ನು ಬಳಸುವುದು ಕಂಡುಬರುತ್ತದೆ. ಈ ವ್ಯತ್ಯಾಸವನ್ನು ಎಲ್ಲಾ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಮಕ್ಕಳು ಬಳಸುವ ರೂಪ
ರಾಣಿಯು ಕೆಲಸ ಮಾಡುತ್ತಾಳೆ.	ರಾಣಿ ಕೆಲಸ ಮಾಡುತ್ತಾಳೆ.
ರಾಜು ಓದುತ್ತಾನೆ.	ರಾಜು ಓದುತ್ತಾನೆ.
ಆಕಳು ಹಾಲು ಕರೆಯಿತು	ಆಕಳು ಹಾಲನ್ನು ಕರೆಯಿತು
ಗೀತಾ ಹಾಡು ಹಾಡಿದಳು.	ಗೀತಾ ಹಾಡನ್ನು ಹಾಡಿದಳು.

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಮಕ್ಕಳು ಈ ರೀತಿ ಪ್ರಥಮ ವಿಭಕ್ತಿಯನ್ನು ಲೋಪಮಾಡುವುದು ಹಾಗೂ ದ್ವಿತೀಯ ವಿಭಕ್ತಿ ಬಳಸುವುದಕ್ಕೆ ಕಾರಣ. ಕನ್ನಡದಲ್ಲಿ ಪ್ರಥಮ ವಿಭಕ್ತಿಯು

ಪ್ರಕೃತಿಯೊಂದಿಗೆ ಸೇರಿರುವುದರಿಂದ ಮಕ್ಕಳು ಅದನ್ನು ಗಮನಿಸದೇ ಈ ತೆರನಾದ ವ್ಯತ್ಯಾಸ ಮಾಡಬಹುದಾಗಿದೆ.

- **ದ್ವಿತೀಯ ವಿಭಕ್ತಿಗೆ – ಚತುರ್ಥಿ**

ಮಕ್ಕಳು ಓದುವಾಗ ಬರೆಯುವಾಗ ದ್ವಿತೀಯ ವಿಭಕ್ತಿಗೆ ಬದಲಾಗಿ ಚತುರ್ಥಿ ವಿಭಕ್ತಿಯನ್ನು ಬಳಸಿತ್ತಾರೆ. ಈ ಒಂದು ವ್ಯತ್ಯಾಸವನ್ನು
ಎಲ್ಲಾ ತರಗತಿಯ ಮಕ್ಕಳು ಮಾಡುತ್ತಾರೆ. ಉದಾಹರಣೆ

ಬರಹ ರೂಪ	ಮಕ್ಕಳು ಬಳಸುವ ರೂಪ
ನಾಯಿಯನ್ನು ಕರೆ	ನಾಯಿಗೆ ಕರೆ
ನಾಯಿಯನ್ನು ಕರೆ	ಮಗುವಿಗೆ ಹೊಡಿದಳು
ಅವನ್ನು ಊರನ್ನು ಸೇರಿದನು	ಅವನ್ನು ಊರಗೆ ಸೇರಿದನು
ಸೀತೆಯನ್ನು ನೋಡು	ಸೀತೆಗೆ ನೋಡು

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ತೆರನಾದ ವ್ಯತ್ಯಾಸಕ್ಕೆ ಕಾರಣ ನಮ್ಮ ಭಾಷೆಯ ವೈಶಿಷ್ಟ್ಯವಾಗಿದೆ. ಅಂದರೆ ಮಾನವೇತರ ಜೀವಿಗಳಾದ ನಾಯಿ, ಹಸು, ಎಮ್ಮೆ ಮುಂತಾದ ಪಾಣಿಗಳನ್ನು ಮಾನವ ಜೀವಿಗಳಂತೆ ಸಂಬೋಧಿಸುವುದು. ವಿಶಿಷ್ಟ ಹಾಗೆಯೇ ಮಾನವ ಜೀವಿಗಳಾದ ತಂದೆ, ತಾಯಿ, ಅಣ್ಣ, ತಮ್ಮ, ಅಕ್ಕ, ತಂಗಿ ಮುಂತಾದ ಬಂಧುತ್ವ ಸೂಚಕ ಪದಗಳನ್ನು ಮಾನವೇತರ ಜೀವಿಗಳಂತೆ ಸಂಬೋಧಿಸುವುದರಿಂದ ದ್ವಿತೀಯ ವಿಭಕ್ತಿ ಪ್ರತ್ಯಯಕ್ಕೆ ಬದಲಾಗಿ ಚತುರ್ಥಿ ವಿಭಕ್ತಿ ಭಳಸುವುದು ಕಂಡುಬರುತ್ತದೆ.

- **ತೃತೀಯ ವಿಭಕ್ತಿ– ಸಪ್ತಮಿ ವಿಭಕ್ತಿ ಬಳಕೆ**

ಮಕ್ಕಳು ಓದುವಾಗ ಬರೆಯುವಾಗ ತೃತೀಯ ವಿಭಕ್ತಿಗೆ ಬದಲಾಗಿ ಸಪ್ತಮಿ ವಿಭಕ್ತಿಯನ್ನು ಕಂಡುಬರುತ್ತದೆ. ಈ ಒಂದು ವ್ಯತ್ಯಾಸ ಎಲ್ಲಾ ತರಗತಿಯ ಮಕ್ಕಳು ಮಾಡುತ್ತಾರೆ.

ಉದಾಹರಣೆ:

ಬರಹ ರೂಪ	ಮಕ್ಕಳು ಬಳಸುವ ರೂಪ
ಕಣ್ಣಿನಿಂದ ನೋಡಿದೆವು	ಕಣ್ಣಲ್ಲಿ ನೋಡಿದೆವು
ಕೈಯಿಂದ ಮಾಡಿದ ಒಡವೆ	ಕೈಯಲ್ಲಿ ಮಾಡಿದ ಒಡವೆ

ಪೆನ್ನಿನಿಂದ ಬರೆದೆ	ಪೆನ್ನಲ್ಲಿ ಬರೆದೆ
ಕಾಲಿನಿಂದ ತೆಗೆದು	ಕಾಲಲ್ಲಿ ತೆಗೆದು

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ತೆರನಾದ ವ್ಯತ್ಯಾಸವು ಕನ್ನಡದಲ್ಲಿ ಸಾಮಾನ್ಯವಗಿರುವುದರಿಂದ ಮಕ್ಕಳು ಆಡು ಮಾತನ್ನು ಬಳಸುವಾಗ ಈ ತೆರನಾಗಿ ವ್ಯತ್ಯಾಸಮಾಡುವುದು ಕಂಡುಬರುತ್ತದೆ.

ಇದೇ ರೀತಿಯಾಗಿ ತೃತೀಯವಿಭಕ್ತಿ ಬದಲಾಗಿ ದ್ವಿತೀಯವಿಭಕ್ತಿಯನ್ನು,ಪಂಚಮಿವಿಭಕ್ತಿ ಬದಲಾಗಿ ಚತುರ್ಥಿವಿಭಕ್ತಿ, ಸಪ್ತಮಿವಿಭಕ್ತಿಗೆ ಬದಲಾಗಿ ಚತುರ್ಥಿ ಹಾಗೂ ಪ್ರಥಮ ವಿಭಕ್ತಿಗಳನ್ನು ಕಂಡುಬರುತ್ತದೆ.

- **ಕಾಲ ಪ್ರತ್ಯಯಗಳು**

ಮಕ್ಕಳು ವಾಕ್ಯರಚನೆಯಲ್ಲಿ ಬರುವ ನಾಮಪದಗಳಿಗೆ ಹತ್ತುವ ವಿಭಕ್ತಿ ಪ್ರತ್ಯಯಗಳಲ್ಲಿ ವ್ಯತ್ಯಾಸಮಾಡುವಂತೆ ಕ್ರಿಯಾಪದಕ್ಕೆ ಹತ್ತುವ ಕಾಲಪ್ರತ್ಯಯಗಳಲ್ಲಿಯೂ ವ್ಯತ್ಯಾಸವನ್ನು ಉಂಟುಮಾಡುತ್ತದೆ. ಮುಖ್ಯವಾಗಿ ವರ್ತಮಾನ ಕಾಲದ ಸ್ಥಳದಲ್ಲಿ ಭವಿಷ್ಯತ್ ಕಾಲದ ಪ್ರತ್ಯಯ ಬಳಕೆ, ಭವಿಷತ್ ಕಾಲದ ಸ್ಥಳದಲ್ಲಿ ವರ್ತಮಾನ ಕಾಲದ ಪ್ರತ್ಯಯ ವರ್ತಮಾನ/ಭವಿಷತ್ ಕಾಲದ ಪ್ರತ್ಯಯವನ್ನು ಬಳಸುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲಾ ತರಗತಿಯ ಮಕ್ಕಳಲ್ಲಿ ಕೆಲವು ವಿದ್ಯಾರ್ಥಿಗಳು ಮಾಡುತ್ತಾರೆ.

ಉದಾಹರಣೆ:

ಬರಹ ರೂಪ	ಮಕ್ಕಳು ಬಳಸುವ ರೂಪ
ಶಂಕರನು ಶಾಲೆಗೆ ಹೋಗುವನು	ಶಂಕರನು ಶಾಲೆಗೆ ಹೋಗುತ್ತಾನೆ
ಸೂರ್ಯ ಉದಯವಾಗುವನು	ಸೂರ್ಯ ಉದಯವಾಗುತ್ತಾನೆ
ಮುಂದಿನ ವಾರ ಪರೀಕ್ಷೆ ನಡೆಯುತ್ತದೆ.	ಮುಂದಿನ ವಾರ ಪರೀಕ್ಷೆ ನಡೆಯುವುದು.
ಸತ್ತ ಮೇಲೆ ಸ್ವರ್ಗ ಕಂಡನ	ಸತ್ತ ಮೇಲೆ ಸ್ವರ್ಗ ಕಾಣುತ್ತಾನೆ/ಕಾಣುವನು.
ಮನೆಗೆ ಈಗ ಹೊರಟೆನು	ಮನೆಗೆ ಈಗ ಹೊರಡುತ್ತಾನೆ.
ಆಗ ಕಮಲಿಗೆ ರವಿ ಹೀಗೆ ಹೇಳುವನು/ಹೇಳುತ್ತಾನೆ	ಆಗ ಕಮಲಿಗೆ ರವಿ ಹೀಗೆ ಹೇಳಿದನು.

ಈ ಮೇಲಿನ ಉದಾಹರಣೆಗಳನ್ನು ನೋಡಿದಾಗ ಮಕ್ಕಳಿಗೆ ಕಾಲಪ್ರತ್ಯಯಗಳ ಬಗ್ಗೆ ಪರಿಕಲ್ಪನೆ ಇಲ್ಲದ ಕಾರಣ ಈ ತೆರನಾಗಿ ವ್ಯತ್ಯಾಸ ಮಾಡಿ ಬಳಸುತ್ತಾರೆ ಎನ್ನಲಾಗಿದೆ.

- **ವಚನ**

ಕನ್ನಡ ಭಾಷೆಯಲ್ಲಿ ವಸ್ತು,ಪ್ರಾಣಿ ಅಥವಾ ವ್ಯಕ್ತಿ ಮೊದಲಾದ ನಾಮಪದಗಳ ಸಂಖ್ಯೆಯನ್ನು ಸೂಚಿಸುವುದಕ್ಕೆ ವಚನ

ಎಂದು ಕರೆಯುವರು ಮಕ್ಕಳು ಏಕವಚನದ ಪದಗಳನ್ನು ಬಹುವಚನದ ಪದಗಳನ್ನಾಗಿ ಓದುವ ಮತ್ತು ಬರೆಯುವ ವ್ಯತ್ಯಾಸವನ್ನು ಎಲ್ಲಾ ತರಗತಿಯ ಮಕ್ಕಳು ಮಾಡುತ್ತಾರೆ.

ಉದಾಹರಣೆ:

ಬರಹ ರೂಪ	ಮಕ್ಕಳ ಬಳಸುವ ರೂಪ
ಬೆಕ್ಕು ಹಾಲನ್ನು ಕುಡಿಯಿತು.	ಬೆಕ್ಕು ಹಾಲನ್ನು ಕುಡಿದವು.
ಅವರು ಶಾಲೆಗೆ ಬಂದರು.	ಅವರು ಶಾಲೆಗೆ ಬಂದ
ರಾಣಿಯರು ಅರಮನೆಗೆ ಹೋದರು.	ರಾಣಿ ಅರಮನೆಗೆ ಹೋದರು.
ಹುಡುಗ ಆಟ ಅಡಿದನು.	ಹುಡುಗರು ಆಟ ಅಡಿದನು.
ಹಸು ಹಾಲನ್ನು ಕರೆಯುತ್ತದೆ.	ಹಸುಗಳು ಹಾಲನ್ನು ಕರೆಯುತ್ತದೆ.

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಮಕ್ಕಳು ಏಕವಚನಕ್ಕೆ ಬಹುವಚನ, ಬಹುವಚನ, ಏಕವಚನಕ್ಕೆ ಏಕವಚನಗಳನ್ನು ಬಳಸುವುದು ಕಂಡುಬರುತ್ತದೆ. ಅದು ನಾಮಪದಗಳಷ್ಟೆ ಅಲ್ಲ ಕ್ರಿಯಾಪದಗಳಲ್ಲಿಯೂ ವಚನಗಳನ್ನು ಬಹಳಷ್ಟು ವ್ಯತ್ಯಾಸಮಾಡಿ ಓದುವುದು ಮತ್ತು ಬರೆಯುವುದು. ಕಂಡುಬರುತ್ತದೆ. ಈ ತೆರೆನಾದ ವ್ಯತ್ಯಾಸಕ್ಕೆ ಕಾರಣ ಮಕ್ಕಳಿಗೆ ವಚನಗಳ ಪರಿಕಲ್ಪನೆ ಇಲ್ಲದೆ ಇರುವುದರಿಂದ ಈ ತೆರೆನಾದ ವ್ಯತ್ಯಾಸಮಾಡಬಹುದು ಎನ್ನಲಾಗಿದೆ.

- **ಲಿಂಗ ವಿಚಾರ**

ಜ್ಞಾನ ಅಥವಾ ಅಜ್ಞಾನದ ಕುರುಹಿಗೆ 'ಲಿಂಗ' ಎನ್ನುವರು. ಜ್ಞಾನದ ಕುರುಹ ಮುನುಷ್ಯರಿಗೆ ಮಾತ್ರ ಉಂಟು ಕಾರಣ 'ಲಿಂಗ' ಶಬ್ದವನ್ನು ಮನುಷ್ಯ ವರ್ಗಕ್ಕೆ ಕನ್ನಡದಲ್ಲಿ ಅನ್ವಯಿಸುತ್ತದೆ.ಮನುಷ್ಯರಲ್ಲಿ ಗಂಡಸರನ್ನು ಸೂಚಿಸುವ ನಾಮಪದಗಳಿಗೆ 'ಸ್ತ್ರೀಲಿಂಗ'ವೆಂದು ಮನುಷ್ಯರನ್ನು ಬಿಟ್ಟು ಉಳಿದ ಪ್ರಾಣಿವರ್ಗ ಹಾಗೂ ನಿರ್ಜೀವ ವಸ್ತುಗಳನ್ನು ಸೂಚಿಸುವ ನಾಮಪದಕ್ಕೆ 'ನಪುಂಸಕಲಿಂಗ'ವೆಂದು ಕರೆಯುತ್ತವೆ. ಮಕ್ಕಳು ವಾಕ್ಯರಚನೆ ಮಾಡುವಾಗ ಸ್ತ್ರೀಲಿಂಗಕ್ಕೆ ಪುಲ್ಲಿಂಗವನ್ನು, ಪುಲ್ಲಿಂಗಕ್ಕೆ ಸ್ತ್ರೀಲಿಂಗವನ್ನು ಹಾಗೂ ಪುಲ್ಲಿಂಗ-ಸ್ತ್ರೀಲಿಂಗಕ್ಕೆ 'ನಪುಂಸಕಲಿಂಗವನ್ನು ಹೆಚ್ಚಾಗಿ ಬಳಸಿ ಓದುವುದು ಹಾಗೂ ಬರೆಯುವುದುನ್ನು ಮಾಡುತ್ತಾರೆ.ಈ ತೆರನಾದ ವ್ಯತ್ಯಾಸವನ್ನು ಕ್ರಿಯಾಪದದಲ್ಲಿ ಹೆಚ್ಚು ಮಾಡುತ್ತಾರೆ.ಇದನ್ನು ಎಲ್ಲಾ ತರಗತಿಯ ಬಹಳಷ್ಟು ಮಾಡುತ್ತಾರೆ.

ಉದಾಹರಣೆ:

ಬರಹ ರೂಪ	ಮಕ್ಕಳು ಬಳಸುವ ರೂಪ
ಸೀತಾ ಶಾಲೆಗೆ ಹೋಗುತ್ತಾಳೆ	ಸೀತಾ ಶಾಲೆಗೆ ಹೋಗುತ್ತಾಳೆ
ರಾಮನು ಹಣ್ಣನ್ನು ತಿಂದನು.	ರಾಮನು ಹಣ್ಣನ್ನು ತಿಂದ
ರಾಧಾ ಹಾಡನ್ನು ಹಾಡಿದಳು.	ರಾಧಾ ಹಾಡನ್ನು ಹಾಡಿತು
ಭೀಮ ದ್ರೌಪದಿಯನ್ನು ಗೆದ್ದು ತಂದನು.	ಭೀಮ ದ್ರೌಪದಿಯನ್ನು ಗೆದ್ದು ತಂದಳು.

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಮಕ್ಕಳ ಲಿಂಗ ಪ್ರತ್ಯಯಗಳಲ್ಲಿ ಮಾಡುವ ವ್ಯತ್ಯಾಸವನ್ನು ಗುರುತಿಸಬಹುದು ಮಕ್ಕಳಿಗೆ ಲಿಂಗ ಪ್ರತ್ಯಯಗಳ ಪರಿಕಲ್ಪನೆ ಸರಿಯಾಗಿ ತಿಳಿಯದ ಕಾರಣ ಈ ತೆರನಾಗಿ ವ್ಯತ್ಯಾಸಮಾಡಿ ಓದುವುದು ಬರೆಯುವುದು ಕಂಡು ಬರುತ್ತದೆ. ಇದಕ್ಕೆ ನಿದರ್ಶನವೆಂದರೆ ಮಕ್ಕಳಿಗೆ ಪುಲ್ಲಿಂಗಕ್ಕೆ ಸ್ತ್ರೀಲಿಂಗ ನಪುಂಸಕ ಲಿಂಗಗಳ ಪದಗಳ ಗುಂಪನ್ನು ಕೊಟ್ಟು ಅವುಗಳ ವರ್ಗೀಕರಣ ಮಾಡಿರಿ ಎಂದು ಹೇಳಿದಾಗಲೂ ಬಹಳಷ್ಟು ಮಕ್ಕಳು ವರ್ಗೀಮಾಡದೆ ಇರುವುದು ಕಂಡುಬರುತ್ತದೆ. ಇದರಿಂದ ಮಕ್ಕಳಿಗೆ ಲಿಂಗಗಳ ಬಗ್ಗೆ ಅಷ್ಟೊಂದು ಪರಿಕಲ್ಪನೆ ಇಲ್ಲವೆಂದು ತಿಳಿಯಬಹುದು.

- **ಪ್ರತ್ಯಯಗಳನ್ನು ಹೆಚ್ಚು ಬಳಸುವುದು**

ಮಕ್ಕಳು ವಾಕ್ಯರಚನೆ ಮಾಡುವಾಗ ತಮಗೆ ಸುಲಭವಾದ ಪ್ರತ್ಯಯಗಳನ್ನು ಎಲ್ಲಾ ಕಡೆಯಲ್ಲೂ ಬಳಸುತಾವೆ. ಹೆಚ್ಚಾಗಿ 'ಅ'ಮತ್ತು 'ತೆ' ಪ್ರತ್ಯಯಗಳನ್ನು ಹೆಚ್ಚು ಬಳಸುತ್ತಾರೆ. ಈ ತೆರನಾದ ವ್ಯತ್ಯಾಸವನ್ನು ಎಲ್ಲಾ ತರಗತಿಯ ಮಕ್ಕಳು ಮಾಡುತ್ತಾರೆ.

ಉದಾಹರಣೆ:

ಬರಹ ರೂಪ	ಮಕ್ಕಳ ಬಳಸುವ ರೂಪ
ಹಸು ಹುಲ್ಲನ್ನು ತಿನ್ನುತ್ತದೆ.	ಹಸು ಹುಲ್ಲನ್ನು ತಿನ್ನುತ್ತೆ
ಕಮಲ ಶಾಲೆಗೆ ಹೋಗುತ್ತಾಳೆ	ಕಮಲ ಶಾಲೆಗೆ ಹೋಗುತ್ತೆ
ರವಿ ಮನೆಗೆ ಹೋಗುತ್ತಾನೆ	ರವಿ ಮನೆಗೆ ಹೋದ
ರಾಣಿ ಊಟವನ್ನು ಮಾಡುತ್ತಾಳೆ.	ರಾಣಿ ಊಟವನ್ನು ಮಾಡುತ್ತೆ

ಸೂರ್ಯ ಮುಳುಗುತ್ತಾನೆ ಸೂರ್ಯ ಮುಳುಗಿದ.

ಈ ಮೇಲಿನ ಉದಾಹರಣೆಗಳನ್ನು ನೋಡಿದಾಗ ಕಾಲ, ಲಿಂಗ, ವಚನ ಪ್ರತ್ಯಯಗಳ ಬಗ್ಗೆ ಅಷ್ಟೊಂದು ಪರಿಕಲ್ಪನೆ ಇಲ್ಲದಿರುವುದರಿಂದ ತಮಗೆ ಸರಳವೆನಿಸಿದ ಪ್ರತ್ಯಯಗಳನ್ನು ಬಳಸುವುದು ಕಂಡು ಬರಬಹುದು ಎನ್ನಲಾಗಿದೆ.

ಒಟ್ಟಿನಲ್ಲಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ವಾಕ್ಯರಚನೆಯನ್ನು ಅಷ್ಟೊಂದು ಪರಿಣಾಮಕಾರಿಯಾಗಿ ಮಾಡುವ ಸಾಮರ್ಥ್ಯವಿಲ್ಲವೆಂದು ಇದರಿಂದ ತಿಳಿದುಬರುತ್ತದೆ. ಅಷ್ಟೆ ಅಲ್ಲ ಮಕ್ಕಳು ಸಂಪೂರ್ಣ ವಾಕ್ಯರಚನೆ ಮಾಡಲು ಆಗದೆ ಅಪೂರ್ಣ ವಾಕ್ಯರಚನೆಯನ್ನು ಮಾಡುವುದು ಕಂಡುಬರುತ್ತದೆ. ಮಕ್ಕಳು ಮಾಡುವ ವಾಕ್ಯರಚನೆಯಲ್ಲಿ ಸರಿಯಾದ ಪ್ರತ್ಯಯ ಬಳಸದೇ ಇರುವುದು ಕಂಡುಬರುತ್ತದೆ ಮಕ್ಕಳು ಸ್ವಂತವಾಕ್ಯ ರಚನೆ ಮಾಡುವಾಗ ಹಲವಾರು ಸಮಸ್ಯೆಗಳು ಎದುರುಗುತ್ತವೆ. ಇದಕ್ಕೆ ಕಾರಣ ಮಕ್ಕಳಲ್ಲಿ ವಾಕ್ಯರಣದ ಪರಿಕಲ್ಪನೆ ಇಲ್ಲದೆ ಇರುವುದು ಹಾಗೂ ವಾಕ್ಯರಚನೆ ಮಾಡುವ ಸಾಮಥ್ಯವಿಲ್ಲದೆ ಇರುವುದಾಗಿರಬಹುದು.

ಮೇಲ್ಕಾಣಿಸಿದ ತಪ್ಪುಗಳು ಮರುಕಳಿಸದಂತೆ ತಡೆಯಲು ಇರುವ ಕೆಲವು ಪರಿಹಾರದ ಸಾಧ್ಯತೆಗಳು.

೧. ಮಕ್ಕಳ ವಾಕ್ಯರಚನೆಯನ್ನು ಗಮನಿಸಿದಾಗ ಬಹಳಷ್ಟು ಮಕ್ಕಳು ವಾಕ್ಯರಚನೆ ಮಾಡುವ ಸಾಮಥ್ಯ ಪಡೆಯದೆ ಇರುವುದು ಕಂಡುಬರುತ್ತದೆ. ಹಾಗಾಗಿ ಭಾಷಾ ಶಿಕ್ಷಕರು ಮಕ್ಕಳಲ್ಲಿ ವಾಕ್ಯರಚನೆಯ ಸಾಮಥ್ಯವನ್ನು ಬೆಳೆಸಬೇಕು ಮೊದಲು ಮಕ್ಕಳಿಗೆ ಸರಳ ವಾಕ್ಯಗಳನ್ನು ಓದಿಸುವುದು, ಬರೆಯುವುದನ್ನು ಮಾಡಬೇಕು. ನಂತರ ಮಕ್ಕಳಿಗೆ ಕ್ರಿಯೆ ನಡೆಯುವ ಚಿತ್ರಗಳನ್ನು ತೋರಿಸಿ ವಾಕ್ಯರಚನೆ ಮಾಡುವಂತೆ ಪ್ರೇರಪಿಸಬೇಕು ವಾಕ್ಯರಚನೆ ಅಭ್ಯಾಸವು ನಿರತರವಾಗಿ ನಡೆಯುವಂತೆ ಶಿಕ್ಷಕ ಮಕ್ಕಳ ಕಡೆ ವೈಯಕ್ತಿಕ ಗಮನ ನೀಡಬೇಕು.

೨. ಭ್ಞಾಷಾ ಶಿಕ್ಷಕರು ಮಕ್ಕಳಿಗೆ ವಾಕ್ಯದಲ್ಲಿ ಬರುವ ವ್ಯಾಕರಣಾಂಶಗಳ ಬಗ್ಗೆ ಸ್ಪಷವಾದ ಪರಿಪಲ್ಪನೆಗಳನ್ನು ಮೂಡಿಸಬೇಕು.

೩. ಶಿಕ್ಷಕರು ತರಗತಿಯಲ್ಲಿ ಆಯಾ ತರಗತಿಗೆ ಅನುಗುಣವಾಗಿ ಮೊದಲು ಇಡೀಯಾಗಿ ವ್ಯಾಕರಣದ ಬಗ್ಗೆ ಪರಿಕಲ್ಪನೆ ಮೂಡಿಸಿ ನಂತರ ಆಯಾ ಪಾಠದಲ್ಲಿನ ವ್ಯಾಕರಣವನ್ನು ಬಿಡಿ ಬಿಡಿಯಾಗಿ ತಿಳಿಸಿ ಹೇಳಬೇಕು ಅಲ್ಲದೆ ನಿತ್ಯ ಜೀವನದಲ್ಲಿ ಅದರ ಬಳಕೆಯನ್ನು ಮಕ್ಕಳಿಗೆ ತಿಳಿಸಿ ಹೇಳಬೇಕು.

೪. ಮಕ್ಕಳಿಗೆ ಶಿಕ್ಷಕರು ಲಿಂಗಗಳ ಬಗ್ಗೆ ಸ್ಪಷ್ಟ ಪರಿಕಲ್ಪನೆ ಮೂಡಿಸಬೇಕು ಸ್ತ್ರೀಲಿಂಗ, ಪುಲಿಂಗ, ನಪುಂಸಕಲಿಂಗ ಬಗ್ಗೆ ಚಿತ್ರಪದಗಳನ್ನು ತೋರಿಸಿ ಮನವರಿಕೆ ಮಾಡಬೇಕು ಪ್ರತ್ಯಯಗಳ ಬಳಕೆಯನ್ನು ಬಗ್ಗೆ ತಿಳಿಸಬೇಕು.

೫. ಮಕ್ಕಳಿಗೆ ವಾಕ್ಯದಲ್ಲಿನ ನಾಮಪದ ಹಾಗೂ ಕ್ರಿಯಾಪದಗಳ ಪರಿಕಲ್ಪನೆ ಮೂಡಿಸಲು ಶಿಕ್ಷಕ ಮೊದಲಿಗೆ ನಾಮಪದ ಹಾಗೂ ಕ್ರಿಯಾಪದಗಳ ಬಗ್ಗೆ ತಿಳಿಸಬೇಕು ಇವುಗಳಿಗೆ ಹತ್ತುವ ಪ್ರತ್ಯಯಗಳ ಬಗ್ಗೆ ಸರಿಯಾಗಿ ತಿಳಿಸಿ ಸತತ ಅಭ್ಯಾಸ ಮಾಡಿಸಿ ವಾಕ್ಯದಲ್ಲಿ ಅವುಗಳನ್ನು ಬಳಸಿ ಬರೆಯುವಂತೆ ಮಾಡಬೇಕು.

೬. ವಾಕ್ಯದಲ್ಲಿ ಬರುವ ಕರ್ತೃ, ಕರ್ಮ, ಕ್ರಿಯಾಪದಗಳ ಬಗ್ಗೆಬ ಸ್ಪಷ್ಟತೆ ಮೂಡಿಸಬೇಕು ವಾಕ್ಯದಲ್ಲಿ ಇವುಗಳ ಸ್ಥಾನ ಅವುಗಳ ಮಹತ್ವವನ್ನು ತಿಳಿಸಬೇಕು.

೭. ಶಿಕ್ಷಕ ಮಗುವಿಗೆ ಪ್ರತ್ಯಯಗಳ ಬಗ್ಗೆ ಅರಿವು ಮೂಡಿಸಬೇಕು ಅಂದರೆ ವಿಭಕ್ತಿ, ಲಿಂಗ, ವಚನ, ಕಾಲ ಇತ್ಯಾದಿ ಪ್ರತ್ಯಯಗಳ ಬಗ್ಗೆ ತಿಳಿಸಬೇಕು. ಅಲ್ಲದೆ ಯಾವ ಪ್ರತ್ಯಯಗಳು ಎಲ್ಲಿ? ಹೇಗೆ? ಬಳಸಬೇಕು ಎಂಬುದರ ಬಗ್ಗೆ ತಿಳಿಸಿ ಅವುಗಳ ಬಳಕೆಯನ್ನು ಮಕ್ಕಳಿಂದಲೇ ಮಾಡಿಸಬೇಕು.

೮. ನಾಮಪದ, ಕ್ರಿಯಾಪದಗಳಿಗೆಯಾವ ಪ್ರತ್ಯಯ ಹತ್ತುತ್ತವೆ ಎಂಬುದರ ಬಗ್ಗೆ ತಿಳಿಸಿರಬೇಕು.

೯. ಕರ್ತೃ, ಕರ್ಮ, ಕ್ರಿಯಾಪದಗಳ ಬಳಕೆ ಮಾಡುವಾಗ

"ಕರ್ತೃ>ಕ್ರಿಯೆ

ಕರ್ಮ>ಕ್ರಿಯೆ

ಕರ್ತೃ>ಕರ್ಮ"

ಪದಗಳಿಗೆ ಹೊಂದಿಕೆಯಾಗುವ ಪ್ರತ್ಯಯಗಳ ಬಗ್ಗೆ ತಿಳಿಸಿ ಸತತ ಅಭ್ಯಾಸ ಮಾಡಿಸಬೇಕು.

೧೦. ಶಿಕ್ಷಕರ ಧೋರಣೆ ಇಲ್ಲಿ ಬಹಳ ಮುಖ್ಯವಾಗಿದೆ. ಶಿಕ್ಷಕರು ಮಕ್ಕಳಿಗೆ ವಾಕ್ಯರಚನೆ ಮಾಡುವ ಸಾಮರ್ಥ್ಯವನ್ನು ವಿವಿಧ ಚಟುವಟಿಕೆಗಳ ಮೂಲಕ ಬೆಳೆಸಬೇಕು.[೪]

ಟಿಪ್ಪಣಿಗಳು

---

[೧] ಕೃಷ್ಣಪರಮೇಶ್ವರ ಭಟ್ಟ ಮತ್ತ ನಾಗಭೂಷಣ ಸಿ (ಸಂ.), ಕನ್ನಡ: ರಚನೆ ಮತ್ತು ಬಳಕೆ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ., ಪು. ೯೫-೯೬

[೨] ಪಂಡಿತ ಎಸ್ ಚಿಕ್ಕಣ್ಣ, ಸಿರಿಗನ್ನಡ ವ್ಯಾಕರಣ ಮತ್ತು ವಾಕ್ಯರಚನೆ, ಪು.೧೦

[೩] ಅದೇ.

[೪] ಓಬಳೇಶ ಘಟ್ಟಿ, ಭಾಷೆ ಮತ್ತು ಭಾಷಾ ಕೌಶಲ್ಯಗಳು, ಪು.೪೫-೪೯

* * * * *

ಅಧ್ಯಾಯ - ಎಂಟು

ಸಮಾರೋಪ

ಅಧ್ಯಾಯ – ಎಂಟು

ಸಮಾರೋಪ

ಮಾನವರು ಕಂಡುಕೊಂಡ, ರೂಢಿಸಿಕೊಂಡ ಭಾಷೆ ಇಂದು ಆಗಿರುವ ಆಗುತ್ತಿರುವ ಎಲ್ಲ ಬಗೆಯ ಕ್ರಿಯಾತ್ಮಕ ಬೆಳವಣಿಗೆಗಳಿಗೆ ಕಾರಣವೆನಿಸಿದೆ. ವ್ಯವಹಾರ ಮತ್ತು ಗುರುತಿಸುವಿಕೆಗೆ ತನ್ನದೆ ಆದ ಸಂಜ್ಞೆಗಳನ್ನು ಬಳಸುತ್ತ, ಭಾವ– ವಿಚಾರಾಭಿವ್ಯಕ್ತಿಗೆ ತನ್ನ ಮೌಖಿಕ ಧ್ವನಿಯನ್ನು ಅರ್ಥಕ್ಕೆ ಸರಿಯಾಗಿ ಹೊಂದಿಸಿಕೊಂಡದ್ದು, ಮಾನವರ ಇತಿಹಾಸದ ದೊಡ್ಡ ಶೋಧವೇ ಆಗಿದೆ. ಇದು ಅಭಿವ್ಯಕ್ತಿಯ ಅರ್ಥದ ಹೊಸ ಆಯಾಮವೂ ಹೌದು. ಮಕ್ಕಳು ಸಾಮಾನ್ಯವಾಗಿ ಮೊದಲ ಭಾಷೆಯನ್ನು ಗಳಿಸಿಕೊಳ್ಳುತ್ತಾರೆ ಏಕೆಂದರೆ ಸರಿಯಾದ ಪರಿಸರದಲ್ಲಿ ಬೆಳೆದರೆ ಮಕ್ಕಳಿಗೆ ಭಾಷೆ ತಾನಾಗಿಯೇ ಬರುತ್ತದೆ. ಆದರೆ ಎರಡನೆ ಭಾಷೆಯನ್ನು ಅವರು ಕಲಿಯುತ್ತಾರೆ. ಮಗು ಮೊದಲನೆಯ ಭಾಷೆಯನ್ನು ಎಷ್ಟು ಚನ್ನಾಗಿ ಗ್ರಹಿಸಿ, ಕಲಿಯುತ್ತದೆಯೋ ಅಷ್ಟೇ ಚನ್ನಾಗಿ ನಂತರದ ಭಾಷೆಗಳನ್ನು ಕಲಿಯುತ್ತದೆ ಎಂದು ಛಾಮ್ಸ್‌ಕಿ ಅಭಿಪ್ರಾಯಪಡುತ್ತಾರೆ. ಮಗು ಮೊದಲನೆ ಭಾಷೆಯನ್ನು ಕಲಿಯಲು ಬಳಸಿರುವ ಕೌಶಲಗಳನ್ನು ಎರಡನೆ ಭಾಷೆಯನ್ನು ಕಲಿಯುವ ಸಂದರ್ಭಕ್ಕೆ ವರ್ಗಾಯಿಸಿಕೊಳ್ಳುತ್ತದೆ. ಅಂದರೆ ಮೊದಲ ಭಾಷೆಯನ್ನು ಚನ್ನಾಗಿ ಕಲಿಯುವ ಮಕ್ಕಳು ಎರಡನೆ ಭಾಷೆಯನ್ನು ಅಷ್ಟೆ ಚನ್ನಾಗಿ ಕಲಿಯಬಲ್ಲವರಾಗಿದ್ದಾರೆ.

ಒಂದು ಭಾಷೆಯನ್ನು ಕಲಿಯುವುದು ಎಂದರೆ ಆ ಭಾಷೆಯ ಕೌಶಲಗಳನ್ನು ಅರ್ಥಮಾಡಿಕೊಳ್ಳುವುದು ಎಂದರ್ಥ. ಭಾಷಾ ಕಲಿಕೆಯಲ್ಲಿ ನಾವು ನಾಲ್ಕು ಕೌಶಲಗಳು ಎಂದು ಗುರುತಿಸಿಕೊಂಡಿರುವ ಆಲಿಸುವಿಕೆ, ಮಾತನಾಡುವಿಕೆ, ಓದುವಿಕೆ ಮತ್ತು ಬರೆಯುವಿಕೆ ಇವುಗಳ ಪೈಕಿ ಮೊದಲೆರಡು ಕೌಶಲಗಳನ್ನು ಕರಗತ ಮಾಡಿಕೊಳ್ಳಲು ಮಕ್ಕಳಿಗೆ ಔಪಚಾರಿಕ ಶಿಕ್ಷಣದ ಅಗತ್ಯತೆ ಕಂಡುಬರುವುದಿಲ್ಲ. ಇವೆರಡನ್ನೂ ಮಕ್ಕಳು ಸಹಜವಾಗಿ ಕಲಿತುಬಿಡುತ್ತಾರೆ. ಇಲ್ಲಿ ಹೇಳಿಕೊಡುವ ಮೂಲಕ ಅಂದರೆ ಮತ್ತೊಬ್ಬರು ಕಲಿಸುವ ಮೂಲಕ ಕಲಿಯುವುದಕ್ಕಿಂತಲೂ ಅನುಕರಣೆಯ ಮೂಲಕ ಕಲಿಯುವುದನ್ನು ಗಮನಿಸಬಹುದು. ಪ್ರಾರಂಭದಲ್ಲಿ ಮಗು ತನ್ನದೇ ಕೆಲಸವನ್ನು ನಿರ್ದೇಶಿಸಲು, ಬೇರೆಯವರ ಚಟುವಟಿಕೆಯನ್ನು ನಿರ್ದೇಶಿಸಲು, ಆಟವಾಡಲು, ವಿಷಯಗಳನ್ನು ವಿವರಿಸಲು ಭಾಷೆಯನ್ನು ಕಲಿತು ಬಳಸಿದರೆ ನಂತರದಲ್ಲಿ ಸಂಯೋಜಿಸಲು, ಪೂರ್ವಭಾವಿಯಾಗಿ ಗ್ರಹಿಸಲು, ಬದುಕನ್ನು ಚಿತ್ರಿಸಲು ಮತ್ತು ವಿವೇಚಿಸಲು ಭಾಷೆಯನ್ನು ಕಲಿಯುತ್ತದೆ.

ದ್ವಿಭಾಷಿಕ ಹಾಗೂ ಬಹುಭಾಷಿಕ ಪರಿಸರದಲ್ಲಿ ಬೆಳೆದ ಮಕ್ಕಳು ಹಾಗೂ ಅನ್ಯ ಮಾತೃಭಾಷೆಯುಳ್ಳ ಮಕ್ಕಳು ಕನ್ನಡ ಕಲಿಯುವಾಗ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಾರೆ ಎಂಬುದು ಕೆಲ ಅಧ್ಯಯನಗಳಿಂದ ತಿಳಿದುಬಂದಿದೆ. ಕನ್ನಡ ಮಾತೃಭಾಷೆಯುಳ್ಳ ಹಾಗೂ ಕನ್ನಡ ಭಾಷಿಕ ಪರಿಸರದಲ್ಲಿ ಬೆಳೆದ ಮಕ್ಕಳು ಕೂಡ ಕನ್ನಡ ಕಲಿಯುವಾಗ ಹಲವಾರು ಸಮಸ್ಯೆಗಳುನ್ನು ಎದುರಿಸುತ್ತಾರೆ. ಆದರೆ ಇದು ಕನ್ನಡೇತರ ಮಾತೃಭಾಷಿಕ ಮಕ್ಕಳು ಕನ್ನಡ ಕಲಿಯುವಾಗ ಉಂಟಾಗುವ ಸಮಸ್ಯೆಗಳ ಪ್ರಮಾಣಕ್ಕಿಂತ ಕಡಿಮೆ. ಅಂತಹ ಸಮಸ್ಯೆಗಲಲ್ಲಿ

ಓದುವ ಹಾಗೂ ಬರವಣಿಗೆಯ ಸಮಸ್ಯೆಗಳನ್ನು ಈ ಅಧ್ಯಯನದಲ್ಲಿ ಗುರುತಿಸುವ ಪ್ರಯತ್ನ ಮಾಡಲಾಗಿದೆ ಈ ಸಮಸ್ಯೆಗಳಿಗೆ ಕಾರಣಗಳನ್ನು ತಿಳಿದು ವಿಶ್ಲೇಷಣೆ ಮಾಡಲಾಗಿದೆ.

ಭಾಷಾ ಕಲಿಕೆಯು ಇತರ ವಿಷಯಗಳ ಕಲಿಕೆಗಿಂತ ಸಂಕೀರ್ಣವಾಗಿದ್ದರು ಬಹಳ ಮಹತ್ವವೆನಿಸಿದೆ. ಭಾಷೆಯನ್ನು ಸಮರ್ಪಕವಾಗಿ ಕಲಿಸಲು ಭಾಷಾ ಕೌಶಲಗಳನ್ನು ಸಮರ್ಪಕವಾಗಿ ರೂಢಿಸಿಕೊಳ್ಳಬೇಕು. ಕಲಿಕೆಯು ಆಲಿಸುವುಕೆ ಕೌಶಲದಿಂದ ಆರಂಭವಾಗುವುದರಿಂದ ಮಕ್ಕಳಲ್ಲಿ ಉತ್ತಮ ಆಲಿಸುವಿಕೆಯನ್ನು ಪದ ಸಂಪತ್ತಿನ ಜೊತೆಗೆ ಪದಗಳ ಅರ್ಥವನ್ನು ತಿಳಿಸಬೇಕಾಗುತ್ತದೆ.ಹೀಗೆ ಕೆಲವು ಪದಗಳನ್ನು ಅರ್ಥಗಳನ್ನಾಗಿ ವ್ಯಾಖ್ಯಾನಿಸಿ ಸ್ವೀಕರಿಸುವ ಮಾನಸಿಕ ಕ್ರಿಯೆ ಆಲಿಸುವಿಕೆ ಆಗಿದೆ ಎಲ್ಲಾ ಮಕ್ಕಳಲ್ಲಿ ಆಲಿಸುವ ಸಾಮರ್ಥ್ಯ ಏಕರೀತಿಯಾಗಿರದೆ ಭಿನ್ನವಾಗಿರುತ್ತದೆ. ಅವರವರ ಏಕಾಗ್ರತೆ, ಬುದ್ಧಿಭಾವಗಳು ಸಾಮರ್ಥ್ಯಕ್ಕನುಗುಣವಾಗಿ ಆಲಿಸಿ ಗ್ರಹಿಸುತ್ತಾರೆ. ಆಲಿಸುವಿಕೆಯ ಮುಖ್ಯ ಉದ್ದೇಶ ವಿಚಾರಗಳನ್ನು ತಿಳಿದುಕೊಂಡು ಪ್ರತಿಕ್ರಿಯೆ ನೀಡುವುದಾಗಿ ಕೇಳುವಿಕೆ ಮತ್ತು ಆಲಿಸುವಿಕೆಗೆ ಸಾಕಷ್ಟು ಅಂತರವಿದೆ ಮಕ್ಕಳು ಕೇಳುವುದಕ್ಕಿಂತ ಆಲಿಸುವಸುವಂತೆ ಮಾಡುವುದು ಶಿಕ್ಷಕನ ಹೊಣೆಗಾರಿಕೆಯಾಗಿದೆ. ಹೆಚ್ಚುಹೆಚ್ಚು ಆಲಿಸಿದ ಮಗು ಹೆಚ್ಚು ವಿಚಾರ ಶಕ್ತಿಯನ್ನು ಬೆಳೆಸಿಕೊಂಡು ಉತ್ತಮ ಮಾತುಗಾರನಾಗುತ್ತದೆ. ಅಲ್ಲದೆ ವಿಶ್ಲೇಷಣೆಯ ಗುಣವನ್ನು ಬೆಳೆಸಿಕೊಳ್ಳುತ್ತದೆ. ಶಿಕ್ಷಕ ಮಕ್ಕಳಲ್ಲಿ ಉತ್ತಮ ಆಲಿಸುವಿಕೆಯನ್ನು ಉಂಟುಮಾಡಬೇಕಾಗಿರುತ್ತದೆ. ಅದಕ್ಕಾಗಿ ವಿಚಾರಗಳನ್ನು ಆಲಿಸುವುದಕ್ಕಿಂತ ಮೊದಲು ಸೂಕ್ತ ಸೂಚನೆಗಳನ್ನು ಕೊಟ್ಟು ಪ್ರಚೋದಿಸುವುದು ಪದ್ಯ ಸಂಭಾಷಣೆಗಳನ್ನು ಆಲಿಸುವಂತೆ ಮಾಡುವುದು, ಆಲಿಸುವುದಕ್ಕಾಗಿ ಪ್ರತ್ಯೇಕ ಭಾಷಾ ಚಟುವಟಿಕೆಗಳನ್ನು ಪರಿಚಯಿಸಿ ಅವುಗಳನ್ನು ಆಲಿಸುವುದು ಹೀಗೆ ಇವುಗಳಿಗಾಗಿ ಪ್ರತ್ಯೇಕ ಸಮಯವನ್ನು ನಿಗಧಿಪಡಿಸಬೇಕು.

ಭಾಷಾ ಕಲಿಕೆಯಲ್ಲಿ ಮಾತುಗಾರಿಕೆ ಕೌಶಲವು ಒಂದಾಗಿದೆ. ಶಿಕ್ಷಕ ಮಕ್ಕಳಲ್ಲಿ ಮಾತುಗಾರಿಕೆಯ ಕೌಶಲವನ್ನು ಹೆಚ್ಚಿಸಲು ವಿಶೇಷವಾದ ಬೋಧನಾ ವಿಧಾನಗಳನ್ನು ಅನುಸರಿಸಬೇಕಾಗುತ್ತದೆ. ಧ್ವನಿ ಏರಿಳಿತ ಸ್ವರಭಾರದೊಂದಿಗೆ ಸ್ಪಷ್ಟವಾಗಿ ವೇಗವಾಗಿ, ನಿರರ್ಗಳವಾಗಿ ಮಾತುಗಾರಿಕೆಯನ್ನು ಬೋಧಿಸಿ ಕಲಿಸಬೇಕಾಗುತ್ತದೆ. ಮಾತುಗಾರಿಕೆಯನ್ನು ಬೆಳೆಸುವ ಹಲವಾರು ಭಾಷಾ ಚಟುವಟಿಕೆಗಳನ್ನು ತರಗತಿಯಲ್ಲಿ ಕೈಗೊಳ್ಳಬೇಕು.

ಭಾಷಾ ಕಲಿಕೆಯಲ್ಲಿ ಓದು ಅತ್ಯಂತ ಪರಿಣಾಮಕಾರಿಯಾದ ಕೌಶಲ್ಯವಾಗಿದೆ. ಲಿಪಿಯು ಧ್ವನಿಯಾಗಿ ಪರಿವರ್ತನೆಯಾಗುವುದನ್ನು ಸರಳವಾಗಿ ಓದುವಿಕೆ ಎಂದು ವ್ಯಾಖ್ಯಾನಿಸಬಹುದು. ಮುದ್ರಿತ ವಿಷಯವನ್ನು ಆ ಬಾಷೆಯ ಮೂಲಕ ಪ್ರವೇಶಿಸಿ ಅದರಲ್ಲಡಗಿರುವ ಅರ್ಥವನ್ನು ಭಾವನೆಯನ್ನು ಗ್ರಹಿಸುವುದೇ ಓದು ಎನಿಸುವುದು. ಶಿಕ್ಷಕ ಮಕ್ಕಳಲ್ಲಿ ಉತ್ತಮ ಓದುಗಾರಿಕೆಯನ್ನುಂಟುಮಾಡಲು ಸಾಹಿತ್ಯದ ಪ್ರಕಾರಗಳಾದ ಕತೆ,ಕಾದಂಬರಿ, ಕವನ, ಕಾವ್ಯ, ನಾಟಕ, ದಿನಪತ್ರಿಕೆ, ಮಾಸಪತ್ರಿಕೆ, ನಗೆಹಾನಿ, ಲೇಖನ, ಪ್ರಬಂಧ, ಪತ್ರ, ಇತ್ಯಾದಿ ಚಟುವಟಿಕೆಗಳನ್ನು ತರಗತಿಯಲ್ಲಿ ಹಮ್ಮಿಕೊಂಡು ಉತ್ತಮ ಓದುಗಾರರನ್ನಾಗಿ ಮಾಡಬೇಕು ಅಲ್ಲದೆ ಮಾದರಿ ಓದನ್ನು ಓದಬೇಕು ಧ್ವನಿ ಏರಿಳಿತ ಸ್ವರಭಾರ, ಅಲ್ಪಪ್ರಾಣ, ಮಹಾಪ್ರಾಣ ಬಳಕೆಯೊಂದಿಗೆ ಸ್ಪಷ್ಟವಾಗಿ ವೇಗವಾಗಿ ಅರ್ಥಪೂರ್ಣವಾಗಿ, ನಿರರ್ಗಗಳವಾಗಿ ಓದಲು ಅಭ್ಯಾಸ ಮಾಡಿಸಬೇಕು ಕಡಿಮೆ ಅವಧಿಯಲ್ಲಿ ಹೆಚ್ಚು ವಿಷಯವನ್ನು ವೇಗವಾಗಿ, ಸ್ಪಷ್ಟವಾಗಿ ಎಲ್ಲರಿಗೂ ಅರ್ಥವಾಗುವಂತೆ ಓದಿದ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರೋತ್ಸಾಹ ನೀಡಬೇಕು. ಹೀಗೆ ಹಲವಾರು ಚಟುವಟಿಕೆಗಳನ್ನು ಕೈಗೊಂಡು ಉತ್ತಮ ಓದುಗಾರರನ್ನಾಗಿ ಮಾಡಿದಾಗ ಓದುವಿಕೆಯಲ್ಲಿನ ಸಮಸ್ಯೆಗಳನ್ನು ಕಡಿಮೆ ಮಾಡಬಹುದು.

ಭಾಷೆ ಕಲಿಕೆಯಲ್ಲಿ ಬರವಣಿಗೆ ಕೌಸಲವು ಒಂದು ಅಲೋಚನೆಗಳು ಭಾವನೆಗಳು ಹಾಗೂ ಯಾವುದಾದರೊಂದು ವಿಷಯವನ್ನು ರೇಖಾ ವಿನ್ಯಾಸದ ಮೂಲಕ ಕ್ರಮಬದ್ಧವಾಗಿ ಜೋಡಿಸಿ ರೂಪಿಸುವುದಕ್ಕೆ ಬರವಣಿಗೆ ಎನ್ನಲಾಗಿದೆ. ಬರವಣಿಗೆಯಲ್ಲಿ ಕಣ್ಣು ಮನಸ್ಸು ಕೈಬೆರಳು ಒಂದಕ್ಕೊಂದು ಸಮನ್ವಯಗೊಂಡಿರಬೇಕು. ಆಗ ಮಾತ್ರ ಉತ್ತಮ ಬರವಣಿಗೆಯನ್ನು ರೂಪಿಸಲು ಸಾಧ್ಯ ಕನ್ನಡ

ಬರವಣಿಗೆಯು ಇತರ ಭಾಷೆಗಳಿಗಿಂತ ಅಂದವಾಗಿ ಸುಲಭವಾಗಿರುವುದಲ್ಲದೇ ಕನ್ನಡ ಭಾಷೆಯಲ್ಲಿ ಒಂದೊಂದು ಧ್ವನಿಗೂ ಒಂದೊಂದು ಪ್ರತ್ಯೇಕ ಲಿಪಿ ಚಿಹ್ನೆ ಇರುವುದರಿಂದ ಇದರ ಬರವಣಿಗೆಯನ್ನು ಕಲಿಸುವುದು ಭಿನ್ನವಾಗಿದೆ. ಶಿಕ್ಷಕ ಮಕ್ಕಳಿಗೆ ಬರವಣಿಗೆಯನ್ನು ಕಲಿಸುವಾಗ, ಅಕ್ಷರವನ್ನು ಕಲಿಸುವಾಗ ಅಕ್ಷರವನ್ನು ಸರಿಯಾದ ಕ್ರಮದಲ್ಲಿ ತಪ್ಪಿಲ್ಲದಂತೆ ಕಲಿಸಬೇಕು. ಅಕ್ಷರವನ್ನು ಜೋಡಿಸಿ ಅರ್ಥಪೂರ್ಣ ಪದಗಳನ್ನು ಬರೆಯುವಂತೆ ಮಾಡುವುದು, ತಪ್ಪಿಲ್ಲದಂತೆ ಸರಳ ವಾಕ್ಯ ಮಾಡುವುದು, ಸೂಕ್ತ ಲೇಖನ ಚಿಹ್ನೆಗಳನ್ನು ಬಳಸಿ ಬರೆಯುವುದು, ಬರೆಯುವಾಗ ಅಕ್ಷರಗಳನ್ನು ಗುಣಿತಾಕ್ಷರ ಮತ್ತು ಒತ್ತಕ್ಷರಗಳಲ್ಲಿ ಆಗುವ ತಪ್ಪುಗಳನ್ನು ಗುರುತಿಸಿ ತಿದ್ದಿ ಸರಿಪಡಿಸುವುದು ಶಿಕ್ಷಕರ ಕರ್ತವ್ಯವಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಗುರುತಿಸಲಾದ ಓದಿನ ಹಾಗೂ ಬರವಣಿಗೆಯಲ್ಲಿನ ಸಮಸ್ಯೆಗಳೆಂದರೆ ಸ್ವರಗಳಲ್ಲಿ ಮುಖ್ಯವಾಗಿ ಹ್ರಸ್ವಸ್ವರಗಳನ್ನು ದೀರ್ಘಸ್ವರಗಳನ್ನಾಗಿ ಬರೆಯುವುದು, ಕೆಲವು ಸ್ವರಗಳ ಬದಲಿಗೆ ವ್ಯಂಜನಗಳನ್ನು ಬಳಕೆ ಮಾಡುವುದು, ಸಂಧ್ಯಕ್ಷರಗಳಲ್ಲಿ ವ್ಯತ್ಯಾಸ ಮಾಡುವುದು, ಅನುಸ್ವರ ಹಾಗೂ ವಿಸರ್ಗಗಳನ್ನು ಲೋಪ ಮಾಡುವುದು, ವ್ಯಂಜನಗಳಲ್ಲಿ ಮುಖ್ಯವಾಗಿ ಮಹಾಪ್ರಾಣ ಧ್ವನಿಗಳಿಗೆ ಬದಲಾಗಿ ಅಲ್ಪಪ್ರಾಣ ಧ್ವನಿಗಳನ್ನು ಬಳಕೆ ಮಾಡಿ ಬರೆಯುವುದು, ಅನುನಾಸಿಕ ಧ್ವನಿಗಳನ್ನು ಬರೆಯುವ ಸಂದರ್ಭದಲ್ಲಿ ವ್ಯತ್ಯಾಸ ಮಾಡುವುದು. ಪಾರ್ಶ್ವಿಕ ಹಾಗೂ ಊಷ್ಮ ಧ್ವನಿಗಳ ಬರವಣಿಗೆ ಸಂದರ್ಭದಲ್ಲಿನ ವ್ಯತ್ಯಾಸಗಳು, ಅರ್ಧಸ್ವರಗಳಲ್ಲಿನ ವ್ಯತ್ಯಾಸಗಳು ಇತ್ಯಾದಿ ಸಮಸ್ಯೆಗಳು ಕಂಡುಬರುತ್ತವೆ. ಗುಣಿತಾಕ್ಷರ ಹಾಗೂ ಒತ್ತಕ್ಷರಗಳಲ್ಲಿಯೂ ಹಲವು ಬಗೆಯ ತಪ್ಪುಗಳನ್ನು ಮಾಡುತ್ತಿರುವುದನ್ನು ಗಮನಿಸಲಾಗಿದೆ. ಹೀಗೆ ಗುರುತಿಸಲಾದ ತಪ್ಪುಗಳು ಅಥವಾ ವ್ಯತ್ಯಾಸಗಳನ್ನು ನೋಡಿದಾಗ ಇವುಗಳಲ್ಲಿನ ಕೆಲ ವ್ಯತ್ಯಾಸಗಳನ್ನು ತಪ್ಪುಗಳು/ ದೋಷಗಳು/ ಸಮಸ್ಯೆಗಳು ಎನ್ನುವುದಕ್ಕಿಂತ ಈ ತೆರನಾದ ವ್ಯತ್ಯಾಸಕ್ಕೆ ಅವುಗಳಿಗೆ ಕನ್ನಡ ಭಾಷೆಯ ಜಾಯಮಾನ, ಉಚ್ಚಾರಣೆ ಹಾಗೂ ಆಡುನುಡಿಯ ಪ್ರಭಾವ ಕಾರಣವಾಗಿರಬಹುದು. ಅಲ್ಲದೆ ಈ ವ್ಯತ್ಯಾಸಗಳು ಸಮಸ್ಯೆಗಳಾಗಿ ಕಂಡುಬರುವುದು ಶಿಕ್ಷಣ ಕ್ಷೇತ್ರದಲ್ಲಿ ಮಾತ್ರ ಎನ್ನಬಹುದು. ಅದುದರಿಂದ ಪ್ರಸ್ತುತ ಅಧ್ಯಾಯನದಲ್ಲಿ ಕಂಡುಬರುವ ಕೆಲ ವ್ಯತ್ಯಾಸಗಳನ್ನು ದೋಷಗಳು/ ಸಮಸ್ಯೆಗಳೆಂದು ಕರೆಯದೆ ಅವುಗಳನ್ನು ಅದರ ವಿಕಲ್ಪ ರೂಪಗಳೆಂದು ಕರೆಯಲಾಗಿದೆ. ಈ ವಿಚಾರದ ಬಗ್ಗೆ ಡಿ. ಎನ್. ಶಂಕರಬಟ್ ವರು 'ಕನ್ನಡ ಬರಹವನ್ನು ಸರಿಪಡಿಸೋಣ' ಎಂಬ ಕೃತಿಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅಲ್ಲದೆ ಇತರೆ ಭಾಷಾ ವಿದ್ವಾಂಸರೂ ಸಹ ಚರ್ಚೆ ನಡೆಸಿ ತಮ್ಮದೇ ಆದ ವಿಚಾರಗಳನ್ನು ಮಂಡಿಸಿದ್ದಾರೆ.

ಕಲಿಕೆ–ಬೋಧನೆ–ಪಠ್ಯಕ್ರಮದಲ್ಲಿನ ಸಮಸ್ಯೆಗಳು ಮಗುವಿನ ಆಸಕ್ತಿ, ಅಭಿರುಚಿಯ ಜೊತೆಗೆ ಆ ಮಗುವಿನ ದೈಹಿಕ, ಮಾನಸಿಕ, ಸಾಮಾಜಿಕ ಆರ್ಥಿಕ, ಕೌಟುಂಬಿಕ, ಶೈಕ್ಷಣಿಕ ಸ್ಥಿತಿಗತಿಗಳು ಅನ್ಯಭಾಷೆಯ ಪ್ರಭಾವವೂ ಸಹ ಕಲಿಕೆಯಲ್ಲಿನ ವ್ಯತ್ಯಾಸಗಳಿಗೆ ಕಾರಣವಾಗಬಹುದು. ಅಲ್ಲದೆ ಭಾಷೆಯ ಸರಿಯಾದ ರೂಪ ಗೊತ್ತಿದ್ದರೂ, ಕೆಲವೊಂದು ಅಜಾಗರೂಕತೆಯಿಂದಲೋ ಅವಸರದಿಂದಲೋ ದೋಷಗಳಾಗುತ್ತವೆ. ಬರವಣಿಗೆಯ ಸಂದರ್ಭದಲ್ಲಾದರೆ ಅವನ್ನು ಕೈದೋಷ ಎನ್ನುವುದಾಗಲಿ, ಓದಿನ ಸಂದರ್ಭದಲ್ಲಾದರೆ ಕಣ್‌ದೋಷ ಎನ್ನುವುದಾಗಲಿ, ಮಾತಿನಲ್ಲಿ ತಪ್ಪಾದರೆ ಬಾಯಿ ದೋಷ ಎನ್ನುವುದು ಕಂಡುಬರುತ್ತದೆ. ಇಂತಹ ದೋಷಗಳು ಉಂಟಾಗುವುದು ಆಕಸ್ಮಿಕವೆನ್ನಬಹುದಾದರೂ; ಭಾಷಾ ಬಳಕೆಯ ಸಂದರ್ಭದಲ್ಲಿ ಎಲ್ಲಾ ಕಡೆಗಳಲ್ಲಿ ತಪ್ಪುಗಳಾಗುತ್ತಿದ್ದರೆ ಇದನ್ನು ಭಾಷಿಕ ತಪ್ಪುಗಳೆಂದು ಪರಿಗಣಿಸಲಾಗುತ್ತದೆ. ಇಂತಹ ಸಮಸ್ಯೆಗಳನ್ನು ಪರಿಹಾರ ಬೋಧನೆಯ ಭಾಗಯಾಗಿ ಸೂಕ್ತ ಕ್ರಮಗಳೊಂದಿಗೆ ತಿದ್ದಿ, ಸರಿಪಡಿಸಿ, ಪುನಃ ಆ ತಪ್ಪುಗಳು ಆಗದಂತೆ ಅಗತ್ಯ ಕ್ರಮವನ್ನು ಶಿಕ್ಷಕರು ವಹಿಸಬೇಕು. ಒಟ್ಟಾರೆ ಕನ್ನಡೇತರ ಅದರಲ್ಲಿಯೂ ಬ್ಯಾರಿ ಮನೆಮಾತುಳ್ಳ ಮಕ್ಕಳು ಕನ್ನಡವನ್ನು ಓದುವಾಗ ಬರೆಯುವಾಗ ಎದುರಾಗುವ ಸಮಸ್ಯೆಗಳ ಸ್ವರೂಪವನ್ನು ಈ ಅಧ್ಯಯನದಲ್ಲಿ ತಿಳಿಸಲಾಗಿದೆ. ಇಂತಹ ವಿಚಾರಗಳನ್ನು ವಿದ್ವಾಂಸರು ಹಾಗೂ ಸರ್ಕಾರ ಗಮನಿಸಿ ಅವುಗಳಿಗೆ ಸೂಕ್ತ ಕಾರಣಗಳನ್ನು ತಿಳಿದು ಪರಿಹಾರವನ್ನು ಆದಷ್ಟು ಬೇಗನೆ ಕಂಡುಕೊಳ್ಳಬೇಕಾಗಿದೆ. ಜೊತೆಗೆ ಶಿಕ್ಷಕರಿಗೆ ಬೇಕಾದ

ಅಗತ್ಯ ಸೌಲಭ್ಯಗಳನ್ನು ಒದಗಿಸಿ ಅವರನ್ನು ಬೋಧಕೇತರ ಕೆಲಸಗಳಿಗಿಂತ ಬೋಧನಾ ಕೆಲಸದಲ್ಲಿ ಹೆಚ್ಚು ತೊಡಗುವಂತೆ ಮಾಡಿದಾಗ ಶಿಕ್ಷಣ ರಂಗದಲ್ಲಿ ಉಂಟಾಗುತ್ತಿರುವ ಸಮಸ್ಯೆಗಳ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಬಹುದಾಗಿದೆ. ಈ ದೃಷ್ಟಿಯಿಂದ ಪ್ರಸ್ತುತ ಅಧ್ಯಯನ ಮಹತ್ವವೆನಿಸಿದೆ.

ಅಧ್ಯಯನದ ಫಲಿತಗಳು

ದಕ್ಷಿಣ ಕನ್ನಡ ಪರಿಸರದ ಕನ್ನಡ ಕಲಿಕೆಯ ಸಮಸ್ಯೆಗಳು ಎಂಬ ಶೀರ್ಷಿಕೆಯನ್ನು ಕೇಂದ್ರವಾಗಿಟ್ಟುಕೊಂಡು ಪ್ರಸ್ತುತ ಅಧ್ಯಯನ ಕೈಗೊಂಡಿದ್ದು, ಈ ಅಧ್ಯಯನದಿಂದ ಕಂಡುಕೊಂಡಿರುವ ಫಲಿತಗಳು ಕೆಳಗಿನಂತಿವೆ.

೧. ಕನ್ನಡ ಓದು, ಬರವಣಿಗೆ ಮತ್ತು ಬಳಕೆಯ ಸಂದರ್ಭದಲ್ಲಿ ಬ್ಯಾರಿ ಮನೆಮಾತುಳ್ಳ ಮಕ್ಕಳ ತಿಳಿವ ರೂಪ ಸರಿಯಾಗಿ ಕಂಡುಬಂದರೂ ಅವರ ನುಡಿವ ರೂಪದಲ್ಲಿ ವ್ಯತ್ಯಯವಾಗುವುದನ್ನು ಕಂಡುಕೊಳ್ಳಲಾಗಿದೆ.

೨. ದಕ್ಷಿಣ ಕನ್ನಡ ಒಂದು ಬಹುಭಾಷಿಕ ಪರಿಸರವಾಗಿದೆ. ಕನ್ನಡ ಇಲ್ಲಿ ಆಡಳಿತ ಭಾಷೆಯಾಗಿದೆ. ತುಳು ಹೆಚ್ಚಾಗಿ ಬೇರೆಬೇರೆ ಆಡುನುಡಿಗಳೊಂದಿಗೆ ಬಳಕೆಯಲ್ಲಿದೆ. ಕನ್ನಡದ ಒಳನುಡಿಗಳಾಗಿ ಅರೆಗನ್ನಡ, ಕುಂದಗನ್ನಡ, ಕೋಟ ಕನ್ನಡಗಳು ಬಳಕೆಯಲ್ಲಿವೆ. ಅಲ್ಲದೆ ದಕ್ಷಿಣ ಕನ್ನಡ ಪರಿಸರದಲ್ಲಿ ಬ್ಯಾರಿ, ಕೊಂಕಣಿ, ಮಲೆಯಾಳಂ, ಮರಾಠಿ ಮತ್ತು ತಮಿಳು ಭಾಷೆಗಳು ಬಳಕೆಯಲ್ಲಿವೆ. ಈ ಹಿನ್ನೆಲೆಯಲ್ಲಿ ವಿವಿಧ ವಲಯಗಳಲ್ಲಿ ಈ ಪರಿಸರ ಒಂದು ಬಹುಭಾಷಿಕ ಪರಿಸರ ಎಂದು ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

೩. ಕನ್ನಡ ಭಾಷೆಯ ಜಾಯಮಾನ ಮತ್ತು ಬ್ಯಾರಿ ಭಾಷೆಯ ಜಾಯಮಾನ ಇವೆರಡೂ ಬೇರೆಯೇ ಆಗಿದೆ. ಹೀಗಿರುವಾಗ ತಮ್ಮ ನುಡಿಯಲ್ಲಿ ಇಲ್ಲದ ಬೇರೊಂದು ನುಡಿಯ ಸಂಗತಿಗಳನ್ನು ಮಕ್ಕಳು ಅದೇ ನುಡಿಯ ಮೂಲಕ ಕಲಿಯಬೇಕಾಗಿರುವುದರಿಂದ ಸಮಸ್ಯೆ ಉಂಟಾಗುತ್ತಿದೆ.

೪. ದಕ್ಷಿಣ ಕನ್ನಡ ಪರಿಸರ ಬಹುಭಾಷಿಕ ಪರಿಸರವಾಗಿದೆ. ಆದರೆ ಇಲ್ಲಿನ ಮಕ್ಕಳಿಗೆ ಕನ್ನಡ ಕಲಿಕೆಯ ಸಂದರ್ಭ ಈ ಭಾಷಿಕ ವಾತಾವರಣ ಅವರಿಗೆ ಪೂರಕವಾಗಿಯೇ ಇದೆ.

೫. ಪದಾದಿ ಪರಿಸರದಲ್ಲಿ ಅರ್ಧಸ್ವರಗಳಾದ 'ಯ' ಮತ್ತು 'ವ' ಧ್ವನಿಗಳಿಗೆ ಬದಲಾಗಿ ಸ್ವರಗಳಾದ 'ಎ' ಹಾಗೂ 'ಒ' ಧ್ವನಿಗಳನ್ನು ಬಳಕೆಮಾಡಿ ಬರೆಯುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೬. ಕನ್ನಡವನ್ನು ಇತರ ಪಠ್ಯಗಳ ರೀತಿಯಲ್ಲಿಯೇ ಯಾಂತ್ರಿಕವಾಗಿ ಬೋಧನೆ ಮಾಡುತ್ತಿರುವುದು ಮತ್ತು ಮಕ್ಕಳ ಮಾನಸಿಕ ಮಟ್ಟಕ್ಕಿಳಿದು ಬೋಧಿಸುವಲ್ಲಿ ಶಿಕ್ಷಕರಿಗೆ ತೊಡಕಾಗಿರುವುದು ಪ್ರಸ್ತುತ ಅಧ್ಯಯನದಿಂದ ಕಂಡುಬರುತ್ತದೆ.

೭. ಭಾಷೆಯಲ್ಲಿ ಬರೆದಂತೆ ಓದುವುದು, ಓದಿದಂತೆ ಬರೆಯುವುದು, ನಿಯಮವಾದರೂ ಕೆಲವು ಮಕ್ಕಳು ಬರವಣಿಗೆಯಲ್ಲಿ ಮಾಡಿದ ತಪ್ಪುಗಳನ್ನು ಓದುವಾಗ ಮಾಡುವುದಿಲ್ಲ. ಇನ್ನು ಕೆಲವು ಮಕ್ಕಳು ಓದುವಾಗ ಮಾಡುವ ತಪ್ಪುಗಳನ್ನು ಬರವಣಿಗೆಯಲ್ಲಿ ಮಾಡುವುದಿಲ್ಲ. ಆದರೆ ಪ್ರಸ್ತುತ ಅಧ್ಯಯನದಲ್ಲಿ ಮಕ್ಕಳು ಓದುವ ಸಂದರ್ಭಕ್ಕಿಂತಲೂ ಬರವಣಿಗೆಯ ಸಂದರ್ಭದಲ್ಲಿ ಹೆಚ್ಚು ತಪ್ಪು ಮಾಡಿರುವುದು ಕಂಡುಬಂದಿದೆ.

೮. ಭಾಷಾ ಕಲಕೆಯ ಸಂದರ್ಭದಲ್ಲಿ ಮಕ್ಕಳು ಮಾಡುವ ತಪ್ಪುಗಳನ್ನು ಕೇವಲ ಮಕ್ಕಳ ಹಿನ್ನೆಲೆಯಿಂದ ಮಾತ್ರ ನೋಡದೆ, ಭಾಷಿಕ ಹಿನ್ನೆಲೆಯಿಂದಲೂ ನೋಡಲು ಸಾಧ್ಯವಿದೆ ಎಂಬ ಅಂಶವನ್ನು ಪ್ರಸ್ತುತ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೯. ದಕ್ಷಿಣ ಕನ್ನಡ ಪರಿಸರದಲ್ಲಿ ಬೋಧನಾ ಮಾಧ್ಯಮವು ಕನ್ನಡ, ಇಂಗ್ಲಿಷ್ ಮತ್ತು ಉರ್ದು ಮಾಧ್ಯಮದಲ್ಲಿ ಮಾತ್ರ ಇದೆ. ಆದರೆ ಇಲ್ಲಿರುವ ಬ್ಯಾರಿ ಭಾಷಿಕರನ್ನು ಒಳಗೊಂಡಂತೆ ಇತರರಿಗೆ ಈ ಮೇಲಿನವು ಅನ್ಯ ಭಾಷೆಗಳು. ಆದುದರಿಂದ ಭೋದನೆಗೆ ಬಳಕೆಯಾಗುವ ಭಾಷೆ ಮಕ್ಕಳ ಮಾತೃಭಾಷೆಯಾದಲ್ಲಿ ಕಲಿಕೆ ಸುಲಭವಾಗಲಿದೆ.

೧೦. ಬ್ಯಾರಿ ನುಡಿಯಲ್ಲಿಯೂ ಸಾಕಷ್ಟು ಪ್ರಮಾಣದ ಪ್ರಾದೇಶಿಕ ವೈವಿಧ್ಯಗಳಿವೆ ಹಾಗಾಗಿ ಮಕ್ಕಳ ಶಬ್ದಗಳ ಪ್ರಯೋಗ ಮತ್ತು ಉಚ್ಚಾರಣೆಯಲ್ಲಿ ವ್ಯತ್ಯಾಸ ಉಂಟಾಗುವುದನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೧೧. ಈ ಅಧ್ಯಯನದಿಂದ ಬ್ಯಾರಿ ಮನೆಮಾತುಳ್ಳ ಮಕ್ಕಳು ಕನ್ನಡವನ್ನು ಓದುವಾಗ ಅಂದರೆ ಸ್ವರ, ವ್ಯಂಜನ, ಗುಣಿತಾಕ್ಷರ ಹಾಗೂ ಒತ್ತಕ್ಷರಸಹಿತ ಪದಗಳನ್ನು ಓದುವಾಗ ಯಾವ ತರಹದ ತಪ್ಪುಗಳನ್ನು ಮಾಡುತ್ತಾರೆ. ಈ ಸಂದರ್ಭದಲ್ಲಿ ಅವರು ಎದುರಿಸುವ ಸಮಸ್ಯೆಗಳಾವುವು ಎಂಬುವುದನ್ನು ಕಂಡುಕೊಳ್ಳಲಾಗಿದೆ.

೧೨. ಕರ್ನಾಟಕದಲ್ಲಿರುವ ಭಾಷಾ ಅಲ್ಪಸಂಖ್ಯಾತ ಮಕ್ಕಳಿಗೆ ಪ್ರತ್ಯೇಕವಾದ ಕನ್ನಡ ಪಠ್ಯ ರಚನೆಯಾಗಬೇಕಿದೆ ಅಂದರೆ; ಮೂಲಕ್ಷರ, ಗುಣಿತಕ್ಷರ ಮತ್ತು ಒತ್ತಕ್ಷರ ಪಾಠಗಳನ್ನು ಚಿತ್ರಸಹಿತವಾಗಿ ಸೆಮಿಸ್ಟರ್‌ಗೆ ಅನುಗುಣವಾಗಿ ಅಳವಡಿಸಬೇಕಿದೆ ಎಂಬುವುದನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೧೩. ಪ್ರಸ್ತುತ ಅಧ್ಯಯನ ವ್ಯಾಪ್ತಿಯಲ್ಲಿ ಬರುವ ಮಕ್ಕಳ ಕನ್ನಡ ಬರವಣಿಗೆಯಲ್ಲಿ ಮನೆಮಾತಾದ ಬ್ಯಾರಿ ನುಡಿಯ ಜೊತೆಗೆ ದಕ್ಷಿಣ ಕನ್ನಡ ಪರಿಸರದಲ್ಲಿ ವ್ಯಾವಹಾರಿಕ ಭಾಷೆಯಾಗಿ ಚಾಲ್ತಿಯಲ್ಲಿರುವ ತುಳುವಿನ ಪ್ರಭಾವವೂ ಇರುವುದನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೧೪. ಬ್ಯಾರಿ ಮನೆಮಾತುಳ್ಳ ಮಕ್ಕಳಿಗೆ ಕನ್ನಡ ಭೋದಿಸುವ ಶಿಕ್ಷಕರಿಗೆ ಶಿಕ್ಷಕರ ಕೈಪಿಡಿಯೊಂದರ ಅಗತ್ಯವಿದೆ ಎಂಬುದನ್ನು ಪ್ರಸ್ತುತ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೧೫. ಮೌಲ್ಯಮಾಪನ ಎನ್ನುವುದು ವಿದ್ಯಾರ್ಥಿಗಳ ಕಲಿಕೆಯ ಸರಿ ತಪ್ಪುಗಳ ಅಥವಾ ಕಲಿಕೆಯ ದೋಷಗಳ ಮಾನದಂಡವಾಗಬೇಕಿಲ್ಲ. ಬದಲಾಗಿ ಮೌಲ್ಯಮಾಪನ ಎನ್ನುವುದು ಮಕ್ಕಳು ಯಾವುದನ್ನು ಕಲಿತಿಲ್ಲ ಎಂಬ ವಿಷಯದ ಪರಾಮರ್ಶೆಗಿಂತ ಅವರು ಯಾವುದನ್ನು ಗ್ರಹಿಸುತ್ತಾರೆ ಅಥವಾ ಗ್ರಹಿಸುತ್ತಿದ್ದಾರೆ ಎಂಬುದರ ತಿಳುವಳಿಕೆಯನ್ನು ಶಿಕ್ಷಕರು ಅರ್ಥಮಾಡಿಕೊಳ್ಳುವಂತೆ ಪ್ರೇರೇಪಿಸಬೇಕಾಗಿದೆ.

೧೬. ಭಾಷಾ ಪಠ್ಯಗಳ ಭೋದನೆಯು ಇತರ ಪಠ್ಯಗಳ ಭೋದನೆಗಿಂತ ಭಿನ್ನವಾಗಿರಬೇಕು. ಇಲ್ಲಿ ಭೋದನಾ ಸಮಯ, ಭೋದನಾ ವಿಧಾನ ಮೊದಲಾದವುಗಳು ಮಕ್ಕಳ ಕಲಿಕೆಯ ಮನಸ್ಥಿತಿಗೆ ಅನುಗುಣವಾಗಿ ರೂಪುಗೊಳ್ಳಬೇಕು.

೧೭. ಭಾಷಾ ಭೋದನೆಯ ಸಂದರ್ಭದಲ್ಲಿ ಭೋದಕರ ಸಾಮಾಜಿಕ, ಭಾಷಿಕ ಹಿನ್ನೆಲೆಯು ಮುಖ್ಯವಾದ ಪಾತ್ರ ವಹಿಸುತ್ತದೆ ಎಂಬುದನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಮುಂದಿನ ಅಧ್ಯಯನ ಸಾಧ್ಯತೆಗಳು

೧. ಒಂದು ನಿರ್ದಿಷ್ಟ ಭಾಷೆಯನ್ನು ಮನೆಮಾತಾಗಿರಿಸಿಕೊಂಡಿರುವ ಮಕ್ಕಳು ಬೇರೊಂದು ಭಾಷೆಯನ್ನು ಕಲಿಯುವಾಗ ಸಹಜವಾಗಿಯೇ ಬೇರೆಬೇರೆ ತಪ್ಪುಗಳನ್ನು ಮಾಡುತ್ತಾರೆ ಮತ್ತು ಆ ತಪ್ಪುಗಳಿಗೆ ಕಾರಣಗಳು ವಿಭಿನ್ನವಾಗಿರುತ್ತವೆ. ಆದುದರಿಂದ ಪ್ರತಿ ಭಾಷೆಯ ಹಿನ್ನೆಲೆಯಿಂದಲೂ ಬೇರೆಬೇರೆ ಅಧ್ಯಯನಗಳು ನಡೆಯಬೇಕಾಗಿವೆ.

೨. ಮಕ್ಕಳ ಓದುವ ಮತ್ತು ಬರೆಯುವ ತಪ್ಪುಗಳನ್ನು ಗುರುತಿಸುವಾಗ ಅವುಗಳು ತಪ್ಪುಗಳೇ ಅಥವಾ ವಿಭಿನ್ನ ರೂಪಗಳೇ ಎಂಬುದನ್ನು ಭಾಷಾವೈಜ್ಞಾನಿಕ ನೆಲೆಯಿಂದ ಅಧ್ಯಯನ ಮಾಡಬೇಕಿದೆ.

೩. ಭಾಷಾ ಕಲಿಕೆಯನ್ನು ಇತರ ಪಠ್ಯ ಪ್ರಕಾರಗಳಿಗಿಂತ ಹೇಗೆ ಭಿನ್ನವಾಗಿಸಬಹುದು ಎಂಬುದರ ಕುರಿತಾಗಿ ಅಧ್ಯಯನ ಆಗಬೇಕಿದೆ.

ಒಟ್ಟಿನಲ್ಲಿ ಪ್ರಸ್ತುತ 'ದಕ್ಷಿಣ ಕನ್ನಡ ಪರಿಸರದ ಕನ್ನಡ ಕಲಿಕೆಯ ಸಮಸ್ಯೆಗಳು' ಎಂಬ ಈ ಅಧ್ಯಯನದಲ್ಲಿ ಬ್ಯಾರಿ ಮನೆಮಾತುಳ್ಳ ಮಕ್ಕಳು ಭಾಷಾ ಕಲಿಕೆಯ ಸಂದರ್ಭದಲ್ಲಿ ಮಾಡುವ ತಪ್ಪುಗಳು, ಅದಕ್ಕೆ ಕಾರಣಗಳು ಮತ್ತು ಅವುಗಳ ನಿವಾರಣೆಗೆ ಕೈಗೊಳ್ಳಬಹುದಾದ ಪರಿಹಾರೋಪಾಯಗಳ ಕುರಿತಾಗಿ ಚರ್ಚಿಸಲಾಗಿದೆ. ಇದು ಇಲ್ಲಿನ ಬ್ಯಾರಿ ಮನೆಮಾತುಳ್ಳ ಮಕ್ಕಳು ಕನ್ನಡ ಕಲಿಯುವ ಸಂದರ್ಭದಲ್ಲಿ ಎದುರಿಸುತ್ತಿರುವ ಸವಾಲುಗಳನ್ನು ಅರಿಯಲು ಮತ್ತು ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ನೆರವಾಗುತ್ತದೆ.

* * * * *

ಅನುಬಂಧಗಳು

ಅನುಬಂಧ – ೧

ಪರಾಮರ್ಶನ ಗ್ರಂಥಗಳು, ಪಿಎಚ್.ಡಿ ನಿಬಂಧಗಳು, ಎಂ.ಫಿಲ್. ನಿಬಂಧಗಳು, ಪತ್ರಿಕೆಗಳು ಮತ್ತು ಲೇಖನಗಳು

ಅ. ಪರಾಮರ್ಶನ ಗ್ರಂಥಗಳು

೧. ಅಂಗಡಿ ಎಸ್. ಎಸ್., ಕನ್ನಡ ಕ್ರಿಯಾರೂಪಗಳು, ೨೦೦೦, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಅನುಸೂಯ ವಿ ಪರಗಿ, ಮಾತೃಭಾಷೆ ತತ್ವ ಮತ್ತು ಬೋಧನಾ ಮಾರ್ಗ, ೧೯೯೦ ಅನುಸೂಯ ಪ್ರಕಾಶನ ಪುರವರರ,

೩. ಅಶೋಕ ಕುಮಾರ ರಂಜೇರೆ, ಭಾಷೆ ಮತ್ತು ಶಿಕ್ಷಣ, ೨೦೦೫, ನಿಧಿ ಪ್ರಕಾಶನ, ಹೊಸಪೇಟೆ.

೪. ಅಶೋಕ ಕುಮಾರ ರಂಜೇರೆ, (ಸಂ.) ಶಿಕ್ಷಣದಲ್ಲಿ ಭಾಷಾ ಮಾಧ್ಯಮದ ವಾಗ್ವಾದಗಳು, ೨೦೧೨, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫. ಉಪಾಧ್ಯಾಯ ಯು. ಪಿ, ಭಾಷಿಕ–ಸಾಂಸ್ಕೃತಿಕ ಚಿಂತನೆಗಳು, ೨೦೧೦, ಸ್ವಾಗತ ಸಮಿತಿ, ಉಡುಪಿ ಜಿಲ್ಲಾ ೬ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಉಡುಪಿ.

೬. ಉಪಾಧ್ಯಾಯ ಯು. ಪಿ. ಮತ್ತು ಸುಶೀಲಾ ಪಿ ಉಪಾಧ್ಯಾಯ (ಸಂ.), ಭಾಷೆಗಳ ಆಡುಂಬೋಲ, ನಮ್ಮ ಕರಾವಳಿ, ೨೦೧೬, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.

೭. ಎಚ್ಚೆಸ್ಕೆ, ಆಡಳಿತ ಕನ್ನಡ ೨೦೦೪, ಚೇತನ ಬುಕ್‌ಹೌಸ್, ಮೈಸೂರು.

೮. ಓಬಳೇಶಘಟ್ಟಿ ಆರ್., ವಿಷಯಧಾರಿತ ಬೋಧನಾ ಪದ್ಧತಿ–ಕನ್ನಡ,ವಿದ್ಯಾನಿಧಿ ಪ್ರಕಾಶನ,ಗದಗ,

೯. ಓಬಳೇಶಘಟ್ಟಿ ಆರ್., ಭಾರತೀಯ ಶಿಕ್ಷಣ ಮತ್ತು ಪ್ರಚಲಿತ ಸಮಸ್ಯೆಗಳು, ೧೯೯೨, ಶಿವಗಂಗಾ ಪ್ರಕಾಶನ, ತೋರಣ ಘಟ್ಟ,

೧೦. ಓಬಳೇಶಘಟ್ಟಿ ಆರ್., ಭಾಷೆ ಮತ್ತು ಭಾಷಾ ಕೌಶಲ್ಯಗಳು, ೨೦೦೦, ಲೇಖನ್ ಪ್ರಕಾಶನ, ತೋರಣಘಟ್ಟ, ಶಿರಾ.

೧೧. ಓದುವೆ ನಾನು ಶಿಕ್ಷಕ ಮಾಗದರ್ಶಿ, ಕರ್ನಾಟಕ ಸರ್ಕಾರ, ಸಾರ್ವಜನಿಕ ಶಿಕ್ಷಣ ಇಲಾಖೆ.

೧೨. ಕರ್ಕಿ ಡಿ. ಎಸ್., ಮಕ್ಕಳ ಶಿಕ್ಷಣ, ೧೯೭೧, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೩. ಕಲಬುರ್ಗಿ ಎಂ.ಎಂ, ಕನ್ನಡ ನಾಮ ವಿಜ್ಞಾನ, ೧೯೮೯, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೧೪. ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ–ಕನ್ನಡಿಗ, ಕರ್ನಾಟಕ, ೨೦೦೬, ಕರ್ನಾಟಕ ಸರ್ಕಾರ, ಬೆಂಗಳೂರು.

೧೫. ಕೀರ್ತಿನಾಥ ಕುರ್ತಕೋಟಿ, ಭಾಷೆ ಮತ್ತು ಸಂಸ್ಕೃತಿ, ೨೦೧೫, ಕುರ್ತಕೋಟಿ ಮೆಮೋರಿಯಲ್ ಟ್ರಸ್ಟ್ ಧಾರವಾಡ.

೧೬. ಕುಮಾರ್ ಟಿ. ಎಂ., ಪ್ರಾಥಮಿಕ ಶಿಕ್ಷಣ ಒಂದು ಚರ್ಚೆ, ೨೦೦೪, ಶ್ರೀದೇವಿ ಪ್ರಕಾಶನ, ಬೆಂಗಳೂರು–೭೩.

೧೭. ಕುಮಾರ್ ಟಿ. ಎಂ. ಮತ್ತು ಗುಣವತಿ ಎಸ್. (ಸಂ.) ಪ್ರಾಥಮಿಕ ಶಿಕ್ಷಣ ಬಹುವರ್ಗ ಬೋಧನೆ, ೨೦೦೨, ಶ್ರೀದೇವಿ ಪ್ರಕಾಶನ, ಬೆಂಗಳೂರು-೭೩.
೧೮. ಕುಶಾಲಪ್ಪಗೌಡ ಕೆ., ಕನ್ನಡ ಸಂಕ್ಷಿಪ್ತ ವ್ಯಾಕರಣ, ೨೦೧೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೧೯. ಕೃಷ್ಣಪ್ಪ ಎಸ್., ಬೋಧನಾ ನಿಯಮಗಳು ಮತ್ತು ಶಿಕ್ಷಣ ಸಮಸ್ಯೆಗಳು, ೧೯೮೨, ಡಿ.ವಿ.ಕೆ. ಮೂರ್ತಿ, ಮೈಸೂರು.
೨೦. ಕೃಷ್ಣ ಪರಮೇಶ್ವರ ಭಟ್ಟ, ಕನ್ನಡ ಮತ್ತು ತೆಲುಗು ದ್ವಿಭಾಷಿಕತೆಯ ಅಧ್ಯಯನ, ೧೯೯೫, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
೨೧. ಕೃಷ್ಣಮೂರ್ತಿ ಜಿ., ಶಿಕ್ಷಣ, ೨೦೦೫, ಕೃಷ್ಣಮೂರ್ತಿ ಫೌಂಡೇಷನ್ ಇಂಡಿಯಾ, ಚೆನ್ನೈ-೦೨೮.
೨೨. ಕೇಶವ ಭಟ್ಟ ಟಿ., ವಾಗ್ಭೂಷಣ, ೨೦೦೩, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
೨೩. ಕೆಂಪೇಗೌಡ ಕೆ., ತೌಲನಿಕ ದ್ರಾವಿಡ ವ್ಯಾಕರಣ, ಗಜಾನನ ಪಬ್ಲಿಕೇಷನ್ಸ್, ಮೈಸೂರು- ೨೪,
೨೪. ಕೆಂಪೆಗೌಡ ಕೆ, ಧ್ವನಿಯಾ ವಿಜ್ಞಾನ, ೧೯೮೦, ಭಾರತೀ ಪ್ರಕಾಶನ, ಮೈಸೂರು.
೨೫. ಕೆಂಪೇಗೌಡ ಕೆ, ಕನ್ನಡ ಭಾಷಾ ಸ್ವರೂಪ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.
೨೬. ಕೊಂಗವಾಡ ಎನ್.ಬಿ, ಶೈಕ್ಷಣಿಕ ಮನೋವಿಜ್ಞಾನ, ೧೯೯೭, ವಿದ್ಯಾನಿಧಿ ಪ್ರಕಾಶನ, ಗದಗ.
೨೭. ಗೋಪಾಲ್ ಆರ್. (ಸಂ.), ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ೨೦೦೭, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು.
೨೮. ಗೋಪಾಲಕೃಷ್ಣಯ್ಯ, ಭಾಷೆಯ ಬೆಳಕು, ೨೦೦೩, ನವ ಕರ್ನಾಟಕ ಪ್ರಕಾಶನ, ಬೆಂಗಳೂರು.
೨೯. ಚಿದಾನಂದಮೂರ್ತಿ ಎಂ, ಬಾಷಾವಿಜ್ಞಾನದ ಮೂಲತತ್ವಗಳು, ೧೯೯೨, ಬಾಪ್ಕೋ ಪ್ರಕಾಶನ, ಬೆಂಗಳೂರು.
೩೦. ಚಿದಾನಂದಮೂರ್ತಿ ಎಂ, ವಾಗರ್ಥ, ೧೯೮೧, ಬಾಪ್ಕೋ ಪ್ರಕಾಶನ, ಬೆಂಗಳೂರು.
೩೧. ಚಿನ್ನಪ್ಪ ಗೌಡ ಕೆ ಮತ್ತು ಜನಾರ್ಧನ ಭಟ್ ಬಿ. (ಸಂ.), ಕರಾವಳಿಯ ಪ್ರಬಂಧಗಳು, ೨೦೦೬, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.
೩೨. ಜಯಕುಮಾರ್ ಆನಗೋಳ್, ಕಡ್ಡಾಯದ ಪ್ರಾಥಮಿಕ ಶಿಕ್ಷಣ, ೨೦೦೩, ನವಕರ್ನಾಟಕ ಪಬ್ಲಕೇಶನ್ಸ್ ಪ್ರೈ. ಲಿ. ಬೆಂಗಳೂರು.
೩೩. ಜಯಣ್ಣ ಸಿ. ವಿ, ಆಧುನಿಕ ಶಿಕ್ಷಣದ ಒಲವುಗಳು, ೨೦೦೫, ಸ್ವಪ್ನ ಬುಕ್‌ಹೌಸ್, ಬೆಂಗಳೂರು.
೩೪. ಜಯಣ್ಣ ಸಿ. ವಿ, ಮನೋವಿಜ್ಞಾನದ ಬುನಾದಿಗಳು ಕಲಿಕೆ ಮತ್ತು ಬೋಧನೆಯಲ್ಲಿ ಮನೋವಿಜ್ಞಾನ ೨೦೦೫ ಸ್ವಪ್ನ ಬುಕ್‌ಹೌಸ್, ಬೆಂಗಳೂರು.
೩೫. ಜಯಣ್ಣ ಸಿ.ವಿ, ಮತ್ತು ರುದ್ರಾಣಿ ವಿ.ಸಿ ಕನ್ನಡ ವಿಷಯಾಧಾರಿತ ಬೋಧನಾ ಪದ್ಧತಿ, ೨೦೦೬, ಸ್ವಪ್ನ ಬುಕ್‌ಹೌಸ್, ಬೆಂಗಳೂರು.
೩೬. ಜಯಪ್ಪ ಕೆ. ಎಸ್. ಕಡಲತೀರದ ಜನರ ಸಂಕಷ್ಟಗಳು, ೨೦೦೯, ವಿಜಯಾ ಬ್ಯಾಂಕ್ ಪೀಠ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.
೩೭. ಜಿಲಾನಿ ಎಸ್. ಎ. (ಸಂ.), ದಕ್ಷಿಣ ಕನ್ನಡ ಜಿಲ್ಲಾ ಗ್ಯಾಜೆಟಿಯರ್, ೨೦೦೭, ಕರ್ನಾಟಕ ಗ್ಯಾಜೆಟಿಯರ್, ಕಾವೇರಿ ಭವನ ಬೆಂಗಳೂರು-೦೦೯.
೩೮. ಡಿ.ಎಸ್.ಇ.ಆರ್.ಟಿ. ಕರ್ನಾಟಕ ಸರ್ಕಾರ, ಬೆಂಗಳೂರು, ೨೦೦೭, ಚೈತನ್ಯ ಭಾಗ-೧ ಭಾಗ-೨
೩೯. ಡಿ.ಎಸ್.ಇ.ಆರ್.ಟಿ. ಆಧುನಿಕ ಶಿಕ್ಷಣದ ಒಲವುಗಳು, ೨೦೦೬, ವಿಜಯಲಕ್ಷ್ಮಿ ಪ್ರಕಾಶನ, ಮೈಸೂರು.

೪೦. ತಿರುಮಲೈ ಎಮ್. ಎಸ್. (ಸಂ.), ಕನ್ನಡ ನುಡಿ ಘಟ್ಟ-೩, ೧೯೯೨, ಭಾರತೀಯ ಭಾಷಾ ಸಂಸ್ಥಾನ, ಮೈಸೂರು- ೦೦೬.

೪೧. ದೇವಕಿ ಎಲ್., ಡೆವೆಲಪ್‌ಮೆಂಟ್ ಆಫ್ ಮಾರ್ಫೋಲಾಜಿಕಲ್ ರೂಲ್ಸ್ ಇನ್ ಚಿಲ್ಡ್ರನ್, ೧೯೯೧, ಭಾರತೀಯ ಭಾಷ ಸಂಸ್ಥಾನ, ಮೈಸೂರು-೦೦೬.

೪೨. ದುರ್ಗಾಪ್ರವೀಣ್ ಎಂ. ಎಸ್. ಮತ್ತು ಬೆನೆಟ್ ಜಿ. ಅಮ್ಮನ್ನ (ಸಂ.), ಬಾಸೆಲ್ ಮಿಶನರಿಗಳ ತುಳು ಟಿಪ್ಪಣಿಗಳು, ೨೦೧೫, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು.

೪೩. ನರಸಿಂಹಮೂರ್ತಿ ಎ. ವಿ, ಕನ್ನಡ ಲಿಪಿಯ ಉಗಮ ಮತ್ತು ವಿಕಾಸ, ೨೦೦೬, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು- ೦೦೬.

೪೪. ನರಸಿಂಹ ರಾವ್ ಕೆ.ವಿ.ವಿ.ಎಲ್, ಮದರ್‌ಟಂಗ್ ಎಜುಕೇಶನ್, ೨೦೦೦, ಭಾರತೀಯ ಭಾಷಾ ಸಂಸ್ಥಾನ, ಮೈಸೂರು.

೪೫. ನಾಯಕ ಜೆ.ಪಿ,ಕ ಶಿಕ್ಷಣದ ಆಯೋಗ, ಪೂರ್ವೋತ್ತರ(ಕನ್ನಡ ಅನುವಾದ) ಮಹಾಬಲೇಶ್ವರರಾವ್,೧೯೮೭, ಐ.ಬಿ.ಎಚ್, ಪ್ರಕಾಶನ ಬೆಂಗಳೂರು

೪೬. ನಾರಾಯಣ ಕೆ. ವಿ, ಕನ್ನಡ ಶೈಲಿ ಕೈಪಿಡಿ೧೯೯೫ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೭. ನಾರಾಯಣ ಕೆ. ವಿ, ನಮ್ಮೊಡನೆ ನಮ್ಮ ನುಡಿ, ೨೦೦೫ ವಿಶ್ವಾಸ ಪ್ರಿಂಟ್ಸ್, ಬೆಂಗಳೂರು.

೪೮. ನಾರಾಯಣ ಕೆ. ವಿ, ದ್ವಿಭಾಷಿಕತೆ ೧೯೯೮, ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೪೯. ನಾರಾಯಣ ಕೆ. ವಿ, ಭಾಷೆಯ ಸುತ್ತಮುತ್ತ ೨೦೦೧ ಕ್ರೈಸ್ಟ್ ಕಾಲೇಜು, ಬೆಂಗಳೂರು.

೫೦. ನಾರಾಯಣ ಕೆ. ವಿ. ಮತ್ತು ಇತರರು (ಸಂ.), ಕನ್ನಡ ನುಡಿಯ ಆಕರ ಕೋಶ, ೨೦೧೬, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು-೦೫೬.

೫೧. ನಾರಾಯಣ ಕೆ. ವಿ, ಮತ್ತೆ ಭಾಷೆಯ ಸುತ್ತಮುತ್ತ ೨೦೦೧ ಬೆಂಗಳೂರು. ವಿಶ್ವವಿದ್ಯಾಲಯ ಬೆಂಗಳೂರು.

೫೨. ನಾರಾಯಣ ಕೆ. ವಿ. ಮತ್ತು ಇತರರು (ಸಂ.), ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ ೧ ಭಾಷೆ, ೨೦೦೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೩. ನಾರಾಯಣ ಕೆ. ವಿ., ನುಡಿಗಳ ಅಳಿವು, ೨೦೧೮, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ- ೨೦೧೮

೫೪. ನಾರಾಯಣ ಕೆ. ವಿ., ತೊಂಡುಮೇವು ಕಂತೆ-ಏಳು, ೨೦೧೦, ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು-೧೦೪.

೫೫. ನಾರಾಯಣ ಕೆ. ವಿ., ತೊಂಡುಮೇವು ಕಂತೆ-ಐದು, ೨೦೧೦, ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು-೧೦೪.

೫೬. ನಾರಾಯಣ ಕೆ.ವಿ, ಕನ್ನಡ ಜಗತ್ತು ಅರ್ಧ ಶತಮಾನ, ೨೦೦೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೫೭. ನಾರಾಯಣ ಕೆ. ವಿ., ಚಾಮ್‌ಸ್ಕಿ ಜೊತೆಗೆ ಎರಡು ಹೆಜ್ಜೆ, ೨೦೧೭, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ-೨೦೩

೫೮. ನಾರಾಯಣ ಘಟ್ಟ ಎ.ಆರ್, ಶಿಕ್ಷಣ ಮಾಧ್ಯಮ ಸಮಗ್ರ ಚಿಂತನೆ, ೧೯೯೩, ಪ್ರಕಾಶಕರ ಗೀತಾ ಕುಟೀರ, ಬೆಂಗಳೂರು.

೫೯. ಪಂಡಿತ ಎಸ್. ಚಿಕ್ಕಣ್ಣ, ಸಿರಿಗನ್ನಡ ವ್ಯಾಕರಣ ಮತ್ತು ವಾಕ್ಯರಚನೆ, ೧೯೬೮, ಸೀತಾರಾಮಶೆಟ್ಟಿ ಕೆ. ಬುಕ್‌ಸೆಲ್ಲರ್, ಬೆಂಗಳೂರು- ೨.

೬೦. ಪದ್ಮನಾಭ ಕೇಕುಣ್ಣಾಯ, ಕರಾವಳಿಯ ಭಾಷಾನುಸಂಧಾನ, ೨೦೧೫, ಪ್ರಸರಾಂಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.

೬೧. ಪ್ರದೀಪ ಕುಮಾರ ಎಸ್. ಕಲ್ಕೂರ (ಸಂ.), ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರುಗಳ ಭಾಷಣದ ಸಮಗ್ರ ಸಂಪುಟ, ೨೦೧೫, ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಘಟಕ, ಕೊಡಿಯಾಲ್‌ಬೈಲು, ಮಂಗಳೂರು

೬೨. ಪ್ರದೀಪ ಕುಮಾರ ಎಸ್. ಕಲ್ಕೂರ (ಸಂ.), ಅಕ್ಷರ ಸಂಗಮ, ೨೦೧೩, ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಘಟಕ, ಕೊಡಿಯಾಲ್‌ಬೈಲು, ಮಂಗಳೂರು.

೬೩. ಪ್ರಶಾಂತ್ ಹೆಚ್.ಡಿ., ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ, ೨೦೦೫, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೪. ಪಾಂಡುರಂಗಬಾಬು ಡಿ,, ನುಡಿನೋಟ ೨೦೦೫ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೫. ಪುರುಷೋತ್ತಮ ಜಿ. ಕಲಿಕೆಯು ತೊಂದರೆಗಳು ೧೯೯೯,ನವಕರ್ನಾಟಕ ಪ್ರಕಾಶನ, ಬೆಂಗಳೂರು.

೬೬. ಪೇರೂರು ಚಾರು, ನಿಜಗನ್ನಡ, ೨೦೦೨, ದಿವ್ಯಚಂದ್ರ ಪ್ರಕಾಶನ.

೬೭. ಪ್ರಶಾಂತ ಎಚ್.ಡಿ, ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ, ೨೦೦೫, ಕನ್ನಡ ವಿಶ್ವವಿದ್ಯಾಲಯ, ಹಂಪಿ,

೬೮. ಬರಗೂರು ರಮಚಂದ್ರಪ್ಪ, ಶಿಕ್ಷಣ ಮತ್ತು ಮಾಧ್ಯಮ ನೀತಿ ನಿರೂಪಣಾ ಮಾದರಿ, ೨೦೦೧, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು.

೬೯. ಬಸವರಾಜ ಕೋಡಗುಂಟಿ, ಬಾಶಿಕ ಕರ್‍ನಾಟಕ, ೨೦೧೮, ಪ್ರಸಾರಾಂಗ, ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೦. ಭಾಗ್ಯಲಕ್ಷ್ಮೀ ಎಂ. ದ್ವಿಭಾಷಿಗರು, ೨೦೦೭, ಸಖಿ ಪ್ರಕಾಶನ ಹೊಸಪೇಟೆ.

೭೧. ಬಿಳಿಗಿರಿ ಎಚ್. ಎನ್, ವರ್ಣನಾತ್ಮಕ ವ್ಯಾಕರಣ, ೧೯೭೦, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೭೨. ಮಂಜುನಾಥ ಎಂ. ಜಿ ಮತ್ತು ದೇವರಾಜಸ್ವಾಮಿ ಜಿ. ಕೆ. (ಸಂ.), ಕನ್ನಡ ಲಿಪಿಶಾಸ್ತ್ರ, ೧೯೯೯, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು–೧೮.

೭೩. ಮಹಮ್ಮದ್ ಹನೀಫ್ ಬಿ. ಎ., ಬ್ಯಾರಿ– ಕನ್ನಡ– ಇಂಗ್ಲಿಶ್ ನಿಘಂಟ್, ೨೦೧೭, ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ, ಮಂಗಳೂರು.

೭೪. ಮಹಾದೇವಯ್ಯ ಪಿ. ಕನ್ನಡ ಓದಿ–ಬರೆ, ೨೦೦೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೫. ಮಹಾದೇವಯ್ಯ ಪಿ. ಕನ್ನಡ ಕಲಿಕೆಯ ಸಮಸ್ಯೆಗಳು, ೨೦೧೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೬. ಮಹಾದೇವಯ್ಯ ಪಿ, ಮುಸ್ಲಿಂ ಕನ್ನಡ ಒಂದು ಸಾಮಾಜಿಕ ಭಾಷಾ ವೈಜ್ಞಾನಿಕ ಅಧ್ಯಯನ ೧೯೯೯, ಮೈಸೂರು.

೭೭. ಮಹಾದೇವಯ್ಯ ಪಿ.ಕನ್ನಡ ಬಳಕೆ ಸಾಮಾಜಿಕ ವಿನ್ಯಾಸ ೨೦೦೬ ವಿಜಯಲಕ್ಷ್ಮೀ ಪ್ರಕಾಶನ, ಮೈಸೂರು.

೭೮. ಮಹಾಬಲೇಶ್ವರ ರಾವ್, ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಬೋಧನೆ ೧೯೯೩, ನವಕರ್ನಾಟಕ ಪ್ರಕಾಶನ ಮೈಸೂರು.

೭೯. ಮಹಾಭಲೇಶ್ವರ ರಾವ್, ಪ್ರೌಢಶಾಲೆಗಳಲ್ಲಿ ಕನ್ನಡ ಬೋಧನೆ, ೧೯೯೬, ನವಕರ್ನಾಟಕ ಪಬ್ಲಿಕೇಶನ್ಸ್ ಪ್ರೈ. ಲಿ. ಬೆಂಗಳೂರು.

೮೦. ಮಹಾಬಲೇಶ್ವರ ರಾವ್ ಪ್ರಾಥಮಿಕ ಶಿಕ್ಷಣ ಸಮಸ್ಯೆಗಳು ಸವಾಲುಗಳು ೧೯೯೯ ನವಕರ್ನಾಟಕ ಪ್ರಕಾಶನ ಮೈಸೂರು.
೮೧. ಮೇಟಿ ಮಲ್ಲಿಕಾರ್ಜುನ (ಸಂ.), ತೆಂಕಣದ ನುಡಿಗಳು ಮತ್ತು ಇಂಗ್ಲಿಶ್, ೨೦೧೫, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು–೦೫೬.
೮೨. ಮೋಹನಕೃಷ್ಣ ರೈ ಕೆ., ಕೆನರಾದ ವಿಭಜನೆ, ೨೦೧೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೮೩. ಮೋಹನಕೃಷ್ಣ ರೈ ಕೆ., ತುಳುನಾಡು ಕನ್ನಡನುಡಿ, ೨೦೧೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೮೪. ಯಾದವಾಡ ಎಸ್.ಬಿ, ಶಿಕ್ಷಣ, ೨೦೦೨, ವಿದ್ಯಾನಿಧಿ ಪ್ರಕಾಶನ, ಗದಗ.
೮೫. ಯಾದವಾಡ ಎಸ್.ಬಿ ಪ್ರಗತಿಶೀಲ ಭಾರತದಲ್ಲಿ ಶಿಕ್ಷಣ ವಿದ್ಯಾನಿಧಿ ಪ್ರಕಾಶನ, ಗದಗ.
೮೬. ರಾಜ್ಯಶೇಖರಯ್ಯ ಕೆ.ಎನ್, ಕಲಿಕಾ ಪ್ರಕ್ರಿಯೆಗಳು, ೨೦೦೭, ಚೇತನ ಬುಕ್ ಹೌಸ್ ಮೈಸೂರು.
೮೭. ರಘುನಾಥ್ ಎನ್. ಎಸ್., ಭಾಷಾ ಮೆದುಳಿಗೆ ಬಾಗಿಲು ತೆರೆದವನು: ನೋಮ್ ಛಾಮ್ಸ್ಕಿ, ೨೦೧೫, ಸಂಸ್ಕೃತಿ ಬುಕ್ ಪ್ಯಾರಡೈಸ್, ಕುವೆಂಪುನಗರ ಮೈಸೂರು–೨೩.
೮೮. ರಘುಪತಿ ಭಟ್ ಕೆಮ್ಮೂರು, ತುಳುನಾಡಿನ ಸ್ಥಳನಾಮಗಳು
೮೯. ರಾಜನ್ ಕೆ. ಮತ್ತು ನಾ. ದಾಮೋದರ ಶೆಟ್ಟಿ (ಸಂ.), ದಕ್ಷಿಣ ಕನ್ನಡ, ೧೯೯೮, ಜಿಲ್ಲಾಡಳಿತ, ಮಂಗಳೂರು ಜಿಲ್ಲೆ, ಮಂಗಳೂರು.
೯೦. ರಾಜೇಶ್ವರಿ ಮಹೇಶ್ವರಯ್ಯ, ಆಧುನಿಕ ವರ್ಣನಾತ್ಮಕ ಭಾಷಾವಿಜ್ಞಾನ, ೨೦೦೩, ಸಮಾಜ ಪುಸ್ತಕಾಲಯ, ಧಾರವಾಡ.
೯೧. ರಾಮಚಂದ್ರ ಸಿ.ಎಸ್., ಕನ್ನಡ ಭಾಷಾಲೋಚನ, ೨೦೦೪, ಮಾಂಗಿರಿ ಪ್ರಕಾಶನ ಮೈಸೂರು.
೯೨. ರಹಮತ್ ತರೀಕೆರೆ, ಬಹುಭಾಷಿಕತೆ, ೧೯೯೯, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
೯೩. ಲಲಿತಾ ಹಂಡೂ, ಡಿಕ್ಷನರಿ ಆಫ್ ಕಾಮನ್ ವರ್ಡ್ಸ್ ಇನ್ ಇಂಡಿಯನ್ ಲ್ಯಾಂಗ್ವೇಜಸ್, ಸಂ.೧–೨, ಭಾರತೀಯ ಭಾಷಾ ಸಂಸ್ಥಾನ, ಮೈಸೂರು.
೯೪. ಲಕ್ಷ್ಮೀದೇವಿ ಎಸ್ ಮತ್ತು ಗಣೇಶನ್ ಅಂಬೇಡ್ಕರ್ (ಸಂ.), ಶಾಬ್ದಿಕ ತರ್ಕ, ೨೦೧೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೯೫. ಲಿಂಗದೇವರು ಹಳೆಮನೆ, ಕನ್ನಡ ಕಲಿ, ೨೦೦೨,ಕನ್ನಡ ವಿಶ್ವವಿದ್ಯಾಲಯ, ಹಂಪಿ.
೯೬. ವಿಲಿಯಂ ಓ'ಗ್ರೆಡಿ, ಹೌ ಚಿಲ್ಡ್ರನ್ ಲರ್ನ್ ಲ್ಯಾಂಗ್ವೇಜ್, ೨೦೦೫, ಕ್ಯಾಂಬ್ರಿಡ್ಜ್ ಯೂನಿವರ್ಸಿಟಿ ಪ್ರೆಸ್, ಆಸ್ಟ್ರೇಲಿಯಾ.
೯೭. ವಿಲ್ಯಂಮಾಡ್ತ, ಅನ್ಯಭಾಷಾ ಬೋಧನೆ, ೧೯೭೯, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
೯೮. ವಿವಿಧ ಲೇಖಕರು (ಸಂ.), ಶಾಲಾ ಶಿಕ್ಷಣದಲ್ಲಿ ದೇಶಭಾಷೆಗಳು, ೨೦೧೪, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು–೦೫೬.
೯೯. ವೆಂಕಟಾಚಲಶಾಸ್ತ್ರೀ ಟಿ .ಇ ಮತ್ತು ಲಕ್ಷ್ಮಣರಾವ್ ಜಿ. ಆರ್. (ಸಂ.), ಕನ್ನಡ ಬರವಣಿಗೆ: ದೋಷಗಳು, ದೌರ್ಬಲ್ಯಗಳು, ೨೦೧೦, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು–೨.
೧೦೦. ಶಿವರಾಮ ಕಾರಂತ ಕೋಟ, ನಮ್ಮ ಶಿಕ್ಷಣ ಪದ್ಧತಿಯ ಸಮಸ್ಯೆಗಳೂ, ಭವಿಷ್ಯವೂ, ೨೦೧೫, ಜ್ಞಾನಗಂಗಾ ಪುಸ್ತಕ ಮಳಿಗೆ, ಪುತ್ತೂರು.
೧೦೧. ಶ್ರೀಧರ್ ಎಸ್.ಎನ್, ಇಂದಿನ ಕನ್ನಡ ರಚನೆ ಮತ್ತು ಬಳಕೆ, ೧೯೯೫, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೦೨. ಶಂಕರಭಟ್ಟ ಡಿ.ಎನ್, .ಕನ್ನಡ ಭಾಷೆಯ ಕಲ್ಪಿತ ಚರಿತ್ರೆ, ೧೯೯೫, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
೧೦೩. ಶಂಕರ ಬಟ್ ಡಿ. ಎನ್., ಕನ್ನಡ ವ್ಯಾಕರಣವನ್ನು ಕಲಿಸುವುದು ಹೇಗೆ?, ೨೦೧೬, ಸಪ್ನ ಬುಕ್ ಹೌಸ್, ಬೆಂಗಳೂರು.
೧೦೪. ಶಂಕರ ಬಟ್ ಡಿ. ಎನ್., ಕನ್ನಡದ ಸೊಲ್ಲರಿಮೆ, ೨೦೧೬, ನವಕರ್ನಾಟಕ ಪಬ್ಲಿಕೇಶನ್ಸ್ ಪ್ರೈ. ಲಿ. ಬೆಂಗಳೂರು.
೧೦೫. ಶಂಕರಭಟ್ಟ ಡಿ.ಎನ್., ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ ೨೦೦೧ ಭಾಷಾ ಪ್ರಕಾಶನ ಮೈಸೂರು.
೧೦೬. ಶಂಕರಭಟ್ಟ ಡಿ.ಎನ್, .ಕನ್ನಡ ಬರಹವನ್ನು ಸರಿಪಡಿಸೋಣ, ೨೦೦೫ ಭಾಷಾಪ್ರಕಾಶನ, ಮೈಸೂರು.
೧೦೭. ಶಂಕರ ಬಟ್ ಡಿ. ಎನ್., ಮಾತು ಮತ್ತು ಬರಹದ ನಡುವಿನ ಗೊಂದಲ, ೨೦೧೧, ಬಾಶಾ ಪ್ರಕಾಶನ, ಹೆಗ್ಗೋಡು.
೧೦೮. ಶಂಕರ ಬಟ್ ಡಿ. ಎನ್., ಕನ್ನಡ ನುಡಿಯ ಬಗೆಗೆ ಚಿಂತನೆ, ೨೦೦೬, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು– ೦೦೬.
೧೦೯. ಶಂಕರ ಬಟ್ ಡಿ. ಎನ್., ಕನ್ನಡ ವಾಕ್ಯಗಳ ಒಳರಚನೆ, ೨೦೧೧, ಬಾಶಾ ಪ್ರಕಾಶನ, ಹೆಗ್ಗೋಡು.
೧೧೦. ಶ್ರೀಕಂಠಯ್ಯ ತೀ.ನಂ, ಕನ್ನಡ ಮಧ್ಯಮ ವ್ಯಾಕರಣ, ೨೦೦೬, ಗೀತಾ ಬುಕ್ ಹೌಸ್,ಮೈಸೂರು.
೧೧೧. ಶ್ರೀನಾಥ ಶಾಸ್ತ್ರೀ ಚಿ. ವಿ. ಮತ್ತು ಇತರರು (ಸಂ.), ಶಿಕ್ಷಣದ ಭಾಷೆ ಮತ್ತು ಬುದ್ಧಿವಂತಿಕೆ, ನವಕರ್ನಾಟಕ ಪಬ್ಲಿಕೇಶನ್ಸ್ ಪ್ರೈ. ಲಿ. ಬೆಂಗಳೂರು.
೧೧೨. ಸಬಿಹಾ ಭೂಮಿಗೌಡ (ಸಂ.), ದಕ್ಷಿಣ ಕನ್ನಡ ಜಿಲ್ಲೆಯ ಮಕ್ಕಳ ಸಾಹಿತ್ಯ, ೨೦೦೯, ಡಾ. ಕೆ. ಶಿವರಾಮ ಕಾರಂತ ಪೀಠ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.
೧೧೩. ಸಿರಾಜ್ ಅಹಮದ್ ಎಸ್, ಭಾರತದ ಬಹುಭಾಷಿಕ ಪರಿಸರ ಮತ್ತು ಅನುವಾದ, ೨೦೧೬, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು–೦೫೬.
೧೧೪. ಸಂಗಮೇಶ ಸವದತ್ತಿಮಠ, ಕನ್ನಡ ಭಾಷಾಪ್ರಭೇದಗಳು, ೧೯೯೮, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೧೧೫. ಸಂಗಮೇಶ ಸವದತ್ತಿಮಠ, ಭಾಷಾಲೇಖ, ೧೯೯೯, ರೂಪರಶ್ಮಿ ಪ್ರಕಾಶನ, ಗುಲಬರ್ಗಾ.
೧೧೬. ಸಂಗಮೇಶ ಸವದತ್ತಿಮಠ, ಕನ್ನಡ ಭಾಷಾ ಸ್ವರೂಪ, ೨೦೦೨, ರೂಪರಶ್ಮಿ ಪ್ರಕಾಶನ, ಗುಲಬರ್ಗಾ.
೧೧೭. ಸಾಂಬಮೂರ್ತಿ, ಕನ್ನಡದಲ್ಲಿ ಪ್ರತ್ಯಯಗಳು ೨೦೦೬ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
೧೧೮. ಸಾಂಬಮೂರ್ತಿ, ಬಾಷೆ ಮತ್ತು ಅಶಾಬ್ದಿಕ ಸಂವಹನ ೨೦೦೪ ಸಿ.ವಿ.ಜಿ. ಪಬ್ಲಿಕೇಷನ್, ಮೈಸೂರು.
೧೧೯. ಸುರೇಶ ಕೆ.ಎಂ, ಕಲಿಕೆ ಮತ್ತು ಬೋಧನೆಯ ಮನೋವಿಜ್ಞಾನ ಸುಮುಖ ಪ್ರಕಾಶನ ಬೆಂಗಳೂರು.
೧೨೦. ಸುದರ್ಶನ ಸ. ರ., ಶಿಕ್ಷಣ ಮಾಧ್ಯಮ ಕನ್ನಡಪರ ಆಂದೋಲನ ಮತ್ತು ವರದಿಗಳು, ೨೦೦೬, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು–೦೮.
೧೨೧. ಸುಧಾ ಹೆಗಡೆ ಆಡುಕಳ (ಅನು), ಮಗುವಿನ ಭಾಷೆ ಮತ್ತು ಶಿಕ್ಷಕ, ೨೦೧೪, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ಬೆಂಗಳೂರು.
೧೨೨. ಸುಬ್ಬಯ್ಯ ಪೋನ್ (ಸಂ.), ಟೆಸ್ಟ್ ಆಫ್ ಲ್ಯಾಂಗ್ವೇಜ್ ಪ್ರೊಫಿಶಿಯನ್ಸಿ ಕನ್ನಡ, ೨೦೦೩, ಭಾರತೀಯ ಭಾಷ ಸಂಸ್ಥಾನ, ಮೈಸೂರು–೦೦೬.
೧೨೩. ಸೋಮಕ್ಕ ಎಂ. ಲಂಬಾಣಿ ಮಕ್ಕಳ ಕನ್ನಡ ಕಲಿಕೆಯ ಸಮಸ್ಯೆಗಳು, ೨೦೧೦, ಅನ್ನದಾನಿ ಭೈರವ ಪ್ರಕಾಶನ, ಬೆಂಗಳೂರು–೧೦.
೧೨೪. ಸೋಮಶೇಖರಗೌಡ, ಇಂದಿನ ಕನ್ನಡ ಭಾಷಾ ಬಳಕೆ ೧೯೮೧, ವೆಂಕಣ್ಣಯ್ಯ ಪ್ರತಿಷ್ಠಾನ ಮೈಸೂರು.

೧೨೫. ಸೋಮಶೇಖರಗೌಡ, ಭಾಷೆ ರಚನೆ ಬಳಕೆ, ೨೦೧೦, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು–೧೮.

ಪರಾಮರ್ಶಿಸಿರುವ ಪತ್ರಿಕೆಗಳು ಲೇಖನಗಳು

೧. ನಾರಾಯಣ ಕೆ. ವಿ. (ಸಂ), ನುಡಿನಾಡಿ ತ್ರೈಮಾಸಿಕ, ಮಾರ್ಚ್–೨೦೧೧, ನಮ್ಮ ಕನ್ನಡ ಕನ್ನಡ ಭಾಷಾಧ್ಯಯನ ವೇದಿಕೆ, ಬೆಂಗಳೂರು.

೨. ರಘುನಾಥ ಎನ್. ಎಸ್. (ಲೇ) ಮಲ್ಲಿಗೆ ತ್ರೈಮಾಸಿಕ ಪತ್ರಿಕೆ

೩. ಕರೂರ ಎನ್.ಜಿ. ೨೦೦೧, ಶಿಕ್ಷಣ ಮಾರ್ಗ, ಲೇ, ಪ್ರಾಥಮಿಕ ಶಿಕ್ಷಣ ಸಮಸ್ಯೆಗಳು ಪರಿಹಾರಗಳು, ಸ್ವಪ್ನ ಬುಕ್ ಹೌಸ್, ಬೆಂಗಳೂರು.

೪. ಕೇಶವ. ಜಿ. ಝಿಂಗಾಡೆ, ೨೦೦೬, ಪ್ರಾಥಮಿಕ ಶಿಕ್ಷಣ ನಿರಾಶಾದಾಯಕ ಚಿತ್ರಣ, ಪ್ರಜಾವಾಣಿ, ಜನವರಿ ೨೦.

೫. ಗಣೇಶ ಜಿ.ಎಂ, ೨೦೦೮, ಕಲಿಕೆಯ ಮಾಧ್ಯಮ ಯಾವುದಿರಬೇಕು, ಪ್ರಜಾವಾಣಿ, ಜುಲೈ ೧೫.

೬. ನಾರಾಯಣ ಕೆ.ವಿ.೨೦೦೧, ಕನ್ನಡ ಮುಂದೇನು? ಸುಧಾ ವಾರಪತ್ರಿಕೆ, ನವೆಂಬರ್ ಸಂಚಿಕೆ.

೭. ಪ್ರಶಾಂತ ಎಚ್.ಡಿ.೨೦೦೬, ಶಾಲಾ ಶಿಕ್ಷಣ ಪರಿಣಾಮಕಾರಿ ಬೋಧನಾ ಸಮಯ, ಪ್ರಜಾವಾಣಿ.

೮. ಬೇಂದ್ರೆ ಮಂಜುನಾಥ,೨೦೦೮, ಕಾರ್ಡ್ ಬಳಸಿ ಓದಿಸುವ ಆಟ, ಪ್ರಜಾವಾಣಿ ಆಗಸ್ಟ್ ೨೬.

೯. ಮಂಜುಳಾಕ್ಷಿ ಎಲ್., Learning Kannada By Students whose Mothertoung is Kannada- Some Problems, Language, https://language inindia.com, Vol-4, August 8, 2004

೧೦. ಮಹಾಬಲೇಶ್ವರರಾವ್, ೨೦೦೬, ಭಾಷೆ ಮತ್ತು ಮಾಧ್ಯಮ ಹೊಸತು ಸಂಚಿಕೆ, ಏಪ್ರಿಲ್.

೧೧. ಮಹಾಬಲೇಶ್ವರರಾವ್, ೨೦೦೬, ಕಲಿಕೆಯ ಅನನ್ಯ ಶೈಲಿಗಳು ಪ್ರಜಾವಾಣಿ, ಜೂನ್ ೬.

೧೨. ಮಹಾಬಲೇಶ್ವರರಾವ್,೨೦೦೮, ಪರಿಣಾಮಕಾರಿ ಬೋಧನೆಗೊಂದು ಮೆಟ್ಟಿಲು ಸೂಕ್ಷ್ಮ ಬೋಧನೆ, ಪ್ರಜಾವಾಣಿ, ಆಗಸ್ಟ್೧೯.

೧೩. ರವೀಂದ್ರ ಎಂ, ೨೦೦೭, ಶಿಕ್ಷಣ ಮಾಧ್ಯಮವಾಗಿ ಕನ್ನಡ ಪ್ರಜಾವಾಣಿ ಫೆಬ್ರುವರಿ ೧೨.

೧೪. ವಿಷ್ಣು ಎಂ.ಶಿಂಧೆ,೨೦೦೯,ಪರಿಣಾಮಕಾರಿ ಬೋಧನೆಗೆ ಧ್ವನಿಯು ಮಹತ್ವ ವಿಜಯ ಕರ್ನಾಟಕ ಜನವರಿ ೫,

೧೫. ಶಂಕರ ಭಟ್ಟ ಡಿ.ಎನ್,೧೯೭೨ ಧ್ವನಿ ಪರಿವರ್ತನೆ ಮತ್ತು ವರ್ಣ ಪರಿವರ್ತನೆ, ಪ್ರಬುದ್ಧ ಕರ್ನಾಟಕ,ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೬. ಶಾರದಾ ಮಾತನವಿಕರ್ ಶಿರಹಟ್ಟಿ ೨೦೦೭ಕಲಿಕಾ ಸಾಮರ್ಥ್ಯ ಹೆಚ್ಚಳ ಹೇಗೆ ಸುಧಾ, ಜೂನ್ ೧೪.

೧೭. ಶ್ರೀನಾಥ ಶಾಸ್ತ್ರೀ ಚಿ. ವಿ. ಮತ್ತು ಇತರರು, ಶಿಕ್ಷಣದ ಭಾಷೆ ಮತ್ತು ಬುದ್ಧಿವಂತಿಕೆ, ೨೦೦೭, ನವಕರ್ನಾಟಕ ಪಬ್ಲಿಕೇಶನ್ಸ್ ಪ್ರೈ. ಲಿ. ಬೆಂಗಳೂರು.

೧೮. ಸುಬ್ಬರಾವ್ ಕೆ.ಎನ್,೨೦೦೭,ಕಲಿಸುವ ಕಲಿಯುವ ಕಲೆ, ಕರ್ಮವೀರ, ಜೂನ್ ೧೭.

೧೯. ಸುಲೋಚನಾ ವೆಂಕಟೇಶ, ೨೦೦೯ ಬರವಣಿಗೆಯ ದೋಷ ಮತ್ತು ಪ್ರಿಹಾರ ಕ್ರಮ ಪ್ರಜಾವಾಣಿ, ಫೆಬ್ರುವರಿ ೧೦.

೨೦. ಸಂಗಮೇಶ ಸವದತ್ತಿಮಠ,೧೯೭೬ ಕನ್ನಡ ಪ್ರಬೇಧಗಳು ನಿರ್ಮಾಣಕ್ಕೆ ಕಾರಣಗಳು ಕರ್ನಾಟಕ ಭಾರತಿ, ಸರ್ಂ,ಸಂ.೧,೨ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ .

೨೧. ಹಂದೆ ಕೆ.ಆರ್,೨೦೦೬,ಶಿಕ್ಷಣ ಸಂಚಯ ಜೀವನ ದರ್ಶನ (ಲೇ),ಶಿಕ್ಷಣ ಸಮಸ್ಯೆಗಳು ಹಾಗೂ ಸವಾಲುಗಳು ವಿದ್ಯಾಶ್ರೀ ಪಬ್ಲಿಕೇಷನ್ಸ್, ಅಂಬಲವಾಡಿ, ಉಡುಪಿ.

ಇ. ಪಿಎಚ್.ಡಿ ಮತ್ತು ಎಂ.ಫಿಲ್. ಮಹಾಪ್ರಬಂಧಗಳು

೧. ಇಂದುಮತಿ ಮಹಾದೇವಪ್ಪ, ಪ್ರೌಢಶಾಲಾ ಶಿಕ್ಷಣದಲ್ಲಿ ಕನ್ನಡ ಭಾಷಾ ಬೋಧನೆ ಹಾಗೂ ಭಾಷಾ ಕಲಿಕೆಯ ಸಮಸ್ಯೆ ಮತ್ತು ಸವಾಲುಗಳು, ಕನ್ನಡ ಭಾಷಾಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. ಓಂಪ್ರಕಾಶ ನಾಯಕ ಬಿ., ಆದೋನಿ ಕನ್ನಡ ೨೦೦೭, ಕನ್ನಡ ಭಾಷಾಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ನಾಗರಾಜ ಚಿಂತ್ರಪ್ಪಳ್ಳಿ, ಕನ್ನಡ ಕಲಿಕೆಯ ಸಮಸ್ಯೆಗಳು: ಒಂದು ಅಧ್ಯಯನ, ೨೦೧೦, ಕನ್ನಡ ಭಾಷಾಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಭಾಗ್ಯಲಕ್ಷ್ಮೀ ಎಂ, ಬಳ್ಳಾರಿ ಪರಿಸರದ ಕನ್ನಡ–ತೆಲುಗು ದ್ವಿಭಾಷಿಕತೆ ಸಮಾಜೋಭಾಷಿಕ ಅಧ್ಯಯನ, ೨೦೦೨, ಕನ್ನಡ ಭಾಷಾಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೫. ಭಿಮಣ್ಣ ಮೇಟಿ ಕನ್ನಡ ಭಾಷೆಯ ಕಲಿಕೆಯ ಸಮಸ್ಯೆಗಳು (ಉರ್ದು ಭಾಷಿಕ ಮಕ್ಕಳನ್ನು ಅನಲಕ್ಷಿಸಿ), ೨೦೦೮, ಕನ್ನಡ ಭಾಷಾಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬. ಸೋಮಕ್ಕ ಎಂ. ಲಂಬಾಣಿ ಮಕ್ಕಳ ಕನ್ನಡ ಕಲಿಕೆಯ ಸಮಸ್ಯೆಗಳು, (ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿನ ಪ್ರಾಥಮಿಕ ಶಾಲಾ ಮಕ್ಕಳನ್ನು ಅನುಲಕ್ಷಿಸಿ) ೨೦೧೦, ಕನ್ನಡ ಭಾಷಾಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭. ಮಧುಸೂದನ ಜೋಶಿ, Determinates of achievement in minimum levels of learning at primary Stage, ೨೦೦೩, ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಕಲಬುರ್ಗಿ.

೮. ನಂದಾ. ಆರ್. ಇಟ್ಟರ್ Lexical study of primary text 5th standard text, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೯. ಓಂ ಪ್ರಕಾಶ ನಾಯಕ ಬಿ, ಬಳ್ಳಾರಿ ವ್ಯವಹಾರಿಕ ಕನ್ನಡದ ಉಚ್ಚಾರಣೆ ಮತ್ತು ಧ್ವನಿ ನಿಯಮಗಳು, ಕನ್ನಡ ವಿಶ್ವವಿದ್ಯಾಲಯ ಹಂಪಿ (ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ)

೧೦. ಮಂಜುನಾಥ ಎಸ್, ಬಳ್ಳಾರಿ ನಗರದ ದ್ವಿಭಾಷಿಕತೆಯ ವೈವಿಧ್ಯತೆ, ೨೦೦೭, ಕನ್ನಡ ವಿಶ್ವವಿದ್ಯಾಲಯ ಹಂಪಿ. (ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ)

***** ***** *****

ಅನುಬಂಧ – ೨

ಪ್ರಶ್ನಾವಳಿ

ವಿದ್ಯಾರ್ಥಿಗಳಿಂದ ಮಾಹಿತಿ ಪಡೆಯುವ ಸಲುವಾಗಿ ತಯಾರಿಸಿದ ಪ್ರಶ್ನಾವಳಿ

೧. ಹೆಸರು

೨. ಊರು :

೩. ತಾಲ್ಲೂಕು :

೪. ಶಾಲೆಯ ಹೆಸರು :

೫. ಶಾಲೆಯ ಮಾದರಿ : ಖಾಸಗಿ/ಸರ್ಕಾರಿ

೬. ಮುಖ್ಯೋಪಧ್ಯಾಯರ ಹೆಸರು :

೭. ಕನ್ನಡ ಭಾಷಾ ಶಿಕ್ಷಕರ ಹೆಸರು:

೮. ತರಗತಿ : ವಿಭಾಗ :

೯. ವಯಸ್ಸು :

೧೦. ಲಿಂಗ : ಹೆಣ್ಣು/ಗಂಡು

೧೧. ಜಾತಿ :

೧೨. ಮನೆಯಲ್ಲಿ ಮಾತನಾಡುವ ಭಾಷೆ

೧೩. ಸ್ನೇಹಿತರೊಂದಿಗೆ ಮಾತನಾಡುವ ಭಾಷೆ

೧೪. ಶಾಲೆಯಲ್ಲಿ ಕಲಿಯುವ ಭಾಷೆ :

೧೫. ಮಗುವಿನ ವಿಳಾಸ :

೧೬. ತಂದೆಯ ಹೆಸರು, ವಿದ್ಯಾರ್ಹತೆ,ವೃತ್ತಿ :
ಹಾಗೂ ವಾರ್ಷಿಕ ಆದಾಯ

೧೭. ತಾಯಿಯ ಹೆಸರು ವಿದ್ಯಾರ್ಹತೆ,ವೃತ್ತಿ :
ಹಾಗೂ ವಾರ್ಷಿಕ ಆದಾಯ

೧೮. ನಿಮ್ಮ ಸಮುದಾಯದಲ್ಲಿನ ಇತರೆ :
ಭಾಷೆಗಳಾವುವು?

೧೯. ಸಮುದಾಯದಲ್ಲಿ ಹೆಚ್ಚು ಬಳಸುವ ಭಾಷೆ :
ಯಾವುದು?

೨೦. ಕುಟುಂಬದ ಆರ್ಥಿಕ ಸ್ಥಿತಿ : ಅತ್ಯುತ್ತಮ, ಉತ್ತಮ, ಸಾಧಾರಣ

೨೧. ಕುಟುಂಬದ ಸಾಮಾಜಿಕ ಸ್ಥಿತಿ : ಅತ್ಯುತ್ತಮ, ಉತ್ತಮ, ಸಾಧಾರಣ

೨೨. ಕುಂಟುಬದ ಶೈಕ್ಷಣಿಕ ಸ್ಥಿತಿ : ಅತ್ಯುತ್ತಮ, ಉತ್ತಮ, ಸಾಧಾರಣ

೨೩. ತಂದೆಯ ಮಾತೃಭಾಷೆ :

೨೪. ತಾಯಿಯ ಮಾತೃಭಾಷೆ :

೨೫. .ಕುಟುಂಬದಲ್ಲಿನ ಇತರೆ ಸಂಬಧಿಕರು :
ಬಳಸುವ ಭಾಷೆಗಳು

೨೬. ಕುಟುಂಬವು ಆಧುನಿಕನ ಸೌಲಭ್ಯಗಳನ್ನು :

ಹೊದಿದೆಯೇ?

೨೭. ತರಗತಿಯಲ್ಲಿ ನಿಮ್ಮ ಸ್ನೇಹಿತರೊಂದಿಗೆ ಯಾವ ಭಾಷೆಯಲ್ಲಿ ಹೆಚ್ಚು ವ್ಯವಹರಿಸುತ್ತೀರಿ?

೨೮. ಪೂರ್ವ ಶಿಕ್ಷಣದ ಬಗೆಗೆ ಮಾಹಿತಿ ಕೊಡಿ.

ತರಗತಿ	ವಿಭಾಗ	ಮಾಧ್ಯಮ
ಪೂರ್ವಪ್ರಾಥಮಿಕ		
೧.		
೨.		
೩.		
೪.		

೨೯. ನೀವು ಎಂತಹ ಪ್ರದೇಶದಿಂದ ಶಾಲೆಗೆ ಬರುತ್ತೀರಿ?

ಅ) ನಗರ ಆ) ಅರೆನಗರ ಇ)ಗ್ರಾಮೀಣ ಉ)ಇತರೆ

೩೦. ನಿಮಗೆ ಸಕಾಲಕ್ಕೆ ಪಠ್ಯಪುಸ್ತಕ ದೊರೆಯುತ್ತದೆಯೇ?

ಹೌದು/ಇಲ್ಲ

೩೧. ನಿಮಗೆ ಪಾಠಗಳು ಸಕಾಲದಲ್ಲಿ ನಡೆಯುತ್ತದೆಯೇ?

ಹೌದು/ಇಲ್ಲ

೩೨. ಬೋಧನಾ ವಿಧಾನದ ರೀತಿ

ಅ) ಸಾಮಾನ್ಯ ಆ) ವಿಶಿಷ್ಟ ಇ) ಚಟುವಟಿಕೆ

೩೩. ಭಾಷಾ ಬೋಧನೆ ಇವರಿಂದ ನಡೆಯುತ್ತದೆ?

ಅ) ಭಾಷಾ ಬೋಧಕರಿಂದ ಹೌದು/ಇಲ್ಲ

ಆ) ಇತರೆ ಶಿಕ್ಷಕರಿಂದ ಹೌದು/ಇಲ್ಲ

ಇ) ಕನ್ನಡ ಭಾಷಾ ಶಿಕ್ಷಕರು ಕನ್ನಡ ಮಾತೃಭಾಷೆಯುಳ್ಳವರೆ: ಹೌದು/ಇಲ್ಲ

ಈ) ಕನ್ನಡ ಭಾಷಾ ಶಿಕ್ಷಕರು ಕನ್ನಡೇತರ ಭಾಷೆಯವರೆ: ಹೌದು/ಇಲ್ಲ

೩೪. ಬೋಧನೆಯಲ್ಲಿ ಬೋಧಿಸುವ ವಿಷಯಕ್ಕೆ ಸಂಬಂಧಿಸಿದಂತೆ ಉಪಕರಣಗಳನ್ನು ಬಳಸುತ್ತಾರೆಯೇ? ಯಾವುವು?

೩೫. ಬೋಧಿಸುವ ವಿಷಯಕ್ಕೆ ಸಂಬಂಧಿಸಿದಂತೆ ಮನೆಗೆಲಸ ನೀಡುತ್ತಾರೆಯೇ?

ಹೌದು/ಇಲ್ಲ

೩೬. .ಮನೆಗೆಲಸವನ್ನು ಶಿಕ್ಷಕರು ಪರಿಶೀಲಿಸುತ್ತಾರೆಯೇ?

ಹೌದು/ಇಲ್ಲ

೩೭. ಸಮೂಹ ಮಾಧ್ಯಮಗಳಲ್ಲಿ ಯಾವ ಭಾಷೆಗೂ ಕಾರ್ಯಕ್ರಮಗಳನ್ನು ಹೆಚ್ಚು ವೀಕ್ಷಿಸುತ್ತೀರಿ?

ಅ)ಕನ್ನಡ ಈ)ಹಿಂದಿ

ಆ)ತುಳು ಉ)ಇಂಗ್ಲೀಷ್

ಇ)ಅರೆಬಿಕ್ ಊ)ಉರ್ದು

೩೮. ಮನೆ ಪಾಠಕ್ಕೆ ಹೋಗುತ್ತಿರಾ?

ಹೌದು/ಇಲ್ಲ

೩೯. ಶಾಲೆಯಲ್ಲಿ ನೀಡುವ ಹೋಂವರ್ಕ್/ ಮನೆಗೆಲಸವನ್ನು ಹೇಗೆ ಮಾಡುವಿರಿ?

ಅ)ಸ್ವತಃ ಮಾಡುವಿರಾ?

ಆ)ಮನೆಯ ಸದಸ್ಯರ ಸಹಾಯ ಪಡುವಿರಾ?

ಇ)ಮನೆಯ ಸದಸ್ಯರ ಮೇಲ್ವಿಚಾರಣೆಯಿಂದ ಮಾಡುವಿರಾ?

ಶಿಕ್ಷಕರಿಂದ ಮಾಹಿತಿ ಪಡೆಯುವ ಸಲುವಾಗಿ ತಯಾರಿಸಿದ ಪ್ರಶ್ನಾವಳಿ

೧. ಭಾಷಾ ಶಿಕ್ಷಕರ ಹೆಸರು :

೨. ಬೋಧನಾ ಅನುಭವ ಎಷ್ಟು ವರ್ಷ :

೩. ತರಗತಿಯಲ್ಲಿ ಎಷ್ಟು ಮಕ್ಕಳಿದ್ದಾರೆ :

ಅ)ಕನ್ನಡ ಮೆನಮಾತುಳ್ಳವರು :

ಆ)ಕನ್ನಡೇತರ ಮನೆಮಾತುಳ್ಳವರು :

ಇ) ಬ್ಯಾರಿ ಮನೆಮಾತುಳ್ಳವರು :

೪. ಮಕ್ಕಳು ಯಾವ ಕಲಿಕೆಯಲ್ಲಿ ಹೆಚ್ಚು ಸಮಸ್ಯೆಗಳನ್ನು ಎದುರಿಸುತ್ತಾರೆ?

ಅ)ಆಲಿಸುವುದು

ಆ)ಮಾತನಾಡುವುದು

ಇ)ಓದುವುದು

ಈ)ಒರೆಯುವುದು

ಉ)ಅರ್ಥಮಾಡಿಕೊಳ್ಳವಲ್ಲಿ

೫. ಓದುಗಾರಿಕೆಯಲ್ಲಿ ಕಂಡುಬರುವ ಪ್ರಮುಖ ದೋಷಗಳಾವುವು? ಕಾರಣ?

೬. ಬರವಣಿಗೆಯಲ್ಲಿ ಕಂಡುಬರುವ ಪ್ರಮುಖ ದೋಷಗಳಾವುವು? ಕಾರಣ?

೭. ಅರ್ಥ ಮಾಡಿಕೊಳ್ಳುವಲ್ಲಿನ ದೋಷಗಳಿಗೆ ಕಾರಣಗಳೇನು?

೮. ಮಕ್ಕಳು ಕಲಿಕೆಯಲ್ಲಿ ಕಂಡುಬರುವ ಕೆಲವು ಸಾಮಾನ್ಯ ದೋಷಗಳಾವುವು?

೯. ಕನ್ನಡೇತರ ಮಕ್ಕಳಲ್ಲಿ ಕಂಡು ಬರುವ ಸಾಮಾನ್ಯ ದೋಷಗಳಾವುವು?

೧೦. ಮಕ್ಕಳ ಕಲಿಕೆಯಲ್ಲಿ ಕಂಡುಬರುವ ಬಾಹ್ಯ ದೋಷಗಳಾವುವು?ಕಾರಣ?

೧೧. ಮಕ್ಕಳ ಕಲಿಕೆಯಲ್ಲಿ ಕಂಡು ಬರುವ ಆಂತರಿಕ ದೋಷಗಳಾವುವು?ಕಾರಣ?

೧೨. ಪರಿಣಾಮಕಾರಿ ಭಾಷಾ ಕಲಿಕೆಗೆ ಕೇಂದ್ರ ಸರ್ಕಾರದ ಯೋಜನೆಗಳಾವುವು?

೧೩. ಪರಿಣಾಮಕಾರಿ ಭಾಷಾ ಕಲಿಕೆಗೆ ರಾಜ್ಯಸರ್ಕಾರದ ಯೋಜನೆಗಳಾವುವು?

೧೪. ಮಕ್ಕಳ ಕಲಿಕೆ ಸಾಮಾಜಿಕ ಆರ್ಥಿಕ ಭಾಷಿಕ ಶೈಕ್ಷಣಿಕ ಕೌಟುಂಬಿಕ ಅಂಶಗಳು ಪ್ರಭಾವ ಬೀರುತ್ತವೆಯೇ?

ಹೌದು: ಇಲ್ಲ: ಹೇಗೆ:

೧೫. ಸರ್ವಶಿಕ್ಷಣ ಅಭಿಯಾನದಲ್ಲಿ ಭಾಷಾ ಕಲಿಕೆಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳಾವುವು?

೧೬. ಬೋಧನಾ ವಿಧಾನಕ್ಕೆ ಸಂಬಂಧಿಸಿದ ಮಾಹಿತಿ.

ಅ) ಕನ್ನಡ ಭಾಷಾ ಕಲಿಕೆಯ ಬೋಧನೆಗೆ ಸಮಯ ಸಾಕಾಗುತ್ತದೆಯೇ?

ಹೌದು: ಇಲ್ಲ: ಹೇಗೆ:

ಆ) ಕನ್ನಡ ಭಾಷಾ ಕಲಿಕೆಯ ಬೋಧನೆಗೆ ಯಾವ ಸಮಯ ಸೂಕ್ತವಾಗಿದೆ?

ಬೆಳಿಗ್ಗೆ: ಮಧ್ಯಾಹ್ನ: ಯಾಕೆ:

ಇ) ಕಲಿಕೆಯಲ್ಲಿ ಹಿಂದುಳಿದು ಮಕ್ಕಳಿಗಾಗಿ ಯಾವುದಾದರೂ ವಿಶೇಷ ಬೋಧನಾ ವಿಧಾನವನ್ನು ಅನುಸುತ್ತೀರಾ?

ಈ) ಕಲಿಕೆಯ ಕನಿಷ್ಠ ಅಂಶಗಳನ್ನು ಮಕ್ಕಳಿಗೆ ಯಾವ ವಿಧಾನದ ಮೂಲಕ ಕಲಿಸುತ್ತಿರಿ?

ಉ) ಭಾಷಾ ಬೋಧನೆಯ ನವೀನ ವಿಧಾನಗಳು ಯಾವುವು?

ಊ) ಬೋಧನೆ ಮಾಡುವಾಗ ಪ್ರತಿಯೊಬ್ಬ ವಿದ್ಯಾರ್ಥಿಯೊಡನೆ ಪರಸ್ಪರಾನುವರ್ತನೆ ಮಾಡುತ್ತೀರಾ?

ಹೌದು: ಇಲ್ಲ: ಹೇಗೆ:

ಋ) ಭಾಷಾ ಬೋಧನೆಯಲ್ಲಿ ಕಂಡುಬರುವ ದೋಷಗಳಾವುವು?

ಋ) ಮಕ್ಕಳ ಕಲಿಕೆಯ ಕನಿಷ್ಠ ಅಂಶಗಳಲ್ಲಿನ ದೋಷಗಳಿಗೆ ಪ್ರಮುಖ ಕಾರಣಗಳೇನು?

ಎ) ಕಲಿಕಾಂಶವನ್ನು ಪುನಾವರ್ತಿಸುವಿರಾ?

ಅ) ಬೋಧಿಸುವುದರ ಮೂಲಕ

ಆ) ಕಲಿಸುವುದರ ಮೂಲಕ

೧೭. ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಮಾಹಿತಿ.

ಅ) ಪಠ್ಯಕ್ರಮವು ಸಕಾಲಕ್ಕೆ ದೊರೆಯುತ್ತದೆಯೇ?

ಹೌದು: ಇಲ್ಲ:

ಆ) ಪಠ್ಯಕ್ರಮವು ಆಯಾ ತರಗತಿಯ ಮಕ್ಕಳ ಸಾಮರ್ಥ್ಯಕ್ಕೆ ಅನುಗುಣವಾಗಿದೆಯೇ?

ಹೌದು: ಇಲ್ಲ: ಹೇಗೆ:

ಇ) ಪಠ್ಯಪುಸ್ತಕದ ಬಗ್ಗೆ ಅಭಿಪ್ರಾಯವೇನು?

ಈ) ಪಠ್ಯಕ್ರಮದಲ್ಲಿನ ದೋಷಗಳಾವುವು?

೧)ಬಾಹ್ಯ ದೋಷಗಳು ಯಾವುವು?

೨)ಆಂತರಿಕ ದೋಷಗಳು ಯಾವುವು?

ಉ) ಪಠ್ಯಪುಸ್ತಕದಲ್ಲಿನ ಚಿತ್ರಗಳು ಕಲಿಕೆಗೆ ಸಹಾಯಕವಾಗಿವೆಯೇ?

ಹೌದು: ಇಲ್ಲ: ಹೇಗೆ:

ಊ) ಪಠ್ಯಪುಸ್ತಕದಲ್ಲಿನ ಭಾಷಾಭ್ಯಾಸಕ್ಕೆ ಚಟುವಟಿಕೆ ಕಲಿಕೆಗೆ ಹೇಗೆ ಪೂರಕವಾಗಿದೆ

ಋ) ಪಠ್ಯಕ್ರಮ ಕ್ರಮಾನುಗತ ಮಾದರಿಯಲ್ಲಿ ರಚಿಸಲ್ಪಟ್ಟಿದೆಯೇ?

ಎ) ಪಠ್ಯಪುಸ್ತಕ ಪಠ್ಯಪುಸ್ತಕ ಪಠ್ಯಕ್ರಮ ರಚನಾ ತತ್ವಗಳಿಗೆ ಅನುಗುಣವಾಗಿದೆಯೇ?

ಹೌದು: ಇಲ್ಲ:

ಏ) ಭಾಷಾಭ್ಯಾಸ ಚಟುವಟಿಕೆಯನ್ನು ನೀವು ಮಾಡುವಿರಾ?

೧)ಮಕ್ಕಳು ಮಾಡುವುದರಿಂದಾಗುವ ಅನುಕೂಲಗಳಾವುವು?

೨)ನೀವು ಮಾಡುವುದರಿಂದಾಗುವ ಲಾಭಗಳೇನು?

ಐ) ಪಠ್ಯಪುಸ್ತಕವನ್ನು ಯಾವುದಕ್ಕೆ ಹೆಚ್ಚು ಬಳಸುತ್ತೀರಿ?

೧)ಓದಿಸುವುದಕ್ಕೆ

೨)ಬರೆಸುವುದಕ್ಕೆ

೩)ಭಾಷಾಭ್ಯಾಸ ಚಟುವಟಿಕೆಗೆ

೪)ಎಲ್ಲವೂ

೧೯.ಮೌಲ್ಯಮಾಪನಕ್ಕೆ ಸಂಬಂಧಿಸಿದ ಮಾಹಿತಿ.

ಅ) ಭಾಷಾ ಮೌಲ್ಯಮಾಪನದ ಇತರೆ ವಿಷಯಗಳಿಗಿಂತ ವಿಶಿಷ್ಟವಾಗಿದೆಯೇ?

ಹೌದು: ಇಲ್ಲ: ಹೇಗೆ:

ಆ) ನಿರ್ದಿಷ್ಟ ಕಲಿಕೆಯ ಫಲಗಳ ಮೌಲ್ಯಮಾಪನ ಹೇಗೆ ಮಾಡಿತ್ತೀರಿ?

ಇ) ಮಕ್ಕಳ ಕೇಳಿದ್ದನ್ನು ಗ್ರಹಿಸುವ ಸಾಮರ್ಥ್ಯವ್ನನ್ನು ಹೇಗೆ ಮೌಲ್ಯಮಾಪನ ಮಾಡುವಿರಿ?

೧)ಪ್ರಶ್ನೆಗಳ ರೂಪದಲ್ಲಿ

೨)ಸಾರಾಂಶ ರೂಪದಲ್ಲಿ

ಈ) ಮಕ್ಕಳ 'ಲ' ಮತ್ತು 'ಳ' ಅಕ್ಷರಗಳಲ್ಲಿ ಆಗುವ ದೋಷಗಳನ್ನು ಹೇಗೆ ಮೌಲ್ಯಮಾಪನ ಮಾಡುತ್ತೀರಿ?

೧)ಬರೆಯುವಾಗ: ಚಿತ್ರಗಳ ಮೂಲಕ ಬೇರೆ ವಿಧಾನವಿದೆಯೇ?

೨)ಓದುವಾಗ:ಚಿತ್ರಗಳ ಮೂಲಕ ಬೇರೆ ವಿಧಾನವಿದೆಯೇ?

ಉ) ಅಲ್ಪಪ್ರಾಣ ಹಾಗೂ ಮಹಾಪ್ರಾಣಾಕ್ಷರಗಳ ಬಳಕೆಯ ಸಾಮರ್ಥ್ಯವನ್ನು ಹೇಗೆ ಕಂಡು ಹಿಡಿಯುವಿರಿ?

೧)ಬರೆಯುವಾಗ

೨)ಓದುವಾಗ

ಊ) ಸ, ಶ, ಷ ಅಕ್ಷರಗಳಲ್ಲಿ ಆಗುವ ದೋಷಗಳನ್ನು ಹೇಗೆ ಮೌಲ್ಯಮಾಪನ ಮಾಡುವಿರಿ?

೧)ಬರೆಯುವಾಗ

೨)ಓದುವಾಗ

ಋ) ಲಿಖಿತ ಸೂಚನೆಗನ್ನು ಗ್ರಹಿಸುವ ಸಾಮರ್ಥ್ಯವನ್ನು ಹೇಗೆ ಮೌಲ್ಯಮಾಪನ ಮಾಡುವಿರಿ?

ೠ) ಭಾಷಾ ಮೌಲ್ಯಮಾಪನ ವಿಧಾನಗಳಲ್ಲಿ ಮಕ್ಕಳ ಕನಿಷ್ಠ ಕಲಿಕೆಯ ಅಂಶಗಳನ್ನು ಮೌಲ್ಯಮಾಪನ ಮಾಡಲು ಯಾವ

ವಿಧಾನ ಅನುಸರಿಸುತ್ತಿರಿ?

೧)ಮೌಖಿಕ

೨)ಲಿಖಿತ

೩)ಎರಡೂ

ಎ) ಲಿಖಿತ ಸಾಧನಾಗಳಲ್ಲಿ ಯಾವ ರೀತಿಯ ಪ್ರಶ್ನೆಗಳನ್ನು ಬಳಸುತ್ತೀರಿ?

೧)ಪ್ರಬಂಧ : ಏಕೆ

೨)ಲಘ : ಏಕೆ

೩)ವಸ್ತುನಿಷ್ಠ : ಏಕೆ

೨೦.ಮಕ್ಕಳಿಗೆ ಕಲಿಸುವ ಹೊಸ ವಿಧಾನಗಳಾವುವು?

ಅ) ಬರವಣೆಗೆ

೧) ಬರವಣೆಗೆ

೨) ವರ್ಣಗಳು

೩) ಗುಣಿತ್ತಾಕ್ಷರ

೪) ಒತ್ತಕ್ಷರ

ಆ) ಓದುವುದು

೧) ವರ್ಣಗಳು

೨) ಗುಣಿತಾಕ್ಷರ

೩) ಒತ್ತಕ್ಷರ

೪) ಪದಗಳು

ಇ) ಸರಳವಾಕ್ಯ ರಚನೆ

೨೧. ಮಗುವಿನ ಒಟ್ಟಾರೆ ಶೈಕ್ಷಣಿಕ ಸಾಧನೆ ಹೇಗಿದೆ?

೧)ಉತ್ತಮ ೨)ಸಾಧಾರಣ ೩)ಏನೂಇಲ್ಲ

೨೨.ತರಗತಿಯ ಒಟ್ಟು ವಿದ್ಯಾರ್ಥಿಗಳಲ್ಲಿ ಮಗುವಿನ ಸ್ಥಾನ:

ವ್ಯಾಕರಣಾಂಶಗಳ ಪರೀಕ್ಷೆ

೧. ಈ ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

೧. ನೆನಪಿರಲಿ=

೨. ಹಳೆಗನ್ನಡ=

೩. ಶಿಕ್ಷಣವನ್ನು=

೪. ಕೈಯಿಂದ=

೨. ಈ ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

೧. ಮೈ+ಮರೆ=

೨. ಹುಡುಕು+ಆಟ=

೩. ಗೋಳು+ಆಡು=

೪. ಮನೆ+ಅನ್ನು=

೫. ಫಲ+ಆಹಾರ=

೬. ದೇವ+ಆಲಯ=

೩. ಈ ಕೆಳಗಿನ ವಾಕ್ಯದಲ್ಲಿನ ವಾಕ್ಯರಣಾಂಶವನ್ನು ಗುರುತಿಸಿ.

೧.ರಮೇಶನು '<u>ಬೆಂಗಳೂರಿನಿಂದ</u>'ಮೈಸೂರಿಗೆ ಹೋದನು ಗೆರೆ ಎಳೆದ ಪದದಲ್ಲಿ ಇರುವ ವಿಭಕ್ತಿ ಯವುವು?

ಉತ್ತರ:

೨.'<u>ರಾಜು</u>' ಹಣ್ಣನು ತಂದನು ಗೆರೆ ಎಳೆದ ಪದವು ಯಾವ ನಾಮಪದವಾಗಿದೆ.

ಉತ್ತರ:

೩.'<u>ಶಿಕ್ಷಕರು</u>' ಸಮಾಜದ ನಿರ್ಮಾಪಕರು ಗೆರೆ ಎಳೆದ ಪದದಲ್ಲಿ ಇರುವ ವಚನ ಯಾವುದು?

ಉತ್ತರ:

೪.ಸೀತೆ ಹಣ್ಣನು '<u>ತಿಂದಳು</u>' ಗೆರೆ ಎಳೆದ ಪದ ಎಂತಹ ಪದ.

ಉತ್ತರ:

೫.ಸಂತೋಷನು ನೃತ್ಯವನ್ನು '<u>ಮಾಡುತ್ತಾನೆ</u>' ಗೆರೆ ಎಳೆದ ಪದದಲ್ಲಿ ಇರುವ ಕಾಲವನ್ನು ಯಾವುದು?

ಉತ್ತರ:

೬.ರವಿಯ '<u>ರಾಧಳ</u>' ಆತ್ಮೀಯ ಗೆಳಯ ಗೆರೆ ಎಳೆದ ಪದದಲ್ಲಿ ಇರುವ ಲಿಂಗವನ್ನು ಗುರುತಿಸಿ.

ಉತ್ತರ:

೪. ಈ ಕೆಳಗಿನ ಪದಗಳನ್ನು ಸ್ವಂತ ವಕ್ಯದಲ್ಲಿ ಬಳಸಿ

೧. ದಾರಿದೀಪ :

೨. ಆಶ್ಚರ್ಯ :

೩. ಕಷ್ಟಪಟ್ಟು :

೪. ಬುದ್ಧಿವಂತ :

೫. ಈ ಕೆಳಗಿನ ಸಮಾಸಗಳನ್ನು ಹೆಸರಿಸಿ.

ಅ) ಭೂತಬಲಿ =

ಆ) ಕೈಕೊಟ್ಟನು =

ಇ) ಗಿಡಮರ ಬಳ್ಳಿಗಳು =

ಈ) ಒಗ್ಗಟ್ಟು =

ಉ) ಹೆಮ್ಮರ =

ಊ) ಮುಕ್ಕಣ್ಣ =

೬. ಈ ಕೆಳಗಿನವುಗಳಲ್ಲಿ ಏಕವಚನ ಬಹುವಚನಗಳನ್ನು ಪಟ್ಟಿ ಮಾಡಿ

ಮರಗಳು,ಶಾಲೆ,ಕೈಗಳು,ಪ್ರಾಣಿಗಳು,ಪಕ್ಷಿ,ಅರಸ,ಪುಸ್ತಕಗಳು,ಅಣ್ಣ,ನಾಯಿ,ಬೆಕ್ಕು.

೭. ಈ ಕೆಳಗಿನವುಗಳಲ್ಲಿ ಲಿಂಗವನ್ನು ಪಟ್ಟಿ ಮಾಡಿ

ಬಸವ, ಲಕ್ಷ್ಮೀ, ಈಶ್ವರ, ಶಾರದೆ, ಭೀಮ, ಮನೆ, ಹೊಲ, ಕಾವೇರಿ, ಬುದ್ಧ, ದ್ರೌಪದಿ, ಶಾಲೆ, ರೈಲು, ಇಂದಿರಾ, ಭಾರತ, ಕಾಡು, ಭವಾನಿ, ಮೋಹನ.

೮. ಈ ಕೆಳಗಿನ ಶಬ್ಧಗಳಲ್ಲಿನ ಕಾಲ ಪ್ರತ್ಯಯಗಳನ್ನು ತಿಳಿಸಿ

ಅ) ಕಲಿತನು –

ಆ) ತಿನ್ನುತ್ತಾನೆ –

ಇ) ಬರೆಯುವನು –

೯. ಈ ಕೆಳಗಿನ ಶಬ್ಧಗಳಲ್ಲಿನ ವಿಭಕ್ತಿ ಪ್ರತ್ಯಯಗಳನ್ನು ತಿಳಿಸಿ

ಅ) ಮರಕ್ಕೆ –

ಆ) ಕಲ್ಲಿನಲ್ಲಿ –

ಇ) ಪುಸ್ತಕವು –

ಈ) ರಾಮನಿಂದ –

ಉ) ಸೀತೆಯ ದೆಸೆಯಿಂದ –

ಊ) ಗುರುಗಳೇ –

೧೦. ವಾಕ್ಯ ಸರಿಪಡಿಸಿ ಬರೆ

ಅ) ಕೃತಿಯನ್ನು ವಿಶಿಷ್ಟವಾದ ಪಂಪನು ಬರೆದನು.

ಉತ್ತರ:

ಆ) ಸೇರಿದನು ತನ್ನ ದಾವಣಗೆರೆ ಸರ್ಕಾರಿ ಪ್ರೌಢಶಾಲೆಗೆ ಮೋಹನ ಅಭ್ಯಾಸಕ್ಕೆ

ಉತ್ತರ:

ಇ) ಸಮುದ್ರದಲ್ಲಿ ಮೀನನ್ನು ದೊಡ್ಡ ಬೆಸ್ತನು ಹಿಡಿದನು ಬಲೆಯಿಂದ

ಉತ್ತರ:

ಈ) ಹಣ್ಣನು ತಿಂದನು ರಾಮನು

ಉತ್ತರ:

೧೧. **ನಿಮ್ಮ ಕುಟುಂಬದಲ್ಲಿರುವ ಸದ್ಯಸರ ಹೆಸರುಗಳನ್ನು ಬರೆಯಿರಿ.**

೧೨. ದಿನಚರಿ ಬರೆಯಿರಿ.

೧೩. ಹಸುವಿನ (ಆಕಳು) ನ ನಿಂದಾಗುವ ಪ್ರಯೋಜನಗಳಾವುವು.

೧೪. ನಿಮ್ಮ ಶಾಲೆಯ ಬಗ್ಗೆ ಸಂಕ್ಷಿಪ್ತವಾಗಿ ಬರೆಯಿರಿ.

ಅನುಬಂಧ – ೩

ಮಕ್ಕಳ ಬರವಣಿಗೆಯ ಕೆಲವು ಮಾದರಿಗಳು

ಹೆಸರು ನೆಪ್ಸೀರ್ ಊರು ಬಿಲ್ಲೂರು ತರಗತಿ ೬ನೇ (1) ×

ಮನೆಯಲ್ಲಿ ಮಾತನಾಡುವ ಭಾಷೆ: ಕೊಂಕಣಿ–ಹಿಂದಿ–ಬ್ಯಾರಿ–ಕನ್ನಡ–ತುಳು–ಮಲೆಯಾಳಂ–ಮರಾಠಿ–______

ನಮ್ಮ ಪರಿಸರ

~~ಜೀವ~~ ಕಾಡಿನಲ್ಲ ಪ್ರಾಣಿಗಳು ಸಸ್ಸಗಳು ಣಾವೆನನಗೆ ಪ್ರಾಣಿಗಳು
ಥುಂಬ ಇಲು ಪಂಸಗಳು ನಮ್ಮ ಪಂಸರಳು ನಮ್ಮ ಪೋಣಿಗಳು
ಕಾಡುಗಲು ನಮ್ಮ ಗಿಡಗಳನ್ನು ನಡುತಿಲಿ ಮರಗಳು ನಮ್ಮ
ಪರಿಸ ಪ್ರೋಸನ
ಹಂಗಲನ್
ನನಗೆ ಪರನಲ್ ಗಿಡಗಳು ಗಿಡ ಮರಗಳು ಪಂಸರಗಳು ಸುಂಪುನ ಮುಲಗಳು
ಗಿಡ ಸಸ್ಸಗಳು ಪರಿಸರ ನಡನುಡಿಗಳು ಪಂಸರ ಸುಂಮುಸಿ
ಮಲೆ ಬಿಲೆಗಳು ಗಿಡ ಸಸ್ಸಗಳು ಸುಂಪೂಗಾ
ಪೋಸನೆ ಪರಿಸನಡಲ್ ಮರಗಿಡಗಳು ಪೋಸ್ಸನೆ ಪರಿಸರ
ನಮ್ಮಗೆ ಪಾರಿಸರ ನೆಡಲ್ ನಮ್ಮ ಪರಿಸರ ಗಿಡ ಮೂಲಗಳು
ಸುಂಪುನ್ ಮುಲಗಳು ಪರಿಸರ ಗಿಡ ~~ಪೋಸನೆ ಪರಿಸರ~~
ಗಿಡ ಮರಗಳು ಸಸ್ಸಿಳು ಸುಂಬಸನೆ ಗಿಡ ಮರಗಳು
ಕಾಡುಗಳು ಪರಿಸನಡಲ್ ಸುಂಪುನ ಮುಲಗಳು

ಪರಿಸರನ್ ದಲ್ ಕಾಡುಗಳು ಪರಿಸರ ಸುಂಬನೆ ಪರಿಸರ ನೆಡಲ
ಗಿಡ ಸಸ್ಸಗಳು ಸೆಂನೆ ಮುಲಗಳು ಗಿಡ ಮರಗಳು
ಪರಿಸರ ಮೋನೆಗಳು ಸಸ್ಸಿಕಗಳು.
ಗಿಡ ಮರಗಳು ಪರಿಸರ ಸೆಂನೆ ಮುಲಗಳು
ಸುಂಪ್ ಮುಲಗುಳು ಪರಿಸರ ನೆಡಲ್
ಸಸ್ಸಿಗಳು

ಹೆಸರು ಸುನಿತಾ [redacted] ಊರು ಎಲಿಂನಾಟ ತರಗತಿ 5 ನೇ (17)

ಮನೆಯಲ್ಲಿ ಮಾತನಾಡುವ ಭಾಷೆ: ಕೊಂಕಣಿ-ಹಿಂದಿ-ಬ್ಯಾರಿ- ಕನ್ನಡ-ತುಳು-ಮಲೆಯಾಳಂ-ಮರಾಠಿ-______

ನಮ್ಮ ಪರಿಸರ

ನಮ್ಮ ಸುತ್ತಮುತ್ತಲಿನ ಪರಿಸರವನ್ನು ತುಂಬ ಸುಂದರವಾಗಿರುತ್ತದೆ. ಪರಿಸರದಲ್ಲಿ ಪ್ಲಾಸ್ಟಿಕ್ ವಸ್ತುಗಳನ್ನು ಹಾಕಬಾರದು. ನಾವು ಹೆಚ್ಚಿಗೆ ಮರ ಕಡಿಯುವುದರಿಂದ ನಮಗೆ ಮಳೆ ಬರುವುದಿಲ್ಲ. ನಾವು ಹೋಗುವ ದಾರಿಯ ಬದಿಯಲ್ಲಿ ಮರಗಳು ಇದ್ದರೆ ನಮಗೆ ನೆರಳು ಸಿಗುತ್ತದೆ. ನಮ್ಮ ಮನೆಗಳಲ್ಲಿ ಸುತ್ತಮುತ್ತ ಮರಗಳು ಇದ್ದರೆ ನಮ್ಮಗೆ ತುಂಬ ಸಂತೋಷವಾಗುತ್ತದೆ ನಾವು ಹೆಚ್ಚಾಗಿ ಮರಗಳನ್ನು ಕಡಿಯುವುದರಿಂದ ಬಿಸಿಲು ಜಾಸ್ತಿಯಾಗುತ್ತದೆ ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಎಂಥ ಜಾತಿಯ ಬೇರೆ ಪಕ್ಷಿಗಳು ಇರುತ್ತದೆ. ಅದನ್ನು ನೋಡಲು ತುಂಬ ಸುಂದರ ವಾಗಿರುತ್ತದೆ. ನಮ್ಮ ಶಾಲೆಯ ಮುಂದೆ ಹೂ ತೋಟ ಇದ್ದರೆ ~~ತುಂಬ~~ ಚೆನ್ನಾಗಿ ಕಾಣುತ್ತದೆ ನಾವು ಮರಗಳನ್ನು ಕಡಿಯುವುದರಿಂದ ಕಾಡಿನ ಬೇರೆ ಪ್ರಾಣಿಗಳು ಊರಿಗೆ ಬರುತ್ತವೆ. ನಮಗೆ ಪರಿಸರದ ಬಗ್ಗೆ ಶಿಕ್ಷಕರು ಹೇಳುತ್ತಾರೆ ನಾವು ಪರಿಸರ ಹಾಗೆ ಪರಿಸರ ದಿನವೆಂದು ನಮಗೆ ಬೆಳೆಸಬೇಕು ಈ ಗಿಡಗಳನ್ನು ಬೆಳೆಸುವುದರಿಂದ ಅಂದು ನಾವು ಗಿಡಗಳನ್ನು ಬೆಳೆಸಬೇಕು ~~ನಮ್ಮ ಮನೆಯಲ್ಲಿ ಹೂ~~ ನಮಗೆ ನೆರಳು ಸಿಗುತ್ತದೆ.

ನಮ್ಮ ಮನೆಯಲ್ಲಿ ಹೂ ಗಿಡ ತರಕಾರಿ ತೋಟಗಳನ್ನು ಬೆಳೆಯುತ್ತಾರೆ. ಹೂ ಗಿಡದಿಂದ ನಮಗೆ ಬಗೆ ಬಗೆ ಹೂ ಸಿಗುತ್ತದೆ ತರಕಾರಿ ತೋಟಗಳಿಂದ ತರಕಾರಿ ಸಿಗುತ್ತದೆ. ನಮ್ಮ ಹಳ್ಳಿಗಳಲ್ಲಿ ನಮಗೆ ಪಟ್ಟಣದ ಕಡೆಯಲ್ಲಿ ನಮಗೆ ಮರಗಳು ಕಾಣುವುದಿಲ್ಲ. ನಮ್ಮ ಹಳ್ಳಿಗಳಲ್ಲಿ ನಮಗೆ ಗಾಳಿ ಸಿಗುತ್ತದೆ ಪಟ್ಟಣದ ಜನರು ನಮ್ಮ ಬೇರೆ ದಾಸ್ತೆಗಳು ನಮ್ಮ ಕಡೆಯಲ್ಲಿ ಹಳ್ಳಿ ಕಡೆಗೆ ಬಂದರೆ ಅವರಿಗೆ ನಮ್ಮ ಸುತ್ತಮುತ್ತಲಿನ ಪರಿಸರ ನೋಡಿ ಅವರಿಗೆ ತುಂಬ ಸಂತೋಷವಾಗುತ್ತದೆ.

ಪರಿಸರದಲ್ಲಿ ಮಾಲಿನ್ಯಕಾರಕಗಳು, ವಾಯು ಮಾಲಿನ್ಯ ಜಲಮಾಲಿನ್ಯ ಶಬ್ದ ಮಾಲಿನ್ಯಗಳು, ಇಂತಹ ಮಾಲಿನ್ಯಕಾರಕ ವಸ್ತುಗಳನ್ನು ಹಾಕುವುದರಿಂದ ಪರಿಸರವೆಲ್ಲವೂ ನಾಶವಾಗುತ್ತದೆ. ನಾವೆಲ್ಲರೂ ಹೆಚ್ಚಾಗಿ ಗಿಡ ಮರಗಳನ್ನು ಬೆಳೆಸೋಣ.

ಹೆಸರು ರಷ್ಮ ಊರು ತೋಟತ್ವಳಿ ತರಗತಿ 7 ನೇ (18)

ಮನೆಯಲ್ಲಿ ಮಾತನಾಡುವ ಭಾಷೆ: ಕೊಂಕಣಿ-ಹಿಂದಿ-ಬ್ಯಾರಿ- ಕನ್ನಡ-ತುಳು-ಮಲಿಯಾಳಂ-ಮರಾಠಿ-

ನಮ್ಮ ಪರಿಸರ

ನಮ್ಮ ಸುತ್ತಮುತ್ತಲ್ಲಿನ ಮರ ಗಿಡ ಇದೆ. ಮರ ಗಿಡ ಸುಂದರವಾಗಿದೆ ಪರಿಸರದಲ್ಲಿ ಪ್ಲಾಸ್ಟಿಕ್ ವಸ್ತುಗಳನ್ನು ಹಾಕಬಾರದು ನಮ್ಮ ಪರಿಸರವನ್ನು ಸ್ವಚ್ಛ ಮಾಡಬೇಕು ಪರಿಸರವನ್ನು ಬೆಳೆಸಬೇಕು ನಮಗೆ ಗಾಳಿ ಕೊಡುತ್ತದೆ. ನಾವು ನೆಡಿಸುವುದು ~~ಕಡಿಯ~~ ಬಾರದು ನಮ್ಮ ಮನೆಗಳಲ್ಲಿ ~~ನಾ~~ ಸುತ್ತಮುತ್ತ ಮರಗಳು ಇದ್ದರೆ ನಮಗೆ ತುಂಬ ಸಂತೋಷವಾಗುತ್ತದೆ ನಾವು ಹೆಚ್ಚಾಗಿ ಮರಗಳನ್ನು ಕಡಿಯಬಾರದು.

ಹಾಗೆಯೇ ನಾವು ದೇವರನ್ನು ನಮ್ಮ ಸುತ್ತಮುತ್ತ ಮರಗಳನ್ನು ಹಾಗೆ ಪೂಜೆ ಮಾಡಬೇಕು ನಮ್ಮ ಪರಿಸರದಲ್ಲಿ ಕಾಡು ಪ್ರಾಣಿ ತುಂಬ ಇದೆ ನಮ್ಮ ಶಾಲೆಯಲ್ಲಿ ಪರಿಸರ

ನಮಗೆ ಲಾಭ ಅತ್ಯಂತವಾಗಿರುತ್ತದೆ ಅಷ್ಟು ನೀರು ~~ಬೇಕು~~ ಕೊಡಬೇಕು ಹೂವು ಗಿಡದಿಂದ ನಮ್ಮ ಗಿಡಕ್ಕೆ ನಮ್ಮ ಮನೆಯ ಹೂವು ಗಿಡ ತರಕಾರಿ ತೋಟಗಳನ್ನು ಬೆಳೆಯುತ್ತಾರೆ ಹಾಗೆ ಗಿಡದಿಂದ ನಮಗೆ ಬಗೆ. ಬಗೆ ಹಾಗ ಸಿಗುತ್ತದೆ ತರಕಾರಿಗಳು ಸಿಗುತ್ತವೆ.

ಹೆಸರು ಫೈರುಶ್ನೀಶಾ ಊರು ಅಚಕಾರು ತರಗತಿ 8 ನೇ

ಮನೆಯಲ್ಲಿ ಮಾತನಾಡುವ ಭಾಷೆ: ಕೊಂಕಣಿ-ಹಿಂದಿ-ಬ್ಯಾರಿ- ಕನ್ನಡ-ತುಳು-ಮಲೆಯಾಳಂ-ಮರಾಠಿ-______

(2)

ನಮ್ಮ ಪರಿಸರ

ನಾವೆಲ್ಲರೂ ನೆಲೆಸಿರುವುದು ಭೂಮಿಯ ಮೇಲೆ. ನಮ್ಮ ಸುತ್ತಮುತ್ತಲಿನ ಪರಿಸರವನ್ನು ನಾವು ಸ್ವಚ್ಛವಾಗಿಡಬೇಕು. ಹಾಗು ನಮ್ಮ ಸುತ್ತ ಮುತ್ತಲಿನಲ್ಲಿ ಅಥವಾ ರಸ್ತೆ ಬದಿಯಲ್ಲಿ ಕಸ ಕಂಡರೆ ಅದನ್ನು ತೆಗೆದು ಕಸದ ತೊಟ್ಟಿ ಬುಟ್ಟಿಗೆ ಹಾಕಬೇಕು. ನಾವು ನಮ್ಮ ಗ್ರಾಮವನ್ನು ಸ್ವಚ್ಛವಾಗಿಡಬೇಕು. ನಾವು ಪರಿಸರವನ್ನು ವಿವಿಧ ಹೆಸರುಗಳಿಂದ ಕರೆಯುತ್ತೇವೆ. ಸ್ವಚ್ಛತೆ ಎಲ್ಲಿ ಇರುತ್ತದೆಯೋ ಅಲ್ಲಿ ಆರೋಗ್ಯವಿರುತ್ತದೆ ಎಂದು ಹೇಳಬಹುದು. ನಾವು ಮರಗಳನ್ನು ಕಡಿದರೆ, ನಾವು ಹತ್ತು ಮರವನ್ನು ಬೆಳೆಸಬೇಕು. ನಾವು ಪರಿಸರವನ್ನು ವಾತಾವರಣ ಅಥವಾ ವಾತಾಯನ ಎಂದು ಕರೆಯುತ್ತೇವೆ.
ನಾವು ಮರಗಳನ್ನು ನೆಟ್ಟರೆ ಕಾಲ ಕಾಲಕ್ಕೆ ಸರಿಯಾಗಿ ಮಳೆ ಬರುತ್ತದೆ.

ನಾವು ಪರಿಸರವನ್ನು ಮಾಲಿನ್ಯ ಮಾಡುವುದರಿಂದ ಮಾನವನು ಅನೇಕ ತೊಂದರೆಗಳಿಗೆ ಈಡಾಗುತ್ತಾನೆ. ನಾವು ಪ್ಲಾಸ್ಟಿಕ್ ಅನ್ನು ಸುಡಬಾರದು. ನಾವು ಪ್ಲಾಸ್ಟಿಕ್ ಅನ್ನು ಹೊತ್ತಿಸಿದರೆ ವಿಷಕಾರಿಕ ಅನಿಲ ಉಂಟಾಗುತ್ತದೆ. ನಮ್ಮ ಕಣ್ಣ ಮುಂದೆ ನಾವು ಬೇರೆ ಬೇರೆ ಭೌಗೋಳಿಕ ದೃಶ್ಯಗಳನ್ನು ಕಾಣುತ್ತೇವೆ. ಇದನ್ನು ಪರಿಸರ ಎನ್ನುತ್ತೇವೆ.

ಹೆಸರು ಅಬ್ದುಲ್ ರಹಿಮಾನ್ ಊರು ಉಳ್ಳಾಲ ತರಗತಿ 6ನೇ

ಮನೆಯಲ್ಲಿ ಮಾತನಾಡುವ ಭಾಷೆ: ಕೊಂಕಣಿ-ಹಿಂದಿ-ಬ್ಯಾರಿ- ಕನ್ನಡ-ತುಳು-ಮಲೆಯಾಳಂ-ಮರಾಠಿ-______

25

ನಮ್ಮ ಪರಿಸರ

* ಪೀಠಿಕೆ:->

ಪರಿಸರ ಎಂದರೆ ನಮ್ಮ ಸುತ್ತ ಮುತ್ತಲಿನಲ್ಲಿ ಕಾಣುವ ಮರಗಿಡಗಳು ಮತ್ತು ನೀರು ಇತರ ವಸ್ತುಗಳನ್ನು ಪರಿಸರ ಎನ್ನಬಹುದು. ಪರಿಸರದಲ್ಲಿ ಸಿಗುವ ವಸ್ತುಗಳೆಂದರೆ, ಗಾಳಿ, ನೀರು ಮರ ಮುಂತಾದ ವಸ್ತುಗಳು ಸಿಗುತ್ತದೆ. ಪರಿಸರ ಮಾಲಿನ್ಯದಲ್ಲಿ ಮೂರು ವಿಧಗಳು ಇವೆ.
1. ವಾಯುಮಾಲಿನ್ಯ 2. ಜಲಮಾಲಿನ್ಯ 3. ಶಬ್ದ ಮಾಲಿನ್ಯ ಇವುಗಳಾಗಿವೆ.

* ವಿವರಣೆ:->

1. ವಾಯುಮಾಲಿನ್ಯ ಎಂದರೆ :- ಗಾಳಿಯಲ್ಲಿ ಮಲಿನ ವಸ್ತುಗಳು ಇರುವ ವಸ್ತುಗಳನ್ನು ವಾಯು ಮಾಲಿನ್ಯ ಎನ್ನಬಹುದು.

[illegible] 2. ಜಲಮಾಲಿನ್ಯ:- ಜಲಮಾಲಿನ್ಯ ಎಂದರೆ. ನೀರಿನಲ್ಲಿ ಮಲಿನ ವಸ್ತುಗಳು ಇರುವುದನ್ನು ಜಲಮಾಲಿನ್ಯ ಎನ್ನುವರು.

3. ಶಬ್ದ ಮಾಲಿನ್ಯವೆಂದರೆ:- ಪಟಾಕಿಗಳನ್ನು ಸಿಡಿಸುವುದು, ಪ್ರಾಣಿ ಪಕ್ಷಿಗಳ ಶಬ್ದವನ್ನು ಶಬ್ದ ಮಾಲಿನ್ಯ ಎನ್ನಬಹುದು.

ಪರಿಸರದಲ್ಲಿ ಓಡಾಡುತ್ತಿರುವ ವಾಹನದ ಹೊಗೆಯು ಮಲಿನ ಗಾಳಿಯಾಗಿದೆ. ಕಾರ್ಖಾನೆಗಳಿಂದ ಬರುವ ಹೊಗೆಯು ಮತ್ತು ವಾಹನದ ಹೊಗೆಯು ಓಝೋನ್ ಪದರದಲ್ಲಿ ತೂತಾಗಿ ಪದರಕ್ಕೆ ಹಾನಿ ಉಂಟಾಗುತ್ತದೆ. ಏಕೆಂದರೆ ಪರಿಸರವನ್ನು ಸ್ವಚ್ಛಗೊಳಿಸದಿದ್ದರೆ ಪರಿಸರದಲ್ಲಿ ಇರುವ ಮರಗಳನ್ನು ಕಡಿಯಬಾರದು ಮರವನ್ನು ಕಡಿದರೆ ಕಾಡಿನಲ್ಲಿ ಇರುವ ಪ್ರಾಣಿಗಳು ಊರಿಗೆ ಬರುತ್ತದೆ. ಊರಿಗೆ ಬಂದ ಮೇಲೆ ಜನರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಕಾಡನ್ನು ಉಳಿಸಿ ನಾಡನ್ನು ಬೆಳೆಸಿ.

ಜೀವಿಗಳು ಜೀವನ ನಡೆಸಲು ಪರಿಸರ ಅಗತ್ಯವಾಗಿದೆ. ಪರಿಸರ ಮಾಲಿನ್ಯವಾಗಿ ಜೀವಿಗಳು ಬದುಕುವುದು ಕಷ್ಟ. ನಾವು ಯಾವ ವಸ್ತು ಬಳಸುವ ಉಪಯೋಗವಾದ ವಸ್ತುಗಳನ್ನು ಬಳಸಿದ ವಸ್ತುಗಳು ಪ್ಲಾಸ್ಟಿಕ್, ಮತ್ತು ಇತರ ವಸ್ತುಗಳನ್ನು ಸುಡಬಾರದು. ಏಕೆಂದರೆ ಅದರ ಪರಿಸರದಲ್ಲಿ ಕಾರ್ಬನ್ ಡೈ ಆಕ್ಸೈಡ್ ಬರುತ್ತದೆ. ಮತ್ತು ನಮ್ಮ ಊರಿನಲ್ಲಿರುವ ಜನರ ದೇಹದ ಒಳಗೆ ಹೋಗಿ ಅವರಿಗೆ ರೋಗವನ್ನು ಉಂಟುಮಾಡುತ್ತದೆ. ಪೆಟ್ರೋಲ್ ವಾಹನಗಳನ್ನು ಬಳಸದಿರುವುದು ಒಳ್ಳೆಯದು ಮತ್ತು ಪ್ಲಾಸ್ಟಿಕ್ ಚೀಲಗಳು ಬಳಸಬಾರದು ಮತ್ತು ಸುಡಬಾರದು.

ಪರಿಸರ ಬೆಳೆಸಿ ನಾಡು ಉಳಿಸಿ

ಧನ್ಯವಾದಗಳು.

ಹೆಸರು ಸಿಫ್ರೀನಾ.ಎಂ.ಎನ್ ಊರು ಕಾಂತಿರ್ತ್ತೇತ್ತ ತರಗತಿ 7

ಮನೆಯಲ್ಲಿ ಮಾತನಾಡುವ ಭಾಷೆ: ಕೊಂಕಣಿ-ಹಿಂದಿ-ಬ್ಯಾರಿ- ಕನ್ನಡ-ತುಳು-ಮಲೆಯಾಳಂ-ಮರಾಠಿ-


ನಮ್ಮ ಪರಿಸರ

ನಾವು ನೆಲೆಸಿರುವ ಭೂಮಿಯಲ್ಲಿ ಅನೇಕ ವಾಯು ಮಾಲಿನ್ಯ ವಾಗುತ್ತಿದೆ ಅದಕ್ಕೆ ಕಾರಣ ಮನುಷ್ಯರು ಬಳಸುವ ಯಂತ್ರ ಉಪಕರಣಗಳಿಂದ ಉದಾಹರಣೆ ಎಂದರೆ ವಾಹನಗಳು, ಕಾರ್ಖಾನೆಗಳಲ್ಲಿ ಬಳಸುವ ಯಂತ್ರಗಳು ನಾವು ಪ್ಲಾಸ್ಟಿಕ್ ಬಳಸಿ ಅದನ್ನು ಬೆಂಕಿಗೆ ಹೊತ್ತಿಸಿ ಇದ್ದ ರೋಗವನ್ನು ಬರಮಾಡಿಕೊಳ್ಳುವುದು ಇದು ಇವತ್ತಿನ ಜನರ ದೊಂದಿಗೆ ಸೇರಿ ಇದು ವಾಯು ಮಾಲಿನ್ಯ ವಾಗುತ್ತದೆ.

ನಂತರ ನೀರಿನಲ್ಲಿ ಕಲುಷಿತನೀರು ಹಾಗೆಯೇ ನಾವು ಕುಡಿಯುವ ನೀರು ಕೆರೆ, ಬಾವಿ, ನದಿಗಳಿಂದ ಕುಡಿದ್ದು ಈ ನೀರಿನಲ್ಲಿ ಕಾರ್ಖಾನೆಗಳಿಂದ ಬರುವ ತ್ಯಾಜ್ಯ, ಬಟ್ಟೆ ಒಗೆಯುವ ನೀರು ಹಾಗು ಪಾತ್ರೆ ತೊಳೆಯುವ ನೀರು ಸೇರಿ ನದಿಯ ಮೂಲಕ ಮಂಬಾ ರೋಗಗಳು ಬರುತ್ತವೆ ಆ ಕಾರಣ ಪರಿಸರವನ್ನು ಮರಗಳನ್ನು ಕಡಿಯುವುದು ಹಾಗು ಇದ್ದ ಗಿಡಗಳನ್ನು ಕಡಿಯುವುದು ಇದನ್ನು ನಾವು ತಡೆಗಟ್ಟಲು ಪ್ಲಾಸ್ಟಿಕ್ ಅನ್ನು ಬಳಸ ಬಾರದು ಬಟ್ಟೆಯ ಚೀಲವನ್ನು ಬಳಸ ಬೇಕು ವಾಹನಗಳನ್ನು ಮಿತವಾಗಿ ಬಳಸಬೇಕು ಹಾಗೆಯೇ ನಾವು ಬಟ್ಟೆಯನ್ನು ಒಗೆದ ನೀರನ್ನು ಕೆರೆ, ಬಾವಿ ನದಿಗಳಿಗೆ ಚೆಲ್ಲಬಾರದು ಪಾತ್ರೆ ತೊಳೆದ ನೀರನ್ನು ಚೆಲ್ಲಬಾರದು ಹಾಗೆಂದರೆ ಇದು ಪರಿಸರ ಮಾಲಿನ್ಯ ಆಗುತ್ತದೆ. ನಾವು ಈ ರೀತಿ ಎಲ್ಲರ ಜೊತೆ ಸೇರಿ ಇದನ್ನು ಹಾಗೆ ಪರಿಸರ ಇದನ್ನು ಬಿಟ್ಟು ಪರಿಸರವನ್ನು ಉಳಿಸಿ ಕಾಪಾಡಬೇಕು. ನಾವು ಯಾವತ್ತೂ ಬಟ್ಟೆಯ ಚೀಲ ವನ್ನು ಬಳಸಬೇಕು. ನಾವು ನೀರನ್ನು ಮಿತವಾಗಿ ಬಳಸಬೇಕು. ಇನ್ನು ಹಸಿರು ಮರಗಳನ್ನು ಕಡಿಯಬಾರದು. ಗಿಡ ನೆಟ್ಟು ಬೆಳೆಸಬೇಕು ಇದನ್ನು ಬಿಟ್ಟು ಕಡಿಯ ಬಾರದು ಮರಗಳು ಇಲ್ಲದಿದ್ದರೆ ಮಳೆ ಬರುವುದಿಲ್ಲ, ಮಳೆ ಬರದಿದ್ದರೆ ಕೃಷಿ ಆಗದಿದ್ದರೆ ಹಾಗು ನಮ್ಮ ದೇಶಕ್ಕೆ ತೊಂದರೆ ಆಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯ ನಕ್ಷೆ





ಕನ್ನಡ ಭಾಷಾಧ್ಯಯನ ವಿಭಾಗ